ಗುರುವಾರ, ಡಿಸೆಂಬರ್ 7, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 337 | ಪುಟ 16

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾ ವಾಣಿ

ಅರಣ್ಯ ಪಾಲಕರಾಗಬೇಕೆಂಬ ಕನಸು ನಿಮ್ಮಲ್ಲಿದೆಯೇ? ಈ ಪರೀಕ್ಷೆಗೆ ಅಗತ್ಯ ಇರುವ ಕಸುವೂ ನಿಮ್ಮಲ್ಲಿದೆಯೇ? ಈ ಹುದ್ದೆಯ ನೇಮಕಾತಿಗೆ ಅರ್ಹತೆ ಏನಿರಬೇಕು?



ಆಳ-ಅಗಲ
ದೇಶದ್ರೋಹದ ಕಾನೂನು 965 ಪ್ರಕರಣ, ಐದರಲ್ಲಷ್ಟೇ ಶಿಕ್ಷೆ

'100 ವಿದ್ಯಾರ್ಥಿ ನಿಲಯ ಆರಂಭಕ್ಕೆ ಪ್ರಸ್ತಾವ' 7

ಸಭಾಪತಿ ಭರವಸೆ: ವಿಪಕ್ಷ ಧರಣಿ ವಾಪಸ್ 7

ಸೆನ್ಸೆಕ್ಸ್	ನಿಫ್ಟಿ	₹/$
69,653 ▲	20,937 ▲	83.32 ▲

ಮುಖ್ಯಮಂತ್ರಿ ವಿರುದ್ಧ ಬಿಜೆಪಿ ಪ್ರತಿಭಟನೆ • ಜಂಟಿ ಹೋರಾಟಕ್ಕೆ ಕೈಜೋಡಿಸದ ಜೆಡಿಎಸ್

ಅಲ್ಪಸಂಖ್ಯಾತರಿಗೆ 'ಅನುದಾನ': ಜಟಾಪಟಿ

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ವಿಧಾನಮಂಡಲದ ಅಧಿವೇಶನ ನಡೆಯುತ್ತಿರುವಾಗ ಅಲ್ಪಸಂಖ್ಯಾತರಿಗೆ ₹ 10,000 ಕೋಟಿ ಅನುದಾನ ನೀಡುವುದಾಗಿ ಸದನದ ಹೊರಗೆ ಘೋಷಣೆ ಮಾಡುವ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ನಿಯಮ ಉಲ್ಲಂಘಿಸಿದ್ದಾರೆ' ಎಂದು ಆರೋಪಿಸಿ ಬಿಜೆಪಿ ಸದಸ್ಯರು ಬುಧವಾರ ವಿಧಾನ ಸಭೆಯಲ್ಲಿ ಪ್ರತಿಭಟನೆ ನಡೆಸಿದರು.

ಪ್ರಶ್ನೋತ್ತರ ಕಲಾಪ ಮುಗಿದ ಬಳಿಕ ವಿಷಯ ಪ್ರಸ್ತಾಪಿಸಿದ ಬಿಜೆಪಿಯ ವಿ. ಸುನೀಲ್ ಕುಮಾರ್, 'ಅಧಿವೇಶನ ನಡೆಯುತ್ತಿರುವಾಗ ಮುಖ್ಯಮಂತ್ರಿಯವರು ಯಾವುದೋ ಸಭೆ, ಸಮಾರಂಭದಲ್ಲಿ ₹ 10,000 ಕೋಟಿ ಅನುದಾನ ಘೋಷಿಸಿದ್ದಾರೆ. ಸದನಕ್ಕೆ ಬೆಲೆ ಇಲ್ಲವೇ? ಸದನದ ಹಕ್ಕುಚ್ಯುತಿ ಆಗಿದ್ದು, ಕ್ಷಮೆ ಕೇಳಬೇಕು' ಎಂದು ಆಗ್ರಹಿಸಿದರು.

'ಬರದಿಂದ ಸಂಕಷ್ಟದಲ್ಲಿರುವ ರೈತರಿಗೆ ಪರಿಹಾರ ಕೊಡಿ ಎಂದರೆ ಕೇಂದ್ರ ಸರ್ಕಾರದ ಕಡೆ ಕೈ ತೋರಿಸುತ್ತೀರಿ. ಮುಸ್ಲಿಮರಿಗೆ ₹ 10,000 ಕೋಟಿ ಕೊಡಲು ಎಲ್ಲಿದೆ' ಎಂದು ಬಿಜೆಪಿಯ ಆರಗ ಜ್ಞಾನೇಂದ್ರ ಕೇಳಿದರು.

ಮಧ್ಯ ಪ್ರವೇಶಿಸಿದ ಕಾನೂನು ಸಚಿವ ಎಚ್.ಕೆ. ಪಾಟೀಲ, 'ನಾನು ಆ ಸಭೆಯಲ್ಲಿದ್ದೆ. ಮುಖ್ಯಮಂತ್ರಿಯವರು ಹಾಗೆ ಹೇಳಿಲ್ಲ. ಹಂತ ಹಂತವಾಗಿ ₹ 10,000 ಕೋಟಿಯಷ್ಟು ಅನುದಾನ ಒದಗಿಸುವುದಾಗಿ ಹೇಳಿದ್ದಾರೆ. ಅವರಿಂದ ಯಾವ ನಿಯಮ ಉಲ್ಲಂಘನೆಯೂ ಆಗಿಲ್ಲ' ಎಂದರು.

ಸಚಿವರಾದ ಪ್ರಿಯಾಂಕ್ ಖರ್ಗೆ, ದಿನೇಶ್ ಗುಂಡೂರಾವ್ ಸೇರಿದಂತೆ ಕಾಂಗ್ರೆಸ್‌ನ ಹಲವರು ಮುಖ್ಯಮಂತ್ರಿಯವರ ಹೇಳಿಕೆಯನ್ನು ಬೆಂಬಲಿಸಿದರು.

'ಸಿದ್ದರಾಮಯ್ಯ ಹೇಳಿರುವುದು ನಿಜ. ನಾನು ವಿಡಿಯೊ ತುಣುಕನ್ನು ವೀಕ್ಷಿಸಿದ್ದೇನೆ' ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ ಹೇಳಿದರು. ಅವರ ಹೇಳಿಕೆ ವಿರೋಧಿಸಿ ಕಾಂಗ್ರೆಸ್ ಸದಸ್ಯರು ಗದ್ದಲಕ್ಕೆ ಇಳಿದರು.

ಸಿಟ್ಟಾದ ಅಶೋಕ, 'ನೀವು 135 ಜನ ಇರಬಹುದು. ನಾವೂ 85 ಜನರಿದ್ದೇವೆ. ನಮ್ಮ ತಾಕತ್ತನ್ನೂ ತೋರಿಸುತ್ತೇವೆ. ಮುಖ್ಯಮಂತ್ರಿಯವರು ಮಾತನಾಡುವಾಗ ಅಡ್ಡಿಪಡಿಸಲು ಗೊತ್ತು' ಎಂದು ಸವಾಲು ಹಾಕಿದರು. ತಾಕತ್ತಿನ ಮಾತು ವಾಕ್ಸಮರಕ್ಕೆ ಕಾರಣವಾಯಿತು. ಗದ್ದಲದ ಮಧ್ಯೆಯೇ ಬಿಜೆಪಿ ಸದಸ್ಯರು ಸಭಾತ್ಯಾಗ ಮಾಡಿದರು.

ದೂರ ಉಳಿದ ಸೋಮಶೇಖರ್: ಸಭಾತ್ಯಾಗ ಮಾಡುವ ಪಕ್ಷದ ಸದಸ್ಯರ ನಿಲುವಿನಿಂದ ಎಸ್.ಟಿ. ಸೋಮಶೇಖರ್ ಮಾತ್ರ ದೂರ ಉಳಿದರು. ಬಿಜೆಪಿಯ ಉಳಿದ ಎಲ್ಲ ಸದಸ್ಯರೂ ಸದನದಿಂದ ಹೊರ ಹೋಗಿದ್ದರು. ಸೋಮಶೇಖರ್ ತಮ್ಮ ಆಸನದಲ್ಲೇ ಉಳಿದರು. ಆರ್. ಅಶೋಕ, ಬಿ.ವೈ. ವಿಜಯೇಂದ್ರ ಸೇರಿದಂತೆ ಹಲವರು ಕರೆದರೂ ಅವರು ಆಸನ ಬಿಟ್ಟು ಮೇಲೇಳಲಿಲ್ಲ.

ವಿಧಾನಮಂಡಲದಲ್ಲಿ ಬಿಜೆಪಿ ಜತೆ ಜಂಟಿ ಹೋರಾಟ ನಡೆಸುವುದಾಗಿ ಪ್ರಕಟಿಸಿದ್ದ ಜೆಡಿಎಸ್, ಈ ಪ್ರಕರಣದಲ್ಲಿ ದೂರ ಉಳಿಯಿತು.

ಮೌಲ್ವಿ ಪೀರಾ ನಂಟಿನ ತನಿಖೆಗೆ ಯತ್ನಾಳ ಆಗ್ರಹ

ಬೆಳಗಾವಿ: 'ಇಸ್ಲಾಮಿಕ್ ಸ್ಟೇಟ್ (ಐಎಸ್) ಭಯೋತ್ಪಾದಕ ಸಂಘಟನೆ ಜತೆ ಸಂಪರ್ಕ ಹೊಂದಿರುವ ಮೌಲ್ವಿ ತನ್ವೀರ್ ಪೀರಾ ಅವರ ಒಡನಾಟಗಳ ಬಗ್ಗೆ ಕೇಂದ್ರ ಸಂಸ್ಥೆಗಳಿಂದ ತನಿಖೆ ನಡೆಸಬೇಕು'ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ, ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ಪತ್ರ ಬರೆದಿದ್ದಾರೆ.



ತನ್ವೀರಾ ಅವರ ಕೆಲವು ಫೋಟೊಗಳನ್ನು ತಮ್ಮ 'ಎಕ್ಸ್' ಖಾತೆಯಲ್ಲಿ ಹಂಚಿಕೊಂಡಿರುವ ಯತ್ನಾಳ, ಈ ಕುರಿತ ತನಿಖೆಯನ್ನು ರಾಷ್ಟ್ರೀಯ ತನಿಖಾ ಸಂಸ್ಥೆಗೆ (ಎನ್‌ಐಎ) ವಹಿಸುವಂತೆಯೂ ಮನವಿ ಮಾಡಿದ್ದಾರೆ.

ಐಎಸ್ ನಾಯಕರ ಜತೆಗೆ ಅವರು ಯಾಕೆ ಗುರುತಿಸಿಕೊಂಡಿದ್ದಾರೆ. ಪೀರಾ ಅವರಿಗೆ ಎಲ್ಲಿಂದ ಆರ್ಥಿಕ ನೆರವು ಬಂದಿದೆ ಎಂಬುದನ್ನೂ ತನಿಖೆಯಲ್ಲಿ ಪತ್ತೆ ಹಚ್ಚಬೇಕು ಎಂದು ಮನವಿ ಮಾಡಿದ್ದಾರೆ.

10ನೇ ಪುಟ ನೋಡಿ

'ಆರೋಪ ಸಾಬೀತಾದರೆ ದೇಶವನ್ನೇ ತೊರೆಯುವೆ'

ವಿಜಯಪುರ: 'ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು ನನ್ನ ವಿರುದ್ಧ ಮಾಡಿರುವ ಆರೋಪ ಸಾಬೀತುಪಡಿಸಿದರೆ ನಾನು ಈ ದೇಶವನ್ನೇ ತೊರೆಯುವೆ. ಸಾಬೀತು ಮಾಡಲು ವಿಫಲವಾದರೆ, ಅವರು ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿ ಪಾಕಿಸ್ತಾನಕ್ಕೆ ಹೋಗಬೇಕು' ಎಂದು ಜಮಾತ್ ಎ ಅಹಲೆ ಸುನ್ನತ್ ಕರ್ನಾಟಕ ರಾಜ್ಯ ಘಟಕದ ಅಧ್ಯಕ್ಷ ಹಾಗೂ ವಿಜಯಪುರದ ಹಜರತ್ ಹಾಶಿಂಪೀರ ದರ್ಗಾದ ಧರ್ಮಾಧಿಕಾರಿ ಸೈಯದ್ ಮೊಹಮ್ಮದ್ ತನ್ವೀರ್ ಹಾಶ್ಮಿ ಸವಾಲು ಹಾಕಿದ್ದಾರೆ.



'ಐಎಸ್ ಜೊತೆ ನಂಟಿದೆ ಎಂದು ಯತ್ನಾಳ ಅವರು ಬಿಡುಗಡೆ ಮಾಡಿರುವ ಚಿತ್ರಗಳು ನನ್ನ ಅಧಿಕೃತ ಫೇಸ್‌ಬುಕ್‌ನಲ್ಲಿ ನಾನೇ ಅಪ್‌ಲೋಡ್ ಮಾಡಿರುವ ಚಿತ್ರಗಳಾಗಿವೆ'ಎಂದಿದ್ದಾರೆ.

10ನೇ ಪುಟ ನೋಡಿ

ಕಲಬುರ್ಗಿ, ಗೌರಿ ಹತ್ಯೆ: ವಿಚಾರಣೆಗೆ ವಿಶೇಷ ನ್ಯಾಯಾಲಯ ಸ್ಥಾಪನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಶೋಧಕ ಎಂ.ಎಂ. ಕಲಬುರ್ಗಿ ಹಾಗೂ ಪತ್ರಕರ್ತೆ ಗೌರಿ ಲಂಕೇಶ್ ಅವರ ಹತ್ಯೆ ಪ್ರಕರಣದ ವಿಚಾರಣೆಗೆ ವಿಶೇಷ ನ್ಯಾಯಾಲಯ ಸ್ಥಾಪಿಸಿ, ಪೂರ್ಣಾವಧಿ ನ್ಯಾಯಾಧೀಶರನ್ನು ನೇಮಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಈ ಸಂಬಂಧ ತಕ್ಷಣವೇ ಅಗತ್ಯ ಕ್ರಮ ಕೈಗೊಳ್ಳುವಂತೆ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ಟಿಪ್ಪಣಿ ಮೂಲಕ ಸೂಚಿಸಿದ್ದಾರೆ.

2015ರ ಆಗಸ್ಟ್ 31ರಂದು ಕಲಬುರ್ಗಿ ಅವರ ಹತ್ಯೆ ನಡೆದಿತ್ತು. ಪ್ರಕರಣದ ತನಿಖೆ ನಡೆದು 2018–19ರಲ್ಲೇ ನ್ಯಾಯಾಲಯಕ್ಕೆ ಆರೋಪಿಗಳ ವಿರುದ್ಧ ದೋಷಾರೋಪಪಟ್ಟಿ ಸಲ್ಲಿಸಲಾಗಿದೆ. ಕಲಬುರ್ಗಿ ಕುಟುಂಬದವರ ವಿಚಾರಣೆ ಪೂರ್ಣ ಆಗಿದ್ದರೂ



ಕಲಬುರ್ಗಿ



ಗೌರಿ ಲಂಕೇಶ್

ನ್ಯಾಯಾಲಯದಲ್ಲಿ ವಿಚಾರಣೆ ಮುಂದು ವರಿದಿದೆ. ಈಗಾಗಲೇ ಸಾಕಷ್ಟು ಸಮಯವಾಗಿದ್ದು ವಿಶೇಷ ನ್ಯಾಯಾಲಯ ಸ್ಥಾಪಿಸುವಂತೆ ಕಲಬುರ್ಗಿ ಅವರ ಪತ್ನಿ ಉಮಾದೇವಿ ಮನವಿ ಸಲ್ಲಿಸಿದ್ದರು. ಅವರ ಮನವಿ ಮೇರೆಗೆ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಮುಖ್ಯಮಂತ್ರಿ ತಿಳಿಸಿದ್ದಾರೆ.

ಧಾರವಾಡದ ಕಲ್ಯಾಣ ನಗರದಲ್ಲಿರುವ ಕಲಬುರ್ಗಿ ಅವರ ಮನೆಗೆ ಬಂದಿದ್ದ ದುಷ್ಕರ್ಮಿಗಳಿಬ್ಬರ ಪೈಕಿ ಒಬ್ಬಾತ, ಕಲಬುರ್ಗಿಯವರ ಹಣೆ ಹಾಗೂ ಎದೆಗೆ ಗುಂಡಿಕ್ಕಿದ್ದ. ನಂತರ, ಅವರಿಬ್ಬರೂ ಬೈಕ್‌ನಲ್ಲಿ ಪರಾರಿಯಾಗಿದ್ದರು.

10ನೇ ಪುಟ ನೋಡಿ

ಹತ್ತು ಸಂಸದರ ರಾಜೀನಾಮೆ

ನವದೆಹಲಿ (ಪಿಟಿಐ): ಕೇಂದ್ರ ಸಚಿವರಾದ ನರೇಂದ್ರ ಸಿಂಗ್ ತೋಮರ್ ಮತ್ತು ಪ್ರಹ್ಲಾದ್ ಸಿಂಗ್ ಪಟೇಲ್ ಸೇರಿ ಬಿಜೆಪಿಯ 10 ಸಂಸದರು ಲೋಕಸಭಾ ಸದಸ್ಯತ್ವಕ್ಕೆ ಬುಧವಾರ ರಾಜೀನಾಮೆ ನೀಡಿದರು. ಮಧ್ಯಪ್ರದೇಶ, ರಾಜಸ್ಥಾನ ಮತ್ತು ಛತ್ತೀಸಗಢದಲ್ಲಿ ರಚನೆಯಾಗಲಿರುವ ಸರ್ಕಾರವನ್ನು ಇವರು ಸೇರಬಹುದೆಂಬ ಲೆಕ್ಕಾಚಾರಗಳು ನಡೆದಿವೆ.

ಈ ಮೂರೂ ರಾಜ್ಯಗಳಲ್ಲಿ ಸರ್ಕಾರದ ಚುಕ್ಕಾಣಿಯನ್ನು ಹೊಸ ಮುಖಗಳಿಗೆ ನೀಡುವ ಸಾಧ್ಯತೆ ಇದೆ ಎಂಬ ನಿರೀಕ್ಷೆ ಇದೆ. ಆದರೆ ಈ ವಿಚಾರವಾಗಿ ಪಕ್ಷದ ಹಿರಿಯ ನಾಯಕರು ಪ್ರತಿಕ್ರಿಯೆ ನೀಡಿಲ್ಲ.

ವಿಧಾನಸಭಾ ಚುನಾವಣೆಯಲ್ಲಿ ಗೆದ್ದಿರುವ ಸಚಿವೆ ರೇಣುಕಾ ಸಿಂಗ್ ಮತ್ತು ಸಂಸದ ಮಹಂತ ಬಾಲಕನಾಥ ಅವರು ಕೂಡಾ ರಾಜೀನಾಮೆ ನೀಡಲಿದ್ದಾರೆ. ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸಿ ಗೆದ್ದಿರುವ ತನ್ನ 12 ಮಂದಿ ಸಂಸದರಿಂದ ಸಂಸತ್ ಸದಸ್ಯತ್ವಕ್ಕೆ ರಾಜೀನಾಮೆ ಕೊಡಿಸಬೇಕು ಎಂದು ಬಿಜೆಪಿ ನಿರ್ಧರಿಸಿತ್ತು.

ಮಧ್ಯಪ್ರದೇಶದ ರಾಕೇಶ್ ಸಿಂಗ್, ಉದಯ್ ಪ್ರತಾಪ್ ಸಿಂಗ್, ರಿತಿ ಪಾಠಕ್, ರಾಜಸ್ಥಾನದ ಕಿರೋಡಿ ಲಾಲ್ ಮೀನಾ (ರಾಜ್ಯಸಭಾ ಸದಸ್ಯ), ದಿಯಾ ಕುಮಾರಿ ಮತ್ತು ರಾಜ್ಯವರ್ಧನ್ ಸಿಂಗ್ ರಾಥೋಡ್, ಛತ್ತೀಸಗಢದ ಗೋಮತಿ ಸಾಯ್ ಮತ್ತು ಅರುಣ್ ಸಾವ್ ಅವರು ರಾಜೀನಾಮೆ ನೀಡಿದರು. ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಈ ವೇಳೆ ಅವರ ಜತೆಗಿದ್ದರು.

11ನೇ ಪುಟ ನೋಡಿ

ಮದ್ಯದಂಗಡಿ ಪರವಾನಗಿಯಲ್ಲೂ ಮೀಸಲು

ವಿಧಾನಸಭೆ: ಮದ್ಯದಂಗಡಿಗಳ ಪರವಾನಗಿಯಲ್ಲಿ ಪರಿಶಿಷ್ಟ ಜಾತಿ (ಎಸ್.ಸಿ) ಮತ್ತು ಪರಿಶಿಷ್ಟ ಪಂಗಡಗಳ (ಎಸ್.ಟಿ) ಜನರಿಗೆ ಅವರ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ನೀಡಬೇಕು ಎಂದು ವಿಧಾನ ಮಂಡಲದ ಎಸ್‌ಸಿ, ಎಸ್‌ಟಿ ಕಲ್ಯಾಣ ಸಮಿತಿ ಶಿಫಾರಸು ಮಾಡಿದೆ. 7

'ಇಂಡಿಯಾ' ಸಭೆ: ಟಿಎಂಸಿ, ಶಿವಸೇನಾ ನಾಯಕರ ಗೈರು

ನವದೆಹಲಿ: 'ಇಂಡಿಯಾ' ಮೈತ್ರಿಕೂಟದ ನಾಯಕರಿಗಾಗಿ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಬುಧವಾರ ಏರ್ಪಡಿಸಿದ್ದ ಔತಣಕೂಟದಲ್ಲಿ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಮತ್ತು ಶಿವಸೇನಾ (ಯುಟಿಬಿ) ಪ್ರತಿನಿಧಿಗಳು ಗೈರು ಹಾಜರಾಗಿದ್ದು ಎದ್ದುಕಂಡಿತು. 11

ರೇವಂತ್ ರೆಡ್ಡಿ ಇಂದು ಪ್ರಮಾಣ

ಹೈದರಾಬಾದ್ (ಪಿಟಿಐ): ತೆಲಂಗಾಣ ಕಾಂಗ್ರೆಸ್ ಅಧ್ಯಕ್ಷ ಎ. ರೇವಂತ್ ರೆಡ್ಡಿ ಅವರು ಇಲ್ಲಿನ ಎಲ್.ಬಿ. ಕ್ರೀಡಾಂಗಣದಲ್ಲಿ ಗುರುವಾರ ಮಧ್ಯಾಹ್ನ 1.04ಕ್ಕೆ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸುವರು.

ರಾಜ್ಯದ ಮುಖ್ಯ ಕಾರ್ಯದರ್ಶಿ ಎ. ಶಾಂತಿ ಕುಮಾರಿ ಅವರು ಸಮಾರಂಭದ ಸಿದ್ಧತೆ ಕುರಿತು ಹಿರಿಯ ಅಧಿಕಾರಿಗಳ ಜತೆ ಸಭೆ ನಡೆಸಿದರು. ಕ್ರೀಡಾಂಗಣಕ್ಕೂ ಭೇಟಿ ನೀಡಿ ಪರಿಶೀಲಿಸಿದರು. ಈ ಮಧ್ಯೆ, ರೇವಂತ್ ರೆಡ್ಡಿ ಅವರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪಕ್ಷದ ನಾಯಕಿ, ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ ವಾದ್ರಾ ಮತ್ತಿತರರನ್ನು ದೆಹಲಿಯಲ್ಲಿ ಭೇಟಿ ಮಾಡಿದರು.

ಸಮಾರಂಭದಲ್ಲಿ ಸೋನಿಯಾ ಗಾಂಧಿ ಅವರು ಪಾಲ್ಗೊಳ್ಳುವ ಸಾಧ್ಯತೆ ಇದೆ. ಪ್ರಮಾಣವಚನ ಸ್ವೀಕಾರ ಸಮಾರಂಭಕ್ಕಾಗಿ ಹೈದರಾಬಾದ್‌ಗೆ ತೆರಳುವಿರಾ ಎಂದು ಪತ್ರಕರ್ತರು ಕೇಳಿದ ಪ್ರಶ್ನೆಗೆ ಸೋನಿಯಾ ಅವರು 'ಬಹುಶಃ' ಎಂದು ಉತ್ತರಿಸಿದ್ದಾರೆ. ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕೂಡ ಪಾಲ್ಗೊಳ್ಳಲಿದ್ದಾರೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ



ಚಾಲನಾ ಪರವಾನಗಿ, ವಾಹನಗಳ ನೋಂದಣಿ ಪ್ರಮಾಣಪತ್ರ ಕಾರ್ಡ್‌ನಲ್ಲಿ ಕ್ಯೂ ಆರ್ ಕೋಡ್

ಫೆಬ್ರುವರಿಯಿಂದ ಏಕರೂಪ ಡಿಎಲ್, ಆರ್‌ಸಿ

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ದೇಶದಾದ್ಯಂತ ಏಕರೂಪ ಚಾಲನಾ ಪರವಾನಗಿ (ಡಿಎಲ್), ವಾಹನಗಳ ನೋಂದಣಿ ಪ್ರಮಾಣಪತ್ರ (ಆರ್‌ಸಿ) ಇರಬೇಕು ಎಂಬ ಕೇಂದ್ರ ಸರ್ಕಾರದ ಆದೇಶ ರಾಜ್ಯದಲ್ಲಿ 2024ರ ಫೆಬ್ರುವರಿಯಲ್ಲಿ ಜಾರಿಗೆ ಬರಲಿದೆ. ಇನ್ನು ಮುಂದೆ ಡಿಎಲ್, ಆರ್‌ಸಿಗಳಲ್ಲಿ ಕ್ಯೂಆರ್ ಕೋಡ್ ಕೂಡ ಇರಲಿದೆ.

ಒಂದು ದೇಶದಲ್ಲಿ ಒಂದೇ ಮಾದರಿಯ ಸ್ಮಾರ್ಟ್‌ಕಾರ್ಡ್ ಇರಬೇಕು ಎಂದು ಕೇಂದ್ರ ಸಾರಿಗೆ ಮತ್ತು ರಾಷ್ಟ್ರೀಯ ಹೆದ್ದಾರಿ ಸಚಿವಾಲಯವು 2019ರಲ್ಲಿ ಎಲ್ಲ ರಾಜ್ಯಗಳಿಗೆ ಸೂಚಿಸಿತ್ತು. ಛತ್ತೀಸಗಡ, ಹಿಮಾಚಲ ಪ್ರದೇಶ, ತಮಿಳುನಾಡು ಸಹಿತ ಕೆಲವು ರಾಜ್ಯಗಳು ಇದನ್ನು ಜಾರಿಗೆ ತಂದಿದ್ದವು.



ರಾಜ್ಯದಲ್ಲಿ ಸ್ಮಾರ್ಟ್‌ಕಾರ್ಡ್ ಪೂರೈಕೆಯ ಗುತ್ತಿಗೆ ಪಡೆದಿರುವ ಕಂಪನಿಯ 15 ವರ್ಷಗಳ ಅವಧಿ ಫೆಬ್ರುವರಿಗೆ ಮುಕ್ತಾಯಗೊಳ್ಳಲಿದೆ. ಹೊಸದಾಗಿ ಗುತ್ತಿಗೆ ಪಡೆಯುವ ಏಜೆನ್ಸಿ ಅಥವಾ ಕಂಪನಿ ಹೊಸಮಾದರಿಯ ಡಿಎಲ್, ಆರ್‌ಸಿ ಕಾರ್ಡ್‌ಗಳನ್ನು ಪೂರೈಸಲಿದೆ. ಸಾರಿಗೆ ಇಲಾಖೆಯು ಟೆಂಡರ್ ಕರೆಯಲು ಸಿದ್ಧತೆ ಮಾಡಿಕೊಳ್ಳುತ್ತಿದೆ.

ವಿಶೇಷತೆ: ಸ್ಮಾರ್ಟ್‌ಕಾರ್ಡ್‌ನಲ್ಲಿರುವ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿದರೆ ಡಿಎಲ್ ಹೊಂದಿರುವವರ ಪೂರ್ಣ ಮಾಹಿತಿ ಸಿಗಲಿದೆ. ಸಂಚಾರದ ಅವಧಿಯಲ್ಲಿ ಪೊಲೀಸರು ಅಥವಾ ಸಾರಿಗೆ ಇಲಾಖೆಯ ಸಿಬ್ಬಂದಿ ಸುಲಭವಾಗಿ ತಪಾಸಣೆ ಮಾಡಬಹುದು. ಈವರೆಗೆ ಸ್ಮಾರ್ಟ್ ಕಾರ್ಡ್‌ನಲ್ಲಿ ಚಿಪ್ ಮಾತ್ರ ಇತ್ತು. ಚಿಪ್‌ನಲ್ಲಿ ಇರುವ ವಿವರಗಳನ್ನು ನೋಡಲು ಸಾರಿಗೆ ಕಚೇರಿ ಇಲ್ಲವೇ ಪೊಲೀಸ್ ಸ್ಟೇಷನ್‌ಗೆ ಬರಬೇಕಿತ್ತು. ಕ್ಯೂ ಆರ್ ಕೋಡ್ ಸೌಲಭ್ಯದಿಂದ, ಇದು ತಪ್ಪಲಿದೆ ಎಂದು ಹೆಚ್ಚುವರಿ ಸಾರಿಗೆ ಆಯುಕ್ತ ಜ್ಞಾನೇಂದ್ರ ಕುಮಾರ್ ಮಾಹಿತಿ ನೀಡಿದರು.



> **ಹೊಸ ಡಿಎಲ್, ಆರ್‌ಸಿ ಪಡೆಯುವವರಿಗೆ ಏಕರೂಪದ ಸ್ಮಾರ್ಟ್‌ಕಾರ್ಡ್ ನೀಡಲಾಗುವುದು. ಹಳೇ ಡಿಎಲ್‌ಗಳನ್ನು ನವೀಕರಣ ವೇಳೆ ಬದಲಾಯಿಸಲಾಗುವುದು**
> **ರಾಮಲಿಂಗಾರೆಡ್ಡಿ,** ಸಾರಿಗೆ ಸಚಿವ

ಅಂಕಿ-ಅಂಶಗಳು

5,000
ರಾಜ್ಯದಲ್ಲಿ ಪ್ರತಿ ತಿಂಗಳು ನೋಂದಣಿಯಾಗುವ ವಾಹನಗಳ ಸರಾಸರಿ ಸಂಖ್ಯೆ

4,000
ರಾಜ್ಯದಲ್ಲಿ ಪ್ರತಿ ತಿಂಗಳು ಡಿಎಲ್ ಪಡೆಯುವವರ ಸರಾಸರಿ ಪ್ರಮಾಣ

ಡಿಎಲ್‌ನಲ್ಲಿ ಕಾರ್ಡ್‌ದಾರರ ಹೆಸರು, ಫೋಟೊ, ವಿಳಾಸ, ಸಿಂಧುತ್ವ ಅವಧಿ, ಜನ್ಮ ದಿನಾಂಕ, ರಕ್ತದ ಗುಂಪು, ಮೊಬೈಲ್ ಸಂಖ್ಯೆ, ತುರ್ತು ಸಂಪರ್ಕ ಸಂಖ್ಯೆ ಸಹಿತ 25ಕ್ಕೂ ಹೆಚ್ಚು ಮಾಹಿತಿ ಇರಲಿದೆ. ಚಿಪ್ ಮತ್ತು ಕ್ಯೂಆರ್ ಕೋಡ್‌ಗಳು ಕೂಡ ಇರಲಿವೆ. ಆರ್‌ಸಿ ಕಾರ್ಡಿನ ಮುಂಭಾಗದಲ್ಲಿ ನೋಂದಣಿ ಸಂಖ್ಯೆ, ನೋಂದಣಿ ದಿನಾಂಕ, ಮಾನ್ಯತಾ ಅವಧಿ, ಚಾಸಿಸ್, ಎಂಜಿನ್ ಸಂಖ್ಯೆ, ಮಾಲೀಕರ ವಿವರ ಮತ್ತು ವಿಳಾಸ ಇರಲಿದೆ. ಹಿಂಭಾಗದಲ್ಲಿ ಕ್ಯೂಆರ್ ಕೋಡ್‌ನೊಂದಿಗೆ ವಾಹನ ತಯಾರಿಕಾ ಕಂಪನಿ ಹೆಸರು, ಮಾಡೆಲ್, ವಾಹನದ ಶೈಲಿ, ಆಸನ ಸಾಮರ್ಥ್ಯ ಮತ್ತು ಸಾಲ ನೀಡಿದ ಸಂಸ್ಥೆಗಳ ವಿವರಗಳೂ ಇರುತ್ತವೆ.

'ಕ್ಯೂಆರ್ ಕೋಡ್ ಸೇರ್ಪಡೆಯಿಂದಾಗಿ ಸಂಚಾರ ಪೊಲೀಸರು ಸೇರಿದಂತೆ ಇತರೆ ಇಲಾಖೆಗಳ ಅಧಿಕಾರಿಗಳಿಗೆ, ವಾಹನ ಚಾಲಕರು ಹಾಗೂ ಮಾಲೀಕರ ವಿವರಗಳ ದೃಢೀಕರಣವನ್ನು ಸುಲಭವಾಗಿ ಪರಿಶೀಲಿಸಲು ಅನುಕೂಲವಾಗಲಿದೆ' ಎಂದು ಸಾರಿಗೆ ಆಯುಕ್ತ ಎ.ಎಂ. ಯೋಗೀಶ್ ತಿಳಿಸಿದರು.

ಕಾರ್ಡ್ ಗುಣಮಟ್ಟವೂ ಬದಲು: ಈಗ ನೀಡುತ್ತಿರುವ ಸ್ಮಾರ್ಟ್‌ಕಾರ್ಡ್‌ಗಳನ್ನು ಪಾಲಿ ವಿನೈಲ್ ಕ್ಲೋರೈಡ್ ಕಾರ್ಡ್‌ಗಳಾಗಿವೆ. ಇದರಲ್ಲಿ ವರ್ಷ ಕಳೆದಂತೆ ಕಾರ್ಡ್ ಮೇಲಿನ ಅಕ್ಷರಗಳು ಅಳಿಸಿ ಹೋಗುವ, ಕಾರ್ಡ್ ಮುರಿದು ಹೋಗುವ ಸಾಧ್ಯತೆ ಇರುತ್ತದೆ. ಹೊಸ ಸ್ಮಾರ್ಟ್‌ಕಾರ್ಡ್‌ಗಳು ಪಾಲಿ ಕಾರ್ಬೊನೇಟ್ ಆಗಿರುತ್ತವೆ. ಇವು ಮುರಿಯುವುದಿಲ್ಲ, ಅಕ್ಷರ ಅಳಿಸಿ ಹೋಗುವುದಿಲ್ಲ ಎಂದು ಸಾರಿಗೆ ಅಧಿಕಾರಿಗಳು ತಿಳಿಸಿದರು.

ಉಚಿತ ನೇತ್ರ ತಪಾಸಣೆ ಇದೇ 10ಕ್ಕೆ

ಬೆಂಗಳೂರು: ಸ್ನೇಹ ಸಮ್ಮಿಲನ ಫೌಂಡೇಷನ್ ಹಾಗೂ ಬೊಮ್ಮಸಂದ್ರದ ನಾರಾಯಣ ನೇತ್ರಾಲಯದ ವತಿಯಿಂದ ಇದೇ 10ರಂದು ಉಚಿತ ನೇತ್ರ ತಪಾಸಣೆ, ಶಸ್ತ್ರಚಿಕಿತ್ಸೆ ಮತ್ತು ಕನ್ನಡಕ ವಿತರಣಾ ಶಿಬಿರವನ್ನು ಸರ್ಜಾಪುರದ ಇಟ್ಟಂಗೂರು ರಸ್ತೆಯಲ್ಲಿರುವ ಶ್ರೀರಾಮ್ ಪಬ್ಲಿಕ್ ಸ್ಕೂಲ್‌ನಲ್ಲಿ ಹಮ್ಮಿಕೊಳ್ಳಲಾಗಿದೆ.

ಶಿಬಿರವು ಬೆಳಿಗ್ಗೆ 8.30ರಿಂದ ಮಧ್ಯಾಹ್ನ 12.30ರವರೆಗೆ ನಡೆಯಲಿದೆ. ಕಣ್ಣಿಗೆ ಸಂಬಂಧಪಟ್ಟ ಎಲ್ಲ ಸಮಸ್ಯೆಗಳಿಗೆ ಉಚಿತ ತಪಾಸಣೆ, ವೈದ್ಯರು ಸೂಚಿಸಿದವರಿಗೆ ಉಚಿತವಾಗಿ ಕನ್ನಡಕವನ್ನು ನೀಡಲಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ. ಹೆಚ್ಚಿನ ಮಾಹಿತಿಗಾಗಿ– 99005 14779, 98450 11464ಗೆ ಸಂಪರ್ಕಿಸಬಹುದು.

ಖಾಸಗಿ ಲೇಔಟ್: ಹಕ್ಕಿನ ಪ್ರಶ್ನೆ– ಮೇಲ್ಮನವಿ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಖಾಸಗಿ ಲೇಔಟ್‌ನಲ್ಲಿ ರಸ್ತೆ ಸೇರಿದಂತೆ ವಿವಿಧ ಮೂಲ ಸೌಕರ್ಯಗಳನ್ನು ಕಲ್ಪಿಸುವ ಉದ್ದೇಶಕ್ಕಾಗಿ ಸ್ಥಳೀಯ ಸಂಸ್ಥೆಗಳಿಗೆ ಬಿಟ್ಟುಕೊಟ್ಟ ಜಾಗದ ಮೇಲೆ ಭೂ ಮಾಲೀಕರಿಗಾಗಲೀ ಅಥವಾ ಲೇ ಔಟ್ ನಿರ್ಮಾಣದಾರರಿಗಾಗಲೀ ಯಾವುದೇ ಹಕ್ಕು ಇರುವುದಿಲ್ಲ' ಎಂದು ಹೈಕೋರ್ಟ್ ಸ್ಪಷ್ಟಪಡಿಸಿದೆ.

ಈ ಸಂಬಂಧ ಬೆಳ್ಳಂದೂರು ಹೊರ ವರ್ತುಲದ ನಿವಾಸಿ ಪಬ್ಬಾ ರೆಡ್ಡಿ ಕೋದಂಡರಾಮಿ ರೆಡ್ಡಿ ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ, ಮೇಲ್ಮನವಿ ವಜಾಗೊಳಿಸಿದೆ.

ಪ್ರಕರಣವೇನು?: ಆನೇಕಲ್ ತಾಲ್ಲೂಕಿನ ಇಡ್ಲುಬೆಲೆ ಗ್ರಾಮದಲ್ಲಿನ 11 ಎಕರೆ ಜಮೀನಿನಲ್ಲಿ ಲೇ ಔಟ್ ನಿರ್ಮಾಣಕ್ಕಾಗಿ ಉಪಕಾರ್ ರೆಸಿಡೆನ್ಸಿ ಪ್ರೈವೆಟ್ ಲಿಮಿಟೆಡ್ ಕಂಪನಿಯು ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದಿತ್ತು. ಇದರ ಪಕ್ಕದಲ್ಲಿನ 14 ಎಕರೆ ಜಾಗದಲ್ಲಿ ಮೇಲ್ಮನವಿದಾರ ಪಬ್ಬಾ ರೆಡ್ಡಿ ಲೇಔಟ್ ನಿರ್ಮಾಣ ಮಾಡಿದ್ದು, ಬಡಾವಣೆಯ ಸ್ವಲ್ಪ ಜಾಗವನ್ನು ಉದ್ಯಾನ ಮತ್ತು ರಸ್ತೆ ನಿರ್ಮಾಣಕ್ಕೆಂದು ಸ್ಥಳೀಯ ಸಂಸ್ಥೆಯ ಸುಪರ್ದಿಗೆ ನೀಡಿದ್ದರು.


ಬಡಾವಣೆಯಲ್ಲಿ ರಸ್ತೆ ನಿರ್ಮಾಣ ಮಾಡಿದ ನಂತರ ಬಡಾವಣೆಯ ಸುತ್ತಲೂ ಕಾಂಪೌಂಡ್ ನಿರ್ಮಿಸಿದ್ದರು. ಇದರಿಂದ ಉತ್ತರ ಭಾಗದಲ್ಲಿರುವ ಜಾಗ ಪ್ರವೇಶಿಸಲು ಹಾಗೂ ನಿರ್ಗಮಿಸಲು ಸಾಧ್ಯವಾಗುತ್ತಿರಲಿಲ್ಲ.

ಈ ಸಂಬಂಧ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದ ಉಪಕಾರ್ ರೆಸಿಡೆನ್ಸಿ, 'ತಡೆಗೋಡೆ ತೆರವಿಗೆ ನಿರ್ದೇಶಿಸಬೇಕು. ನಮ್ಮ ಜಮೀನಿನ ಪ್ರವೇಶ ಮತ್ತು ನಿರ್ಗಮನಕ್ಕೆ ಅಡ್ಡಿಪಡಿಸಲು ಪಬ್ಬಾ ರೆಡ್ಡಿಗೆ ಅಧಿಕಾರವಿಲ್ಲ ಎಂಬುದಾಗಿ ಘೋಷಿಸಬೇಕು' ಎಂದು ಕೋರಿದ್ದರು.

ಸುದ್ದಿ 2 ನಿಮಿಷ

ವಿದ್ಯುತ್ ವ್ಯತ್ಯಯ ಇಂದಿನಿಂದ

ಬೆಂಗಳೂರು: ವಿದ್ಯುತ್ ನಿರ್ವಹಣಾ ಕೇಂದ್ರಗಳಲ್ಲಿ ನಿರ್ವಹಣೆ ಕಾಮಗಾರಿ ಕೈಗೊಂಡಿರುವುದರಿಂದ ಇದೇ 7ರಿಂದ 8ರವೆಗೆ ನಗರದ ವಿವಿಧ ಸ್ಥಳಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ತಿಳಿಸಿದೆ.



7ಕ್ಕೆ ವಿದ್ಯುತ್ ವ್ಯತ್ಯಯವಾಗುವ ಸ್ಥಳಗಳು: ಸಿಂಗಸಂದ್ರ ಮುಖ್ಯರಸ್ತೆ, ಮಸೀದಿ ರಸ್ತೆ ಕುಡ್ಲು ಮುಖ್ಯರಸ್ತೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಬೆಳಿಗ್ಗೆ 10ರಿಂದ ಮಧ್ಯಾಹ್ನ 12 ಗಂಟೆವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

8ಕ್ಕೆ ವಿದ್ಯುತ್ ವ್ಯತ್ಯಯವಾಗುವ ಸ್ಥಳಗಳು: ಶೋಭಾ ಫಾರೆಸ್ಟ್ ಅಪಾರ್ಟ್‌ಮೆಂಟ್, ತಲಘಟ್ಟಪುರ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಬೆಳಿಗ್ಗೆ 10ರಿಂದ ಮಧ್ಯಾಹ್ನ 3 ಗಂಟೆವರೆಗೆ ವಿದ್ಯುತ್ ವ್ಯತ್ಯಯಾ ಆಗಲಿದೆ ಎಂದು ಪ್ರಕಟಣೆ ತಿಳಿಸಿದೆ.

17ನೇ ಬೆಂಗಳೂರು ವಾಕಥಾನ್ 9ಕ್ಕೆ

ಬೆಂಗಳೂರು: ಸಮರ್ಥನಂ ಟ್ರಸ್ಟ್‌ನ ವತಿಯಿಂದ 'ಎಲ್ಲರಿಗೂ ಆರೋಗ್ಯ' ಘೋಷವಾಕ್ಯದಡಿಯಲ್ಲಿ ಇದೇ 9ರಂದು '17ನೇ ಬೆಂಗಳೂರು ವಾಕಥಾನ್' ಅನ್ನು ಜಯನಗರದ ಕಿತ್ತೂರು ರಾಣಿ ಚೆನ್ನಮ್ಮ ಕ್ರೀಡಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಟ್ರಸ್ಟ್‌ನ ಟ್ರಸ್ಟಿ ಮಹಾಂತೇಶ ಜಿ. ಕಿವಡಸಣ್ಣವರ್, 'ಅಂಗವಿಕಲರ ಹಕ್ಕುಗಳು ಮತ್ತು ಯೋಗಕ್ಷೇಮವನ್ನು ಉತ್ತೇಜಿಸುವ ಹಾಗೂ ಸಮಾಜದ ಎಲ್ಲ ಕ್ಷೇತ್ರಗಳಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ಈ ವಾಕಥಾನ್ ಹಮ್ಮಿಕೊಳ್ಳಲಾಗಿದೆ. ಝುಡ್‌ಎಸ್ ಸಹಭಾಗಿತ್ವದಲ್ಲಿ ನಡೆಯಲಿರುವ ವಾಕಥಾನ್‌ಗೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಮತ್ತು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ಚಾಲನೆ ನೀಡಲಿದ್ದಾರೆ' ಎಂದು ತಿಳಿಸಿದರು. ಹೆಚ್ಚಿನ ಮಾಹಿತಿಗಾಗಿ 94808 09591, 94808 09589 ಸಂಪರ್ಕಿಸಬಹುದು.

'ವಿಪಕ್ಷಗಳ ಹೋರಾಟಕ್ಕೆ ತಿರುಗೇಟು ನೀಡಿ'

ಶಾಸಕರಿಗೆ ವಿಶೇಷ ಅನುದಾನ– ಸಿದ್ದರಾಮಯ್ಯ ಭರವಸೆ

ಬೆಳಗಾವಿ: ಬಿಜೆಪಿ– ಜೆಡಿಎಸ್ ಜಂಟಿಯಾಗಿ ಹೋರಾಟ ನಡೆಸಲು ಮುಂದಾಗಿದ್ದು, ಅದಕ್ಕೆ ತಕ್ಕ ತಿರುಗೇಟು ನೀಡಬೇಕು ಎಂದು ಸ್ವಪಕ್ಷೀಯ ಶಾಸಕರಿಗೆ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ತಿಳಿಸಿದರು.

ಬುಧವಾರ ರಾತ್ರಿ ಇಲ್ಲಿ ನಡೆದ ಕಾಂಗ್ರೆಸ್ ಶಾಸಕಾಂಗದ ಪಕ್ಷದ (ಸಿಎಲ್‌ಪಿ) ಸಭೆಯಲ್ಲಿ ಮಾತನಾಡಿದ ಅವರು, ತೆಲಂಗಾಣ ಚುನಾವಣಾ ಪ್ರಚಾರ ವೇಳೆ ಸ್ಪೀಕರ್ ವಿಷಯದಲ್ಲಿ ಸಚಿವ ಜಮೀರ್ ಅಹಮದ್ ಖಾನ್ ಮಾತನಾಡಿರುವುದನ್ನು ವಿರೋಧ ಪಕ್ಷಗಳು ದೊಡ್ಡದಾಗಿ ಬಿಂಬಿಸಬಹುದು. ಈ ವಿಷಯ ಪ್ರಸ್ತಾಪವಾದಾಗ ಎಲ್ಲರೂ ಸಮರ್ಥನೆಗೆ ನಿಲ್ಲುವಂತೆ ಸಲಹೆ ನೀಡಿದರು ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ವಿಧಾನ ಮಂಡಲದ ಅಧಿವೇಶನದಲ್ಲಿ ಮಾತನಾಡುವ ವೇಳೆಯಲ್ಲಿ ಬಿಜೆಪಿ, ಜೆಡಿಎಸ್ ಶಾಸಕರು ಕೆರಳಿಸಬಹುದು. ಆದರೆ, ನಾವು ಅವರ ಮಾತುಗಳಿಗೆ ಕೆರಳಿ ಪ್ರತಿಕ್ರಿಯಿಸುವ ಅಗತ್ಯ ಇಲ್ಲ ಎಂದು ಶಾಸಕರಿಗೆ ತಿಳಿ ಹೇಳಿದರು ಎಂದೂ ಮೂಲಗಳು ಹೇಳಿವೆ.

ಮುಖ್ಯಾಂಶಗಳು
- ಸಿದ್ದರಾಮಯ್ಯ ನೇತೃತ್ವದಲ್ಲಿ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ
- ಬರ: ಸಮರ್ಪಕವಾಗಿ ಉತ್ತರಿಸಲು ಪೂರ್ವ ತಯಾರಿಗೆ ಸೂಚನೆ

ರಾಜ್ಯ ಎದುರಿಸುತ್ತಿರುವ ಬರ ವಿಷಯದಲ್ಲಿಯೂ ಬಿಜೆಪಿ, ಜೆಡಿಎಸ್ ಸದಸ್ಯರು ಸರ್ಕಾರದ ವಿರುದ್ಧ ಮಾತನಾಡಬಹುದು. ಈ ವೇಳೆಯಲ್ಲಿ ಸಮರ್ಪಕವಾಗಿ ಉತ್ತರಿಸಲು ಪೂರ್ವ ತಯಾರಿ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದ್ದಾರೆ.

ಕೆಲವು ಶಾಸಕರು ಕ್ಷೇತ್ರದ ಅಭಿವೃದ್ಧಿಗೆ ಅನುದಾನ ನೀಡಬೇಕು. ಗುಂಡಿ ಮುಚ್ಚಲು ಕೂಡಾ ಹಣದ ಕೊರತೆಯಿದೆ ಎಂದಾಗ, 'ಸರ್ಕಾರ ಬಂದು ಆರು ತಿಂಗಳು ಆಗಿದೆ. 'ಗ್ಯಾರಂಟಿ' ಯೋಜನೆಗಳ ಅನುಷ್ಠಾನ ಯಶಸ್ವಿಯಾಗಿದೆ. ಆದರೆ, ವಿರೋಧ ಪಕ್ಷಗಳ ಶಾಸಕರು ಈ ಯೋಜನೆಗಳ ಬಗ್ಗೆ ಆರೋಪ ಮಾಡಬಹುದು. ಈ ಬಗ್ಗೆ ಎಚ್ಚರ ಇರಲಿ' ಎಂದು ತಿಳಿಸಿದ ಸಿದ್ದರಾಮಯ್ಯ,'₹ 25 ಕೋಟಿಯಂತೆ ವಿಶೇಷ ಅನುದಾನ ನೀಡುವ ಬಗ್ಗೆ ಭರವಸೆ ನೀಡಿದರು ಎಂದೂ ಮೂಲಗಳು ತಿಳಿಸಿವೆ.

ನಿಗಮ ಮಂಡಳಿ ನೇಮಕ ಪಟ್ಟಿ ಅಂತಿಮವಾಗಿದೆ. ಪಟ್ಟಿಯನ್ನು ವರಿಷ್ಠರಿಗೆ ಕಳುಹಿಸಲಾಗಿದೆ. ಅಲ್ಲಿಂದ ಒಪ್ಪಿಗೆ ಸಿಕ್ಕಿದ ತಕ್ಷಣ ಪ್ರಕಟಿಸಲಾಗುವುದು ಎಂದೂ ಮುಖ್ಯಮಂತ್ರಿ ತಿಳಿಸಿದ್ದಾರೆ ಎಂದೂ ಗೊತ್ತಾಗಿದೆ.

ಡಿಕೆಶಿ ಗೈರು: ಶಾಸಕಾಂಗ ಪಕ್ಷದ ಸಭೆಗೆ ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಗೈರಾದರು.

ಎಬಿ–ಎಆರ್‌ಕೆ ಹೊಸ ಕಾರ್ಡ್‌ಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಆಯುಷ್ಮಾನ್ ಭಾರತ್– ಆರೋಗ್ಯ ಕರ್ನಾಟಕ (ಎಬಿ–ಎಆರ್‌ಕೆ) ಫಲಾನುಭವಿಗಳಿಗೆ ವಿತರಿಸಲು ಆರೋಗ್ಯ ಇಲಾಖೆ ರೂಪಿಸಿರುವ ನೂತನ ಕಾರ್ಡ್‌ಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಬುಧವಾರ ಚಾಲನೆ ನೀಡಿದರು.

ಹೊಸ ಕಾರ್ಡ್‌ಗಳಿಗೆ 'ಆಯುಷ್ಮಾನ್ ಭಾರತ್– ಪ್ರಧಾನಮಂತ್ರಿ ಜನಾರೋಗ್ಯ– ಮುಖ್ಯಮಂತ್ರಿಗಳ ಆರೋಗ್ಯ ಕರ್ನಾಟಕ' ಕಾರ್ಡ್ ಎಂದು ಹೆಸರಿಸಲಾಗಿದೆ. ಈ ಗುರುತಿನ ಚೀಟಿಗಳನ್ನು ರಾಷ್ಟ್ರೀಯ ಆರೋಗ್ಯ ಗುರುತಿನ ಚೀಟಿಯೊಂದಿಗೆ ಜೋಡಿಸಲಾಗುತ್ತದೆ.

ಹೊಸ ಕಾರ್ಡ್ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, 'ಆಯುಷ್ಮಾನ್ ಭಾರತ್ - ಆರೋಗ್ಯ ಕರ್ನಾಟಕ ಕಾರ್ಡ್‌ನಲ್ಲಿ ಕೆಲವು ಬದಲಾವಣೆ ತರಲಾಗಿದೆ. ರಾಜ್ಯದ 5.9 ಕೋಟಿ ಜನರಿಗೆ ಹೆಲ್ತ್ ಕಾರ್ಡ್‌ಗಳನ್ನು ವಿತರಿಸುವ ಗುರಿ ಇದೆ' ಎಂದರು.

ರಾಜ್ಯದ ಪ್ರತಿಯೊಬ್ಬರಿಗೂ ಉತ್ತಮ ಆರೋಗ್ಯ ಸೇವೆ ಹಾಗೂ ಚಿಕಿತ್ಸೆಗಳನ್ನು ಒದಗಿಸಬೇಕು ಎಂಬುದು ಸರ್ಕಾರದ ಆದ್ಯತೆಯಾಗಿದೆ ಎಂದರು.





ಸಾರ್ವಜನಿಕ ಗ್ರಂಥಾಲಯ ಇಲಾಖೆಗೆ ಪಾವತಿಯಾಗದ ಕರ • ಸಂಕಷ್ಟದಲ್ಲಿ ಕನ್ನಡ ಪುಸ್ತಕೋದ್ಯಮ

ಗ್ರಂಥಾಲಯ ಕರ ₹638.18 ಕೋಟಿ ಬಾಕಿ

• ವರುಣ ಹೆಗಡೆ

ಬೆಂಗಳೂರು: ಸಾರ್ವಜನಿಕ ಗ್ರಂಥಾಲಯ ಇಲಾಖೆಗೆ ಪಾವತಿಸಬೇಕಾದ ಗ್ರಂಥಾಲಯ ಕರದಲ್ಲಿ ಬಿಬಿಎಂಪಿ ₹ 638.18 ಕೋಟಿ ಬಾಕಿ ಉಳಿಸಿಕೊಂಡಿದೆ. ಇದರಿಂದ ಕನ್ನಡ ಪುಸ್ತಕೋದ್ಯಮ ಸಂಕಷ್ಟಕ್ಕೆ ಸಿಲುಕಿದೆ.

ಇಲಾಖೆಯು ಏಕಗವಾಕ್ಷಿ ಯೋಜನೆಯಡಿ ಆಯ್ಕೆಯಾದ ಪುಸ್ತಕಗಳ ಪ್ರತಿ ಶೀರ್ಷಿಕೆಯ 300 ಪ್ರತಿಗಳನ್ನು ಖರೀದಿಸಲಾಗುತ್ತಿದೆ. ರಾಜ್ಯದಲ್ಲಿ ಸುಮಾರು 500 ಪ್ರಕಾಶನ ಸಂಸ್ಥೆಗಳಿವೆ. ಕೆಲವು ಲೇಖಕರು ಕೂಡ ಪ್ರಕಾಶನ ಕಾರ್ಯದಲ್ಲಿ ನಿರತರಾಗಿದ್ದಾರೆ. ಪ್ರತಿ ವರ್ಷ ಸುಮಾರು 8 ಸಾವಿರ ಪುಸ್ತಕಗಳು ಪ್ರಕಟವಾಗುತ್ತಿವೆ. ಬಹುತೇಕ ಪ್ರಕಾಶಕರು ಗ್ರಂಥಾಲಯ ಇಲಾಖೆಯ ಸಗಟು ಖರೀದಿಯನ್ನೇ ಅವಲಂಬಿಸಿದ್ದಾರೆ. ಇದಕ್ಕಾಗಿ ಪ್ರತಿವರ್ಷ ₹ 15 ಕೋಟಿ ವೆಚ್ಚ ಮಾಡಲಾಗುತ್ತಿತ್ತು. ಆದರೆ, ನಿರ್ದಿಷ್ಟ ಬಜೆಟ್ ಘೋಷಿಸದಿರುವುದು, ಪುಸ್ತಕಗಳ ಖರೀದಿಗೆ ಅಗತ್ಯವಿರುವ ಅನುದಾನಕ್ಕೆ ಅನುಮೋದನೆ ದೊರೆಯದಿರುವುದು ಸೇರಿ ವಿವಿಧ ಕಾರಣದಿಂದ ಪುಸ್ತಕೋದ್ಯಮ ಹಿನ್ನಡೆ ಅನುಭವಿಸಿದೆ. ಬಿಬಿಎಂಪಿ ನಿಯಮಿತವಾಗಿ ಗ್ರಂಥಾಲಯ ಕರ ಪಾವತಿಸದಿರುವುದು ಪ್ರಕಾಶಕರ ಅಸಮಾಧಾನಕ್ಕೆ ಕಾರಣವಾಗಿದೆ.

> **ಸಂಗ್ರಹಿಸಿದ ಗ್ರಂಥಾಲಯ ಕರವನ್ನು ಬ್ಯಾಂಕ್ ಖಾತೆಗೆ ಜಮೆ ಮಾಡಬೇಕು. ಬಾಕಿ ಕರವನ್ನೂ ಪಾವತಿಸಿ, ಪುಸ್ತಕೋದ್ಯಮದ ಪ್ರಗತಿಗೆ ಸಹಕರಿಸಬೇಕು**
> **ಪ್ರಕಾಶ್ ಕಂಬತ್ತಳ್ಳಿ,** ಕರ್ನಾಟಕ ಪ್ರಕಾಶಕರ ಸಂಘದ ಅಧ್ಯಕ್ಷ

> **ಪುಸ್ತಕೋದ್ಯಮ ಸಂಕಷ್ಟದಲ್ಲಿದೆ. ಕರ ನಿಯಮಿತವಾಗಿ ಸಂದಾಯವಾದಲ್ಲಿ ಪುಸ್ತಕ ಖರೀದಿಗೆ ಹೆಚ್ಚುವರಿ ಅನುದಾನ ಅಗತ್ಯವಿಲ್ಲ. ಈ ಬಗ್ಗೆ ಸರ್ಕಾರ ಕ್ರಮವಹಿಸಲಿ**
> **ಸೃಷ್ಟಿ ನಾಗೇಶ್,** ಕರ್ನಾಟಕ ಪ್ರಕಾಶಕರ ಸಂಘದ ಸಂಘಟನಾ ಕಾರ್ಯದರ್ಶಿ

ಪ್ರಜಾವಾಣಿ ವಿಶೇಷ

ಬಾಕಿ ಉಳಿಸಿಕೊಂಡಿರುವ ಗ್ರಂಥಾಲಯ ಕರವನ್ನು ಸಾರ್ವಜನಿಕ ಗ್ರಂಥಾಲಯ ಇಲಾಖೆಗೆ ಪಾವತಿಸುವಂತೆ ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್ ಅವರು ಬಿಬಿಎಂಪಿಗೆ ಪತ್ರ ಬರೆದಿದ್ದಾರೆ. ಸಾರ್ವಜನಿಕ ಗ್ರಂಥಾಲಯ ಕಾಯ್ದೆ 1965ರ ಸೆಕ್ಷನ್ 30ರ ಅನುಸಾರ ರಾಜ್ಯದ ಸ್ಥಳೀಯ ಸಂಸ್ಥೆಗಳು ಸಂಗ್ರಹಿಸುವ ಆಸ್ತಿ ತೆರಿಗೆಗಳ ಮೇಲೆ ಶೇ 6ರಷ್ಟು ಗ್ರಂಥಾಲಯ ಕರವನ್ನು ಸ್ಥಳೀಯ ಸಂಸ್ಥೆಗಳು ಸಂಗ್ರಹ ಮಾಡಿ, ಶೇ 10 ರಷ್ಟು ಸಂಗ್ರಹಣಾ ವೆಚ್ಚ ಕಡಿತಗೊಳಿಸಿಕೊಂಡು, ಸಂಬಂಧಿಸಿದ ಗ್ರಂಥಾಲಯ ಪ್ರಾಧಿಕಾರಗಳಿಗೆ ನಿಯಮಾನುಸಾರ ಸಂದಾಯ ಮಾಡಬೇಕು. ಬಿಬಿಎಂಪಿ ನಿಯಮಿತವಾಗಿ ಗ್ರಂಥಾಲಯ ಕರ ವಸೂಲಿ ಮಾಡುತ್ತಿದ್ದರೂ ಸಾರ್ವಜನಿಕ ಗ್ರಂಥಾಲಯ ಇಲಾಖೆಗೆ ನೀಡದೆ ಬಾಕಿ ಉಳಿಸಿಕೊಂಡಿದೆ. ಈ ಹಣವನ್ನು 2023–24ನೇ ಆರ್ಥಿಕ ವರ್ಷದ ಅಂತ್ಯದೊಳಗೆ ಪಾವತಿಸಲು ಕ್ರಮವಹಿಸಬೇಕು ಎಂದು ಪತ್ರದಲ್ಲಿ ತಿಳಿಸಿದ್ದಾರೆ.

ಪುಸ್ತಕ ಖರೀದಿಗೆ ಹಿನ್ನಡೆ: ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳು ₹ 62.08 ಕೋಟಿ ಗ್ರಂಥಾಲಯ ಕರವನ್ನು ಪಾವತಿಸದೆ ಬಾಕಿ ಉಳಿಸಿಕೊಂಡಿವೆ. ಇದರಿಂದ ವಾರ್ಷಿಕ ಕಾರ್ಯಚಟುವಟಿಕೆಗಳಿಗೆ ಹಿನ್ನಡೆಯಾಗಿದೆ. ಅನುದಾನದ ಕೊರತೆ ಸೇರಿ ವಿವಿಧ ಕಾರಣಗಳಿಂದ ಸಾರ್ವಜನಿಕ ಗ್ರಂಥಾಲಯ ಇಲಾಖೆಯು 2020ನೇ ಸಾಲಿಗೆ ಆಯ್ಕೆಯಾದ ಪುಸ್ತಕಗಳ ಪಟ್ಟಿಯನ್ನು ಕಳೆದ ತಿಂಗಳು ಬಿಡುಗಡೆ ಮಾಡಿದೆ.

ಪುಸ್ತಕಗಳ ಖರೀದಿಗೆ ಕಳೆದ ಬಜೆಟ್‌ನಲ್ಲಿ ಸರ್ಕಾರ ಘೋಷಿಸಿದ್ದ ₹ 10 ಕೋಟಿ ಅನುದಾನಕ್ಕೆ ಈಗ ಅನುಮೋದನೆ ದೊರೆತಿರುವುದರಿಂದ 2020ನೇ ಸಾಲಿನ ಪುಸ್ತಕಗಳ ಖರೀದಿ ಪ್ರಕ್ರಿಯೆ ನಡೆಯುತ್ತಿದೆ. 2020ರ ಪಟ್ಟಿ ವಿಳಂಬವಾದ್ದರಿಂದ 2021, ಹಾಗೂ 2022ರ ಪುಸ್ತಕಗಳ ಖರೀದಿಗೂ ಹಿನ್ನಡೆಯಾಗಿದ್ದು, ಈಚಿನ ಪುಸ್ತಕಗಳು ರಾಜ್ಯದ ಗ್ರಂಥಾಲಯಗಳಲ್ಲಿ ಸಿಗದಂತಾಗಿವೆ.

ಗ್ರಂಥಾಲಯ ಕರದ ಮೇಲೆ ಅವಲಂಬನೆ

ಸಾರ್ವಜನಿಕ ಗ್ರಂಥಾಲಯ ಇಲಾಖೆಯ ವಿವಿಧ ಕಾಯಂ ಸಿಬ್ಬಂದಿ ವೇತನ ಹೊರತುಪಡಿಸಿ, ಉಳಿದ ಗ್ರಂಥಾಲಯ ನಿರ್ವಹಣೆ ಮತ್ತು ಅಭಿವೃದ್ಧಿ ಕಾರ್ಯಗಳು ಗ್ರಂಥಾಲಯ ಕರದಿಂದಲೇ ನಡೆಯಲಿವೆ. ಬಾಡಿಗೆ, ದಿನಪತ್ರಿಕೆ, ವಿದ್ಯುತ್ ಬಿಲ್ಲು, ದೂರವಾಣಿ ಬಿಲ್ಲು, ಲೇಖಕರು–ಪ್ರಕಾಶಕರಿಗೆ ಪಾವತಿಯಾಗಬೇಕಾದ ಬಿಲ್ಲು ಇತ್ಯಾದಿಯನ್ನು ಗ್ರಂಥಾಲಯ ಕರದಿಂದಲೇ ಪಾವತಿಸಬೇಕು. 2023–24ನೇ ಸಾಲಿನಲ್ಲಿ ₹ 65.34 ಕೋಟಿಯನ್ನು ಮಾತ್ರ ಬೆಂಗಳೂರು ನಗರದ ಐದು ವಲಯ ಕಚೇರಿಗಳಿಗೆ ಬಿಬಿಎಂಪಿ ಬಿಡುಗಡೆ ಮಾಡಿದೆ.

ರಾಜ್ಯದ ಎಲ್ಲ ನಗರ ಸ್ಥಳೀಯ ಸಂಸ್ಥೆಗಳಿಂದ 2023–24ನೇ ಸಾಲಿನ ಆಗಸ್ಟ್ ಅಂತ್ಯಕ್ಕೆ ₹ 35.30 ಕೋಟಿಯನ್ನು ರಾಜ್ಯದ ಎಲ್ಲ ಜಿಲ್ಲಾ ಮತ್ತು ನಗರ ಗ್ರಂಥಾಲಯ ಪ್ರಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗಿದೆ.

ಲಿಂಗತ್ವ, ಲೈಂಗಿಕ ಅಲ್ಪಸಂಖ್ಯಾತರ ಕಲ್ಯಾಣ ಮಂಡಳಿ ಸ್ಥಾಪಿಸಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಲಿಂಗತ್ವ ಹಾಗೂ ಲೈಂಗಿಕ ಅಲ್ಪಸಂಖ್ಯಾತರ ಕಲ್ಯಾಣ ಮಂಡಳಿ' ರಚಿಸುವಂತೆ ಕರ್ನಾಟಕ ರಾಜ್ಯ ಲಿಂಗತ್ವ ಹಾಗೂ ಲೈಂಗಿಕ ಅಲ್ಪಸಂಖ್ಯಾತರ ಒಕ್ಕೂಟ ಆಗ್ರಹಿಸಿದೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಒಕ್ಕೂಟದ ಸಂಚಾಲಕರಾದ ಪ್ರಕಾಶರಾಜ್, ಸಮೀರ್ ಬಾಗಲಕೋಟೆ, ಅಬೀದಾ ಬೇಗಂ, 'ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರುವುದಕ್ಕಿಂತ ಮುಂಚೆ 'ಲಿಂಗತ್ವ ಹಾಗೂ ಲೈಂಗಿಕ ಅಲ್ಪಸಂಖ್ಯಾತರ ಕಲ್ಯಾಣ ಮಂಡಳಿ' ಸ್ಥಾಪಿಸುವ ಭರವಸೆ ನೀಡಿತ್ತು. ಆದರೆ, ಸರ್ಕಾರ ರಚನೆಯಾಗಿ ಇಷ್ಟು ದಿನಗಳಾದರೂ ಈ ಬಗ್ಗೆ ಮಾತನಾಡುತ್ತಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಶೀಘ್ರವೇ ಮಂಡಳಿ ರಚನೆಗೆ ಕ್ರಮ ಕೈಗೊಳ್ಳಬೇಕು' ಎಂದು ಒತ್ತಾಯಿಸಿದರು.

'ಸರ್ಕಾರ ನೀಡುವ ಅನೇಕ ಸೌಲಭ್ಯಗಳಿಂದ ಲಿಂಗತ್ವ ಅಲ್ಪಸಂಖ್ಯಾತರು ವಂಚಿತರಾಗುತ್ತಿದ್ದಾರೆ. ಲಿಂಗತ್ವ ಅಲ್ಪಸಂಖ್ಯಾತರ ಪರವಾಗಿ ಹೋರಾಟ ಮಾಡುತ್ತಿರುವ ಮುಖಂಡರನ್ನು ವಿಧಾನ ಪರಿಷತ್ತಿಗೆ ಆಯ್ಕೆ ಮಾಡಬೇಕು. ಇದರಿಂದ, ನಮ್ಮ ಸಮಸ್ಯೆಗಳ ಬಗ್ಗೆ ಸರ್ಕಾರದ ಗಮನ ಸೆಳೆಯಲು ಅನುಕೂಲವಾಗಲಿದೆ' ಎಂದು ತಿಳಿಸಿದರು.

'ರಾಜ್ಯ ಸರ್ಕಾರ ಜಾರಿಗೊಳಿಸಿರುವ ಶಕ್ತಿ ಹಾಗೂ ಗೃಹ ಲಕ್ಷ್ಮಿ ಯೋಜನೆಗಳು ಲಿಂಗತ್ವ ಅಲ್ಪಸಂಖ್ಯಾತರಿಗೆ ಸಿಗುತ್ತಿಲ್ಲ. ಜೊತೆಗೆ ಸೀರೆ ಧರಿಸಿದವರಷ್ಟೇ ಲಿಂಗತ್ವ ಅಲ್ಪಸಂಖ್ಯಾತರು ಎಂದು ಗುರುತಿಸಲಾಗುತ್ತಿದ್ದು, ಇದು ಸರಿಯಾದ ಕ್ರಮವಲ್ಲ. ಸೀರೆ ಧರಿಸದೇ ಇರುವ ಹಲವಾರು ಜನ ಈ ಸಮುದಾಯದಲ್ಲಿದ್ದಾರೆ. ಅವರನ್ನು ಕೂಡ ಸರ್ಕಾರ ಈ ಯೋಜನೆಯ ವ್ಯಾಪ್ತಿಗೆ ಪರಿಗಣಿಸಬೇಕು' ಎಂದು ಆಗ್ರಹಿಸಿದರು.

ರಾಜ್ಯದ ವಿವಿಧ ಜಿಲ್ಲೆಗಳಿಂದ ಒಕ್ಕೂಟದ ಸದಸ್ಯರು ಸುದ್ದಿಗೋಷ್ಠಿಯಲ್ಲಿ ಪಾಲ್ಗೊಂಡಿದ್ದರು.



ವಿಜಯನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ 'ಯುವ ಮತದಾರರ ನೋಂದಣಿ ಅಭಿಯಾನ'ಕ್ಕೆ ತುಷಾರ್ ಗಿರಿನಾಥ್ ಚಾಲನೆ ನೀಡಿ ಮಾತನಾಡಿದರು

ಯುವ ಮತದಾರರ ನೋಂದಣಿ ಅಭಿಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಷ್ಟ್ರದ ಭವಿಷ್ಯ ಯುವ ಸಮೂಹದ ಕೈಯಲ್ಲಿದ್ದು, ಎಲ್ಲರೂ ಮತದಾರರ ಪಟ್ಟಿಯಲ್ಲಿ ಸೇರ್ಪಡೆಯಾಗಬೇಕು. ಪ್ರತಿ ಚುನಾವಣೆಯಲ್ಲಿಯೂ ತಪ್ಪದೆ ಮತದಾನ ಮಾಡಬೇಕು' ಎಂದು ಜಿಲ್ಲಾ ಚುನಾವಣಾಧಿಕಾರಿ ತುಷಾರ್ ಗಿರಿನಾಥ್ ಹೇಳಿದರು.

ವಿಜಯನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ಯುವ ಮತದಾರರ ನೋಂದಣಿ ಅಭಿಯಾನ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

'ಪ್ರಜಾಪ್ರಭುತ್ವ ಉಳಿಸಲು ನೀವೆಲ್ಲರೂ ನಿಮ್ಮ ಶಕ್ತಿ ಉಪಯೋಗಿಸಬೇಕು. ಬದಲಾವಣೆ ತರುವ ಶಕ್ತಿ ಯುವಸಮೂಹದಲ್ಲಿದ್ದು, ಅದನ್ನು ಸರಿಯಾಗಿ ಸದ್ಬಳಕೆ ಮಾಡಿಕೊಳ್ಳಬೇಕು' ಎಂದು ವಿದ್ಯಾರ್ಥಿಗಳಿಗೆ ತಿಳಿಸಿದರು.

18 ವರ್ಷ ತುಂಬಿದ ಪ್ರತಿಯೊಬ್ಬರೂ ಮತದಾರರ ಪಟ್ಟಿಯಲ್ಲಿ ನೋಂದಣಿಯಾಗಲು ಅರ್ಜಿ ಸಲ್ಲಿಸಬಹುದು ಎಂದರು.

ವಿಜಯನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಸುಮಾರು ನಾಲ್ಕು ಸಾವಿರ ವಿದ್ಯಾರ್ಥಿಗಳಿದ್ದು, ಒಂದು ಸಾವಿರಕ್ಕೂ ಹೆಚ್ಚು ಯುವಕರನ್ನು ಮತದಾರರ ಪಟ್ಟಿಗೆ ನೋಂದಣಿ ಮಾಡಿಸಲಾಗುತ್ತಿದೆ ಎಂದು ಶಿಕ್ಷಕರು ಮಾಹಿತಿ ನೀಡಿದರು.

ಜಿಲ್ಲಾ ಸ್ವೀಪ್ ಮೇಲ್ವಿಚಾರಣಾ ಸಮಿತಿ ಅಧ್ಯಕ್ಷ ಕಾಂತರಾಜು, ಸ್ವೀಪ್ ನೋಡಲ್ ಅಧಿಕಾರಿ ಪೂರ್ಣಿಮಾ, ಕಾಲೇಜಿನ ಪ್ರಾಂಶುಪಾಲ ವೈ. ವೆಂಕಟೇಶಪ್ಪ ಉಪಸ್ಥಿತರಿದ್ದರು.

ಮೆಟ್ರೊ: ಸುರಂಗ ಮಾರ್ಗ ಪೂರ್ಣಗೊಳಿಸಿದ 'ತುಂಗಾ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೆಂಕಟೇಶಪುರ ನಿಲ್ದಾಣದಿಂದ –ಕಾಡುಗೊಂಡನಹಳ್ಳಿ ನಿಲ್ದಾಣವರೆಗಿನ 1.18 ಕಿ.ಮೀ(1184.4 ಮೀಟರ್) ಮೆಟ್ರೊ ಸುರಂಗ ಮಾರ್ಗ ಕೊರೆಯುವ ಕಾರ್ಯವನ್ನು 'ತುಂಗಾ' ಯಂತ್ರ ಪೂರ್ಣಗೊಳಿಸಿದೆ.

ವೆಂಕಟೇಶಪುರದಿಂದ ಶಾದಿ ಮಹಲ್ ಶಾಫ್ಟ್‌ವರೆಗಿನ 1064 ಮೀಟರ್ ಸುರಂಗ ಮಾರ್ಗವನ್ನು 'ತುಂಗಾ' ಎರಡು ತಿಂಗಳ ಹಿಂದೆ ಪೂರ್ಣಗೊಳಿಸಿತ್ತು. ಅ.31ರಂದು ವೆಂಕಟೇಶಪುರದಿಂದ ಕಾಡುಗೊಂಡನಹಳ್ಳಿ (ಕೆ.ಜಿ. ಹಳ್ಳಿ) ನಿಲ್ದಾಣವರೆಗಿನ ಸುರಂಗ ಕೊರೆಯುವ ಕಾರ್ಯ ಆರಂಭಿಸಲಾಗಿತ್ತು. ಬುಧವಾರ ಕಾಡುಗೊಂಡನಹಳ್ಳಿಯಲ್ಲಿ 'ತುಂಗಾ' ಯಂತ್ರ ಸುರಂಗದಿಂದ ಹೊರಬಂದಿದೆ.

ಹಂತ–2ರ ಯೋಜನೆಯಡಿ ರೀಚ್–6 ಮಾರ್ಗ ಇದಾಗಿದ್ದು, 20.99 ಕಿಲೋಮೀಟರ್ ಸುರಂಗ ನಿರ್ಮಾಣವಾಗಬೇಕು. ಅದರಲ್ಲಿ ಈಗ 18.83 ಕಿ.ಮೀ. (ಶೇ 89.70) ಉದ್ದದ ಸುರಂಗ ನಿರ್ಮಾಣ ಕಾರ್ಯ ಪೂರ್ಣಗೊಂಡಿದೆ. 2.16 ಕಿ.ಮೀ. ಉದ್ದದ ಕಾಮಗಾರಿ ನಡೆಯುತ್ತಿದೆ.

'ವರದ', 'ಅವನಿ', 'ಊರ್ಜ್ವಾ', 'ವಿಂಧ್ಯಾ', 'ಲವಿ', 'ವಮಿಕ', 'ರುದ್ರ' ಯಂತ್ರಗಳು ಕಾಳೇನ ಅಗ್ರಹಾರದಿಂದ ನಾಗವಾರ ಮಾರ್ಗದಲ್ಲಿ ಒಂಬತ್ತು ಸುರಂಗಗಳ ಕೊರೆಯುವ ಕಾರ್ಯವನ್ನು ಈಗಾಗಲೇ ಪೂರ್ಣಗೊಳಿಸಿವೆ. ಈಗ 'ತುಂಗಾ' ಕೂಡ ಅದಕ್ಕೆ ಸೇರ್ಪಡೆಯಾಗಿದೆ. ಸೌತ್ ರ್‍ಯಾಂಪ್ ನಿಲ್ದಾಣದಿಂದ ಲ್ಯಾಂಗ್‌ಫೋರ್ಡ್ ಟೌನ್ ನಿಲ್ದಾಣದವರೆಗಿನ ಸುರಂಗ ಕೊರೆಯುವ ಕಾಮಗಾರಿಯನ್ನು 'ಭದ್ರಾ' ಯಂತ್ರ ನಡೆಸಲಿದೆ. ಈ ಕಾಮಗಾರಿ 2024ರ ಮಾರ್ಚ್ ಒಳಗೆ ಪೂರ್ಣಗೊಳ್ಳಲಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.



ವೆಂಕಟೇಶಪುರ ನಿಲ್ದಾಣದಿಂದ –ಕಾಡುಗೊಂಡನಹಳ್ಳಿ ನಿಲ್ದಾಣವರೆಗಿನ ಮೆಟ್ರೊ ಸುರಂಗ ಮಾರ್ಗ ಕೊರೆಯುವ ಕಾರ್ಯವನ್ನು 'ತುಂಗಾ' ಯಂತ್ರ ಬುಧವಾರ ಪೂರ್ಣಗೊಳಿಸಿದೆ


ನ್ಯಾಷನಲ್ ಕಾಲೇಜು ಸಾಹಿತ್ಯ ಹಬ್ಬ 16ರಿಂದ

ಬೆಂಗಳೂರು: ದಿ ನ್ಯಾಷನಲ್ ಎಜುಕೇಷನ್ ಸೊಸೈಟಿ ಆಫ್ ಕರ್ನಾಟಕದ ವತಿಯಿಂದ ಇದೇ 16 ಮತ್ತು 17ರಂದು 'ನ್ಯಾಷನಲ್ ಕಾಲೇಜು ಸಾಹಿತ್ಯ ಹಬ್ಬ'ವನ್ನು ಬಸನಗುಡಿಯ ಎಚ್.ಎನ್. ಮಲ್ಟಿಮೀಡಿಯಾ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಈ ಹಬ್ಬದಲ್ಲಿ ಚಿತ್ರ, ನಾಟಕ ನೋಡುವುದು ಹೇಗೆ? ಕಥೆ ಬರೆಯುವಲ್ಲಿ ಆದ ಅನುಭವ, ಪತ್ರಿಕೆಗೆ ಬರೆಯುವುದು ಹೇಗೆ? ಕುವೆಂಪು ದರ್ಶನ–ದಾರ್ಶನಿಕತೆ, ಲೇಖಕಿಯರಿಗೆ ವಿಷಯದ ಆಯ್ಕೆಯಲ್ಲಿರುವ ಸವಾಲುಗಳು, ಕವಿಗೋಷ್ಠಿ ಮತ್ತು ಶಾಲೆಯ ಪ್ರಗತಿಯಲ್ಲಿ ಶಿಕ್ಷಕನ ಪಾತ್ರದ ಕುರಿತು ಗೋಷ್ಠಿಗಳು ನಡೆಯಲಿವೆ.

ಕಾವ್ಯದ ಓದು–ಒಂದು ಮಾದರಿ, ರಂಗಭೂಮಿ, ಕಿರುಚಿತ್ರ ತಯಾರಿಕೆಯಲ್ಲಿ ತೊಡಕುಗಳು ಬಗ್ಗೆ ಚರ್ಚೆಗಳು ನಡೆಯಲಿವೆ. ಅಂಬೇಡ್ಕರ್ ಮತ್ತು ಗಾಂಧಿಯ ಭೇಟಿ, ತಾಳ ಮದ್ದಳೆ, ಬೆಂಗಳೂರು ಸುತ್ತ ಮುತ್ತಣ ಚಾರಿತ್ರಿಕ ನೋಟ ಹಾಗೂ ಯಶವಂತ ಚಿತ್ತಾಲರ ಒಂದು ಕಥೆ ಆಧಾರಿತ ಮಾತು ಕತೆ ನಡೆಯಲಿದೆ.

ಟಿ.ಪಿ. ಅಶೋಕ, ಟಿ.ಎನ್. ಸೀತಾರಾಂ, ಶಿವಾರೆಡ್ಡಿ, ವಸುಧೇಂದ್ರ, ಸುಂದರರಾಜ್, ಶ್ರೀನಿವಾಸ ಜಿ. ಕಪ್ಪಣ್ಣ, ವಿದ್ಯಾ ಅಕ್ಷರ, ಗಣೇಶ್ ನಿತ್ಯಾನಂದ್ ಶೆಟ್ಟಿ, ಅಮರ, ರಘುನಾಥ ಚ.ಹ., ವಿದ್ಯಾರಶ್ಮಿ ಧರ್ಮೇಂದ್ರ, ಸುಬ್ಬು ಹೊಲೆಯಾರ್ ಭಾಗವಹಿಸಲಿದ್ದಾರೆ.



ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ ಎಂದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಡ್ಡೂರು ಶ್ರೀನಿವಾಸಲು

‘ಅಪಘಾತ: ಹಲ್ಲೆಯಂತೆ ಬಿಂಬಿಸಿದ ಮಣಿಕಂಠ’

ಪ್ರಜಾವಾಣಿ ವಾರ್ತೆ



ಕಲಬುರಗಿ: ‘ಚಿತ್ತಾಪುರದ ಬಿಜೆಪಿ ಮುಖಂಡ ಮಣಿಕಂಠ ರಾಠೋಡ ಅವರು ಅಪಘಾತದಲ್ಲಿ ಗಾಯಗೊಂಡ ಪ್ರಕರಣವನ್ನು ಮುಚ್ಚಿಹಾಕಿ, ಅಪರಿಚಿತ ದುಷ್ಕರ್ಮಿಗಳು ತಮ್ಮ ಮೇಲೆ ಹಲ್ಲೆ ಮಾಡಿದ್ದಾರೆ ಎಂಬಂತೆ ಬಿಂಬಿಸಿದ್ದರು ಎಂಬುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಡ್ಡೂರು ಶ್ರೀನಿವಾಸಲು ತಿಳಿಸಿದರು.

ಇಲ್ಲಿ ಬುಧವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ನವೆಂಬರ್ 18ರಂದು ಯಾದಗಿರಿಯ ಗುರುಮಠಕಲ್ ತಾಲ್ಲೂಕಿನ ಚಪೆಟ್ಲಾ ಗ್ರಾಮ ಸಮೀಪ ಮಣಿಕಂಠ ಕುಳಿತಿದ್ದ ಬಿಳಿ ಬಣ್ಣದ ಕಾರು ಮರಕ್ಕೆ ಡಿಕ್ಕಿ ಹೊಡೆದು ಅಪಘಾತವಾಗಿತ್ತು. ಗಾಯಗೊಂಡಿದ್ದ ಅವರು ಅಲ್ಲಿಂದ ಮತ್ತೊಂದು ಕಾರಿನಲ್ಲಿ ಕಲಬುರಗಿಯತ್ತ ತೆರಳಿದರು. ಮಾರ್ಗ ಮಧ್ಯದ ಶಹಾಬಾದ್ ಸಮೀಪದ ರಸ್ತೆಯಲ್ಲಿ ತಡರಾತ್ರಿ ತಮ್ಮ ಕಾರಿನ ಮೇಲೆ ಅಪರಿಚಿತರು ಹಲ್ಲೆ ಮಾಡಿ, ಗಾಯಗೊಳಿಸಿದ್ದರು ಎಂಬಂತೆ ಬಿಂಬಿಸಿ ದೂರು ನೀಡಿದ್ದರು’ ಎಂದರು.

‘ಹಲ್ಲೆ ನಡೆಸಿದ್ದಾರೆ ಎನ್ನಲಾದ ಪ್ರಕರಣದ ಪ್ರತ್ಯಕ್ಷದರ್ಶಿ ಸಾಕ್ಷಿಯನ್ನು ವಿಚಾರಣೆಗೆ ಒಳಪಡಿಸಿದಾಗ ಹಲ್ಲೆಯ ಹಿಂದಿನ ನಿಜಾಂಶವನ್ನು ಬಾಯಿಬಿಟ್ಟಿದ್ದಾನೆ. ಮಣಿಕಂಠ ಮತ್ತು ಆತನ ಆಪ್ತರ ಮೇಲೆ ಹಲ್ಲೆಯಾಗಿಲ್ಲ. ಅಪಘಾತವನ್ನು ಕೊಲೆ ಯತ್ನವಾಗಿ ಬಿಂಬಿಸಲಾಗಿದೆ. ಸಾಕ್ಷಿದಾರರನ್ನು ನ್ಯಾಯಾಧೀಶರ ಮುಂದೆ ಹಾಜರುಪಡಿಸಿ ಹೇಳಿಕೆಯನ್ನು ದಾಖಲಿಸಲಾಗಿದೆ. ತನಿಖಾ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ ಬಳಿಕ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು’ ಎಂದು ಮಾಹಿತಿ ನೀಡಿದರು.

ಈ ಬಗ್ಗೆ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ ಮಣಿಕಂಠ ರಾಠೋಡ, ‘ನನ್ನ ಮೇಲೆ ಹಲ್ಲೆ ನಡೆದಿರುವುದು ನಿಜ. ಗುರುಮಠಕಲ್‌ನಲ್ಲಿ ಕಾರು ಅಪಘಾತವಾಗಿಲ್ಲ. ಪ್ರಕರಣ ಮುಚ್ಚಿ ಹಾಕಲು ಪೊಲೀಸರು ಕಾರು ಅಪಘಾತವಾಗಿದೆ ಎಂದು ಕಟ್ಟುಕಥೆ ಸೃಷ್ಟಿಸುತ್ತಿದ್ದಾರೆ. ನನ್ನ ಮೇಲೆ ಹಲ್ಲೆ ಮಾಡಿದ್ದವರ ಪೈಕಿ ಪೊಲೀಸರೂ ಇದ್ದರು ಎಂಬ ಮಾಹಿತಿ ಲಭ್ಯವಾಗಿದೆ’ ಎಂದರು.

ಮಾನನಷ್ಟ ಮೊಕದ್ದಮೆ ದಾಖಲಿಸುವೆ: ಪ್ರಿಯಾಂಕ್



ಬೆಳಗಾವಿ: ‘ನಾನು ಹಲ್ಲೆ ಮಾಡಿದ್ದೇನೆಂದು ಆರೋಪ ಮಾಡಿರುವ ಬಿಜೆಪಿ ಮುಖಂಡ ಮಣಿಕಂಠ ರಾಠೋಡ ಮೇಲೆ ಕ್ರಿಮಿನಲ್ ಮಾನನಷ್ಟ ಮೊಕದ್ದಮೆ, ವಿಜಯೇಂದ್ರ ಸೇರಿದಂತೆ ಬಿಜೆಪಿ ನಾಯಕರ ಮೇಲೆ ಮಾನನಷ್ಟ ಮೊಕದ್ದಮೆ ದಾಖಲಿಸುತ್ತೇನೆ’ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಇಲ್ಲಿನ ಸುವರ್ಣ ವಿಧಾನಸೌಧದಲ್ಲಿ ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಅವರು, ‘ರಾಠೋಡ ಮೇಲೆ ನಾನೇ ಹಲ್ಲೆ ಮಾಡಿದ್ದು ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಆರೋಪ ಮಾಡಿದ್ದಾರೆ’ ಎಂದರು. ‘ನ. 19ರಂದು ಪೊಲೀಸ್ ಠಾಣೆಗೆ ನೀಡಿರುವ ದೂರಿನಲ್ಲಿ ಚಿತ್ತಾಪುರ ಮತಕ್ಷೇತ್ರದ ಶಂಕರವಾಡಿ ಕ್ರಾಸ್ ಬಳಿ ಅಧಿಕಾರಿಗಳು ಹಾಗೂ ರಾಜಕೀಯ ವಿರೋಧಿಗಳು ನನ್ನ ಮೇಲೆ ಹಲ್ಲೆ ಮಾಡಿದ್ದಾರೆ ಎಂದು ರಾಠೋಡ ಆರೋಪಿಸಿದ್ದಾರೆ. ಈ ಘಟನೆಗೆ ಸಂಬಂಧಿಸಿದ ವಿಧಿವಿಜ್ಞಾನ ವರದಿ ಬಂದಿದ್ದು, ನಿಜವಾಗಿ ಏನು ನಡೆದಿದೆಯೆಂದು ಕಲಬುರಗಿ ಪೊಲೀಸ್ ವರಿಷ್ಠಾಧಿಕಾರಿ ಬಹಿರಂಗಪಡಿಸಿದ್ದಾರೆ. ವಾಹನ ಅಪಘಾತಕ್ಕೀಡಾಗಿ ರಾಠೋಡನಿಗೆ ಗಾಯವಾಗಿದ್ದು ಎನ್ನುವುದು ಬಯಲಾಗಿದೆ’ ಎಂದರು.

ಸುದ್ದಿ 2 ನಿಮಿಷ

ಗ್ಯಾರಂಟಿ ಯೋಜನೆ ಪ್ರಶ್ನಿಸಿ ನಿವೃತ್ತ ಸೈನಿಕರಿಂದ ಪಿಐಎಲ್

ಬೆಂಗಳೂರು: ‘ರಾಜಕೀಯ ಪಕ್ಷಗಳು ಚುನಾವಣೆ ಸಮಯದಲ್ಲಿ ಮತದಾರರಿಗೆ ನೀಡುತ್ತಿರುವ ಉಚಿತ ಗ್ಯಾರಂಟಿ ಆಮಿಷಗಳಿಗೆ ನಿರ್ಬಂಧ ವಿಧಿಸಬೇಕು’ ಎಂದು ಕೋರಿ ನಿವೃತ್ತ ಸೈನಿಕರು ಹೈಕೋರ್ಟ್ ಮೆಟ್ಟಿಲೇರಿದ್ದಾರೆ. ಬ್ರಿಗೇಡಿಯರ್ ಎಂ ಮುನಿಸ್ವಾಮಿ ಹಾಗೂ ಇತರರು ಬುಧವಾರ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ದಾಖಲಿಸಿದ್ದು, ಈ ಅರ್ಜಿ ಇನ್ನಷ್ಟೇ ವಿಚಾರಣೆಗೆ ಬರಬೇಕಿದೆ.

ಪ್ರಕರಣದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರ, ಕೇಂದ್ರ ಚುನಾವಣಾ ಆಯೋಗ, ಬಿಜೆಪಿ, ಕಾಂಗ್ರೆಸ್ ಮತ್ತಿತರ ಪ್ರಮುಖ ರಾಜಕೀಯ ಪಕ್ಷಗಳನ್ನು ಪ್ರತಿವಾದಿಗಳನ್ನಾಗಿ ಮಾಡಲಾಗಿದೆ.

ಅರ್ಜಿಯಲ್ಲಿ ಏನಿದೆ?: ‘ರಾಜಕೀಯ ಪಕ್ಷಗಳು ಹೇಗಾದರೂ ಮಾಡಿ ಅಧಿಕಾರ ಹಿಡಿಯಲೇಬೇಕೆಂಬ ಉಮೇದಿನಲ್ಲಿ ಮತದಾರರಿಗೆ ಆಮಿಷ ಒಡ್ಡುತ್ತಿವೆ. ಅಧಿಕಾರದ ಲಾಲಸೆಗಾಗಿ ಜನರ ತೆರಿಗೆ ಹಣವನ್ನು ದುರ್ಬಳಕೆ ಮಾಡಲಾಗುತ್ತಿದೆ. ಪ್ರಜಾಪ್ರಭುತ್ವದ ಮತ ಯಾಚಿಸುವುದು ಸಂವಿಧಾನ ಬಾಹಿರ ಹಾಗೂ ಜನಪ್ರತಿನಿಧಿಗಳ ಕಾಯ್ದೆಯ ಸ್ಪಷ್ಟ ಉಲ್ಲಂಘನೆ. ಆದ್ದರಿಂದ, ಈ ನಿಟ್ಟಿನಲ್ಲಿ ಸೂಕ್ತ ಮಾರ್ಗಸೂಚಿ ರೂಪಿಸಲು ಚುನಾವಣಾ ಆಯೋಗಕ್ಕೆ ನಿರ್ದೇಶಿಸಬೇಕು’ ಎಂದು ಅರ್ಜಿಯಲ್ಲಿ ಕೋರಲಾಗಿದೆ.

ಪತಿ ಮೇಲೆ ಸೇಡು ತೀರಿಸಿಕೊಳ್ಳಲು ಸಂಚು ರೂಪಿಸಿದ್ದ ಪತ್ನಿ

ಹುಸಿ ಬಾಂಬ್ ಸಂದೇಶ: ಪತ್ನಿ ಬಂಧನ

ಪ್ರಜಾವಾಣಿ ವಾರ್ತೆ

ಆನೇಕಲ್ : ಪತಿ ಮೇಲೆ ಸೇಡು ತೀರಿಸಿಕೊಳ್ಳಲು ತನಿಖಾ ಸಂಸ್ಥೆಗಳಿಗೆ ಹುಸಿ ಬಾಂಬ್ ಸಂದೇಶ ಕಳುಹಿಸಿದ ಪತ್ನಿ ಈಗ ಪೊಲೀಸರ ಅತಿಥಿಯಾಗಿದ್ದಾರೆ. ವಿದ್ಯಾರಾಣಿ (36) ಬಂಧಿತ ಮಹಿಳೆ.

‘ಆನೇಕಲ್‌ನ ಮಾರುತಿ ಬಡಾವಣೆಯಲ್ಲಿ ಉತ್ತರ ಕರ್ನಾಟಕ ಮೂಲದ ವಿದ್ಯಾರಾಣಿ ಮತ್ತು ಕಿರಣ್ ದಂಪತಿ ವಾಸವಾಗಿದ್ದರು. ವಿದ್ಯಾರಾಣಿ ಅವರಿಗೆ ಬಿಹಾರ ಮೂಲದ ರಾಮಪ್ರಸಾದ್ (38) ಎಂಬುವವರ ಪರಿಚಯವಾಗಿ, ಸ್ನೇಹ ಬೆಳೆದಿತ್ತು. ಇವರಿಬ್ಬರು ಗಂಟೆಗಟ್ಟಲೇ ಮೊಬೈಲ್ ಚಾಟಿಂಗ್ ಮಾಡುತ್ತಿದ್ದರು. ಇದರಿಂದ ದಂಪತಿ ನಡುವೆ ಆಗಿಂದ್ದಾಗೆ ಜಗಳ ನಡೆಯುತ್ತಿತ್ತು. ಒಮ್ಮೆ ಕುಪಿತಗೊಂಡ ಪತಿ ಕಿರಣ್, ಪತ್ನಿ ಮೊಬೈಲ್ ಹೊಡೆದು ಹಾಕಿದ್ದರು’.

‘ಇದರಿಂದ ಪತಿ ಮೇಲೆ ಸೇಡು ತೀರಿಸಿಕೊಳ್ಳಲು ವಿದ್ಯಾರಾಣಿ, ಮತ್ತೊಂದು ಮೊಬೈಲ್ ಫೋನ್ ಖರೀದಿಸಿ ಸ್ನೇಹಿತ ರಾಮಪ್ರಸಾದ್ ಅವರೊಂದಿಗೆ ಸಂಪರ್ಕ ಬೆಳೆಸಿದ್ದರು. ಕಿರಣ್ ಅವರನ್ನು ಪೊಲೀಸ್ ಪ್ರಕರಣದಲ್ಲಿ ಸಿಲುಕಿಸಲು ರಾಮಪ್ರಸಾದ್ ಸಂಚು ರೂಪಿಸಿ ವಿದ್ಯಾರಾಣಿಗೆ ಸಲಹೆ ನೀಡಿದ್ದ. ಅದರಂತೆ ಹಲವೆಡೆ ಆರ್‌ಡಿಎಕ್ಸ್ ಬಾಂಬ್ ಹಾಕುವುದಾಗಿ ಬೆದರಿಕೆ ಸಂದೇಶವನ್ನು ವಿದ್ಯಾರಾಣಿಗೆ ಕಳುಹಿಸಿದ್ದ’ ಎಂದು ಪೊಲೀಸರು ತಿಳಿಸಿದ್ದಾರೆ.

ವಿದ್ಯಾರಾಣಿ ತನ್ನ ಪತಿ ಮೊಬೈಲ್‌ನಿಂದ ಪೊಲೀಸರಿಗೆ ಮತ್ತು ಕೇಂದ್ರ ತನಿಖಾ ತಂಡಕ್ಕೆ ಬಾಂಬ್ ಹಾಕುವ ಸಂದೇಶ ರವಾನಿಸಿದ್ದರು. ಬೆದರಿಕೆ ಸಂದೇಶವನ್ನು ಗಂಭೀರವಾಗಿ ಪರಿಗಣಿಸಿದ ಪೊಲೀಸರು ಮತ್ತು ಕೇಂದ್ರ ತನಿಖಾ ಸಂಸ್ಥೆಗಳು ನಂಬರ್ ಮತ್ತು ಐಪಿ ಆಡ್ರಸ್ ಆಧರಿಸಿ ಆನೇಕಲ್‌ನ ಮನೆಗೆ ಬಂದು ದಂಪತಿಯನ್ನು ವಶಕ್ಕೆ ಪಡೆದು ಎರಡು ದಿನಗಳ ಕಾಲ ವಿಚಾರಣೆ ನಡೆಸಿದ್ದರು.

ವಿಚಾರಣೆ ಸಂದರ್ಭದಲ್ಲಿ ಸತ್ಯಾಂಶ ಬಯಲಾಗಿದೆ. ಆರೋಪಿ ವಿದ್ಯಾರಾಣಿಯನ್ನು ಬಂಧಿಸಲಾಗಿದೆ. ಬಿಹಾರದ ರಾಮಪ್ರಸಾದ್ ಬಂಧನಕ್ಕೆ ಪೊಲೀಸರು ಕಾರ್ಯಾಚರಣೆ ನಡೆಸಿದ್ದಾರೆ.

ಕಾಕತಾಳೀಯ ಎಂಬಂತೆ ಇದೇ ಸಂದರ್ಭದಲ್ಲಿ ಆನೇಕಲ್ ಸೇರಿದಂತೆ ಬೆಂಗಳೂರು ನಗರದ 60ಕ್ಕೂ ಹೆಚ್ಚು ಖಾಸಗಿ ಶಾಲೆಗಳಿಗೆ ಹುಸಿ ಬಾಂಬ್ ಸಂದೇಶ ಬಂದಿತ್ತು. ಇವರೇ ಹುಸಿ ಸಂದೇಶ ಕಳುಹಿಸಿರಬಹುದೆಂದು ಶಂಕಿಸಿ ತೀವ್ರ ವಿಚಾರಣೆ ನಡೆಸಲಾಗಿತ್ತು.

ಕುಡಿದು ಗಲಾಟೆ: ಮಗನ ಕೊಂದ ತಂದೆ

ಆನೇಕಲ್: ಕುಡಿದು ಗಲಾಟೆ ಮಾಡುತ್ತಿದ್ದ ಮಗನನ್ನು ತಂದೆಯೇ ಹತ್ಯೆ ಮಾಡಿರುವ ಘಟನೆ ತಾಲ್ಲೂಕಿನ ನಾರಾಯಣಪುರದಲ್ಲಿ ಮಂಗಳವಾರ ರಾತ್ರಿ ನಡೆದಿದೆ.

ಸುರೇಶ್(35) ಕೊಲೆಯಾದ ಯವಕ. ಯಲ್ಲಪ್ಪ ಕೊಲೆ ಆರೋಪಿ. ಪೈಂಟಿಂಗ್ ಕೆಲಸ ಮಾಡುತ್ತಿದ್ದ ಸುರೇಶ್ ಪ್ರತಿದಿನ ಕುಡಿದು ಬಂದು ಮನೆಯಲ್ಲಿ ಗಲಾಟೆ ಮಾಡುತ್ತಿದ್ದ. ಹಲವು ಸಲ ಬುದ್ಧಿವಾದ ಹೇಳಿದ್ದರೂ ತಿದ್ದಿಕೊಂಡಿರಲಿಲ್ಲ.

ಮಂಗಳವಾರ ರಾತ್ರಿ ಕುಡಿದು ತಾಯಿ ಮೇಲೆ ಹಲ್ಲೆ ನಡೆಸಿದ್ದ. ಇದರಿಂದ ಕುಪಿತಗೊಂಡ ತಂದೆ ಯಲ್ಲಪ್ಪ, ಕುತ್ತಿಗೆ ಭಾಗಕ್ಕೆ ಮಚ್ಚಿನಿಂದ ಹೊಡೆದಿದ್ದರು. ಗಂಭೀರವಾಗಿ ಗಾಯಗೊಂಡಿದ್ದ ಸುರೇಶ್, ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟಿದ್ದಾರೆ. ಆನೇಕಲ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಸಂವಿಧಾನ ಅರ್ಥ ಮಾಡಿಕೊಳ್ಳಿ’

ಅಂಬೇಡ್ಕರ್ ಪರಿನಿರ್ವಾಣ ದಿನಾಚರಣೆಯಲ್ಲಿ ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂವಿಧಾನವನ್ನು ಅರ್ಥ ಮಾಡಿಕೊಳ್ಳುವುದೇ ಅಂಬೇಡ್ಕರ್ ಅವರಿಗೆ ಸಲ್ಲಿಸುವ ಗೌರವ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಡಾ. ಬಿ.ಆರ್. ಅಂಬೇಡ್ಕರ್ ಅವರ 67ನೇ ಮಹಾಪರಿನಿರ್ವಾಣದ ಅಂಗವಾಗಿ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಮಾಧ್ಯಮದವರೊಂದಿಗೆ ಮಾತನಾಡಿದರು.

ಕಾನೂನಿನ ಮುಂದೆ ಎಲ್ಲರೂ ಸಮಾನರು. ಎಲ್ಲರಿಗೂ ಕಾನೂನಿನ ರಕ್ಷಣೆ ಇದೆ ಎಂದು ಸಂವಿಧಾನದ 14ನೇ ವಿಧಿಯಲ್ಲಿ ನೀಡಲಾಗಿದೆ. ಕಟ್ಟ ಕಡೆಯ ವ್ಯಕ್ತಿಗೂ, ಆಗರ್ಭ ಶ್ರೀಮಂತನಿಗೂ ಒಂದೇ ಕಾನೂನು. ಇದು ಅಂಬೇಡ್ಕರ್ ಕೊಡುಗೆ ಎಂದು ಬಣ್ಣಿಸಿದರು.

ಸಾಮಾಜಿಕ ನ್ಯಾಯದ ಹಕ್ಕು, ಅಸಮಾನತೆಯನ್ನು ತೊಡೆದುಹಾಕುವ ಅಂಶ ಜಗತ್ತಿನ ಯಾವ ಸಂವಿಧಾನದಲ್ಲಿಯೂ ನೋಡಲು ಸಾಧ್ಯವಿಲ್ಲ. ಸಂವಿಧಾನದ ಧ್ಯೇಯೋದ್ದೇಶಗಳನ್ನು ಈಡೇರಿಸಲು ಪ್ರಾಮಾಣಿಕ ಪ್ರಯತ್ನ ಮಾಡಬೇಕು ಎಂದು ಸಲಹೆ ನೀಡಿದರು.




ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬುಧವಾರ ಬಾಬಾಸಾಹೇಬ್ ಡಾ. ಬಿ. ಆರ್. ಅಂಬೇಡ್ಕರ್ ಅವರ ಮಹಾಪರಿನಿರ್ವಾಣದ ಅಂಗವಾಗಿ ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ಅವರ ಪ್ರತಿಮೆಗೆ ಗೌರವ ನಮನ ಸಲ್ಲಿಸಿದರು. ಸಮಾಜ ಕಲ್ಯಾಣ ಸಚಿವ ಎಚ್‌.ಸಿ. ಮಹದೇವಪ್ಪ, ಮುಖ್ಯಮಂತ್ರಿಯ ರಾಜಕೀಯ ಕಾರ್ಯದರ್ಶಿ ಗೋವಿಂದರಾಜ್ ಇತರರು ಪಾಲ್ಗೊಂಡಿದ್ದರು– ಪ್ರಜಾವಾಣಿ ಚಿತ್ರ

ಅಂಬೇಡ್ಕರ್ ಅವರು ಇನ್ನೂ ಬದುಕಿರಬೇಕಿತ್ತು. ಅವರು ಇದ್ದಿದ್ದರೆ ಸಮಾನತೆಯ ಪರವಾಗಿ ಇನ್ನಷ್ಟು ಹೋರಾಟಗಳಾಗುತ್ತಿದ್ದವು. ಸಮಾಜ ನಿರ್ಮಾಣ ಮಾಡಲು ಸಾಧ್ಯ ವಾಗುತ್ತಿತ್ತು ಎಂದು ಹೇಳಿದರು.

ಬಲಾಢ್ಯರ ಕೈಯಲ್ಲಿ ಅಧಿಕಾರ ಮತ್ತು ಆಸ್ತಿ ಇದ್ದರೆ ಪ್ರಜಾಪ್ರಭುತ್ವ ಉಳಿಯುವುದು ಕಷ್ಟ ಎಂಬ ಕಾರಣಕ್ಕೆ ಅಧಿಕಾರ ಮತ್ತು ಆಸ್ತಿ ಹಂಚಿಕೆಯಾಗಬೇಕು ಎಂದು ಬಯಸಿದ್ದರು. ದೇಶಕ್ಕೆ ದೊರೆತ ಸ್ವಾತಂತ್ರ್ಯ ಯಶಸ್ವಿಯಾಗಬೇಕಿದ್ದರೆ ರಾಜಕೀಯ ಪ್ರಜಾಪ್ರಭುತ್ವವು ಸಾಮಾಜಿಕ ಪ್ರಜಾಪ್ರಭುತ್ವದ ತಳಹದಿಯ ಮೇಲಿರಬೇಕು ಎಂದು ಹೇಳಿದ್ದರು. ಅಂಬೇಡ್ಕರ್ ಅವರನ್ನು ಎಷ್ಟು ನೆನೆಪು ಮಾಡಿಕೊಂಡರೂ, ಗೌರವ ಸಲ್ಲಿಸಿದರೂ ಕಡಿಮೆಯೇ. ಅಂಥ ಮಹಾನ್ ಕೊಡುಗೆಗಳನ್ನು ದೇಶಕ್ಕೆ ನೀಡಿದ್ದಾರೆ ಎಂದರು.

‘ಸಂವಿಧಾನ ಉಳಿಸಲು ಹೋರಾಟ ಅನಿವಾರ್ಯ’



ಕೆ.ಆರ್.ಪುರ: ಭಾರತ ದೇಶದ ಸಂವಿಧಾನವು ಶೋಷಿತರ, ದಿನ ದಲಿತರ, ತುಳಿತಕ್ಕೆ ಒಳಗಾದವರ ಪರವಾಗಿ ಇರುವಂತಹ ಪವಿತ್ರ ಗ್ರಂಥ. ಅದನ್ನು ನೀಡಿದವರು ಅಂಬೇಡ್ಕರ್ ಎಂದು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಡಿ.ಕೆ. ಮೋಹನ್ ಹೇಳಿದರು.

ಕೆ.ಆರ್.ಪುರ ಸಮೀಪದ ಹೊರಮಾವು ಜಯಂತಿನಗರದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಮಹಾ ಪರಿನಿರ್ವಾಣ ದಿನದ ಅಂಗವಾಗಿ ಅಂಬೇಡ್ಕರ್ ಪುತ್ಥಳಿಗೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದರು.

ನಿರಂತರ ಶೋಷಣೆಗೆ ಒಳಗಾಗಿರುವ ಜನರು ತಮ್ಮ ಹಕ್ಕುಗಳನ್ನು ಪಡೆಯಲು ಸಂವಿಧಾನ ಮೂಲಧಾರವಾಗಿದೆ. ಸಂವಿಧಾನ ಉಳಿಸಲು ಹೋರಾಟ ಅನಿವಾರ್ಯ ಎಂದರು.

ಕಾಂಗ್ರೆಸ್ ಮುಖಂಡ ಅಗರ ಪ್ರಕಾಶ್, ಬ್ಲಾಕ್ ಅಧ್ಯಕ್ಷ ಸಿ.ವೆಂಕಟೇಶ್, ಮುಖಂಡರಾದ ಅಗರ ಪ್ರಕಾಶ್, ನಂಜಪ್ಪ, ಮುನಿರಾಜು, ಪ್ರಸನ್ನ, ಸೆಬಾಸ್ಟಿನ್, ಸವಿತಾ, ಸುನೀಲ್ ಇದ್ದರು

‘ಮಹನೀಯರನ್ನು ಜಾತಿಗೆ ಸೀಮಿತಗೊಳಿಸಬೇಡಿ’

ಪ್ರಜಾವಾಣಿ ವಾರ್ತೆ

ನೆಲಮಂಗಲ: ಸಮ ಸಮಾಜ ನಿರ್ಮಾಣ ಮಾಡುವ ಸಂವಿಧಾನದ ಕೊಡುಗೆ ನೀಡಿರುವ ಅಂಬೇಡ್ಕರ್ ಅವರನ್ನು ಒಂದು ಜಾತಿಗೆ ಸೀಮಿತಗೊಳಿಸಬಾರದು ಎಂದು ಪುರಸಭೆ ಮಾಜಿ ಅಧ್ಯಕ್ಷ ನಾರಾಯಣ ಗೌಡ ತಿಳಿಸಿದರು.

ಅಂಬೇಡ್ಕರ್ ಮಹಾ ಪರಿನಿರ್ವಾಣ ದಿನದ ಅಂಗವಾಗಿ ದಲಿತ ಸಂಘಟನೆಗಳ ಒಕ್ಕೂಟ, ಡಾ.ಬಾಬು ಜಗಜೀವನ್ ರಾಂ ಕ್ಷೇಮಾಭಿವೃದ್ಧಿ ಸಂಘ, ದಲಿತ ಕೂಲಿ ಮತ್ತು ಕಾರ್ಮಿಕ ಸಂಘಟನೆಯ ಸಹಯೋಗದಲ್ಲಿ ಇಲ್ಲಿನ ಪ್ರವಾಸಿ ಮಂದಿರದಿಂದ ಮುಂಬೈನ ಚೈತ್ಯ ಭೂಮಿಗೆ ಹಮ್ಮಿಕೊಂಡಿರುವ ಜ್ಯೋತಿ ಯಾತ್ರೆಗೆ ಚಾಲನೆ ನೀಡಿ ಅವರು ಮಾತನಾಡಿದರು.

ಯಾತ್ರೆಯ ನೇತೃತ್ವ ವಹಿಸಿರುವ ಪಿ.ಗಂಗಾಧರ್ ಮಾತನಾಡಿ, ‘ಅಂಬೇಡ್ಕರ್ ವಿಚಾರಧಾರೆಗಳನ್ನು ಜನರಿಗೆ ತಿಳಿಸುವ ಹಾಗೂ ಸಮಾಜವನ್ನು ಒಗ್ಗೂಡಿಸುವ ಉದ್ದೇಶದಿಂದ ಜ್ಯೋತಿಯಾತ್ರೆ ಹಮ್ಮಿಕೊಳ್ಳಲಾಗಿದೆ. ರಾಜ್ಯದ ಎಲ್ಲ ತಾಲ್ಲೂಕುಗಳಿಂದ ನಮ್ಮ ಕಾರ್ಯಕರ್ತರು ಯಾತ್ರೆಯಲ್ಲಿ ಪಾಲ್ಗೊಳ್ಳಲಿದ್ದಾರೆ’ ಎಂದು ಮಾಹಿತಿ ನೀಡಿದರು.

ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕಿ ಎಂ.ವಾಣಿ, ದಲಿತ ಸಂಘಟನೆಗಳ ಒಕ್ಕೂಟದ ರಾಜ್ಯ ಸಂಚಾಲಕ ನಾರಾಯಣಸ್ವಾಮಿ, ಪ್ರಧಾನ ಕಾರ್ಯದರ್ಶಿ ನಿಡವಂದ ರಾಜು, ಜಿಲ್ಲಾಧ್ಯಕ್ಷ ಬೊಮ್ಮನಹಳ್ಳಿ ನಾಗರಾಜು, ಡಾ. ಬಾಬು ಜಗಜೀವನ್‌ರಾಂ ಕ್ಷೇಮಾಭಿವೃದ್ಧಿ ಸಂಘದ ಸಂಸ್ಥಾಪಕ ಮಹಾದೇವ್, ಕರ್ನಾಟಕ ರಕ್ಷಣಾ ವೇದಿಕೆ ರಾಜ್ಯ ಉಪಾಧ್ಯಕ್ಷ ಉಮೇಶ್ ಗೌಡ, ಬಹುಜನ ಚಳವಳಿ ಸಂಘಟನೆ ಜಿಲ್ಲಾಧ್ಯಕ್ಷ ಅರುಣ್‌ಕುಮಾರ್, ವಿಜಯ್‌ಕುಮಾರ್ ಪಾಲ್ಗೊಂಡಿದ್ದರು.



ಡಾ. ಬಿ.ಆರ್. ಅಂಬೇಡ್ಕರ್ ಮಹಾಪರಿನಿರ್ವಾಣ ದಿನದ ಅಂಗವಾಗಿ ನೆಲಮಂಗಲ ಪ್ರವಾಸಿಮಂದಿರದಿಂದ ಮುಂಬೈನ ಚೈತ್ಯ ಭೂಮಿಗೆ ಜ್ಯೋತಿಯಾತ್ರೆ ತೆರಳಿತು

‘ಸಂವಿಧಾನದಿಂದ ಹಿಂದುಳಿದವರಿಗೆ ಅಧಿಕಾರ’

ಯಲಹಂಕ: ಅಂಬೇಡ್ಕರ್ ಅವರು ಸಂವಿಧಾನದ ಮೂಲಕ ಮತದಾನ, ಹಕ್ಕು, ಮೀಸಲಾತಿ ಮತ್ತಿತರ ಸೌಲಭ್ಯಗಳನ್ನು ನೀಡದೇ ಹೋಗಿದ್ದರೆ ಇಂದು ಹಿಂದುಳಿದವರು ಯಾವುದೇ ಅಧಿಕಾರ ಮತ್ತು ಸ್ಥಾನಮಾನಗಳನ್ನು ಪಡೆಯಲು ಸಾಧ್ಯವಾಗುತ್ತಿರಲಿಲ್ಲ ಎಂದು ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ರವಿಕುಮಾರ್ ಹೇಳಿದರು.

ಬ್ಯಾಟರಾಯನಪುರ ಕ್ಷೇತ್ರದ ಜಕ್ಕೂರಿನಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಸಮುದಾಯ ಭವನ ಟ್ರಸ್ಟ್ ಆಶ್ರಯದಲ್ಲಿ ಆಯೋಜಿಸಿದ್ದ ಅಂಬೇಡ್ಕರ್ 67ನೇ ಮಹಾಪರಿನಿರ್ವಾಣ ದಿನಾಚರಣೆಯಲ್ಲಿ ಅವರು ಮಾತನಾಡಿದರು.

ಅಮೃತಹಳ್ಳಿ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಅಂಬರೀಶ್, ಬಿಬಿಎಂಪಿ ಮಾಜಿ ಉಪಮೇಯರ್ ಎಂ. ಆನಂದ್, ಜಕ್ಕೂರು ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯ ಉಪಾಧ್ಯಕ್ಷ ನಾಗರಾಜಪ್ಪ, ನಿರ್ದೇಶಕರಾದ ಬಿ.ಜಿ. ರಮೇಶ್, ಸುಮಿತ್ರಮ್ಮ, ಆಂಜಿನಪ್ಪ, ಕೃಷ್ಣಪ್ಪ, ದಲಿತ ಮುಖಂಡರಾದ ರಾಮಗೊಂಡನಹಳ್ಳಿ ರಮೇಶ್, ಸುಬ್ಬಣ್ಣ, ಎಸ್.ಸೋಮಶೇಖರ್, ಆವಲಹಳ್ಳಿ ಸುರೇಶ್, ಎಸ್. ಮಾರುತಿ, ತಿರುಮಳಪ್ಪ ಇದ್ದರು.



ಬ್ಯಾಟರಾಯನಪುರ ಕ್ಷೇತ್ರದ ಜಕ್ಕೂರಿನಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆಗೆ ಪುಷ್ಪ ಹಾರ ಹಾಕಿ ನಮನ ಸಲ್ಲಿಸಲಾಯಿತು

ಚಿತ್ರಾವಳಿ







1.ನಗರದಲ್ಲಿ ಬುಧವಾರ ಡಾ. ಬಿ.ಆರ್.ಅಂಬೇಡ್ಕರ್ ಅವರ 67ನೇ ಮಹಾ ಪರಿನಿರ್ವಾಣದಿನದ ಅಂಗವಾಗಿ ‘ದಲಿತ ಸಂಘರ್ಷ ಸಮಿತಿ’ (ಸಮತಾವಾದ) ರಾಜ್ಯ ಸಮಿತಿ ಸದಸ್ಯರು ಕೆ.ಜಿ. ರಸ್ತೆಯ ಬನ್ನಪ್ಪ ಪಾರ್ಕ್‌ನಿಂದ ವಿಧಾನಸೌಧದವರೆಗೆ ಕಾಲ್ನಡಿಗೆ ಜಾಥಾ ನಡೆಸಿದರು

2. ಅಂಬೇಡ್ಕರ್ ಅವರ ಮಹಾಪರಿನಿರ್ವಾಣ ದಿನವನ್ನು ಬಿಎಂಟಿಸಿ ಕೇಂದ್ರ ಕಚೇರಿಯಲ್ಲಿ ಆಚರಿಸಲಾಯಿತು. ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕಿ ಸತ್ಯವತಿ ಜಿ., ನಿರ್ದೇಶಕಿ ಕಲಾ ಕೃಷ್ಣಸ್ವಾಮಿ ಹಾಗೂ ಸಿಬ್ಬಂದಿ ಪಾಲ್ಗೊಂಡಿದ್ದರು

3. ಬೆಂಗಳೂರಿನ ವಿಧಾನಸೌಧದ ಮುಂಭಾಗ ‘ಸಮಾಜ ಕಲ್ಯಾಣ ಇಲಾಖೆ’ ಆಯೋಜಿಸಿದ್ದ ‘ಡಾ. ಬಿ.ಆರ್.ಅಂಬೇಡ್ಕರ್ ಅವರ 67ನೇ ಮಹಾಪರಿನಿರ್ವಾಣ ದಿನ’ ಕಾರ್ಯಕ್ರಮದಲ್ಲಿ ನಟ ಡಾಲಿ ಧನಂಜಯ್ ಅಂಬೇಡ್ಕರ್ ಪ್ರತಿಮೆಗೆ ಪುಷ್ಪ ನಮನ ಸಲ್ಲಿಸಿದರು. ವಕೀಲ ಸೂರ್ಯ ಮುಕುಂದ್ ರಾಜ್ ಭಾಗವಹಿಸಿದ್ದರು

–ಪ್ರಜಾವಾಣಿ ಚಿತ್ರಗಳು

ಸ್ಥಗಿತಗೊಂಡ ಸೆನ್ಸಾರ್ ಪ್ರಕ್ರಿಯೆ • ಹಲವು ಸಿನಿಮಾಗಳಿಗೆ ಸಂಕಷ್ಟ


ಸರತಿಯಲ್ಲಿ 132 ಚಿತ್ರಗಳು

• ವಿನಾಯಕ ಕೆ.ಎಸ್.

ಬೆಂಗಳೂರು: ಕೇಂದ್ರ ಸೆನ್ಸಾರ್ ಮಂಡಳಿಯ (ಸಿಬಿಎಫ್‌ಸಿ) ಪ್ರಾದೇಶಿಕ ಸೆನ್ಸಾರ್ ಅಧಿಕಾರಿ ಇಲ್ಲದೆ ಕನ್ನಡ ಸಿನಿಮಾಗಳ ಸೆನ್ಸಾರ್ ಪ್ರಕ್ರಿಯೆ ಸಂಪೂರ್ಣವಾಗಿ ಸ್ಥಗಿತಗೊಂಡಿದ್ದು, ಡಿಸೆಂಬರ್ ತಿಂಗಳಿನಲ್ಲಿ ತೆರೆಗೆ ಬರಬೇಕಿದ್ದ ಹಲವು ಸಿನಿಮಾಗಳಿಗೆ ಸಂಕಷ್ಟ ಎದುರಾಗಿದೆ.

ಕನ್ನಡ ಸಿನಿಮಾವೊಂದಕ್ಕೆ ಸೆನ್ಸಾರ್ ಸರ್ಟಿಫಿಕೆಟ್ ನೀಡಲು ಲಂಚ ಪಡೆಯುತ್ತಿದ್ದ ಆರೋಪದ ಮೇಲೆ ಪ್ರಾದೇಶಿಕ ಸೆನ್ಸಾರ್ ಅಧಿಕಾರಿ ಪ್ರಶಾಂತ್ ಕುಮಾರ್ ಅವರನ್ನು ನ.30ರಂದು ಸಿಬಿಐ ಬಂಧಿಸಿತ್ತು. ಹೀಗಾಗಿ ಸಿನಿಮಾಗಳಿಗೆ ಪ್ರಮಾಣಪತ್ರ ನೀಡುವ ಪ್ರಕ್ರಿಯೆ ತಾತ್ಕಾಲಿಕವಾಗಿ ಸ್ಥಗಿತಗೊಂಡಿದೆ.

‘ಕಳೆದ ಗುರುವಾರದಿಂದ (ನವೆಂಬರ್ 30) ಸೆನ್ಸಾರ್ ಪ್ರಕ್ರಿಯೆ ನಿಂತಿದೆ. ‘ಕಾಟೇರ’ ಸೇರಿ ಇದೇ ತಿಂಗಳು ಬಿಡುಗಡೆಗೆ ಸಿದ್ಧವಿರುವ ಹಲವು ಸಿನಿಮಾಗಳಿಗೆ ತೊಂದರೆಯಾಗುತ್ತಿದೆ. ಒಟ್ಟು 132 ಸಿನಿಮಾಗಳು ಸೆನ್ಸಾರ್‌ಗಾಗಿ ಕಾಯುತ್ತಿವೆ. ಈ ಸಂಬಂಧ ಚಲನಚಿತ್ರ ವಾಣಿಜ್ಯ ಮಂಡಳಿಯು ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿದೆ. ಮೂರು ತಂಡಗಳನ್ನು ಮಾಡಿ ದಿನಕ್ಕೆ ಮೂರು ಚಿತ್ರಗಳನ್ನು ವೀಕ್ಷಿಸಲು ಅವಕಾಶ ಮಾಡಿಕೊಡಬೇಕೆಂದು ವಿನಂತಿಸಿದ್ದೇವೆ’ ಎಂದು ಚಲನಚಿತ್ರ ವಾಣಿಜ್ಯ ಮಂಡಳಿ ಖಜಾಂಚಿ ಭಾ.ಮಾ. ಗಿರೀಶ್ ಪ್ರತಿಕ್ರಿಯಿಸಿದರು.



ಕೇಂದ್ರ ವಾರ್ತಾ ಮತ್ತು ಪ್ರಸಾರ ಸಚಿವಾಲಯದೊಂದಿಗೆ ಚರ್ಚಿಸಿದ್ದೇನೆ. ಒಂದೆರಡು ದಿನಗಳಲ್ಲಿ ಹೊಸ ಪ್ರಾದೇಶಿಕ ಸೆನ್ಸಾರ್ ಅಧಿಕಾರಿಯನ್ನು ನೇಮಕ ಮಾಡುವ ಭರವಸೆ ಸಿಕ್ಕಿದೆ.

ರಾಕ್‌ಲೈನ್ ವೆಂಕಟೇಶ್
‘ಕಾಟೇರ’ ಚಿತ್ರದ ನಿರ್ಮಾಪಕ

ಸೆನ್ಸಾರ್ ಪ್ರಮಾಣಪತ್ರ ಪಡೆಯುವ ಪ್ರಕ್ರಿಯೆಗೆ ನೆರವಾಗಲೆಂದೇ ಕೆಲವರು ಮಧ್ಯವರ್ತಿಗಳಿದ್ದಾರೆ. ಅಂಥವರಲ್ಲಿ ಒಬ್ಬರಾದ ಶಿವು ಹೀಗೆನ್ನುತ್ತಾರೆ: ‘ಸೆನ್ಸಾರ್ ಪ್ರಮಾಣಪತ್ರಕ್ಕಾಗಿ ನನ್ನಲ್ಲಿಗೆ ಬಂದಿರುವ ಸಿನಿಮಾಗಳೇ 30ರಷ್ಟಿವೆ’ ಎನ್ನುತ್ತಾರೆ ನಿರ್ದೇಶಕ ಶಿವು.

ಸೆನ್ಸಾರ್ ಪ್ರಮಾಣಪತ್ರಕ್ಕಾಗಿ ಆನ್‌ಲೈನ್ ಮೂಲಕವೇ ಸಂಬಂಧಿಸಿದ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಬಹುದು. ಸಿನಿಮಾ ವೀಕ್ಷಿಸಿ, ಸೆನ್ಸಾರ್ ಪ್ರಮಾಣಪತ್ರ ನೀಡಲು ಪ್ರಾದೇಶಿಕ ಸೆನ್ಸಾರ್ ಅಧಿಕಾರಿ ಇರಬೇಕಾದದ್ದು ಅಗತ್ಯ.

‘ನಾನು ನಿರ್ಮಿಸಿರುವ ‘ಸೈಕಿಕ್’ ಚಿತ್ರ ಡಿಸೆಂಬರ್‌ನಲ್ಲಿ ತೆರೆಗೆ ಬರಬೇಕಿತ್ತು. ಸೆನ್ಸಾರ್ ಸಮಸ್ಯೆಯಿಂದ ಬಿಡುಗಡೆ ಮುಂದೂಡುವುದು ಅನಿವಾರ್ಯವಾಗಿದೆ. ಜನವರಿಯಲ್ಲಿ ದೊಡ್ಡ ಸಿನಿಮಾಗಳ ಸುಗ್ಗಿ ಪ್ರಾರಂಭವಾಗುತ್ತದೆ. ಹೀಗಾಗಿ ನಂತರದ ದಿನಗಳಲ್ಲಿ ಸಿನಿಮಾ ಬಿಡುಗಡೆಯೇ ಸವಾಲಾಗಿದೆ’ ಎನ್ನುತ್ತಾರೆ ನಿರ್ಮಾಪಕ ಬಿ.ಜಿ. ಮಂಜುನಾಥ್.

‘ಈ ವರ್ಷದ ಸೆನ್ಸಾರ್ ಪ್ರಕ್ರಿಯೆಗೆ ಅರ್ಜಿ ಸಲ್ಲಿಸಲು ನ.15 ಕೊನೆಯ ದಿನವಾಗಿತ್ತು. ಚಿತ್ರಮಂದಿರಕ್ಕೆ ಬರುವ ಚಿತ್ರಗಳ ಜೊತೆಗೆ ಭಾರತೀಯ ಚಿತ್ರೋತ್ಸವಗಳಿಗೆ ಸೀಮಿತವಾಗಿರುವ ಸಾಕಷ್ಟು ಚಿತ್ರಗಳು ಡಿಸೆಂಬರ್‌ನಲ್ಲಿ ಸೆನ್ಸಾರ್‌ಗೆ ಬರುತ್ತವೆ. ಜನವರಿಯಿಂದ ಹಲವು ಚಿತ್ರೋತ್ಸವಗಳು ಪ್ರಾರಂಭವಾಗುವುದೇ ಇದಕ್ಕೆ ಕಾರಣ’ ಎಂದು ಹೆಸರು ಹೇಳಲು ಇಚ್ಛಿಸದ ಸೆನ್ಸಾರ್ ಮಂಡಳಿಯ ಸದಸ್ಯರೊಬ್ಬರು ಮಾಹಿತಿ ಕೊಟ್ಟರು.



ಜಲಾವೃತ ನಗರ ಮಿಚಾಂಗ್ ಚಂಡಮಾರುತದ ಪರಿಣಾಮವಾಗಿ ಸುರಿದ ಭಾರಿ ಮಳೆಗೆ ಜಲಾವೃತವಾಗಿರುವ ಚೆನ್ನೈ ನಗರ ಬುಧವಾರ ಡ್ರೋನ್ ಕ್ಯಾಮೆರಾದಲ್ಲಿ ಸೆರೆಸಿಕ್ಕಿದ್ದು ಹೀಗೆ –ಪಿಟಿಐ ಚಿತ್ರ

ಸಂಕ್ಷಿಪ್ತ ಸುದ್ದಿ

ಪ್ರತಿಭಟಿಸಿದ ಪೊಲೀಸರ ವಿರುದ್ಧ ಕ್ರಮ: ಪರಮೇಶ್ವರ

ಪ್ರಜಾವಾಣಿ ವಾರ್ತೆ

ತುಮಕೂರು: ಚಿಕ್ಕಮಗಳೂರಿನಲ್ಲಿ ಪ್ರತಿಭಟನೆ ನಡೆಸಿದ ಪೊಲೀಸರ ವಿರುದ್ಧ ಶಿಸ್ತು ಕ್ರಮಕೈಗೊಳ್ಳಲಾಗುವುದು ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದರು.

ನಗರದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘ಪೊಲೀಸ್ ಒಂದು ಶಿಸ್ತಿನ ಪಡೆ. ಅದೇ ರೀತಿ ಇರಬೇಕು. ವಕೀಲರಿಂದ ತೊಂದರೆ, ಸಮಸ್ಯೆ ಆಗಿದ್ದರೆ ಗಮನಕ್ಕೆ ತರಬೇಕಿತ್ತು. ಅದಕ್ಕೆ ಒಂದು ವ್ಯವಸ್ಥೆಯೇ ಇದೆ. ಅದು ಬಿಟ್ಟು ಬೀದಿಗಿಳಿದು ಪ್ರತಿಭಟನೆ ಮಾಡುವುದನ್ನು ಸಹಿಸುವುದಿಲ್ಲ’ ಎಂದು ಎಚ್ಚರಿಕೆ ನೀಡಿದರು.

ವಕೀಲರು– ಪೊಲೀಸರ ನಡುವಿನ ಗಲಾಟೆ ವಿಚಾರವಾಗಿ ಹೈಕೋರ್ಟ್‌ನಿಂದ ಕೆಲ ನಿರ್ದೇಶನಗಳು ಬಂದಿವೆ. ಅದರಂತೆ ತಪ್ಪಿತಸ್ಥರ ವಿರುದ್ಧ ಕ್ರಮಕೈಗೊಳ್ಳಲಾಗುವುದು. ವಕೀಲರು, ಪೊಲೀಸರು ಆ ರೀತಿ ನಡೆದುಕೊಳ್ಳಬಾರದಿತ್ತು ಎಂದರು.

ಲಂಚ ಪ್ರಕರಣದಲ್ಲಿ ಆರೋಪಿಯಾಗಿರುವ ಮಾಜಿ ಶಾಸಕ ಮಾಡಾಳ್ ವಿರುಪಾಕ್ಷಪ್ಪ ವಿರುದ್ಧ ವಿಚಾರಣೆ ನಡೆಸಲು ಅನುಮತಿ ಕೇಳಿದರೆ ನೀಡಲಾಗುವುದು ಎಂದು ಇದೇ ಸಂದರ್ಭದಲ್ಲಿ ಸ್ಪಷ್ಟಪಡಿಸಿದರು.

‘ಅರ್ಜುನನಿಗೆ ಎಚ್‌.ಡಿ. ಕೋಟೆಯಲ್ಲಿ ಸ್ಮಾರಕ’

ಬೆಂಗಳೂರು: ಎಂಟು ಬಾರಿ ದಸರಾ ಅಂಬಾರಿ ಹೊತ್ತಿದ್ದ ಆನೆ ‘ಅರ್ಜುನ’ ಪ್ರಾಣ ಕಳೆದುಕೊಂಡ ಸ್ಥಳದಲ್ಲಿಯೇ ಸ್ಮಾರಕ ಮಾಡಲಾಗುವುದು. ಎಚ್‌.ಡಿ. ಕೋಟೆಯಲ್ಲೂ ಸ್ಮಾರಕ ನಿರ್ಮಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ನಗರದಲ್ಲಿ ಅವರು ಸುದ್ದಿಗಾರರೊಂದಿಗೆ ಮಾತನಾಡಿ, ‘ಅರ್ಜುನ ಸಾವಿಗೀಡಾಗಿರುವುದು ದುರದೃಷ್ಟಕರ. ಘಟನೆ ಬಗ್ಗೆ ಸಂಪೂರ್ಣ ತನಿಖೆ ಮಾಡುವಂತೆ ಸೂಚಿಸಲಾಗಿದೆ’ ಎಂದರು.

ಡಾಲಿ ಧನಂಜಯ್ ರಾಯಭಾರಿ: ಲಿಡ್ಕರ್ ಉತ್ಪನ್ನಗಳಿಗೆ ನಟ ಡಾಲಿ ಧನಂಜಯ್ ಅವರನ್ನು ಪ್ರದರ್ಶನ ರಾಯಭಾರಿಯಾಗಿ ನೇಮಕ ಮಾಡಲಾಗಿದೆ. ಡಾಲಿ ಉಚಿತವಾಗಿ ಈ ಕೆಲಸ ಮಾಡುತ್ತಿದ್ದಾರೆ. ಚರ್ಮ ಉದ್ಯಮಕ್ಕೆ ಉತ್ತೇಜನ ದೊರೆಯಲಿದೆ ಎಂದು ಹೇಳಿದರು.

ಮುಸ್ಲಿಂ ವೃದ್ಧನ ಮೇಲೆ ಹಲ್ಲೆ: ಇಬ್ಬರ ಬಂಧನ

ಕೊಪ್ಪಳ: ಜಿಲ್ಲೆಯ ಗಂಗಾವತಿಯಲ್ಲಿ ಇತ್ತೀಚೆಗೆ ಮುಸ್ಲಿಂ ಸಮಾಜದ ಅಂಧ ವೃದ್ಧ ಹುಸೇನಸಾಬ್ ಎಂಬುವರಿಗೆ ‘ಜೈ ಶ್ರೀರಾಮ್’ ಹೇಳುವಂತೆ ಒತ್ತಾಯಿಸಿ ಹಲ್ಲೆ ನಡೆಸಿದ್ದಾರೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಇಬ್ಬರು ಯುವಕರನ್ನು ಪೊಲೀಸರು ಬಂಧಿಸಿದ್ದಾರೆ.

ಗಂಗಾವತಿಯ ಸಾಫ್ಟ್‌ವೇರ್ ಎಂಜಿನಿಯರ್ ಕೆ. ಸಾಗರಶೆಟ್ಟಿ ಕಲ್ಕಿ ಮತ್ತು ನರಸಪ್ಪ ದನಕಾಯರ ಬಂಧಿತರು.

‘ನ. 25ರಂದು ರಾತ್ರಿ ವೃದ್ಧನ ಮೇಲೆ ಹಲ್ಲೆ ನಡೆಸಲಾಗಿದೆ. ಆರೋಪಿಗಳು ಜೈ ಶ್ರೀರಾಮ್ ಎಂದು ಘೋಷಣೆ ಕೂಗುವಂತೆ ಒತ್ತಡ ಹೇರಿದ್ದಾರೆ. ಗಡ್ಡಕ್ಕೆ ಬೆಂಕಿ ಹಚ್ಚಿದ್ದಾರೆ ಎನ್ನುವ ಆರೋಪಕ್ಕೆ ಸಂಬಂಧಿಸಿ ಇದುವರೆಗಿನ ತನಿಖೆಯಲ್ಲಿ ಯಾವುದೇ ಸಾಕ್ಷಿ ಲಭ್ಯವಾಗಿಲ್ಲ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯಶೋಧಾ ವಂಟಗೋಡಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

‘ಮಧ್ಯರಾತ್ರಿ ಬೈಕ್ ಮೇಲೆ ಹೋಗುವಾಗ ಡ್ರಾಪ್ ಕೊಡುವಂತೆ ವೃದ್ಧ ಕೇಳಿದ್ದು, ಆರೋಪಿಗಳು ಅವರನ್ನು ದ್ವಿಚಕ್ರವಾಹನದ ಮಧ್ಯ ಕೂರಿಸಿಕೊಂಡಿದ್ದಾರೆ. ಹಿಂದೆ ಕೂತಿದ್ದ ನರಸಪ್ಪ ಟೋಪಿ ಎಳೆದಿದ್ದರಿಂದ ವೃದ್ಧ ಕುಪಿತಗೊಂಡಿದ್ದರು. ಯುವಕರು ಕುಡಿದ ಮತ್ತಿನಲ್ಲಿದ್ದರಿಂದ ಸಿದ್ದಾಪುರದ ರೈಲ್ವೆ ಸೇತುವೆ ಸಮೀಪ ಕರೆದೊಯ್ದು ಹಲ್ಲೆ ಮಾಡಿದ್ದಾರೆ. ಇದರಲ್ಲಿ ಯಾವುದೇ ಕೋಮು ವಿಚಾರವಿಲ್ಲ’ ಎಂದು ಸ್ಪಷ್ಟಪಡಿಸಿದರು.

ಜಮೀನಿನ ಮಾಲೀಕ ಸೇರಿ ಮೂವರ ವಿರುದ್ಧ ಪ್ರಕರಣ

ವಿದ್ಯುತ್ ಪ್ರವಹಿಸಿ ಮೃತಪಟ್ಟ ಕಾಡಾನೆಯನ್ನು ಜಮೀನಿನಲ್ಲೇ ಹೂತರು!

ಪ್ರಜಾವಾಣಿ ವಾರ್ತೆ

ಕನಕಪುರ (ರಾಮನಗರ): ಜಮೀನಿಗೆ ಹಾಕಿದ್ದ ಬೇಲಿಯ ವಿದ್ಯುತ್ ಪ್ರವಹಿಸಿ ಮೃತಪಟ್ಟ 15 ವರ್ಷದ ಕಾಡಾನೆಯನ್ನು ಜಮೀನಿನಲ್ಲೇ ಗುಂಡಿ ತೋಡಿ ಹೂತು ಹಾಕಿರುವ ಘಟನೆ ತಾಲ್ಲೂಕಿನ ಸಂತೆಕೋಡಿಹಳ್ಳಿಯಲ್ಲಿ ನಡೆದಿದೆ. ನಾಲ್ಕು ದಿನಗಳ ಹಿಂದೆ (ಡಿ.3) ನಡೆದಿರುವ ಘಟನೆ ಬುಧವಾರ ವರದಿಯಾಗಿದೆ. ಅರಣ್ಯ ಇಲಾಖೆಯು ಮೂವರ ವಿರುದ್ಧ ಪ್ರಕರಣ ದಾಖಲಿಸಿದೆ.

ಜಮೀನಿನ ಮಾಲೀಕ ಸಂತೆಕೋಡಿಹಳ್ಳಿ ನಂಜೇಗೌಡ, ಭೋಗ್ಯಕ್ಕೆ ಪಡೆದು ವ್ಯವಸಾಯ ಮಾಡುತ್ತಿದ್ದ ಪಿಳ್ಳೇಗೌಡ ಹಾಗೂ ಗುಂಡಿ ತೊಡಲು ನೆರವಾಗಿದ್ದ ಜೆಸಿಬಿ ಚಾಲಕನ ವಿರುದ್ಧ ವನ್ಯಜೀವಿ ಸಂರಕ್ಷಣಾ ಕಾಯ್ದೆಯಡಿ ಎಫ್‌ಐಆರ್ ದಾಖಲಾಗಿದೆ. ಆರೋಪಿಗಳು ತಲೆ ಮರೆಸಿಕೊಂಡಿದ್ದಾರೆ.

ಅಕ್ರಮ ಸಂಪರ್ಕ: ಕಾಡಾನೆ ಸೇರಿದಂತೆ ವನ್ಯಜೀವಿಗಳ ಹಾವಳಿ ತಡೆಗಾಗಿ ಜಮೀನಿನಲ್ಲಿ ನಿರ್ಮಿಸಿದ್ದ ಬೇಲಿಗೆ ಸಮೀಪದ ಟ್ರಾನ್ಸ್‌ಫಾರ್ಮರ್‌ನಿಂದ ಅಕ್ರಮವಾಗಿ ವಿದ್ಯುತ್ ಸಂಪರ್ಕ ಪಡೆಯಲಾಗಿತ್ತು. ರಾಗಿ ಸೇರಿದಂತೆ ಇತರ ಬೆಳೆಗಳಿದ್ದ ಜಾಗಕ್ಕೆ ನಾಲ್ಕು ದಿನಗಳ ಹಿಂದೆ ಬಂದಿದ್ದ ಗಂಡಾನೆಗೆ ವಿದ್ಯುತ್ ಪ್ರವಹಿಸಿದ್ದರಿಂದ ಸ್ಥಳದಲ್ಲೇ ಮೃತಪಟ್ಟಿದೆ. ವಿಷಯ ಹೊರಗೆ ಗೊತ್ತಾದರೆ ತಮಗೆ ಸಮಸ್ಯೆಯಾಗುತ್ತದೆ ಎಂದು ಆರೋಪಿಗಳು, ಸ್ಥಳಕ್ಕೆ ಜೆಸಿಬಿ ಕರೆಸಿ ಗುಂಡಿ ತೋಡಿ ಆನೆಯನ್ನು ಹೂತು ಹಾಕಿದ್ದಾರೆ.

‘ಆರೋಪಿಗಳ ಕೃತ್ಯ ಕುರಿತು ಸಿಕ್ಕ ಖಚಿತ ಮಾಹಿತಿ ಮೇರೆಗೆ ಘಟನಾ ಸ್ಥಳಕ್ಕೆ ಭೇಟಿ ನೀಡಿ, ಜೆಸಿಬಿಯಿಂದ ಗುಂಡಿ ತೆಗೆಸಿದಾಗ ಕಾಡಾನೆ ಕಳೇಬರ ಪತ್ತೆಯಾಯಿತು. ಕಳೇಬರದ ಪರೀಕ್ಷೆ ನಡೆಸಿದಾಗ ವಿದ್ಯುತ್ ಪ್ರವಹಿಸಿಯೇ ಮೃತಪಟ್ಟಿರುವುದು ದೃಢಪಟ್ಟಿತು. ದಂತಗಳನ್ನು ಬೇರ್ಪಡಿಸಿ ಅದೇ ಜಾಗದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು’ ಎಂದು ಡಿಸಿಎಫ್ ರಾಮಕೃಷ್ಣಪ್ಪ ‘ಪ್ರಜಾವಾಣಿ’ಗೆ ತಿಳಿಸಿದರು.

ಕನಕಪುರ ಉಪವಿಭಾಗದ ಎಸಿಎಫ್ ವಿ.ಗಣೇಶ್, ಆರ್‌ಎಫ್‌ಒ ಎ.ಎಲ್.ದಾಳೇಶ್ ಹಾಗೂ ವಲಯ ಅರಣ್ಯಾಧಿಕಾರಿ ನೇತೃತ್ವದ ತಂಡ ಪ್ರಕರಣದ ತನಿಖೆ ನಡೆಸುತ್ತಿದೆ.

ನಗರದಲ್ಲಿ ಇಂದು

‘ಧಮ್ಮ ಚರ್ಚೆ’: ಅತಿಥಿ: ಅಜಾನ್ ಸುಜಿನ್ ಬೋರಿಹನ್ವಾನಾಕೆಟ್, ಆಯೋಜನೆ: ಭಾರತ ಧಮ್ಮ ಫೌಂಡೇಷನ್, ಸ್ಥಳ: ನಾಗಸೇನಾ ಬುದ್ಧವಿಹಾರ, ಸದಾಶಿವನಗರ, ಮಧ್ಯಾಹ್ನ 12ರಿಂದ

ಶರಣ ಸಂಗಮ ‘ಅಕ್ಕಮಹಾದೇವಿ ವಿಚಾರ ಚಿಂತನ’: ಸಾನ್ನಿಧ್ಯ: ಬಸವ ಮಹಾಲಿಂಗ ಸ್ವಾಮೀಜಿ, ಅತಿಥಿಗಳು: ಜಯರಾಜ್ ನಾಯ್ಡು, ಸೌಮ್ಯ ವಿ., ಅನುರಾಗ್ ಎಸ್. ಪಾಟೀಲ್, ಅರುಣಕುಮಾರ್ ಡಿ.ಟಿ., ಆಯೋಜನೆ: ರಾಷ್ಟ್ರೀಯ ಬಸವತತ್ವ ಪರಿಷತ್ತು, ಸ್ಥಳ: ಎಂ. ಚಿದಾನಂದಮೂರ್ತಿ ಸಭಾಂಗಣ, ವಿಜಯನಗರ, ಸಂಜೆ 4.30

‘ಸಂತೃಪ್ತ ರಾಜ್ಯ ಕರ್ನಾಟಕ’: ಅತಿಥಿಗಳು: ರಾಮಮೂರ್ತಿ, ಈ. ರಾಮಚಂದ್ರ ರಾವ್, ದೇವಸಿರಿ ಸುಂದರರಾಜನ್, ಮೋನಿಶಾ, ಆಯೋಜನೆ ಮತ್ತು ಸ್ಥಳ: ಕೆನ್‌ಸಿರಿ ಸ್ಕೂಲ್ ಮತ್ತು ಕಾಲೇಜು, ಮರಿಯಪ್ಪನಪಾಳ್ಯ, ಸಂಜೆ 5

‘ನಕ್ಕು ಹಗುರಾಗಿ ಹಾಯಾಗಿರಿ’ ಕುರಿತು ಉಪನ್ಯಾಸ: ಅಚ್ಚುತರಾವ್ ಪದಕಿ, ಅತಿಥಿ: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘದ ಸಭಾಂಗಣ, ಹೊಂಬೇಗೌಡನಗರ, ಸಂಜೆ 6.30

‘ಕತ್ತಲೆ ದಾರಿ ದೂರ’ ನಾಟಕ ಪ್ರದರ್ಶನ: ಪ್ರಸ್ತುತಿ: ಬೆಂಗಳೂರು ಪ್ಲೇಯರ್ಸ್ ಥಿಯೇಟರ್ ಅಸೋಸಿಯೇಷನ್, ರಚನೆ: ಅಂಟನ್ ಚೆಕಾವ್, ಡಿ.ಆರ್. ನಾಗರಾಜ್, ನಿರ್ದೇಶನ: ಶ್ರೀನಿಧಿ ಬಿ.ಎಸ್., ಆಯೋಜನೆ: ನಾಟಕ ಬೆಂಗ್ಳೂರು, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 7

ಭರತನಾಟ್ಯ ಪ್ರದರ್ಶನ: ಪ್ರಸ್ತುತಿ: ಸಾಯಿ ಆರ್ಟ್ಸ್ ಇಂಟರ್‌ನ್ಯಾಷನಲ್ ಸಂಸ್ಥೆಯ ವಿದ್ಯಾರ್ಥಿಗಳು, ನಿರ್ದೇಶನ: ಸುಪರ್ಣ ವೆಂಕಟೇಶ್, ಶ್ವೇತಾ ವೆಂಕಟೇಶ್, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಜಯನಗರ, 5ನೇ ಬಡಾವಣೆ, ಸಂಜೆ 7.30

ಕೃಷ್ಣ ಪೂಜೆ ಸಾಂಗವಾಗಿ ನಡೆಯಬೇಕು ಎಂಬ ಉದ್ದೇಶ

ಪುತ್ತಿಗೆ ಮಠದಲ್ಲಿ ಧಾನ್ಯ ಮುಹೂರ್ತ

ಪ್ರಜಾವಾಣಿ ವಾರ್ತೆ

ಉಡುಪಿ: ಅಷ್ಟಮಠಗಳಲ್ಲಿ ಒಂದಾಗಿರುವ ಪುತ್ತಿಗೆ ಮಠದಲ್ಲಿ ಬುಧವಾರ ಪರ್ಯಾಯ ಪೂರ್ವಭಾವಿಯಾಗಿ ಧಾನ್ಯ ಮುಹೂರ್ತ ನೆರವೇರಿತು.

ಮಠದ ಪೀಠಾಧಿಪತಿ ಸುಗುಣೇಂದ್ರ ತೀರ್ಥ ಸ್ವಾಮೀಜಿ ಹಾಗೂ ಧರ್ಮಸ್ಥಳದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ, ಗಣ್ಯರು, ಮಠದ ವಿದ್ವಾಂಸರು ಹಾಗೂ ಭಕ್ತರ ಉಪಸ್ಥಿತಿಯಲ್ಲಿ ಧಾನ್ಯ ಮುಹೂರ್ತದ ಧಾರ್ಮಿಕ ವಿಧಿವಿಧಾನಗಳು ನಡೆದವು.

ಬೆಳಿಗ್ಗೆ ಪುತ್ತಿಗೆ ಮಠದ ವಿಠಲ ದೇವರಿಗೆ ಮಹಾಪೂಜೆ ಸಲ್ಲಿಸಿ ಮೆರವಣಿಗೆಯಲ್ಲಿ ಸಾಗಿ ರಥಬೀದಿಯಲ್ಲಿರುವ ಚಂದ್ರ ಮೌಳೀಶ್ವರ, ಅನಂತೇಶ್ವರ, ಶ್ರೀಕೃಷ್ಣ ಮುಖ್ಯಪ್ರಾಣ, ಗರುಡ, ಮಧ್ವ, ಸರ್ವಜ್ಞ ಸಿಂಹಾಸನ, ಭೋಜನ ಶಾಲೆ, ಪ್ರಾಣ ದೇವರು, ಸುಬ್ರಹ್ಮಣ್ಯ ಗುಡಿ, ನವಗ್ರಹ ಗುಡಿ, ವೃಂದಾವನ, ಗೋ ಶಾಲೆಗೆ ತೆರಳಿ ಪ್ರಾರ್ಥನೆ ಸಲ್ಲಿಸಲಾಯಿತು.

ಬಳಿಕ ಪುತ್ತಿಗೆ ಮಠದಿಂದ ಧಾನ್ಯದ ಮುಡಿಯನ್ನು ತಲೆಯ ಮೇಲೆ ಹೊತ್ತು, ಸ್ವರ್ಣ ಪಲ್ಲಕ್ಕಿಯಲ್ಲಿ ಕಿರು ಮುಡಿಯಿಟ್ಟು ಮೆರವಣಿಗೆಯಲ್ಲಿ ಶ್ರೀಕೃಷ್ಣಮಠಕ್ಕೆ ತೆರಳಲಾಯಿತು. ಅಲ್ಲಿಯ ಬಡಗುಮಾಳಿಗೆಯ ಗದ್ದುಗೆಯಲ್ಲಿ ಧಾನ್ಯಗಳ ಮುಡಿಗೆ ಪೂಜೆ ಸಲ್ಲಿಸಲಾಯಿತು.

ಬಳಿಕ ಮಧ್ವ ಸರೋವರದ ಬಳಿ ನಿರ್ಮಿಸಿರುವ ಕಟ್ಟಿಗೆ ರಥಕ್ಕೆ ಶಿಖರ ಪ್ರತಿಷ್ಠೆ ನಡೆಯಿತು. ಅಷ್ಟಮಠಗಳಿಗೆ, ಉಪ ಮಠಗಳ ಪ್ರತಿನಿಧಿಗಳಿಗೆ, ವಿದ್ವಾಂಸರಿಗೆ ಗೌರವ ಸಹಿತ ನವಗ್ರಹ ದಾನ ನೀಡಲಾಯಿತು.



ಉಡುಪಿಯ ಅಷ್ಠಮಠಗಳಲ್ಲಿ ಒಂದಾಗಿರುವ ಪುತ್ತಿಗೆ ಮಠದಲ್ಲಿ ಬುಧವಾರ ಪರ್ಯಾಯ ಪೂರ್ವಭಾವಿಯಾಗಿ ಧಾನ್ಯ ಮುಹೂರ್ತ ನೆರವೇರಿತು

ಮುಹೂರ್ತಗಳ ಉದ್ದೇಶ: ಪರ್ಯಾಯದ ಸಂದರ್ಭದಲ್ಲಿ ಭಕ್ತರ ಅನ್ನಪ್ರಸಾದಕ್ಕೆ ಸಮಸ್ಯೆಯಾಗಬಾರದು, ಕೃಷ್ಣ ಪೂಜೆ ಸಾಂಗವಾಗಿ ನಡೆಯಬೇಕು ಎಂಬ ಉದ್ದೇಶದಿಂದ ಪರ್ಯಾಯ ಪೂರ್ವಭಾವಿಯಾಗಿ ನಾಲ್ಕು ಮುಹೂರ್ತಗಳು ನಡೆಯುವುದು ಸಂಪ್ರದಾಯ. ಅದರಂತೆ, ಭಾವಿ ಪರ್ಯಾಯ ಮಠವಾಗಿರುವ ಪುತ್ತಿಗೆ ಮಠದಲ್ಲಿ ಬಾಳೆ ಮುಹೂರ್ತ, ಕಟ್ಟಿಗೆ ಮುಹೂರ್ತ, ಅಕ್ಕಿ ಮುಹೂರ್ತ ಹಾಗೂ ಧಾನ್ಯ ಮುಹೂರ್ತಗಳು ನಡೆದಿದ್ದು ಜ.18ರಿಂದ ಪುತ್ತಿಗೆ ಮಠದ ಪರ್ಯಾಯ ಆರಂಭವಾಗಲಿದೆ.

ವಿಚ್ಛೇದನ: ಹಿಂದೂ ವಿವಾಹ ಕಾಯ್ದೆ ಪಾಲನೆಗೆ ಹೈಕೋರ್ಟ್ ಸೂಚನೆ

18 ತಿಂಗಳು ಕಾಯುವಿಕೆ ಕಡ್ಡಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದಂಪತಿ ಪರಸ್ಪರ ಸಮ್ಮತಿಯ ಮೇರೆಗೆ ವಿವಾಹ ವಿಚ್ಛೇದನಕ್ಕೆ ಅರ್ಜಿ ಸಲ್ಲಿಸಿದ್ದರೂ ವಿಚಾರಣಾ ನ್ಯಾಯಾಲಯ ಅಂತಹ ಅರ್ಜಿಯನ್ನು ಏಕಾಏಕಿ ವಜಾ ಗೊಳಿಸುವಂತಿಲ್ಲ. ಹಿಂದೂ ವಿವಾಹ ಕಾಯ್ದೆಯ ನಿಯಮದಂತೆ 18 ತಿಂಗಳು ಕಾಯಬೇಕಾಗುತ್ತದೆ' ಎಂದು ಹೈಕೋರ್ಟ್ ಸ್ಪಷ್ಟಪಡಿಸಿದೆ.

ವಿಚ್ಛೇದನ ಕೋರಿ ದಂಪತಿ ಸಲ್ಲಿಸಿದ್ದ ಮೇಲ್ಮನವಿ ವಜಾಗೊಳಿಸಿರುವ ನ್ಯಾಯಮೂರ್ತಿ ಕೆ.ಎಸ್.ಮುದಗಲ್ ಮತ್ತು ನ್ಯಾಯಮೂರ್ತಿ ಕೆ.ವಿ. ಅರವಿಂದ್ ಅವರಿದ್ದ ವಿಭಾಗೀಯ ನ್ಯಾಯಪೀಠವು, ದಂಪತಿಗೆ ಮಧ್ಯಸ್ಥಿಕೆ ಕೇಂದ್ರಕ್ಕೆ ತೆರಳುವಂತೆ ಸೂಚಿಸಿದೆ.

'ಮಧ್ಯಸ್ಥಿಕೆ ಕೇಂದ್ರವು ವಿಚಾರಣಾ ನ್ಯಾಯಾಲಯಕ್ಕೆ ಮಧ್ಯಸ್ಥಿಕೆ ವರದಿಯನ್ನು ಸಲ್ಲಿಸಬೇಕು. ಆ ವರದಿ ಆಧರಿಸಿ ವಿಚಾರಣಾ ನ್ಯಾಯಾಲಯ ಕಾನೂನು ಪ್ರಕಾರ ವಿಚ್ಛೇದನದ ಅರ್ಜಿ ಇತ್ಯರ್ಥ-ಪಡಿಸಬಹುದು. ಪಕ್ಷಗಾರರ ಮನವಿ ಇಲ್ಲದೆ ವಿಚಾರಣಾ ನ್ಯಾಯಾಲಯ ತನ್ನಷ್ಟಕ್ಕೆ ತಾನೇ ಅರ್ಜಿ ವಜಾಗೊಳಿಸ-ಬಾರದು' ಎಂದು ತಾಕೀತು ಮಾಡಿದೆ.

ಮುಖ್ಯಾಂಶಗಳು

- ವಿಚಾರಣಾ ನ್ಯಾಯಾಲಯವು ಏಕಾಏಕಿ ವಿಚ್ಛೇದನ ಅರ್ಜಿ ವಜಾಗೊಳಿಸುವಂತಿಲ್ಲ
- ಮಧ್ಯಸ್ಥಿಕೆ ಕೇಂದ್ರದ ವರದಿ ಪರಿಶೀಲಿಸಿ ಕ್ರಮಕೈಗೊಳ್ಳಲು ಸೂಚನೆ

'ಈ ಪ್ರಕರಣದಲ್ಲಿ ವಿಚಾರಣಾ ನ್ಯಾಯಾಲಯ ಅರ್ಜಿಯನ್ನು ಕೇವಲ 9 ತಿಂಗಳಿಗೇ ವಜಾಗೊಳಿಸಿದೆ. ನಿಗದಿಯಂತೆ ಪ್ರಕರಣದ ಇತ್ಯರ್ಥಕ್ಕೆ 18 ತಿಂಗಳು ಕಾಲಾವಕಾಶ ಇದೆ. ಆದರೆ, ಅದಕ್ಕೂ ಮುನ್ನ ವಿಚಾರಣಾ ನ್ಯಾಯಾಲಯ ಕಲಂ 13 ಬಿ (2) ಅನ್ನು ಪಾಲನೆ ಮಾಡಿಲ್ಲ. ಹಾಗಾಗಿ ವಿಚಾರಣಾ ನ್ಯಾಯಾಲಯ ತಪ್ಪೆಸಗಿದೆ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

'ಹಿಂದೂ ವಿವಾಹ ಕಾಯ್ದೆ–1955ರ ಕಲಂ 13ಬಿ ಅನ್ವಯ, ದಂಪತಿ ಅರ್ಜಿ ಸಲ್ಲಿಸುವ ಮುನ್ನ ಒಂದು ವರ್ಷ ಪ್ರತ್ಯೇಕವಾಗಿ ವಾಸವಿರಬೇಕು. ಪರಸ್ಪರ ವಿವಾಹ ಸಂಬಂಧ ಮುರಿದುಕೊಳ್ಳಲು ಒಪ್ಪಿರಬೇಕು ಹಾಗೂ ಅರ್ಜಿ ಸಲ್ಲಿಸಿದ ಆರು ತಿಂಗಳವರೆಗೆ ಅವರು ಆ ಅರ್ಜಿಯನ್ನು ನ್ಯಾಯಾಲಯದ ಮುಂದೆ ಮಂಡಿಸುವಂತಿಲ್ಲ' ಎಂದು ಆದೇಶದಲ್ಲಿ ವಿವರಿಸಲಾಗಿದೆ.

ಪ್ರಕರಣವೇನು?: ಅರ್ಜಿದಾರ ದಂಪತಿ 2020ರ ನವೆಂಬರ್ 27ರಂದು ಮದುವೆಯಾಗಿದ್ದರು. 2021ರ ಸೆಪ್ಟೆಂಬರ್‌ನಿಂದ ಪ್ರತ್ಯೇಕವಾಗಿ ಜೀವನ ನಡೆಸುತ್ತಿದ್ದರು. ವಿವಾಹ ಬಂಧನ ತೊಡೆದುಕೊಳ್ಳಲು ಪರಸ್ಪರ ಒಪ್ಪಿಗೆ ಮೇರೆಗೆ ವಿವಾಹ ವಿಚ್ಛೇದನ ಪಡೆದುಕೊಳ್ಳುತ್ತಿರುವುದಾಗಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು.

ವಿಚಾರಣಾ ನ್ಯಾಯಾಲಯ, ದಂಪತಿ ಒಂದುಗೂಡುವ ಸಾಧ್ಯತೆಗಳ ಬಗ್ಗೆ ಪರಿಶೀಲನೆ ನಡೆಸುವಂತೆ ಪ್ರಕರಣವನ್ನು ಮಧ್ಯಸ್ಥಿಕೆ ಕೇಂದ್ರಕ್ಕೆ ವರ್ಗಾಯಿಸಿತ್ತು. ಇಬ್ಬರೂ ಮಧ್ಯಸ್ಥಿಕೆಗೆ ಗೈರುಹಾಜರಾಗಿದ್ದರು. ಮಧ್ಯಸ್ಥಿಕೆ ಕೇಂದ್ರ ವರದಿಯನ್ನು ವಿಚಾರಣಾ ನ್ಯಾಯಾಲಯಕ್ಕೆ ಸಲ್ಲಿಸಿತ್ತು. ಈ ವರದಿ ಆಧರಿಸಿ ವಿಚಾರಣಾ ನ್ಯಾಯಾಲಯ, 'ದಂಪತಿಗೆ ಈ ಪ್ರಕರಣ ಮುನ್ನಡೆಸಲು ಆಸಕ್ತಿ ಇಲ್ಲ' ಎಂದು ದಾಖಲಿಸಿ ಅರ್ಜಿ ವಜಾಗೊಳಿಸಿತ್ತು. ಇದನ್ನು ಪ್ರಶ್ನಿಸಿ ಇಬ್ಬರೂ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು.

'ವೃತ್ತರೈಲು ಸಂಪರ್ಕ: ರಾಜ್ಯ ಬೆಂಬಲಿಸಿದರೆ ಅನುಷ್ಠಾನಕ್ಕೆ ಸಿದ್ಧ'

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರು ಸುತ್ತ-ಮುತ್ತಲಿನ ಪ್ರಮುಖ ಪಟ್ಟಣಗಳನ್ನು ಸಂಪರ್ಕಿಸುವ ದೇಶದ ಅತಿದೊಡ್ಡ ವೃತ್ತರೈಲು ಸಂಪರ್ಕ ಜಾಲವನ್ನು (ಸರ್ಕ್ಯುಲರ್ ರೈಲ್ವೆ) ನಿರ್ಮಿಸುವ ಯೋಜನೆ ಇದೆ. ಈ ಯೋಜನೆಯು ಕರ್ನಾಟಕ ಸರ್ಕಾರದ ಬೆಂಬಲವನ್ನು ಅವಲಂಬಿಸಿರುತ್ತದೆ ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದರು.

ಲೋಕಸಭೆಯಲ್ಲಿ ಸದಸ್ಯರಾದ ಸುಮಲತಾ ಅಂಬರೀಷ್ ಹಾಗೂ ಡಿ.ಕೆ. ಸುರೇಶ್ ಪ್ರಶ್ನೆಗಳಿಗೆ ಬುಧವಾರ ಉತ್ತರಿಸಿದ ಸಚಿವರು, 'ನಿಡವಂದ–ದೊಡ್ಡಬಳ್ಳಾಪುರ–ದೇವನಹಳ್ಳಿ–ಮಾಲೂರು–ಹೀಲಲಿಗೆ–ಸೋಲೂರು–ನಿಡವಂದ ನಿಲ್ದಾಣಗಳನ್ನು ಸಂಪರ್ಕಿಸುವ ವೃತ್ತರೈಲು ಸಂಪರ್ಕ ಜಾಲ 287 ಕಿ.ಮೀ. ಇರಲಿದೆ. ಡಿಪಿಆರ್ ಸಿದ್ಧಪಡಿಸಲು ₹7.19 ಕೋಟಿ ಬಿಡುಗಡೆ ಮಾಡಲಾಗಿದೆ' ಎಂದರು.



ಸ್ಪರ್ಧಾ ವಿಜೇತರು

ಪೊಲೀಸ್ ಸಂಸ್ಮರಣಾ ದಿನದ ಅಂಗವಾಗಿ ಬೆಂಗಳೂರು ಸಂಚಾರ ಪೊಲೀಸ್ ವಿಭಾಗ ಆಯೋಜಿಸಿದ್ದ ಪ್ರಬಂಧ ಹಾಗೂ ಚಿತ್ರಕಲೆ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣಾ ಸಮಾರಂಭದಲ್ಲಿ ಭಾರತ ರಾಷ್ಟ್ರೀಯ ಹಾಕಿ ತಂಡದ ಗೋಲ್‌ಕೀಪರ್ ಶ್ರೀಜೇಶ್ ಹಾಗೂ ಸಂಚಾರ ವಿಭಾಗದ ಜಂಟಿ ಪೊಲೀಸ್ ಆಯುಕ್ತ ಎಂ.ಎನ್.ಅನುಚೇತ್ ಪಾಲ್ಗೊಂಡಿದ್ದರು

ಬಿಜೆಪಿ ಟಿಕೆಟ್ ಕೊಡಿಸುವ ನೆಪದಲ್ಲಿ ಉದ್ಯಮಿಗೆ ವಂಚನೆ

ಜೈಲಿನಿಂದ ಚೈತ್ರಾ ಕುಂದಾಪುರ ಬಿಡುಗಡೆ

ಪ್ರಜಾವಾಣಿ ವಾರ್ತೆ



ಚೈತ್ರಾ

ಬೆಂಗಳೂರು: ಹೋಟೆಲ್ ಉದ್ಯಮಿ ಗೋವಿಂದ ಬಾಬು ಪೂಜಾರಿ ಅಂಬುವರಿಗೆ ಉಡುಪಿ ಜಿಲ್ಲೆಯ ಬೈಂದೂರು ಕ್ಷೇತ್ರದಿಂದ ಬಿಜೆಪಿ ಟಿಕೆಟ್ ಕೊಡಿಸುವುದಾಗಿ ನಂಬಿಸಿ, ಹಣ ಪಡೆದು ವಂಚಿಸಿದ್ದ ಆರೋಪದ ಅಡಿ ಬಂಧನಕ್ಕೆ ಒಳಗಾಗಿದ್ದ ಹಿಂದುತ್ವಪರ ಸಂಘಟನೆಯ ಕಾರ್ಯಕರ್ತೆ ಚೈತ್ರಾ ಪರಪ್ಪನ ಅಗ್ರಹಾರ ಜೈಲಿನಿಂದ ಬುಧವಾರ ಬಿಡುಗಡೆಯಾದರು.

ಈ ಪ್ರಕರಣದಲ್ಲಿ ಚೈತ್ರಾ ಹಾಗೂ ಶ್ರೀಕಾಂತ್‌ಗೆ ನ್ಯಾಯಾಲಯವು ಜಾಮೀನು ನೀಡಿತ್ತು. ಚೈತ್ರಾ ಪರ ವಕೀಲರು ಕಾರಾಗೃಹದ ಅಧಿಕಾರಿಗಳಿಗೆ ನ್ಯಾಯಾಲಯದ ಆದೇಶ ನೀಡಿದರು. ಬಳಿಕ ಕಾರಾಗೃಹದ ಸಿಬ್ಬಂದಿ ಕಾನೂನು ಪ್ರಕ್ರಿಯೆ ಪೂರ್ಣಗೊಳಿಸಿ, ಬುಧವಾರ ರಾತ್ರಿ ಬಿಡುಗಡೆ ಮಾಡಿದರು. 'ಚೈತ್ರಾ ಸೇರಿದಂತೆ ಹಲವರು ಹಣ ಸುಲಿಗೆ ಮಾಡಿದ್ದಾರೆ' ಎಂದು ಆರೋಪಿಸಿ, ಗೋವಿಂದ ಬಾಬು ಪೂಜಾರಿ ಬಂಡೆಪಾಳ್ಯ ಠಾಣೆಗೆ ದೂರು ನೀಡಿದ್ದರು. ಸಿಸಿಬಿ ಪೊಲೀಸರು ಕಾರ್ಯಾಚರಣೆ ನಡೆಸಿ ಸೆ. 12ರಂದು ಚೈತ್ರಾ ಸೇರಿದಂತೆ 8 ಮಂದಿಯನ್ನು ಬಂಧಿಸಿದ್ದರು. ಪೊಲೀಸ್ ಆಯುಕ್ತರ ಸೂಚನೆ ಮೇರೆಗೆ ಪ್ರಕರಣವನ್ನು ಸಿಸಿಬಿ ವರ್ಗಾವಣೆ ಮಾಡಲಾಗಿತ್ತು.

ಅಪರಾಧ ಸುದ್ದಿ

ಕಾರ್ಮಿಕನ ಕೊಲೆ

ಬೆಂಗಳೂರು: ಸಾಲದ ಮರುಪಾವತಿ ವಿಚಾರಕ್ಕೆ ಸ್ನೇಹಿತರ ನಡುವೆ ನಡೆದ ಗಲಾಟೆಯಲ್ಲಿ ಕಾರ್ಮಿಕ-ರೊಬ್ಬರನ್ನು ಕೊಲೆ ಮಾಡಲಾಗಿದೆ. ಸಿಂಗಸಂದ್ರದ ನಿವಾಸಿ ಗೋಪಾಲ (35) ಕೊಲೆಯಾದ ಕಾರ್ಮಿಕ.

ಪರಪ್ಪನ ಅಗ್ರಹಾರ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಿದ್ದಾರೆ.

'ಎಲೆಕ್ಟ್ರೀಷಿಯನ್ ಗಿರೀಶ್ ಎಂಬಾತ ಕೊಲೆ ಮಾಡಿರುವ ಶಂಕೆ ವ್ಯಕ್ತವಾಗಿದ್ದು, ಆತನಿಗೆ ಶೋಧ ನಡೆಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

'ಕೆಲವು ತಿಂಗಳ ಹಿಂದೆ ಗೋಪಾಲನ ಸ್ನೇಹಿತ ಕರೀಗೌಡ ಎಂಬಾತನಿಂದ ಗಿರೀಶ್ ಒಂದೂವರೆ ಸಾವಿರ ರೂಪಾಯಿ ಸಾಲ ಪಡೆದುಕೊಂಡಿದ್ದ. ಆದರೆ, ನಿಗದಿತ ಸಮಯಕ್ಕೆ ಸಾಲ ವಾಪಸ್ ನೀಡಿರಲಿಲ್ಲ. ಈ ವಿಚಾರವನ್ನು ಗೋಪಾಲನ ಬಳಿ ಕರೀಗೌಡ ಹೇಳಿಕೊಂಡಿದ್ದ. ಗೋಪಾಲ, ಗಿರೀಶ್‌ಗೆ ಕರೆ ಮಾಡಿ ಕರೀಗೌಡನ ಹಣ ವಾಪಸ್ ಕೊಡುವಂತೆ ಕೇಳಿಕೊಂಡಿದ್ದ. ಆಗ ಗಿರೀಶ್ ಹಣ ಕೊಡುವುದಾಗಿ ಹೇಳಿದ್ದ. ನಂತರ ಹಣ ವಾಪಸ್ ನೀಡುವುದಿಲ್ಲ ಎಂದು ಬೆದರಿಕೆ ಒಡ್ಡಿದ್ದ' ಎಂದು ಪೊಲೀಸರು ಹೇಳಿದರು.

'ಕೆಲವು ದಿನಗಳ ನಂತರ ಬಾರ್‌ವೊಂದಕ್ಕೆ ಗೋಪಾಲ್ ಹಾಗೂ ಗಿರೀಶ್ ಮದ್ಯ ಸೇವಿಸಲು ಪ್ರತ್ಯೇಕವಾಗಿ ಬಂದಿದ್ದರು. ಅವರೊಂದಿಗೆ ಸ್ನೇಹಿತರೂ ಬಂದಿದ್ದರು. ಅಲ್ಲೂ ಸಾಲ ಮರುಪಾವತಿ ವಿಚಾರಕ್ಕೆ ಗಲಾಟೆ ನಡೆದಿದೆ. ಬಾರ್‌ನಿಂದ ಹೊರ ತೆರಳಿದ ಮೇಲೂ ನಡೆದ ಗಲಾಟೆಯಲ್ಲಿ ಗೋಪಾಲ್ ಮೇಲೆ ಹಲ್ಲೆ ನಡೆಸಿ ಕೊಲೆ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

ಪ್ರತ್ಯೇಕ ಅಪಘಾತ: ರಿಯಲ್ ಎಸ್ಟೇಟ್ ಏಜೆಂಟ್, ಟೆಕಿ ಸಾವು

ಬೆಂಗಳೂರು: ನಗರದಲ್ಲಿ ನಡೆದ ಎರಡು ಪ್ರತ್ಯೇಕ ಅಪಘಾತದಲ್ಲಿ ರಿಯಲ್ ಎಸ್ಟೇಟ್ ಏಜೆಂಟ್ ಹಾಗೂ ಟೆಕಿ ಮೃತಪಟ್ಟಿದ್ದಾರೆ.

ಚಿಕ್ಕಜಾಲ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ರಸ್ತೆ ದಾಟುತ್ತಿದ್ದಾಗ ವೇಗವಾಗಿ ಬಂದ ಬೈಕ್‌ವೊಂದು ರಿಯಲ್ ಎಸ್ಟೇಟ್ ಏಜೆಂಟ್ ಆಸಿಫ್ (55) ಅವರಿಗೆ ಡಿಕ್ಕಿಯಾಗಿ ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

'ಮಂಗಳವಾರ ರಾತ್ರಿ 8.30ರ ಸುಮಾರಿಗೆ ಬೆಂಗಳೂರು–ಬಳ್ಳಾರಿ ರಸ್ತೆಯ ಕಾಡೇನಹಳ್ಳಿ ಗೇಟ್ ಬಳಿ ಆಸೀಫ್ ಅವರು ರಸ್ತೆ ದಾಟುತ್ತಿದ್ದರು. ಅದೇ ಸಮಯದಲ್ಲಿ ವೇಗವಾಗಿ ಬಂದ ಬೈಕ್ ಡಿಕ್ಕಿ ಹೊಡೆದಿದೆ. ತಲೆಗೆ ಗಂಭೀರವಾಗಿ ಗಾಯಗೊಂಡಿದ್ದ ಅವರು ಮೃತಪಟ್ಟಿದ್ದಾರೆ' ಎಂದು ಪೊಲೀಸರು ತಿಳಿಸಿದರು.

ಕೆ.ಜಿ ಹಳ್ಳಿ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪಂಕ್ಚರ್ ಆಗಿ ನಿಂತಿದ್ದ ಕ್ಯಾಂಟರ್ ವಾಹನಕ್ಕೆ ಹಿಂಬದಿಯಿಂದ ಸೈಕಲ್‌ನಲ್ಲಿ ಬಂದ ಟೆಕಿಯೊಬ್ಬರು ವಾಹನಕ್ಕೆ ಡಿಕ್ಕಿ ಹೊಡೆದು ಮೃತಪಟ್ಟಿದ್ದಾರೆ.

ಎಚ್‌ಬಿಆರ್ ಲೇಔಟ್‌ನ ರಾಮಕೃಷ್ಣನ್ (51) ಮೃತಪಟ್ಟವರು.

ಕೆಟ್ಟುಹೋಗಿದ್ದ ಕ್ಯಾಂಟರ್ ಅನ್ನು ಹೆಣ್ಣೂರು – ನಾಗವಾರ ರಸ್ತೆಬದಿಯಲ್ಲಿ ನಿಲುಗಡೆ ಮಾಡಲಾಗಿತ್ತು. ಚಾಲಕ ವಾಹನದಲ್ಲಿದ್ದ ಯಾವುದೇ ಸಿಗ್ನಲ್ ಲೈಟ್ ಹಾಕಿರಲಿಲ್ಲ. ಅದೇ ಮಾರ್ಗದಲ್ಲಿ ತಮ್ಮ ಸ್ಪೋರ್ಟ್ಸ್ ಸೈಕಲ್‌ನಲ್ಲಿ ತೆರಳುತ್ತಿದ್ದ ರಾಮಕೃಷ್ಣನ್ ನಿಂತಿದ್ದ ವಾಹನಕ್ಕೆ ಡಿಕ್ಕಿಯಾಗಿದ್ದರಿಂದ ಗಂಭೀರವಾಗಿ ಗಾಯಗೊಂಡಿದ್ದರು. ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗದಲ್ಲಿ ಅವರು ಮೃತಪಟ್ಟಿದ್ದಾರೆ.

ಆಟೊ ಚಾಲಕನ ಕೊಲೆ: ದೂರು ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ಯಾಟರಾಯನಪುರ ಪೊಲೀಸ್ ಠಾಣಾ ವ್ಯಾಪ್ತಿಯ ಟಿಂಬರ್ ಲೇಔಟ್‌ನಲ್ಲಿ ಮಂಗಳವಾರ ತಡರಾತ್ರಿ ಆಟೊ ಚಾಲಕನನ್ನು ದುಷ್ಕರ್ಮಿಗಳು ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಿ ಪರಾರಿಯಾಗಿದ್ದಾರೆ.

ಅರುಣ್ (24) ಕೊಲೆಯಾದ ಆಟೊ ಚಾಲಕ.

'ಕೆಲಸ ಮುಗಿಸಿಕೊಂಡು ಬಂದಿದ್ದ ಅರುಣ್ ತಮ್ಮ ಬಡಾವಣೆಯ ಸ್ನೇಹಿತರ ಜತೆಗೆ ಮಾತನಾಡುತ್ತಿದ್ದ ನಿಂತಿದ್ದರು. ಅದೇ ವೇಳೆಗೆ ಬೈಕ್‌ನಲ್ಲಿ ಬಂದ 10ಕ್ಕೂ ಹೆಚ್ಚು ದುಷ್ಕರ್ಮಿಗಳು, ಮಾರಕಾಸ್ತ್ರ-ಗಳಿಂದ ಕೊಚ್ಚಿ ಕೊಲೆ ಮಾಡಿ ಪರಾರಿ ಆಗಿದ್ದಾರೆ' ಎಂದು ಪೊಲೀಸರು ಹೇಳಿದರು.

'ಅರುಣ್ ವಿರುದ್ಧ ಬ್ಯಾಟರಾಯನ-ಪುರ ಪೊಲೀಸ್ ಠಾಣೆಯಲ್ಲಿ ಈ ಹಿಂದೆ ಕೊಲೆ ಯತ್ನ ಪ್ರಕರಣ ದಾಖಲಾಗಿತ್ತು. ಹಳೇ ದ್ವೇಷದಿಂದ ಕೃತ್ಯ ನಡೆದಿರುವ ಶಂಕೆ ವ್ಯಕ್ತವಾಗಿದೆ. ಕೃತ್ಯ ನಡೆದ ಸ್ಥಳದ ಅಕ್ಕಪಕ್ಕದ ಮಳಿಗೆಯಲ್ಲಿ ಅಳವಡಿಸಿದ್ದ ಸಿಸಿ ಟಿ.ವಿ ಕ್ಯಾಮೆರಾಗಳಲ್ಲಿನ ದೃಶ್ಯಾವಳಿ ಪರಿಶೀಲನೆ ನಡೆಸಲಾಗಿದೆ' ಎಂದು ಪೊಲೀಸರು ಹೇಳಿದರು.

ಹೆಸರಿಗಷ್ಟೇ ಇದೆ ಚಿಕಿತ್ಸಾ ಕೊಠಡಿ: ತುರ್ತುಸೇವೆ ಅಲಭ್ಯ

ಟೋಲ್ ಪ್ಲಾಜಾ: ಸೌಲಭ್ಯ ಮರೀಚಿಕೆ

• ಆರ್.ಜಿತೇಂದ್ರ

ಮಂಡ್ಯ: ದಿನವೊಂದಕ್ಕೆ ಕೋಟಿ ಲೆಕ್ಕದಲ್ಲಿ ಟೋಲ್ ಶುಲ್ಕ ಸಂಗ್ರಹ ಮಾಡುತ್ತಿರುವ ಬೆಂಗಳೂರು–ಮೈಸೂರು ಹೆದ್ದಾರಿಯ ಟೋಲ್ ಪ್ಲಾಜಾಗಳಲ್ಲಿ ಪ್ರಯಾಣಿಕರಿಗೆ ಬೇಕಾದ ಮೂಲ ಸೌಕರ್ಯ ಕಲ್ಪಿಸಿಲ್ಲ.

ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿನ ಗಣಂಗೂರು, ರಾಮನಗರ ಜಿಲ್ಲೆಯ ಶೇಷಗಿರಿಹಳ್ಳಿ ಹಾಗೂ ಬೆಂಗಳೂರು ದಕ್ಷಿಣ ತಾಲ್ಲೂಕಿನ ಕಣಮಣಕಿ ಬಳಿಯ ಟೋಲ್ ಪ್ಲಾಜಾಗಳಲ್ಲಿ ಈ ಹೆದ್ದಾರಿಯ ಪ್ರಯಾಣಿಕರಿಂದ ಟೋಲ್ ಸಂಗ್ರಹಿಸಲಾಗುತ್ತಿದೆ. ಶೇಷಗಿರಿಹಳ್ಳಿ ಹಾಗೂ ಕಣಮಿಣಕಿ ಕೇಂದ್ರಗಳಲ್ಲಿ 2022ರ ಮಾರ್ಚ್ 14ರಿಂದ ಟೋಲ್ ಸಂಗ್ರಹ ಆರಂಭಗೊಂಡಿದ್ದು, ಗಣಂಗೂರಿನಲ್ಲಿ 2023ರ ಜುಲೈ 1ರಿಂದ ಟೋಲ್ ಕೇಂದ್ರವು ಕಾರ್ಯ ನಿರ್ವಹಿಸುತ್ತಿದೆ. ಈ ಕೇಂದ್ರಗಳಿಂದ ದಿನವೊಂದಕ್ಕೆ ಸರಾಸರಿ ₹2 ಕೋಟಿ ಶುಲ್ಕ ಸಂಗ್ರಹ ಆಗುತ್ತಿರುವು-ದಾಗಿ ಅಲ್ಲಿನ ಸಿಬ್ಬಂದಿ ಹೇಳುತ್ತಾರೆ.

ಗಣಂಗೂರು ಟೋಲ್ ಪ್ಲಾಜಾಗೆ 'ಪ್ರಜಾವಾಣಿ' ಬುಧವಾರ ಭೇಟಿ ನೀಡಿದ ಸಂದರ್ಭ ಅಲ್ಲಿನ ಅವ್ಯವಸ್ಥೆಗಳ ದರ್ಶನವಾಯಿತು. ಹೊರಗೆ ಶೌಚಾಲಯಗಳು ಇವೆ ಎಂದು ದೊಡ್ಡ ಬೋರ್ಡ್ ತಗುಲಿ ಹಾಕಿದ್ದರೂ ಪ್ರಯಾಣಿಕರಿಗೆ ಬೇಕಿರುವಷ್ಟು ಶೌಚಾಲಯಗಳನ್ನು ನಿರ್ಮಿಸಿಲ್ಲ. ಸದ್ಯ ಹಳೇ ಕಟ್ಟಡದ ಹಿಂಭಾಗದಲ್ಲಿ ಇರುವ ಶೌಚಾಲಯವನ್ನು ಬಳಕೆ ಮಾಡಲಾಗುತ್ತಿದೆ. ಏಕಕಾಲಕ್ಕೆ ಒಬ್ಬರು ಮಾತ್ರ ಇದನ್ನು ಬಳಸಬಹುದಾಗಿದೆ. ಅಲ್ಲಿನ ಕಾರ್ಮಿಕರೇ ಬಳಸಿಕೊಳ್ಳುತ್ತಿ-ದ್ದಾರೆ. ಪ್ರಯಾಣಿಕರಿಗೆಂದು ಪ್ರತ್ಯೇಕ ಶೌಚಾಲಯ ಕಟ್ಟಿಲ್ಲ. ಸ್ವಚ್ಛತೆಯೂ ಅಷ್ಟಕ್ಕಷ್ಟೇ ಎಂಬಂತೆ ಇದೆ.

ಟೋಲ್ ಪ್ಲಾಜಾದಲ್ಲಿ ಹೆಸರಿಗಷ್ಟೇ ಚಿಕಿತ್ಸಾ ಕೊಠಡಿ ಹಾಗೂ ಒಂದು ಹಾಸಿಗೆ ಇದೆ. ಆದರೆ ವೈದ್ಯರು ಲಭ್ಯವಿಲ್ಲ. ಒಬ್ಬರು ನರ್ಸ್ ಇರುವುದಾಗಿ ಟೋಲ್ ಕೇಂದ್ರದ ಸಿಬ್ಬಂದಿ ಹೇಳುತ್ತಾರೆ. ಆದರೆ ಬುಧವಾರ ಅವರೂ ಕೇಂದ್ರದಲ್ಲಿ ಇರಲಿಲ್ಲ. ತುರ್ತು ಚಿಕಿತ್ಸೆಗೆ ಬೇಕಾದ ಔಷಧಗಳೂ ಅಲ್ಲಿಲ್ಲ. ಒಂದು ಆಂಬುಲೆನ್ಸ್ ಮಾತ್ರ ಇದೆ.

ಪ್ರಯಾಣಿಕರಿಗೆ ಅವಶ್ಯವಾದ ಕುಡಿಯುವ ನೀರು ಸೇರಿದಂತೆ ಇನ್ನಿತರ ಸೌಲಭ್ಯಗಳು ಈ ಕೇಂದ್ರದಲ್ಲಿ ಇಲ್ಲ.



ಗಣಂಗೂರು ಟೋಲ್‌ನಲ್ಲಿ ಹೆಸರಿಗಷ್ಟೇ ಇರುವ ರೋಗಿಗಳ ಆರೈಕೆ ಕೇಂದ್ರ

ವಿಶ್ರಾಂತಿ ಬಯಸುವವರಿಗೆ ನೆರಳು ಸಿಗುವುದಿಲ್ಲ. ವಾಹನಗಳ ಟೋಯಿಂಗ್ ಸೇರಿದಂತೆ ಯಾವೊಂದು ವ್ಯವಸ್ಥೆಗಳನ್ನೂ ಹೆದ್ದಾರಿ ಪ್ರಾಧಿಕಾರ ಕಲ್ಪಿಸಿಲ್ಲ. ಸರ್ವೀಸ್ ರಸ್ತೆ ಅಕ್ಕಪಕ್ಕ ಹೋಟೆಲ್‌ಗಳು ಸಿಗುತ್ತವಾದರೂ ಆರು ಪಥಗಳ ಎಕ್ಸ್‌ಪ್ರೆಸ್‌ವೇನಲ್ಲಿ ಪ್ರಯಾಣಿಸುವವರಿಗೆ ಆ ಸೌಲಭ್ಯವೂ ಇಲ್ಲ.

ಹೆದ್ದಾರಿ ಟೋಲ್ ಶುಲ್ಕ ಈಗಾಗಲೇ ಒಮ್ಮೆ ಹೆಚ್ಚಳವಾಗಿದೆ. ಆದರೆ, ಪ್ರಯಾಣಿಕರಿಗೆ ಬೇಕಾದ ಸೌಲಭ್ಯ-ಗಳನ್ನು ಕಲ್ಪಿಸಲು ಮಾತ್ರ ಹೆದ್ದಾರಿ ಪ್ರಾಧಿಕಾರ ಆಸಕ್ತಿ ತೋರುತ್ತಿಲ್ಲ ಎನ್ನುವುದು ಈ ಮಾರ್ಗದಲ್ಲಿ ಪ್ರಯಾಣಿಸುವವರ ದೂರು.

'ಮೈಸೂರಿನಿಂದ ಬೆಂಗಳೂರಿಗೆ ಹೋಗಿ ಬರಬೇಕಾದರೆ ಒಂದು ಕಾರಿಗೆ ₹550–600 ಟೋಲ್ ಕಟ್ಟಬೇಕು. ಬೇರೆ ಯಾವ ಟೋಲ್‌ಗಳಲ್ಲಿಯೂ ಇಷ್ಟು ದುಬಾರಿ ಶುಲ್ಕ ಇಲ್ಲ. ಆದರೆ, ಅದಕ್ಕೆ ತಕ್ಕಂತೆ ಪ್ರಯಾಣಿಕರಿಗೆ ಸೇವೆಗಳು ಸಿಗುತ್ತಿಲ್ಲ. ರಸ್ತೆ ಉತ್ತಮವಾಗಿದೆ ಎನ್ನುವುದನ್ನು ಬಿಟ್ಟರೆ ಇನ್ನುಳಿದ ಸೌಕರ್ಯಗಳು ಇಲ್ಲ' ಎನ್ನುತ್ತಾರೆ ಮೈಸೂರಿನ ಪ್ರಯಾಣಿಕರಾದ ಶಂಕರ್.

ಈ ಕುರಿತು ಪ್ರತಿಕ್ರಿಯೆಗೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ದೂರವಾಣಿ ಸಂಪರ್ಕಕ್ಕೆ ಲಭ್ಯವಾಗಲಿಲ್ಲ.

ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪಗೆ ಪ್ರೌಢಶಾಲಾ ಮಕ್ಕಳ ಬೇಡಿಕೆ

‘ಸಮವಸ್ತ್ರದ ಬಣ್ಣ ಬದಲಿಸಿ’

ಪ್ರಜಾವಾಣಿ ವಾರ್ತೆ

ಬೆಳಗಾವಿ: ಸಮವಸ್ತ್ರದ ಬಣ್ಣವನ್ನು ಮುಂದಿನ ಶೈಕ್ಷಣಿಕ ವರ್ಷದಿಂದ ಬದಲಿಸುವಂತೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಅವರನ್ನು ವಿದ್ಯಾರ್ಥಿಗಳು ವಿನಂತಿಸಿದರು.

ಕಿತ್ತೂರು ತಾಲ್ಲೂಕು ಹೂಲಿಕಟ್ಟಿಯ ಕೆ.ಪಿ.ಮೊಖಾಶಿ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿಗಳು ಬುಧವಾರ ಸಚಿವರನ್ನು ಭೇಟಿ ಮಾಡಿ, ಚರ್ಚೆ ನಡೆಸಿದರು.

ಸರ್ಕಾರ ಎರಡು ಜತೆ ಸಮವಸ್ತ್ರಗಳನ್ನು ಪೂರೈಸುತ್ತಿದೆ. ಇದರಿಂದ ಸಾಕಷ್ಟು ಅನುಕೂಲವಾಗಿದೆ. ಮುಂದಿನ ವರ್ಷದಿಂದ ಸಮವಸ್ತ್ರದ ಬಣ್ಣವನ್ನು ಬದಲಾಯಿಸಿ, ವಿತರಿಸಬೇಕು ಎಂದು ವಿನಂತಿಸಿದರು.

ಹಿಂದೆ 8ನೇ ತರಗತಿ ವರೆಗೆ ಮಾತ್ರ ಮೊಟ್ಟೆ ಕೊಡುತ್ತಿದ್ದರು. ಪ್ರಸ್ತುತ ವರ್ಷ 10ನೇ ತರಗತಿವರೆಗೆ ಮುಂದುವರಿಸಿದ್ದು, ವಾರದಲ್ಲಿ ಎರಡು ದಿನ ನೀಡಲಾಗುತ್ತಿದೆ. ಅಲ್ಲದೇ, ಎಸ್‌ಎಸ್‌ಎಲ್‌ಸಿಗೆ ಮೂರು ಹಂತದ ಪರೀಕ್ಷೆಯಿಂದ ಸಾಕಷ್ಟು ಅನುಕೂಲವಾಗಿದೆ ಎಂದರು.

ಶಾಲಾ ಕಾಂಪೌಂಡ್ ದುರಸ್ತಿ, ಸಮವಸ್ತ್ರದ ಬಣ್ಣ ಬದಲಾವಣೆ ಸೇರಿದಂತೆ ಮಕ್ಕಳ ಬೇಡಿಕೆಗಳನ್ನು ಪರಿಶೀಲಿಸುವುದಾಗಿ ಭರವಸೆ ನೀಡಿದ ಮಧು ಬಂಗಾರಪ್ಪ, ಮುಂದಿನ ವಾರ ಕೆ.ಪಿ. ಮೊಖಾಶಿ ಶಾಲೆಗೆ ಭೇಟಿ ನೀಡಿ ಶಾಲಾ ಮಕ್ಕಳೊಂದಿಗೆ ಮಧ್ಯಾಹ್ನದ ಬಿಸಿಯೂಟ ಸೇವಿಸುವುದಾಗಿ ಭರವಸೆ ನೀಡಿದರು.



ಸುವರ್ಣ ವಿಧಾನಸೌಧದಲ್ಲಿ ಬುಧವಾರ ಕಿತ್ತೂರು ತಾಲ್ಲೂಕು ಹೂಲಿಕಟ್ಟಿಯ ಕೆ.ಪಿ.ಮೊಖಾಶಿ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿಗಳು ಸಚಿವ ಮಧು ಬಂಗಾರಪ್ಪ ಅವರ ಜತೆ ಚರ್ಚೆ ನಡೆಸಿದರು. ಮೀನುಗಾರಿಕಾ ಸಚಿವ ಮಂಕಾಳ ವೈದ್ಯ ಉಪಸ್ಥಿತರಿದ್ದರು

‘ಜೀ..ಜೀ... ಹುಜೂರ್ ಹೇಳಬೇಕಷ್ಟೆ’

ಶೂದ್ರರು ಮತ್ತು ದಲಿತರಿಗೆ ಆರೆಸ್ಸೆಸ್ ಗರ್ಭಗುಡಿಗೆ ಪ್ರವೇಶವಿಲ್ಲ: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಶೂದ್ರರು ಮತ್ತು ದಲಿತರಿಗೆ ಆರ್‌ಎಸ್‌ಎಸ್ ಗರ್ಭಗುಡಿಗೆ ಪ್ರವೇಶ ಇಲ್ಲ, ಅವರೇನಿದ್ದರೂ ಹೊರಬಾಗಿಲಲ್ಲಿ ನಿಂತು ‘ಜೀ..ಜೀ... ಹುಜೂರ್’ ಎಂದಷ್ಟೇ ಹೇಳಬೇಕು. ಇದಕ್ಕೆ ಬಿಜೆಪಿ ಮಾಜಿ ಶಾಸಕ ಗೂಳಿಹಟ್ಟಿ ಶೇಖರ್ ಅವರು ಬಿ.ಎಲ್. ಸಂತೋಷ್ ಅವರಿಗೆ ಕಳುಹಿಸಿರುವ ವಾಟ್ಸ್‌ಆ್ಯಪ್ ವಾಯ್ಸ್ ರೆಕಾರ್ಡ್ ಸಾಕ್ಷಿ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

‘ಎಕ್ಸ್’ ಮಾಡಿರುವ ಅವರು, ‘ಬಿಜೆಪಿ ಮತ್ತು ಆರ್‌ಎಸ್‌ಎಸ್ ಪರಿವಾರ ಬಹಿರಂಗವಾಗಿ ಮುಸ್ಲಿಮರ ವಿರುದ್ಧ ಮಾತ್ರ ಹರಿಹಾಯುತ್ತಿದೆ. ಅಂತರಂಗದಲ್ಲಿ ಅದು ಶೂದ್ರರು ಮತ್ತು ದಲಿತರ ವಿರುದ್ಧವಾಗಿದೆ. ಬಾಯಿಯಲ್ಲಿ ‘ಹಿಂದೂ ನಾವೆಲ್ಲರೂ ಒಂದು’ ಎನ್ನುವ ಮಂತ್ರ ಪಠಿಸುವ ಸಂಘ ಪರಿವಾರದ ನಾಯಕರು ಶೂದ್ರರು ಮತ್ತು ದಲಿತರನ್ನು ಬಡಿಯಲು ಕಲ್ಲುಗಳನ್ನು ಬದಿಯಲ್ಲಿ ಇಟ್ಟುಕೊಂಡಿರುತ್ತಾರೆ’ ಎಂದಿದ್ದಾರೆ.

‘ಗೂಳಿಹಟ್ಟಿ ಶೇಖರ್ ಅವರಂಥ ದಲಿತ ನಾಯಕರಿಗೆ ಅಂಬೇಡ್ಕರ್ ಚಿಂತನೆ ಮತ್ತು ಸಂವಿಧಾನ ಮಾತ್ರ ರಕ್ಷಣೆ ನೀಡಬಹುದೇ ಹೊರತು ಸಂಘ ಪರಿವಾರದ ಸಾವರ್ಕರ್, ಗೋಳ್ವಾಲ್ಕರ್ ಚಿಂತನೆಗಳಲ್ಲ. ಶೇಖರ್ ಅನುಭವದಿಂದ ಪಾಠ ಕಲಿಯಲಿ’ ಎಂದಿದ್ದಾರೆ.

‘ಆರೆಸ್ಸೆಸ್ ಕಚೇರಿಗೆ ಮುಕ್ತ ಪ್ರವೇಶ’

ಆರ್‌ಎಸ್‌ಎಸ್ ಕಚೇರಿ ಹಾಗೂ ಸ್ಮಾರಕ ಕಟ್ಟಡಗಳಲ್ಲಿ ಎಲ್ಲರಿಗೂ ಮುಕ್ತ ಪ್ರವೇಶವಿದೆ. ಮಾಜಿ ಶಾಸಕ ಗೂಳಿಹಟ್ಟಿ ಶೇಖರ್ ಅವರು ಆಡಿಯೊ ಹೇಳಿಕೆಯಲ್ಲಿ ಮಾಡಿರುವ ಆರೋಪದಲ್ಲಿ ಹುರುಳಿಲ್ಲ ಎಂದು ಆರೆಸ್ಸೆಸ್ ದಕ್ಷಿಣ ಮಧ್ಯ ಕ್ಷೇತ್ರೀಯ ಕಾರ್ಯವಾಹ ನಾ. ತಿಪ್ಪೇಸ್ವಾಮಿ ತಿಳಿಸಿದ್ದಾರೆ.

ನಾಗಪುರದ ಆರ್‌ಎಸ್‌ಎಸ್ ಕಚೇರಿ ಭೇಟಿ ವೇಳೆ ಆದ ಕಹಿ ಅನುಭವಕ್ಕೆ ಸಂಬಂಧಿಸಿದಂತೆ ಹೇಳಿಕೆಯನ್ನು ಆಡಿಯೊ ರೂಪದಲ್ಲಿ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದ ಗೂಳಿಹಟ್ಟಿ ಶೇಖರ್, ‘ಜಾತಿ ಕಾರಣಕ್ಕೆ ಹೆಡಗೇವಾರ್ ವಸ್ತುಸಂಗ್ರಹಾಲಯದ ಪ್ರವೇಶ ನಿರಾಕರಿಸಲಾಗಿದೆ’ ಎಂದು ಆರೋಪಿಸಿದ್ದರು. ಈ ಬಗ್ಗೆ ಆರೆಸ್ಸೆಸ್ ಸ್ಪಷ್ಟನೆ ನೀಡಿದೆ.

‘ನಾಗಪುರದಲ್ಲಿ ಸಂಘದ ಕಾರ್ಯಾಲಯವನ್ನು ನೋಡಲು ಬಂದವರ ಹೆಸರನ್ನು ನೋಂದಾಯಿಸಿ, ಪ್ರವೇಶ ನೀಡುವ ವ್ಯವಸ್ಥೆಯೇ ಇಲ್ಲ. ಇದೊಂದು ನಿರಾಧಾರ ಹಾಗೂ ಹುರುಳಿಲ್ಲದ ಆರೋಪ ಎಂದು ಅವರು ಹೇಳಿದ್ದಾರೆ.



ಅರಣ್ಯ ಪಾಲಕರಾಗಬೇಕೆ?

ಮಂಜುನಾಥ್ ಭದ್ರಶೆಟ್ಟಿ

ಕರ್ನಾಟಕ ಅರಣ್ಯ ಇಲಾಖೆಯಲ್ಲಿ 540 ಅರಣ್ಯ ರಕ್ಷಕ ಹುದ್ದೆಗಳು: ಇಲ್ಲಿದೆ ಸಂಪೂರ್ಣ ವಿವರ

ಅರಣ್ಯ ರಕ್ಷಣೆ ಮಾಡುವ ಕನಸು ಹಾಗೂ ಈ ಸವಾಲಿನ ಕೆಲಸ ಮಾಡುವ ಇಚ್ಛೆ ಇದ್ದರೆ ನಿಮಗೆ ಹೊಸ ಅವಕಾಶ ಒದಗಿ ಬಂದಿದೆ.

ಕರ್ನಾಟಕ ಅರಣ್ಯ ಇಲಾಖೆಯ ವಿವಿಧ ವೃತ್ತಗಳಲ್ಲಿ ಖಾಲಿರುವ 540 'ಗಸ್ತು ಅರಣ್ಯ ಪಾಲಕ' ಅಥವಾ 'ಅರಣ್ಯ ರಕ್ಷಕ' (Forest Guard) ಹುದ್ದೆಗಳಿಗೆ ಅರ್ಹ ಪುರುಷ, ಮಹಿಳಾ ಮತ್ತು ತೃತೀಯ ಲಿಂಗಿ ಅಭ್ಯರ್ಥಿಗಳಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದ್ದು ಇದೇ ಡಿಸೆಂಬರ್ 30 ರಂದು ಅರ್ಜಿ ಸಲ್ಲಿಸಲು ಕೊನೆಯ ದಿನ.

ಈ 540 ಹುದ್ದೆಗಳಲ್ಲಿ 506 ಹುದ್ದೆಗಳು ಹೊಸದಾಗಿ ಸೃಜಿಸಲಾದ ಹುದ್ದೆಗಳು. 34 ಹುದ್ದೆಗಳು ಹಿಂಬಾಕಿ ಹುದ್ದೆಗಳಾಗಿವೆ. ಹಾಗಾದರೆ ಈ ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆ ಹೇಗಿರಲಿದೆ? ಎಂಬುದನ್ನು ಇಲ್ಲಿ ತಿಳಿಯೋಣ.

ಶೈಕ್ಷಣಿಕ ಅರ್ಹತೆ

ಗಸ್ತು ಅರಣ್ಯ ಪಾಲಕ ಹುದ್ದೆಗಳಿಗೆ ಕನಿಷ್ಠ ವಿದ್ಯಾರ್ಹತೆ ಪಿಯುಸಿ ಪಾಸಾಗಿರಬೇಕು ಅಥವಾ ತತ್ಸಮಾನ ಆಗಿದೆ. ಕೆಲ ಸಂದರ್ಭಗಳಲ್ಲಿ ಪಿಯುಸಿಗೆ ಸಮಾನ ಎಂದು ಪರಿಗಣಿಸಲಾದ ಮೂರು ವರ್ಷದ ಡಿಪ್ಲೋಮಾ ಈ ಹುದ್ದೆಗಳಿಗೆ ಶೈಕ್ಷಣಿಕ ಅರ್ಹತೆ ಅಲ್ಲ.

ವಯೋಮಿತಿ

ಸಾಮಾನ್ಯ ಅಭ್ಯರ್ಥಿಗಳಿಗೆ ಕನಿಷ್ಠ ವಯೋಮಿತಿ 18 ವರ್ಷವಿದ್ದು, ಗರಿಷ್ಠ 27 ವರ್ಷವಿದೆ. ಪ್ರವರ್ಗಗಳಾದ 2ಎ, 2ಬಿ, 3ಎ, 3ಬಿಗಳಿಗೆ ಗರಿಷ್ಠ 30 ವರ್ಷ, ಎಸ್‌ಸಿ, ಎಸ್‌ಟಿ, ಪ್ರವರ್ಗ 1ರ ಅಭ್ಯರ್ಥಿಗಳಿಗೆ ಗರಿಷ್ಠ 32 ವಯೋಮಿತಿಯಲ್ಲಿ ಸಡಿಲಿಕೆ ಇದೆ. ಮಾಜಿ ಸೈನಿಕರಿಗೆ ಹಾಗೂ ಅರಣ್ಯ ಇಲಾಖೆಯಲ್ಲಿ ಕನಿಷ್ಠ 5 ವರ್ಷ ಸೇವೆ ಸಲ್ಲಿಸಿರುವ ಅರಣ್ಯ ಪ್ರೇಕ್ಷಕರಿಗೂ ವಯೋಮಿತಿಯಲ್ಲಿ ಸಡಿಲಿಕೆ ಇದೆ.

ಅರ್ಜಿ ಶುಲ್ಕ

ಸಾಮಾನ್ಯ, ಪ್ರವರ್ಗಗಳಾದ 2ಎ, 2ಬಿ, 3ಎ, 3ಬಿ ಅಭ್ಯರ್ಥಿಗಳಿಗೆ ₹ 200. ಇದರಲ್ಲಿನ ಮಹಿಳಾ ಅಭ್ಯರ್ಥಿಗಳಿಗೆ, ತೃತೀಯ ಲಿಂಗಿಗಳಿಗೆ ₹100, ಎಸ್‌ಸಿ, ಎಸ್‌ಟಿ, ಪ್ರವರ್ಗ 1ರ ಅಭ್ಯರ್ಥಿಗಳಿಗೆ ₹100, ಇದರಲ್ಲಿನ ಮಹಿಳಾ ಅಭ್ಯರ್ಥಿಗಳಿಗೆ, ತೃತೀಯ ಲಿಂಗಿಗಳಿಗೆ ₹50. ಎಲ್ಲರಿಗೂ ₹20 ಸೇವಾ ಶುಲ್ಕ ಇರುತ್ತದೆ. ಶುಲ್ಕ ಪಾವತಿಸಲು ಜನವರಿ 5 ಕಡೆಯ ದಿನ. ಅಂಗವಿಕಲ ಅಭ್ಯರ್ಥಿಗಳಿಗೆ ಶುಲ್ಕ ಇರುವುದಿಲ್ಲ.

ವೇತನ ₹47,650

ಪರೀಕ್ಷೆ ಹೇಗಿರಲಿದೆ?

ಗಸ್ತು ಅರಣ್ಯ ಪಾಲಕ ಹುದ್ದೆಗಳಿಗೆ ಯಶಸ್ವಿಯಾಗಿ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳಿಗೆ ಮೊದಲು ದೈಹಿಕ ಸಾಮರ್ಥ್ಯತೆ ಹಾಗೂ ದೈಹಿಕ ಸಹಿಷ್ಣುತೆ ಪರೀಕ್ಷೆ ನಡೆಯಲಿದೆ. ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳಿಗೆ ಪ್ರತ್ಯೇಕ ಮಾನದಂಡಗಳಿದ್ದು ಅವುಗಳಿಗಾಗಿ ಆಸಕ್ತರು ಅಧಿಸೂಚನೆ ನೋಡಿಕೊಳ್ಳಬೇಕು.

ದೈಹಿಕ ಪರೀಕ್ಷೆಯಲ್ಲಿ ಪಾಸಾಗುವ ಅಭ್ಯರ್ಥಿಗಳಿಗೆ ಲಿಖಿತ ಪರೀಕ್ಷೆ ಇರುತ್ತದೆ. ಲಿಖಿತ ಪರೀಕ್ಷೆ ವಸ್ತುನಿಷ್ಠ ಮಾದರಿಯಲ್ಲಿ ಇರುತ್ತದೆ. 2 ಗಂಟೆ ಅವಧಿಯ 100 ಅಂಕಗಳ ಒಂದೇ ಪತ್ರಿಕೆ ಇದಾಗಿರುತ್ತದೆ.

ಇದರಲ್ಲಿ ಎರಡು ಭಾಗ ಇದ್ದು 40 ಅಂಕಗಳಿಗೆ ಗಣಿತ ವಿಷಯ ಆಧರಿಸಿದ 40 ಆಪ್ಟಿಟ್ಯೂಡ್ ಪ್ರಶ್ನೆಗಳಿರುತ್ತವೆ. ಎರಡನೇ ಭಾಗದಲ್ಲಿ ಸಾಮಾನ್ಯ ಜ್ಞಾನ, ಪ್ರಚಲಿತ ವಿಷಯಕ್ಕೆ ಸಂಬಂಧಿಸಿದಂತೆ 60 ಅಂಕಗಳಿಗೆ 60 ಪ್ರಶ್ನೆಗಳಿರುತ್ತವೆ.

ಪಿಯುಸಿವರೆಗಿನ ಪಠ್ಯಕ್ರಮವನ್ನು ಇದು ಹೊಂದಿದ್ದು, ತಲಾ 4 ತಪ್ಪು ಉತ್ತರಗಳಿಗೆ 1 ಅಂಕ ಕಳೆಯಲಾಗುತ್ತದೆ. ಈ ಪರೀಕ್ಷೆಯಲ್ಲಿ ಅಭ್ಯರ್ಥಿಗಳು ಗಳಿಸುವ ಅಂಕಗಳು ಹಾಗೂ ಪಿಯುಸಿ/ತತ್ಸಮಾನದ ಮೆರಿಟ್ ಅನ್ನು ಪರಿಗಣಿಸಿ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗುತ್ತದೆ. ಹುದ್ದೆಗಳ ವಿಭಾಗವಾರು ವರ್ಗೀಕರಣ, ಮೀಸಲು ರೋಸ್ಟರ್‌ಗಾಗಿ ಮತ್ತು ಹೆಚ್ಚಿನ ಮಾಹಿತಿಗಾಗಿ ಅರಣ್ಯ ಇಲಾಖೆಯ aranya.gov.in ಅಧಿಕೃತ ವೆಬ್‌ಸೈಟ್‌ಗೆ ಭೇಟಿ ನೀಡಬಹುದು. ❖

ಐದು ವರ್ಷ ಸೇವೆ ಕಡ್ಡಾಯ

ಅರಣ್ಯ ಪಾಲಕ ಹುದ್ದೆಗಳಿಗೆ ಆಯ್ಕೆಯಾಗುವ ಅಭ್ಯರ್ಥಿಗಳಿಗೆ 9 ತಿಂಗಳು ಮೂಲ ತರಬೇತಿ ಇರುತ್ತದೆ. ತರಬೇತಿ ಅವಧಿಯೂ ಸೇರಿದಂತೆ 36 ತಿಂಗಳು ಪ್ರೊಬೇಷನರಿ ಅವಧಿ ಇರುತ್ತದೆ. ಅಲ್ಲದೇ ಆಯ್ಕೆಯಾಗುವ ಅಭ್ಯರ್ಥಿಗಳು ತಮ್ಮ ಹುದ್ದೆಗಳಲ್ಲಿ ಕನಿಷ್ಠ ಐದು ವರ್ಷ ಕೆಲಸ ಮಾಡಬೇಕು.

ಹೈಲೈಟ್ಸ್

- ಡಿಸೆಂಬರ್ 30 ಅರ್ಜಿ ಸಲ್ಲಿಸಲು ಕೊನೆಯ ದಿನ
- ಪಿಯುಸಿ/ತತ್ಸಮಾನ ಕೋರ್ಸ್ ಪಾಸಾದವರು ಅರ್ಜಿ ಸಲ್ಲಿಸಬಹುದು
- ಈ ಹುದ್ದೆಗಳಿಗೆ ದೈಹಿಕ ಹಾಗೂ ಲಿಖಿತ ಪರೀಕ್ಷೆ ಇರುತ್ತದೆ.
- ಪಿಯುಸಿ ಹಾಗೂ ಲಿಖಿತ ಪರೀಕ್ಷೆಯ ಅಂಕಗಳ ಆಧಾರದ ಮೇಲೆ ನೇಮಕಾತಿ

ಕ್ಷಿಪಣಿ ತಂತ್ರಜ್ಞಾನ ನಿಯಂತ್ರಣ ವ್ಯವಸ್ಥೆ

ಗುರುಶಂಕರ್ ಕೆ.ಪಿ

- ಕ್ಷಿಪಣಿ ತಂತ್ರಜ್ಞಾನ ನಿಯಂತ್ರಣ ವ್ಯವಸ್ಥೆಯನ್ನು ಬಹುರಾಷ್ಟ್ರೀಯ ರಫ್ತು ನಿಯಂತ್ರಣ ವ್ಯವಸ್ಥೆ ಎಂದು ಕರೆಯಬಹುದು.
- ಈ ವ್ಯವಸ್ಥೆಯಲ್ಲಿ ಸದಸ್ಯತ್ವ ಇರುವ ಸದಸ್ಯ ರಾಷ್ಟ್ರಗಳು ಅನೌಪಚಾರಿಕ ರಾಜಕೀಯ ಒಪ್ಪಂದಕ್ಕೆ ಬದ್ಧರಾಗಿದ್ದು ಕ್ಷಿಪಣಿ ತಂತ್ರಜ್ಞಾನವನ್ನು ಹಾಗೂ ಕ್ಷಿಪಣಿಗಳ ಪ್ರಸರಣವನ್ನು ತಡೆಗಟ್ಟುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತವೆ.

ಸ್ಥಾಪನೆ


- ಕ್ಷಿಪಣಿ ತಂತ್ರಜ್ಞಾನ ನಿಯಂತ್ರಣ ವ್ಯವಸ್ಥೆಯನ್ನು 1987 ರಲ್ಲಿ ಸ್ಥಾಪಿಸಲಾಯಿತು. ಈ ವ್ಯವಸ್ಥೆಯನ್ನು ಜಿ-7 ಒಕ್ಕೂಟದ ಸದಸ್ಯ ರಾಷ್ಟ್ರಗಳು ಪ್ರಾರಂಭಿಸಿದವು.
- ಜಿ-7 ಸದಸ್ಯ ರಾಷ್ಟ್ರಗಳು ಎಂದರೆ ಅತಿ ಹೆಚ್ಚಿನ ಪ್ರಮಾಣದ ಕೈಗಾರಿಕರಣ ಹೊಂದಿರುವ ರಾಷ್ಟ್ರಗಳು ಎಂದು ಪರಿಗಣಿಸಬಹುದು. ಅವುಗಳೆಂದರೆ ಅಮೇರಿಕ , ಯುನೈಟೆಡ್ ಕಿಂಗ್ಡಮ್, ಕೆನಡಾ, ಫ್ರಾನ್ಸ್, ಜರ್ಮನಿ, ಜಪಾನ್ ಮತ್ತು ಇಟಲಿ ರಾಷ್ಟ್ರಗಳು.
- ಈ ವ್ಯವಸ್ಥೆಯನ್ನು ಅಣು ಶಸ್ತ್ರಾಸ್ತ್ರಗಳ, ಕ್ಷಿಪಣಿಗಳ ಹಾಗೂ ಮಾನವರಹಿತ ಹಾರಾಡುವ ಯಂತ್ರಗಳ ಪ್ರಸರಣವನ್ನು ತಡೆಗಟ್ಟುವ ಉದ್ದೇಶದಿಂದ ಜಾರಿಗೆ ತರಲಾಯಿತು.

ವಿಶೇಷ ಸೂಚನೆ - 300 ಕಿಲೋಮೀಟರ್ ಗಿಂತ ಹೆಚ್ಚು ವ್ಯಾಪ್ತಿಯನ್ನು ಹೊಂದಿರುವ ಕ್ಷಿಪಣಿಗಳು ಹಾಗೂ 500 ಕೆಜಿಗಿಂತ ಹೆಚ್ಚು ತೂಕವನ್ನು ಹೊತ್ತೊಯ್ಯಬಲ್ಲ ಕ್ಷಿಪಣಿಗಳ ಮೇಲೆ ಹಾಗೂ ಕ್ಷಿಪಣಿ ವ್ಯವಸ್ಥೆಗಳ ಮೇಲೆ ಸ್ವಯಂ ಪ್ರೇರಣೆಯಿಂದ ಸದಸ್ಯ ರಾಷ್ಟ್ರಗಳು ನಿರ್ಬಂಧ ಹೇರಿ ಕೊಳ್ಳುತ್ತವೆ.

- ಪ್ರಸ್ತುತ ಈ ವ್ಯವಸ್ಥೆಯಲ್ಲಿ 35 ರಾಷ್ಟ್ರಗಳು ಸದಸ್ಯತ್ವವನ್ನು ಹೊಂದಿದ್ದು ಭಾರತವು ಕೂಡ ಈ ವ್ಯವಸ್ಥೆಯಲ್ಲಿ ಸದಸ್ಯತ್ವವನ್ನು ಹೊಂದಿದೆ.

ಸದಸ್ಯ ರಾಷ್ಟ್ರಗಳು ಮತ್ತು ಸದಸ್ಯತ್ವ ಪಡೆದ ವರ್ಷ

- ಕೆನಡಾ, ಫ್ರಾನ್ಸ್, ಇಟಲಿ, ಜಪಾನ್, ಜರ್ಮನಿ, ಯುನೈಟೆಡ್ ಕಿಂಗ್ಡಮ್ ಹಾಗೂ ಅಮೆರಿಕ ಸಂಯುಕ್ತ ಸಂಸ್ಥಾನ ರಾಷ್ಟ್ರಗಳು 1987 ರಲ್ಲಿ ಸದಸ್ಯತ್ವವನ್ನು ಪಡೆದುಕೊಂಡವು. ಈ ರಾಷ್ಟ್ರಗಳನ್ನು ಸಂಸ್ಥಾಪಕ ರಾಷ್ಟ್ರಗಳು ಎಂದು ಪರಿಗಣಿಸಬಹುದು.
- ಆಸ್ಟ್ರೇಲಿಯಾ, ಬೆಲ್ಜಿಯಂ, ಡೆನ್ಮಾರ್ಕ್, ಲಕ್ಸಂಬೋರ್ಗ್, ನೆದರ್ಲೆಂಡ್, ನಾರ್ವೆ, ಸ್ಪೇನ್ ರಾಷ್ಟ್ರಗಳು 1990 ರಲ್ಲಿ ಸದಸ್ಯತ್ವ ಪಡೆದುಕೊಂಡವು.
- ಆಸ್ಟ್ರಿಯ, ಫಿನ್ಲೆಂಡ್, ನ್ಯೂಜಿಲೆಂಡ್, ಸ್ವೀಡನ್ ರಾಷ್ಟ್ರಗಳು ಈ ವ್ಯವಸ್ಥೆಯ ಸದಸ್ಯತ್ವವನ್ನು 1991 ರಲ್ಲಿ ಪಡೆದುಕೊಂಡವು.
- ಗ್ರೀಸ್, ಐರ್ಲೆಂಡ್, ಪೋರ್ಚುಗಲ್ ಹಾಗೂ ಸ್ವಿಟ್ಜರ್ಲೆಂಡ್ ರಾಷ್ಟ್ರಗಳು 1992 ರಲ್ಲಿ ಈ ವ್ಯವಸ್ಥೆಯ ಸದಸ್ಯತ್ವವನ್ನು ಪಡೆದುಕೊಂಡವು.
- ಅರ್ಜೆಂಟಿನಾ, ಹಂಗರಿ ಮತ್ತು ಐಸ್ಲ್ಯಾಂಡ್ ರಾಷ್ಟ್ರಗಳು 1993 ರಲ್ಲಿ ಸದಸ್ಯತ್ವವನ್ನು ಪಡೆದುಕೊಂಡವು.
- ಬ್ರೆಜಿಲ್, ರಷ್ಯಾ ಒಕ್ಕೂಟ ಹಾಗೂ ದಕ್ಷಿಣ ಆಫ್ರಿಕಾ ಈ ವ್ಯವಸ್ಥೆಯ ಸದಸ್ಯತ್ವವನ್ನು 1995 ರಲ್ಲಿ ಪಡೆದುಕೊಂಡವು.
- 1997 ರಲ್ಲಿ ಟರ್ಕಿ ಸದಸ್ಯತ್ವವನ್ನು ಪಡೆದುಕೊಂಡಿತು.
- ಚೆಕ್ ರಿಪಬ್ಲಿಕ್, ಪೋಲೆಂಡ್ ಹಾಗೂ ಉಕ್ರೇನ್ ರಾಷ್ಟ್ರಗಳು 1998 ರಲ್ಲಿ ಈ ವ್ಯವಸ್ಥೆಯ ಸದಸ್ಯತ್ವವನ್ನು ಪಡೆದುಕೊಂಡವು.
- ದಕ್ಷಿಣ ಕೊರಿಯಾ ಈ ವ್ಯವಸ್ಥೆಯ ಸದಸ್ಯತ್ವವನ್ನು 2001 ರಲ್ಲಿ ಪಡೆದುಕೊಂಡಿತು.
- 2004 ರಲ್ಲಿ ಬಲ್ಗೇರಿಯ ಈ ವ್ಯವಸ್ಥೆಯ ಸದಸ್ಯತ್ವವನ್ನು ಪಡೆದುಕೊಂಡಿತು.
- ಅಂತಿಮವಾಗಿ 2016 ರಲ್ಲಿ ಭಾರತ ಈ ವ್ಯವಸ್ಥೆಯ ಸದಸ್ಯತ್ವವನ್ನು ಪಡೆದುಕೊಂಡಿತು.



ಕ್ಷಿಪಣಿ ತಂತ್ರಜ್ಞಾನ ನಿಯಂತ್ರಣ ವ್ಯವಸ್ಥೆಯ ಉದ್ದೇಶಗಳು

- ಈ ವ್ಯವಸ್ಥೆಯು ಅನೌಪಚಾರಿಕ ರಾಜಕೀಯ ಒಪ್ಪಂದವಾಗಿದೆ. ಈ ಒಪ್ಪಂದದ ಅಂಶಗಳು ಸದಸ್ಯ ರಾಷ್ಟ್ರಗಳ ಮೇಲೆ ಕಾನೂನಾತ್ಮಕ ಬದ್ಧತೆಯನ್ನು ಹೊಂದಿರುವುದಿಲ್ಲ.
- 35 ಸದಸ್ಯ ರಾಷ್ಟ್ರಗಳು ಇದ್ದು ಭಾರತವೂ ಸದಸ್ಯ ರಾಷ್ಟ್ರಗಳಲ್ಲಿ ಒಂದಾಗಿದೆ. ಚೀನಾ ಮತ್ತು ಪಾಕಿಸ್ತಾನ ಸದಸ್ಯತ್ವ ಹೊಂದಿರುವುದಿಲ್ಲ.
- ಈ ವ್ಯವಸ್ಥೆಗೆ ಸೇರಿದ ನಂತರ ಪ್ರತಿಯೊಂದು ಸದಸ್ಯ ರಾಷ್ಟ್ರ, ರಾಷ್ಟ್ರ ಮಟ್ಟದ ರಫ್ತು ನಿಯಂತ್ರಣ ನೀತಿಯನ್ನು ಜಾರಿಗೆ ತರಬೇಕಾಗುತ್ತದೆ.
- ಬ್ಯಾಲೆಸ್ಟಿಕ್ ಕ್ಷಿಪಣಿಗಳು, ಮಾನವರಹಿತ ಹಾರಾಟ ವಾಹನಗಳು, ಉಪಗ್ರಹ ಉಡಾವಣಾ ವಾಹನಗಳು, ಶಬ್ದಕ್ಕಿಂತ ವೇಗವಾಗಿ ಸಂಚರಿಸುವ ಕ್ಷಿಪಣಿಗಳು, ಡ್ರೋನ್ ಗಳು ಹಾಗೂ ಇನ್ನಿತರೆ ಶಸ್ತ್ರಾಸ್ತ್ರಗಳ ಹಾಗೂ ಸಾಧನೆಗಳ ಬಿಡಿ ಭಾಗಗಳನ್ನು ಅಥವಾ ತಂತ್ರಜ್ಞಾನವನ್ನು ವರ್ಗಾವಣೆ ಮಾಡುವಾಗ ಒಂದು ಕ್ರಮಬದ್ಧ ಕಾರ್ಯನೀತಿಯನ್ನು ಅನುಷ್ಠಾನಕ್ಕೆ ತರಬೇಕಾಗುತ್ತದೆ.
- ಪ್ರತಿ ಸದಸ್ಯ ರಾಷ್ಟ್ರ ಯಾವುದೇ ರಾಷ್ಟ್ರಕ್ಕೆ ಕ್ಷಿಪಣಿಗಳನ್ನು ರಫ್ತು ಮಾಡುವಾಗ ಅಥವಾ ಕ್ಷಿಪಣಿ ವ್ಯವಸ್ಥೆಯ ತಂತ್ರಜ್ಞಾನವನ್ನು ರಫ್ತು ಮಾಡುವಾಗ, ಕೆಳಗಿನ ಐದು ಅಂಶಗಳನ್ನು ಪರಿಗಣಿಸಬೇಕಾಗುತ್ತದೆ.

1. ತಂತ್ರಜ್ಞಾನವನ್ನು ಅಥವಾ ಕ್ಷಿಪಣಿಯನ್ನು ಆಮದು ಮಾಡಿಕೊಳ್ಳುತ್ತಿರುವ ರಾಷ್ಟ್ರ ಸಾಮೂಹಿಕ ವಿನಾಶಕ್ಕೆ ಬಳಸುವ ಶಸ್ತ್ರಾಸ್ತ್ರಗಳನ್ನು ಅಭಿವೃದ್ಧಿಪಡಿಸುವ ಸಾಧ್ಯತೆ ಇದೆಯೇ ಅಥವಾ ಇಚ್ಛೆಯನ್ನು ಹೊಂದಿರುವ ರಾಷ್ಟ್ರವೇ ಎಂದು ತಿಳಿದುಕೊಳ್ಳತಕ್ಕದ್ದು.
2. ಆಮದುಮಾಡಿಕೊಳ್ಳುತ್ತಿರುವ ರಾಷ್ಟ್ರದ ಬಾಹ್ಯಾಕಾಶ ಕಾರ್ಯಕ್ರಮಗಳ ಮತ್ತು ಕ್ಷಿಪಣಿ ಕಾರ್ಯಕ್ರಮಗಳ ಸ್ಪಷ್ಟ ಅರಿವಿರಬೇಕು ಹಾಗೂ ಅವುಗಳ ಉದ್ದೇಶಗಳ ಬಗ್ಗೆ ಸ್ಪಷ್ಟತೆ ಇರಬೇಕು.
3. ವರ್ಗಾವಣೆಯಿಂದ ತಂತ್ರಜ್ಞಾನವನ್ನು ಆಮದು ಮಾಡಿಕೊಂಡ ರಾಷ್ಟ್ರ ಜಾಗತಿಕ ಮಟ್ಟದಲ್ಲಿ ವಿಧ್ವಂಸಕ ಕೃತ್ಯಗಳನ್ನು ನಡೆಸುವ ನಿಟ್ಟಿನಲ್ಲಿ ತನ್ನ ಸಾಮರ್ಥ್ಯವನ್ನು ಹೆಚ್ಚಿಸಿ ಕೊಳ್ಳಬಹುದು ಎನ್ನುವುದರ ಬಗ್ಗೆ ಸ್ಪಷ್ಟತೆ ಇರಬೇಕು.
4. ಆಮದು ಮಾಡಿಕೊಳ್ಳುತ್ತಿರುವ ರಾಷ್ಟ್ರದ ಉದ್ದೇಶ ಮತ್ತು ಹಿನ್ನೆಲೆಯ ಬಗ್ಗೆ ಸ್ಪಷ್ಟತೆ ಇರಬೇಕು.
5. ವರ್ಗಾವಣೆಯಿಂದ ಯಾವುದಾದರೂ ಬಹುರಾಷ್ಟ್ರೀಯ ಒಪ್ಪಂದಗಳ ಉಲ್ಲಂಘನೆ ಆಗುತ್ತಿದೆಯೇ ಎನ್ನುವುದರ ಬಗ್ಗೆ ಸ್ಪಷ್ಟತೆ ಇರಬೇಕು.

ಕ್ಷಿಪಣಿ ತಂತ್ರಜ್ಞಾನ ನಿಯಂತ್ರಣ ವ್ಯವಸ್ಥೆ ಮತ್ತು ಭಾರತ

- ಭಾರತ ಕ್ಷಿಪಣಿ ತಂತ್ರಜ್ಞಾನ ನಿಯಂತ್ರಣ ವ್ಯವಸ್ಥೆಯ ಸದಸ್ಯತ್ವವನ್ನು ಅಪೇಕ್ಷಿಸಿ ಜೂನ್ 2015 ರಲ್ಲಿ ಅರ್ಜಿಯನ್ನು ಸಲ್ಲಿಸಿತು. ಭಾರತ ಸರ್ಕಾರ ಅರ್ಜಿಯನ್ನು ಸಲ್ಲಿಸಿದ ನಂತರ ಭಾರತ ಸರ್ಕಾರದ ಅರ್ಜಿಯನ್ನು ಅಮೆರಿಕ ಮತ್ತು ಫ್ರಾನ್ಸ್ ರಾಷ್ಟ್ರಗಳು ಬೆಂಬಲಿಸಿದವು.

ಪ್ರಯೋಜನಗಳು

- ಬಾಹ್ಯಾಕಾಶ ತಂತ್ರಜ್ಞಾನ ವಲಯದಲ್ಲಿ ಭಾರತ ಕ್ರಯೋಜೆನಿಕ್ ಇಂಜಿನ್ ಅಭಿವೃದ್ಧಿಯಲ್ಲಿ ಹೆಚ್ಚಿನ ಪ್ರಮಾಣದ ಬೆಳವಣಿಗೆಯನ್ನು ಕಂಡಿಲ್ಲ. ಭಾರತ ಈ ವ್ಯವಸ್ಥೆಯ ಭಾಗವಾದ ನಂತರ ಭಾರತೀಯ ಬಾಹ್ಯಾಕಾಶ ಕಾರ್ಯಕ್ರಮಕ್ಕೆ ಮತ್ತಷ್ಟು ಉತ್ತೇಜನ ದೊರಕುತ್ತದೆ.
- ಭಾರತ ಈ ವ್ಯವಸ್ಥೆಯ ಭಾಗವಾದ ನಂತರ ಭಾರತ ಮತ್ತು ರಷ್ಯಾ ಸರ್ಕಾರಗಳು ಜಂಟಿಯಾಗಿ ಅಭಿವೃದ್ಧಿಪಡಿಸಿರುವ ಬ್ರಹ್ಮೋಸ್ ಕ್ಷಿಪಣಿ ವ್ಯವಸ್ಥೆಯನ್ನು ರಫ್ತು ಮಾಡಲು ಸಹಕಾರಿಯಾಗುತ್ತದೆ.

ವಿಶೇಷ ಸೂಚನೆ - ಇದರ ಆಧಾರದ ಮೇಲೆ ಭಾರತ ಬ್ರಹ್ಮೋಸ್ ಕ್ಷಿಪಣಿಗಳನ್ನು ಈಗಾಗಲೇ ವಿಯೆಟ್ನಾಮ್ ಮತ್ತು ಫಿಲಿಪೈನ್ಸ್ ರಾಷ್ಟ್ರಗಳಿಗೆ ರಫ್ತು ಮಾಡಿದೆ.

- ಭಾರತ ಈ ವ್ಯವಸ್ಥೆಯ ಭಾಗವಾದ ನಂತರ ಇಸ್ರೇಲ್ ರಾಷ್ಟ್ರದಲ್ಲಿ ತಯಾರಾಗಿರುವ "Arrow 11" ಕ್ಷಿಪಣಿ ವ್ಯವಸ್ಥೆಯನ್ನು ಕೊಂಡುಕೊಳ್ಳಲು ಅರ್ಹತೆಯನ್ನು ಪಡೆದಿದೆ. ಇದಲ್ಲದೆ ಭಾರತವು ಕೂಡ ಮುಂದಿನ ದಿನಗಳಲ್ಲಿ ಬ್ಯಾಲೆಸ್ಟಿಕ್ ಕ್ಷಿಪಣಿ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಲು ಉಪಯುಕ್ತವಾಗುತ್ತದೆ.
- ಭಾರತ ಸರ್ಕಾರದ ಮಹೋನ್ನತ ಯೋಜನೆಯಾದ ಭಾರತದಲ್ಲಿ ತಯಾರಿಸಿ ಕಾರ್ಯಕ್ರಮಕ್ಕೆ ಮತ್ತಷ್ಟು ಉತ್ತೇಜನ ದೊರಕಿದಂತಾಗುತ್ತದೆ.
- ಭಾರತ ಅಮೆರಿಕ ಸಂಯುಕ್ತ ಸಂಸ್ಥಾನದಿಂದ ಪರಿವೀಕ್ಷಣೆ ಡ್ರೋನ್ ಗಳನ್ನು ಪಡೆದುಕೊಳ್ಳಲು ಸಹಕಾರಿಯಾಗಿದೆ.
- ಬಹುತೇಕ ಎಲ್ಲ ಜಾಗತಿಕ ಮಟ್ಟದ ವೇದಿಕೆಗಳಲ್ಲಿ ಮತ್ತು ಪ್ರಾದೇಶಿಕ ಮಟ್ಟದ ವೇದಿಕೆಗಳಲ್ಲಿ ಭಾರತ ಸರ್ಕಾರ ಸದಸ್ಯತ್ವವನ್ನು ಹೊಂದಿದ್ದು, ಮುಂದಿನ ದಿನಗಳಲ್ಲಿ ಜಾಗತಿಕ ಮಟ್ಟದ ವೇದಿಕೆಗಳಲ್ಲಿ ಮತ್ತಷ್ಟು ಸಕ್ರಿಯವಾಗಿ ಕಾರ್ಯ ಪ್ರವೃತ್ತವಾಗುವ ಎಲ್ಲಾ ಗುಣಲಕ್ಷಣಗಳು ಕಂಡುಬರುತ್ತಿದೆ. ❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಇಂಗ್ಲಿಷ್

ಎಸ್‌ಎಸ್‌ಎಲ್‌ಸಿ – ಕನ್ನಡ ಮಾಧ್ಯಮ

Second Language ENGLISH

Unit-2 PROSE

There's a Girl by the Tracks!

Learn grammar through communication

Task 3: Read the following paragraph. A blank is given after each number. If the underlined word is correct, then write (c) in the blank. If the underlined word is wrong, write the right form of the word in the blank.

Ans: Right form of the word is written underlined and correct is written as (c).

Everyone who have (1) eg., has ever been to a graduation ceremony know (2) ....how exciting it can be for the graduates. In our town, nearly the whole population comes (3) .... each year. There are (4) .... one thing that both graduates and guests enjoy (5) .... the awarding of scholarships. This ceremony, along with concluding exercises makes (6) .... attending the graduation worthwhile. Several of the students who receives (7) .... awards plan (8) .... to attend the community college. Many former graduates is (9) .... grateful for opportunities that such an award provides (10) .... to them.

Ans: Right form of the word is written underlined and correct is written as (c).

Everyone who have (1) eg., has ever been to a graduation ceremony know (2) knows how exciting it can be for the graduates. In our town, nearly the whole population comes (3) (c) each year. There are (4) is one thing that both graduates and guests enjoy (5) (c) the awarding of scholarships. This ceremony, along with concluding exercises makes (6) (c) attending the graduation worthwhile. Several of the students who receives (7) received awards plan. (8) planed to attend the community college. Many former graduates is (9) (are) grateful for opportunities that such an award provides (10) provided to them

Make reference

Study the meanings of a word given in a dictionary compose (verb) composed, composing- transitive verb

1. Consist of
2. Combine together to form
3. Make up
4. Write a piece of music
5. Write a letter or poem
6. Try hard to become calm after feeling very angry, upset or excited
7. To arrange the parts of a painting photograph or scene in a way that achieves a particular result.

Task 1: Some sentences are given below. In each sentence the word 'compose' is used. Identify the meaning given above and write the corresponding number in the boxes.

1.Nayana sat at the desk, taking several deep breaths to compose herself. ( )
2.Water is composed of hydrogen and oxygen.( )
3.A.R. Rehaman has composed of people and people make legal system. ( )
4.The legal system is composed of people and business sector of our economy. ( )
5.More than 17.6 million firms composed the business sector of our economy. ( )
6.I like the way Ravi composes photographs. ( )

Ans:-1. Nayana sat at the desk, taking several deep breaths to compose herself. (6)
2. Water is composed of hydrogen and oxygen. (1)
3. A.R. Rehaman has composed of people and people make legal system. (4)
4. The legal system is composed of people and business sector of our economy. (3)
5. More than 17.6 million firms composed the business sector of our economy. (2)
6.I like the way Ravi composes photographs (7)

* * * * * * * * * *

Unit-1 Poem

Grandma Climbs a Tree

Author: Ruskin Bond:- Born in Kasauli in 1934, Ruskin Bond now lives in Missouri. He wrote first novel, 'The Room on the Roof', when he was seventeen and has written more than thirty books for children. 'Grandma Climbs a Tree' shows Bond's great ability to enjoy unusual events and actions. In his autobiography, 'Scene from Writer's Life', Bond talks about his Calcutta granny as a strange person who sat alone in the evenings playing Patience, a card game.

Understand the poem

1. The speaker in the poem does not call his grandmother 'childish', what else was she according to him? Why does he consider her to be so? {Line 1-4}

Ans: The speaker calls his grandmother a genius. He calls her so for a special ability she had at the age of sixty two. She could climb any tree high or wide in a trice.

2. Grandma had been in the habit of climbing trees for a very long period. Identify the lines that suggest this.

Ans: (a) "ever since child hood she'd had this gift",
(b) "When last climbed a tree she was sixty two"

II PUC BIOLOGY

ಎಸ್ಸೆಸ್ಸೆಲ್ಸಿ- ಸಮಾಜವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

REPRODUCTION

REPRODUCTIVE HEALTH

Write short notes on:-

1] Infertility in Males.

Ans:- Infertility in Males - Semen of a fertile male is 3 - 4 ml per ejaculation with a sperm count of over 200 million, mostly motile, having proper fructose content and fluidity which is deposited high in the vagina.

Any defect in sperm count, sperm structure, sperm motility or seminal fluid leads to infertility.

(.....Contd)

Low sperm count is called **oligospermia** while near absence of sperms is known as **azospermia.** Low sperm motility is called **asthenozoospermia** while defective sperm morphology is termed as **teratozoospermia.**

The various causes of infertility in males are -

1. Cryptorchidism or failure of testes to descend into sctrotum causes azospermia.
2. Absence or blockage of vasa deferentia and vasa efferentia.
3. Loss of ciliary function and sperm motility due to autosomal recessive disorder of kartagener syndrome.
4. Hyperthermia or higher scrotal temperature due to varicocele (varicose veins), hydrocele or filariasis, tight undergarment, thermal undergarment or working in hot environment cause oligospermia or depressed spermatogenesis.
5. Infection like mumps after puberty (orchitis or inflammation of testes), bronchiectasis (chronic dilation of bronchioles), infection of seminal vesicle or prostate result in oligospermia or lower sperm count. Infections of *Chlamydia trachomatis* and T. *mycoplasma* (= *Ureoplasma*) also bring about oligospermia.
6. Alcoholism inhibits spermatogenesis.
7. Klinefelter's syndrome.
8. Gonadotropin deficiency.
9. Cytotoxic drugs, radiations, antidepressant and anticonvulsant drugs depress spermatogenesis.
10. Failure to deposit sperms high in vagina due to developmental and ejaculatory defects.
11. Low fructose content, high prostaglandin, high viscosity and low volume of ejaculate and to male infertility.
12. Absence of sperm protein PCL-zeta required for egg activation on fertilization.

2] Infertility in Females

Ans:- Infertility in Females - A fertile woman is the one who regularly ovulates once every cycle, passes the egg down the reproductive tract which develops conditions for smooth passage of sperms and implantation of fertilized egg.

The various causes of infertility in females are -

1. Anovulation (non-ovulation) and oligoovulation(deficient ovulation) are caused by ovarian cysts deficient functioning of hypothalamo-pituitary complex or secondarily by thyroid and adrenal dysfunction ovarian cysts.
2. Inadequate growth and functioning of corpus luteum resulting in reduced progesterone secretion and deficient secretory changes in endometrium. It is called luteal phase defect. It inhibits implantation. Major reason is decrease in FSH or LH level and elevation of prolactin level.
3. The ovum is not liberated but remains trapped inside the follicle due to hyperprolactinaemia.
4. Fallopian tube may fail to pick up ovum, have impaired motility, loss of cilia and blocked lumen. The defects may be caused by infection or endometriosis.
5. Non-canalisation of uterus.
6. Defective uterine endometrium due to either reduced or excessive secretory activity.
7. Congential malformation of uterus.
8. Fibroid uterus.
9. Defects in cervix like congenital elongation, occlusion of cervix by a polyp, cervicitis, scanty or excessive cervical mucus and presence of antisperm antibodies.
10. Defective vaginal growth like atresia and transverse septum.

3] Treatment of male infertility

Ans:- Treatment of male infertility - Male infertility is corrected by avoidance of alcohol, avoidance of tight and warm undergarments, cold scrotal bath twice a day for five minutes each, use of vitamin E, C, B_{12} and folic acid improve oligospermia. Use of clomiphene citrate (25 - 50 mg daily for 25 days a month for three months) improves synthesis of gonadotropins. HCG (5000 IU) is given intramuscularly once or twice a week to stimulate testosterone production in the body. Alternately testosterone is provided orally (100-160 mg daily for 3-4 months). Presence of antisperm antibodies in the semen is corrected by dexamethasone. Gonadotropic releasing hormone therapy is required in infertile males with hypothalamic dysfunction. Obstruction of vasa efferentia or vasa deferentia is corrected surgically. Surgery is also required for correcting varicocele and non-descent of testes. Erectile dysfunction is corrected by use of sildenafil.

4] Treatment of female infertility

Ans:- Treatment of female infertility - In females ovulation is induced by clomiphene citrate, HMG, FSH, HCG and GnRH depending upon the condition of anovulation and oligoovulation. Ovarian cycts are corrected through laser vaporization, ovarian diathermy and surgery. Tubal and uterine defects are corrected by surgery (tuboplasty), endoscopy, cannulation(insertion of tube to remove obstruction) and hydrotubulation (flushing with fluid having antibiotic and hydrocortisone), Dextamethasone is used to correct antisperm antibodies in cervical mucus while antibiotics are given for treating infections.

(Contd......)

ವಿಧಾನಮಂಡಲದ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಕಲ್ಯಾಣ ಸಮಿತಿ ಶಿಫಾರಸು

ಮದ್ಯದಂಗಡಿ ಪರವಾನಗಿಯಲ್ಲೂ ಮೀಸಲು

ಪ್ರಜಾವಾಣಿ ವಾರ್ತೆ

ವಿಧಾನಸಭೆ: ಮದ್ಯದಂಗಡಿಗಳ ಪರವಾನಗಿಯಲ್ಲಿ ಪರಿಶಿಷ್ಟ ಜಾತಿ (ಎಸ್‌.ಸಿ) ಮತ್ತು ಪರಿಶಿಷ್ಟ ಪಂಗಡಗಳ (ಎಸ್‌.ಟಿ) ಜನರಿಗೆ ಅವರ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ನೀಡಬೇಕು ಎಂದು ವಿಧಾನ ಮಂಡಲದ ಎಸ್‌ಸಿ, ಎಸ್‌ಟಿ ಕಲ್ಯಾಣ ಸಮಿತಿ ಶಿಫಾರಸು ಮಾಡಿದೆ.

ಸಮಾಜ ಕಲ್ಯಾಣ, ಆರ್ಥಿಕ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸೇರಿದಂತೆ ಏಳು ಇಲಾಖೆಗಳಿಗೆ ಸಂಬಂಧಿಸಿದ ಸಮಿತಿಯ ವರದಿಯನ್ನು ಎಸ್‌ಸಿ, ಎಸ್‌ಟಿ ಕಲ್ಯಾಣ ಸಮಿತಿ ಅಧ್ಯಕ್ಷ ಪಿ.ಎಂ. ನರೇಂದ್ರ ಸ್ವಾಮಿ ಬುಧವಾರ ಸದನದಲ್ಲಿ ಮಂಡಿಸಿದರು.

'ಸಿಎಲ್‌-2, ಸಿಎಲ್‌-7, ಸಿಎಲ್‌-9, ಸಿಎಲ್‌-11 ಮದ್ಯದಂಗಡಿಗಳ ಪರವಾನಗಿಯಲ್ಲಿ ಬ್ಯಾಕ್‌ಲಾಗ್ ಅನ್ನೂ ಒಳಗೊಂಡಂತೆ ಪರಿಶಿಷ್ಟರಿಗೆ ಮೀಸಲಾತಿ ನೀಡಬೇಕು' ಎಂದು ಸಮಿತಿಯು ಶಿಫಾರಸು ಮಾಡಿದೆ.

ಕೇಂದ್ರ ಪುರಸ್ಕೃತ ಯೋಜನೆಗಳಿಗೆ ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಅನುದಾನವನ್ನು ಬಳಸಲು ಅವಕಾಶ ನೀಡಬಾರದು. ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಅನುದಾನ ಬಳಕೆಯಾಗದಿದ್ದರೂ ಅದೇ ಇಲಾಖೆಗಳಲ್ಲಿ ಮುಂದುವರಿಸಲು ಅನುಮತಿ ಕೊಡಬಾರದು ಎಂದು ಶಿಫಾರಸು ಮಾಡಲಾಗಿದೆ.

ಎಸ್‌.ಸಿ ಮತ್ತು ಎಸ್‌.ಟಿ ಜನರಿಗೆ ಸ್ಮಶಾನಕ್ಕಾಗಿ ಜಮೀನು ಮೀಸಲಿಡಲು ಜಿಲ್ಲಾಧಿಕಾರಿಗಳಿಗೆ ಸೂಚಿಸಬೇಕು. ಭೂ ಒಡೆತನ ಯೋಜನೆಯಡಿ ಪರಿಶಿಷ್ಟರಿಗೆ ಜಮೀನು ನೀಡಲು ಒದಗಿಸುತ್ತಿರುವ ಅನುದಾನದ ಮೊತ್ತವನ್ನು ಪ್ರತಿ ಎಕರೆಗೆ ₹ 25 ಲಕ್ಷಕ್ಕೆ ಹೆಚ್ಚಿಸಬೇಕು ಎಂಬ ಶಿಫಾರಸುಗಳು ವರದಿಯಲ್ಲಿವೆ.

ಪರಿಶಿಷ್ಟ ಜಾತಿ ಉಪ ಯೋಜನೆ (ಎಸ್‌ಸಿಎಸ್‌ಪಿ) ಮತ್ತು ಪರಿಶಿಷ್ಟ ಪಂಗಡಗಳ ಉಪ ಯೋಜನೆ (ಟಿಎಸ್‌ಪಿ) ಅನುದಾನವನ್ನು ಅನ್ಯ ಉದ್ದೇಶಕ್ಕೆ ವರ್ಗಾವಣೆ ಮಾಡುವುದನ್ನು ತಪ್ಪಿಸಲು ಕಾಯ್ದೆಯ ಸೆಕ್ಷನ್ 7-ಡಿ ತೆಗೆದು ಹಾಕಲಾಗುತ್ತಿದೆ. ಆದರೆ, ಅದೇ ರೀತಿಯಲ್ಲಿ ಸೆಕ್ಷನ್ 7-ಬಿ ಮತ್ತು 7-ಸಿ ಅಡಿಯಲ್ಲಿ ಅನುದಾನ ವರ್ಗಾವಣೆ ಆಗದಂತೆ ತಡೆಯಬೇಕು ಎಂದು ಸಮಿತಿ ಹೇಳಿದೆ.

'ಅಸ್ಪೃಶ್ಯತೆ ನಿರ್ಮೂಲನೆಯಾಗಿಲ್ಲ'

'ರಾಜ್ಯದ ಇಂದಿಗೂ ಹಲವಾರು ಕಡೆಗಳಲ್ಲಿ ಅಸ್ಪೃಶ್ಯತೆಯು ಪೂರ್ತಿಯಾಗಿ ನಿರ್ಮೂಲನೆಯಾಗಿಲ್ಲ' ಎಂದು ಸಮಿತಿ ತನ್ನ ವರದಿಯಲ್ಲಿ ಹೇಳಿದೆ.

ಆದರೆ, ವರದಿಯಲ್ಲಿ ಅಸ್ಪೃಶ್ಯತೆ ಆಚರಣೆಗೆ ಸಂಬಂಧಿಸಿದ ಪ್ರಕರಣಗಳ ಮಾಹಿತಿ ಮತ್ತು ದತ್ತಾಂಶವನ್ನು ಒದಗಿಸಿಲ್ಲ.

ಎಸ್‌ಸಿಎಸ್‌ಪಿ, ಟಿಎಸ್‌ಪಿ ಅಡಿಯಲ್ಲಿ 2013ರಿಂದ ಈವರೆಗೆ ₹ 2.5 ಲಕ್ಷ ಕೋಟಿ ಅನುದಾನ ಒದಗಿಸಲಾಗಿದೆ. ರಾಜ್ಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ 28 ಲಕ್ಷ ಕುಟುಂಬಗಳಿವೆ. ಈ ಎಲ್ಲ ಕುಟುಂಬಗಳನ್ನೂ ಯೋಜನೆಯ ಅನುದಾನ ಸಮರ್ಪಕವಾಗಿ ತಲುಪಿಲ್ಲ. ಅನುದಾನ ಬಳಕೆಯಲ್ಲಿ ಲೋಪ ಎಸಗಿದ ಯಾವುದೇ ಅಧಿಕಾರಿಗಳ ವಿರುದ್ಧ ಕಾಯ್ದೆಯ ಸೆಕ್ಷನ್ 24ರ ಅಡಿಯಲ್ಲಿ ಈವರೆಗೂ ಕ್ರಮ ಜರುಗಿಸಿಲ್ಲ. ತನಿಖಾ ವರದಿಗಳ ಪ್ರಕಾರ ಕ್ರಮ ಜರುಗಿಸಬೇಕು ಎಂದು ಶಿಫಾರಸು ಮಾಡಿದೆ.

92 ವಿದ್ಯಾರ್ಥಿಗಳ ಸಾವು: ತನಿಖೆಗೆ ಶಿಫಾರಸು

'ಕ್ರೈಸ್ ಅಧೀನದ ವಸತಿ ಶಾಲೆಗಳಲ್ಲಿ ಐದು ವರ್ಷಗಳಲ್ಲಿ ನಡೆದಿರುವ 92 ವಿದ್ಯಾರ್ಥಿಗಳ ಆತ್ಮಹತ್ಯೆ ಹಾಗೂ ಸಾವಿನ ಪ್ರಕರಣಗಳ ಕುರಿತು ನಾಗರಿಕ ಹಕ್ಕುಗಳ ಜಾರಿ ನಿರ್ದೇಶನಾಲಯದಿಂದ ತನಿಖೆ ನಡೆಸುವಂತೆ' ಸಮಿತಿಯು ಶಿಫಾರಸು ಮಾಡಿದೆ. 'ಈ ಪ್ರಕರಣಗಳಲ್ಲಿ ತನಿಖೆ ಆಗಿದೆಯೆ? ಇಲ್ಲವೆ? ಎಂಬ ಮಾಹಿತಿಯನ್ನು ಪೋಷಕರಿಂದ ಸಂಗ್ರಹಿಸಬೇಕು. ನಂತರ ಕಾನೂನು ಪ್ರಕಾರ ಕ್ರಮ ಜರುಗಿಸಬೇಕು. ಮಕ್ಕಳು, ಪೋಷಕರು ಮತ್ತು ಶಾಸಕರಿಗೆ ಇಲಾಖಾ ಹಂತದಲ್ಲಿ ಕೌನ್ಸೆಲಿಂಗ್ ಮಾಡಿಸಬೇಕು' ಎಂದು ಸಮಿತಿ ಹೇಳಿದೆ.

ಇತರ ಶಿಫಾರಸುಗಳು

- ವಿದ್ಯಾ ಸಿರಿ ಯೋಜನೆಯಡಿ ಎಸ್‌.ಸಿ, ಎಸ್‌.ಟಿ ವಿದ್ಯಾರ್ಥಿಗಳಿಗೆ ತಿಂಗಳಿಗೆ ₹ 3,000 ನೆರವು ನೀಡುವುದು.
- ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸ್ವಾಮ್ಯದ ಸಾರ್ವಜನಿಕ ಉದ್ದಿಮೆಗಳು, ಕರ್ನಾಟಕ ಹಾಲು ಮಹಾಮಂಡಳ (ಕೆಎಂಎಫ್), ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ಗಳಲ್ಲಿ ಕಡ್ಡಾಯವಾಗಿ ಮೀಸಲಾತಿ ನೀಡುವುದು.
- ಕಲ್ಯಾಣ ಕರ್ನಾಟಕ ಭಾಗದ ಮಕ್ಕಳಿಗೆ ವಾರದಲ್ಲಿ ಐದು ದಿನಗಳ ಕಾಲ ಮೊಟ್ಟೆ ವಿತರಿಸುವುದು.
- ಎಲ್ಲ ನಿಗಮಗಳಲ್ಲಿರುವ ಹಳೆಯ ಯೋಜನೆಗಳನ್ನು ರದ್ದುಪಡಿಸಿ, ಈಗಿನ ಅಗತ್ಯಕ್ಕೆ ತಕ್ಕಂತೆ ಹೊಸ ಯೋಜನೆಗಳನ್ನು ರೂಪಿಸುವುದು.
- ಹೊರ ಗುತ್ತಿಗೆ ನೇಮಕದಲ್ಲೂ ಪರಿಶಿಷ್ಟರಿಗೆ ಮೀಸಲಾತಿ ಒದಗಿಸುವುದು.
- ಸರ್ಕಾರಿ ನೌಕರರ ಮುಂಬಡ್ತಿ ಪ್ರಕ್ರಿಯೆಯಲ್ಲಿ ಎಸ್‌.ಸಿ, ಎಸ್‌.ಟಿ ನೌಕರರಿಗೆ ದುರುದ್ದೇಶದಿಂದ ಅನ್ಯಾಯ ಮಾಡಿದ ಪ್ರಕರಣಗಳ ಮಾಹಿತಿ ಸಂಗ್ರಹಿಸಿ, ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸುವುದು.

11 ನಿಗಮಗಳ ನೋಂದಣಿಯೇ ಆಗಿಲ್ಲ: ಶಿವರಾಜ್ ತಂಗಡಗಿ

ಪ್ರಜಾವಾಣಿ ವಾರ್ತೆ



ಶಿವರಾಜ ಎಸ್‌ ತಂಗಡಗಿ

ವಿಧಾನಸಭೆ: ಹಿಂದಿನ ಸರ್ಕಾರ ಘೋಷಿಸಿದ್ದ 11 ನಿಗಮಗಳ ನೋಂದಣಿಯೇ ಆಗಿಲ್ಲ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಶಿವರಾಜ ತಂಗಡಗಿ ಹೇಳಿದರು.

ಕಾಂಗ್ರೆಸ್‌ನ ಸಿ.ಎಸ್‌. ಪುಟ್ಟರಂಗಶೆಟ್ಟಿ ಮತ್ತು ಬಿಜೆಪಿಯ ಧೀರಜ್ ಮುನಿರಾಜು ಅವರ ಪ್ರಶ್ನೆಗಳಿಗೆ ಉತ್ತರಿಸಿದ ಅವರು, 'ಹಿಂದಿನ ಸರ್ಕಾರ ಹೋದಲ್ಲಿ, ಬಂದಲ್ಲಿ ನಿಗಮಗಳ ಘೋಷಣೆ ಮಾಡಿತ್ತು. ನೋಂದಣಿ, ಅನುದಾನ ನಿಗದಿಗೆ ಕ್ರಮ ಕೈಗೊಂಡಿರಲಿಲ್ಲ. ಈಗ ನಿಗಮಗಳ ನೋಂದಣಿ ಆರಂಭಿಸಿದ್ದು, ಅನುದಾನವನ್ನೂ ಒದಗಿಸಲಾಗುತ್ತಿದೆ' ಎಂದರು.

'ಮರಾಠಾ ಅಭಿವೃದ್ಧಿ ನಿಗಮದ ನೋಂದಣಿಯೇ ಆಗಿಲ್ಲ. ಉಪ್ಪಾರ ಅಭಿವೃದ್ಧಿ ನಿಗಮಕ್ಕೆ ಅನುದಾನವನ್ನೇ ನೀಡಿಲ್ಲ. ಸಣ್ಣ ಸಮುದಾಯಗಳಿಗೆ ನೆರವಿಗೆ ನಿಲ್ಲದಿದ್ದರೆ ಹೇಗೆ' ಎಂದು ಪುಟ್ಟರಂಗ ಶೆಟ್ಟಿ ಕೇಳಿದರು.

'ಸವಿತಾ ಸಮಾಜ ಅಭಿವೃದ್ಧಿ ನಿಗಮ, ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮ ಸೇರಿದಂತೆ ಹಲವು ನಿಗಮಗಳಲ್ಲಿ ಗಂಗಾ ಕಲ್ಯಾಣ ಯೋಜನೆಯಡಿ ತಾಲ್ಲೂಕಿಗೆ ಒಂದು ಕೊಳವೆಬಾವಿ ನೀಡಲಾಗುತ್ತಿದೆ. ಹಂಚಿಕೆ ಮಾಡುವುದು ಹೇಗೆ' ಎಂದು ಧೀರಜ್ ಪ್ರಶ್ನಿಸಿದರು.

15 ಸಾವಿರ ಕೊಳವೆ ಬಾವಿ: ನಾಲ್ಕು ವರ್ಷಗಳಿಂದ ಗಂಗಾ ಕಲ್ಯಾಣ ಯೋಜನೆ ಅನುಷ್ಠಾನದ ಪ್ರಗತಿ ಕುಂಠಿತವಾಗಿದೆ. ಬಾಕಿ ಇರುವ 15,000 ಕೊಳವೆಬಾವಿಗಳನ್ನು 2024ರ ಮಾರ್ಚ್ ಅಂತ್ಯದೊಳಗೆ ಕೊರೆಯಲಾಗುವುದು ಎಂದು ಸಚಿವರು ಭರವಸೆ ನೀಡಿದರು.

ಕೆಪಿಟಿಸಿಎಲ್: 1,500 ಹುದ್ದೆ ಪಟ್ಟಿ ತಿಂಗಳಲ್ಲಿ ಪ್ರಕಟ– ಜಾರ್ಜ್ ಭರವಸೆ

ವಿಧಾನಸಭೆ: ಕೆಪಿಟಿಸಿಎಲ್‌ನ 1,500 ಹುದ್ದೆಗಳಿಗೆ ಸಂಬಂಧಿಸಿದ ಅಂತಿಮ ಆಯ್ಕೆ ಪಟ್ಟಿಯನ್ನು ಇನ್ನು ಒಂದು ತಿಂಗಳೊಳಗೆ ಪ್ರಕಟಿಸಲಾಗುವುದು ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ಭರವಸೆ ನೀಡಿದರು.

ಬಿಜೆಪಿಯ ಎಸ್‌.ಸುರೇಶ್ ಕುಮಾರ್ ಪ್ರಶ್ನೆಗೆ ಉತ್ತರಿಸಿದ ಸಚಿವರು, 'ಪಟ್ಟಿ ಅಖೈರುಗೊಂಡಿದ್ದು, ಒಂದು ತಿಂಗಳಲ್ಲಿ ಪ್ರಕಟಿಸಲಾಗುವುದು' ಎಂದರು.

ವಿಷಯ ಪ್ರಸ್ತಾಪಿಸಿದ ಸುರೇಶ್‌ಕುಮಾರ್, 'ಪಟ್ಟಿ ಬಿಡುಗಡೆ ಆಗದೇ ಇರುವುದರಿಂದ ಅಭ್ಯರ್ಥಿಗಳು ಹತಾಶರಾಗಿದ್ದಾರೆ. ಇವರಲ್ಲಿ ಇಬ್ಬರು ತೀರಿ ಹೋಗಿದ್ದಾರೆ. ಇನ್ನಷ್ಟು ತಡ ಮಾಡಿದರೆ, ಅಭ್ಯರ್ಥಿಗಳ ಮನೋಬಲ ಕುಸಿದು ಹೋಗುತ್ತದೆ. ಹೈಕೋರ್ಟ್ ನಿರ್ದೇಶನದಂತೆ ದಾಖಲೆಗಳನ್ನು ಪರಿಶೀಲಿಸಿ, ಪಟ್ಟಿ ಪ್ರಕಟಿಸಬೇಕು' ಎಂದು ಒತ್ತಾಯಿಸಿದರು.

ಪರೀಕ್ಷಾ ಅಕ್ರಮ ತಡೆ ಮಸೂದೆ ಮಂಡನೆ

ಪ್ರಜಾವಾಣಿ ವಾರ್ತೆ

ವಿಧಾನಸಭೆ: ನೇಮಕಾತಿ ಪರೀಕ್ಷೆಗಳ ಅಕ್ರಮಗಳಲ್ಲಿ ಭಾಗಿಯಾದವರಿಗೆ 12 ವರ್ಷ ಜೈಲು ಶಿಕ್ಷೆ ಹಾಗೂ ₹ 10 ಕೋಟಿವರೆಗೆ ದಂಡ ವಿಧಿಸಲು ಅವಕಾಶ ಕಲ್ಪಿಸುವ 'ಕರ್ನಾಟಕ ಸಾರ್ವಜನಿಕ ಪರೀಕ್ಷೆ (ನೇಮಕಾತಿಯಲ್ಲಿನ ಭ್ರಷ್ಟಾಚಾರ ಮತ್ತು ಅನುಚಿತ ವಿಧಾನಗಳ ಪ್ರತಿಬಂಧಕ ಕ್ರಮಗಳು) ಮಸೂದೆ–2023' ಅನ್ನು ವಿಧಾನಸಭೆಯಲ್ಲಿ ಬುಧವಾರ ಮಂಡಿಸಲಾಯಿತು.

ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಮಸೂದೆಯನ್ನು ಸದನದಲ್ಲಿ ಮಂಡಿಸಿದರು.

ಪ್ರಶ್ನೆ ಪತ್ರಿಕೆ ಸೋರಿಕೆ, ಅಕ್ರಮ ಸಂಗ್ರಹ, ವಿತರಣೆ, ಡಿಜಿಟಲ್ ಸಾಧನಗಳ ಮೂಲಕ ಉತ್ತರ ಪಡೆಯುವುದು ಮತ್ತು ಪೂರೈಸುವುದು, ಒಎಂಆರ್ ಶೀಟ್‌ಗಳನ್ನು ತಿದ್ದುವುದು ಸೇರಿದಂತೆ ಎಲ್ಲ ಬಗೆಯ ಪರೀಕ್ಷಾ ಅಕ್ರಮಗಳನ್ನು ಮಸೂದೆಯ ವ್ಯಾಪ್ತಿಗೆ ತರಲಾಗಿದೆ.

ಆನ್‌ಲೈನ್ ಗೇಮಿಂಗ್‌ಗೆ ಜಿಎಸ್‌ಟಿಗೂ ಮಸೂದೆ: ಬೆಟ್ಟಿಂಗ್, ಕ್ಯಾಸಿನೊ, ಜೂಜು, ಕುದುರೆ ರೇಸಿಂಗ್, ಲಾಟರಿ, ಆನ್‌ಲೈನ್ ಮನಿ ಗೇಮಿಂಗ್‌ಗಳನ್ನು ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯಾಪ್ತಿಗೆ ತರುವ ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ಎರಡನೇ ತಿದ್ದುಪಡಿ) ಮಸೂದೆ–2023' ಅನ್ನು ಸಚಿವ ಪ್ರಿಯಾಂಕ್ ಖರ್ಗೆ ವಿಧಾನಸಭೆಯಲ್ಲಿ ಮಂಡಿಸಿದರು.

ಎಲ್ಲ ಬಗೆಯ ಆನ್‌ಲೈನ್ ಗೇಮಿಂಗ್ ಚಟುವಟಿಕೆಗಳಿಗೆ ಶೇಕಡ 28ರಷ್ಟು ಜಿಎಸ್‌ಟಿ ವಿಧಿಸಲು ಸರಕು ಮತ್ತು ಸೇವಾ ತೆರಿಗೆ ಮಂಡಳಿ (ಜಿಎಸ್‌ಟಿ ಕೌನ್ಸಿಲ್) ಆಗಸ್ಟ್ 2ರಂದು ನಡೆದ ಸಭೆಯಲ್ಲಿ ನಿರ್ಧರಿಸಿತ್ತು. ಅಕ್ಟೋಬರ್ 1ರಿಂದಲೇ ಆನ್‌ಲೈನ್ ಗೇಮಿಂಗ್ ಮೇಲೆ ಜಿಎಸ್‌ಟಿ ಜಾರಿಗೊಳಿಸಿ ಸುಗ್ರೀವಾಜ್ಞೆ ಹೊರಡಿಸಲಾಗಿತ್ತು. ವಿಧಾನಮಂಡಲದಲ್ಲಿ ಆರು ತಿಂಗಳೊಳಗೆ ಮಸೂದೆ ಅಂಗೀಕರಿಸಬೇಕಿತ್ತು.

ಮಸೂದೆಯು ಕ್ಯಾಸಿನೊ, ಕುದುರೆ ರೇಸಿಂಗ್ ಮತ್ತು ಆನ್‌ಲೈನ್ ಗೇಮಿಂಗ್ ಚಟುವಟಿಕೆಗಳನ್ನು ಕಾನೂನುಬದ್ಧಗೊಳಿಸುವುದಿಲ್ಲ ಎಂಬ ಉಲ್ಲೇಖ ಮಸೂದೆಯಲ್ಲಿದೆ.



ವಿದ್ಯಾರ್ಥಿಗಳ ಭೇಟಿ ಬೆಳಗಾವಿಯ ಸುವರ್ಣ ವಿಧಾನಸೌಧಕ್ಕೆ ಕಲಾಪ ವೀಕ್ಷಿಸಲು ಧಾರವಾಡದ ಕೆ.ಪಿ.ಇ.ಎಸ್. ಪದವಿ ಪೂರ್ವ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಬುಧವಾರ ಆಗಮಿಸಿದರು ಪ್ರಜಾವಾಣಿ ಚಿತ್ರ: ಪ್ರಶಾಂತ ಎಚ್‌.ಜಿ.

ಗ್ರಾಮೀಣ ರಸ್ತೆ ಅಭಿವೃದ್ಧಿಗೆ ಯೋಜನೆ: ಪ್ರಿಯಾಂಕ್ ಖರ್ಗೆ

ವಿಧಾನಸಭೆ: ಗ್ರಾಮೀಣ ರಸ್ತೆಗಳ ಅಭಿವೃದ್ಧಿಗೆ ಶೀಘ್ರದಲ್ಲಿಯೇ ಹೊಸ ಯೋಜನೆಯೊಂದನ್ನು ಜಾರಿಗೊಳಿಸಲಾಗುವುದು ಎಂದು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.

ಜೆಡಿಎಸ್‌ನ ರವಿಕುಮಾರ್ ಬಿ.ಎನ್. ಪರವಾಗಿ ಅದೇ ಪಕ್ಷದ ಎಚ್‌.ಸಿ. ಬಾಲಕೃಷ್ಣ ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, 'ಅಭಿವೃದ್ಧಿ ಮತ್ತು ಸುಧಾರಣೆ ಅಗತ್ಯವಿರುವ ಗ್ರಾಮೀಣ ರಸ್ತೆಗಳ ಮಾಹಿತಿಯನ್ನು ಜಿಲ್ಲಾ ಪಂಚಾಯಿತಿಗಳ ಮೂಲಕ ಸಂಗ್ರಹಿಸಲಾಗುತ್ತಿದೆ. ಹಂತ ಹಂತವಾಗಿ ಹೊಸ ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು' ಎಂದರು.

180 ತರಬೇತುದಾರರ ನೇಮಕ: 'ಮುಂಬರುವ ಒಲಿಂಪಿಕ್ ಕ್ರೀಡಾಕೂಟಕ್ಕೆ ಕರ್ನಾಟಕದ ಕ್ರೀಡಾಪಟುಗಳನ್ನು ಸಜ್ಜುಗೊಳಿಸುವ ಉದ್ದೇಶದಿಂದ 180 ಕ್ರೀಡಾ ತರಬೇತುದಾರರನ್ನು ನೇಮಕ ಮಾಡಲಾಗುತ್ತಿದೆ. ಆಯ್ಕೆ ಪ್ರಕ್ರಿಯೆ ಪೂರ್ಣಗೊಂಡಿದ್ದು, ಶೀಘ್ರದಲ್ಲಿ ನೇಮಕಾತಿ ಆದೇಶ ವಿತರಿಸಲಾಗುವುದು' ಎಂದು ಕ್ರೀಡಾ ಮತ್ತು ಯುವಜನ ಸಬಲೀಕರಣ ಸಚಿವ ಬಿ. ನಾಗೇಂದ್ರ ತಿಳಿಸಿದರು.

ಕಾಡು ಪ್ರಾಣಿಗಳಿಂದ ರಕ್ಷಿಸಲು ಮೊರೆ

ವಿಧಾನಸಭೆ: 'ಕಾಡಾನೆ ಹಾವಳಿಗೆ 'ಅರ್ಜುನ' ಆನೆ ಸಾವನ್ನಪ್ಪಿದೆ. ಸಕಲೇಶಪುರ ತಾಲ್ಲೂಕಿನಲ್ಲಿ ಕಾಡಾನೆ ಹಾವಳಿ ಹೆಚ್ಚಾಗಿದೆ. ಇದಕ್ಕೊಂದು ಶಾಶ್ವತ ಪರಿಹಾರ ಕಲ್ಪಿಸಿ. ಚಿರತೆಯೊಂದು ದಾಳಿ ನಡೆಸಿ ಜಾನುವಾರುಗಳನ್ನು ತಿಂದು ಹಾಕಿದೆ. ಅದಕ್ಕೆ ಗುಂಡಿಟ್ಟು ಸಾಯಿಸಿ, ಜನರ ಪ್ರಾಣ ಉಳಿಸಿ' ಎಂದು ಬಿಜೆಪಿಯ ಸಿಮೆಂಟ್ ಮಂಜು ಸರ್ಕಾರವನ್ನು ಒತ್ತಾಯಿಸಿದರು.

ಶೂನ್ಯ ವೇಳೆಯಲ್ಲಿ ಅರ್ಜುನ ಆನೆಯ ಸಾವಿನ ವಿಷಯವನ್ನು ಪ್ರಸ್ತಾಪಿಸಿದ ಅವರು, ಜನರ ಜೀವ ರಕ್ಷಿಸಲು ಪರಿಹಾರವನ್ನು ಕಂಡುಕೊಳ್ಳಲೇಬೇಕು. ಕಾಡು ಹಂದಿ, ಕಾಡು ಕೋಣ, ಚಿರತೆ, ಆನೆಗಳ ಕಾಟ ವಿಪರೀತವಾಗಿದೆ. ಸಾರ್ವಜನಿಕರು ಆತಂಕದಲ್ಲಿದ್ದಾರೆ ಎಂದರು.

100 ವಿದ್ಯಾರ್ಥಿ ನಿಲಯ ಆರಂಭಕ್ಕೆ ಪ್ರಸ್ತಾವ

ಶೇ 25ರಷ್ಟು ಸೀಟು ಹೆಚ್ಚಳ: ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಶಿವರಾಜ ತಂಗಡಗಿ ಹೇಳಿಕೆ

ಪ್ರಜಾವಾಣಿ ವಾರ್ತೆ

ವಿಧಾನಸಭೆ: ಜಿಲ್ಲಾ ಕೇಂದ್ರಗಳಲ್ಲಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ನಿಲಯಗಳ ಕೊರತೆ ಇರುವುದರಿಂದ 100 ಹೊಸ ವಿದ್ಯಾರ್ಥಿ ನಿಲಯಗಳನ್ನು ಪ್ರಾರಂಭಿಸಲು ಅನುಮತಿ ಕೋರಿ ಆರ್ಥಿಕ ಇಲಾಖೆಗೆ ಪ್ರಸ್ತಾವ ಸಲ್ಲಿಸಲಾಗಿದೆ.ಒಪ್ಪಿಗೆ ದೊರೆತ ತಕ್ಷಣ ಮುಂದಿನ ಪ್ರಕ್ರಿಯೆ ಆರಂಭಿಸಲಾಗುವುದು ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಶಿವರಾಜ ತಂಗಡಗಿ ತಿಳಿಸಿದರು.

ಬಿಜೆಪಿಯ ಕಿರಣ್ ಕುಮಾರ್ ಕೊಡ್ಗಿ ಎ. ಅವರ ಪ್ರಶ್ನೆಗೆ ಬುಧವಾರ ಉತ್ತರಿಸಿದರು.

ವಿದ್ಯಾರ್ಥಿ ನಿಲಯಗಳಲ್ಲಿ ಪ್ರವೇಶ ದೊರಕದ ಅರ್ಹ ವಿದ್ಯಾರ್ಥಿಗಳಿಗೆ ವಿದ್ಯಾ ಸಿರಿ ಯೋಜನೆಯಡಿ ನೆರವು ನೀಡಲಾಗುತ್ತಿದೆ. ಕಳೆದ ಶೈಕ್ಷಣಿಕ ವರ್ಷದಲ್ಲಿ ₹ 38.9 ಕೋಟಿ ನೆರವು ನೀಡಲಾಗಿದೆ. ಈ ವರ್ಷ ನೆರವು ಕೋರಿ 84,271 ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಿದ್ದಾರೆ. ಅರ್ಹರಿಗೆ ನೆರವು ಮಂಜೂರು ಮಾಡಲಾಗುವುದು ಎಂದು ಭರವಸೆ ನೀಡಿದರು.

ಹೆಚ್ಚಿನ ವಿದ್ಯಾರ್ಥಿ ನಿಲಯಗಳನ್ನು ಆರಂಭಿಸುವಂತೆ ಕಿರಣ್ ಕುಮಾರ್, ಬಿಜೆಪಿಯ ಯಶ್‌ಪಾಲ್ ಸುವರ್ಣ, ಆರಗ ಜ್ಞಾನೇಂದ್ರ ಸೇರಿದಂತೆ ಎಲ್ಲ ಪಕ್ಷಗಳ ಸದಸ್ಯರೂ ಆಗ್ರಹಿಸಿದರು. ಮುಂದಿನ 30 ವರ್ಷಗಳ ಅಗತ್ಯವನ್ನು ಗಮನದಲ್ಲಿ ಇರಿಸಿಕೊಂಡು ಯೋಜನೆ ರೂಪಿಸುವಂತೆ ಸಭಾಧ್ಯಕ್ಷ ಯು.ಟಿ. ಖಾದರ್ ಸಲಹೆ ನೀಡಿದರು.

ಶೇ 25ರಷ್ಟು ಸೀಟುಗಳ ಹೆಚ್ಚಳ: ಬಿಜೆಪಿಯ ಬಿ.ಪಿ. ಹರೀಶ್ ಪ್ರಶ್ನೆಗೆ ಉತ್ತರಿಸಿದ ಶಿವರಾಜ ತಂಗಡಗಿ, 'ಬೇಡಿಕೆ ಹೆಚ್ಚಿರುವ ಕಾರಣದಿಂದ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಲ್ಲಿ ಸೀಟುಗಳ ಸಂಖ್ಯೆಯನ್ನು ಶೇಕಡ 25ರಷ್ಟು ಹೆಚ್ಚಿಸಲಾಗಿದೆ. 30,000 ವಿದ್ಯಾರ್ಥಿಗಳಿಗೆ ಹೆಚ್ಚುವರಿಯಾಗಿ ಪ್ರವೇಶ ನೀಡಲಾಗುವುದು' ಎಂದರು.

'ಸ್ಥಳೀಯರಿಗೆ ಸೀಟು ಮೀಸಲಿಡಿ'

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ (ಕ್ರೈಸ್) ಅಧೀನದಲ್ಲಿರುವ ವಸತಿ ಶಾಲೆಗಳಲ್ಲಿ ಶೇಕಡ 75ರಷ್ಟು ಸೀಟುಗಳನ್ನು ಆಯಾ ತಾಲ್ಲೂಕಿನ ವಿದ್ಯಾರ್ಥಿಗಳಿಗೆ ಮೀಸಲಿಡಬೇಕು ಎಂದು ಕಾಂಗ್ರೆಸ್‌ನ ಕೆ.ಎಂ. ಶಿವಲಿಂಗೇಗೌಡ ಆಗ್ರಹಿಸಿದರು.

ಶಿವಲಿಂಗೇಗೌಡರ ಪ್ರಶ್ನೆ ಮತ್ತು ಆಗ್ರಹಕ್ಕೆ ಪ್ರತಿಕ್ರಿಯಿಸಿದ ಸಚಿವ ಶಿವರಾಜ ತಂಗಡಗಿ, 'ಶೇಕಡ 60ರಷ್ಟು ಸೀಟುಗಳನ್ನು ಆಯಾ ತಾಲ್ಲೂಕಿನ ವಿದ್ಯಾರ್ಥಿಗಳಿಗೆ ಮತ್ತು ಶೇ 40ರಷ್ಟು ಸೀಟುಗಳನ್ನು ಹೊರಗಿನವರಿಗೆ ಹಂಚಿಕೆ ಮಾಡಲಾಗುತ್ತಿದೆ' ಎಂದು ಸಚಿವರು ಉತ್ತರಿಸಿದರು.

ತನಿಖೆಗೆ ಆಗ್ರಹ: ಮಧ್ಯ ಪ್ರವೇಶಿಸಿದ ಜೆಡಿಎಸ್‌ನ ಎಚ್‌.ಡಿ. ರೇವಣ್ಣ, 'ಹಾಸನ ಜಿಲ್ಲೆಯಲ್ಲಿ ವಸತಿ ಶಾಲೆಗಳ 670 ಸೀಟುಗಳನ್ನು ಮಾರಾಟ ಮಾಡಿರುವ ದೂರುಗಳಿವೆ. ಈ ಕುರಿತು ತನಿಖೆ ನಡೆಸಿ, ಕ್ರಮ ಜರುಗಿಸಬೇಕು' ಎಂದು ಆಗ್ರಹಿಸಿದರು.

ಮದರಸಾಗಳಲ್ಲಿ ಕನ್ನಡ, ಗಣಿತ, ವಿಜ್ಞಾನ ಬೋಧನೆ: ಕೃಷ್ಣ ಬೈರೇಗೌಡ

ವಿಧಾನಪರಿಷತ್: 'ಮದರಸಾ ಶಿಕ್ಷಣ ಸಂಸ್ಥೆಗಳಲ್ಲಿ ಕಡ್ಡಾಯವಾಗಿ ಕನ್ನಡ, ಗಣಿತ, ವಿಜ್ಞಾನ ಮತ್ತು ಸಮಾಜ ವಿಜ್ಞಾನ ವಿಷಯ ಬೋಧಿಸಲಾಗುವುದು' ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಹೇಳಿದರು.

ಜೆಡಿಎಸ್‌ನ ಬಿ.ಎಂ. ಫಾರೂಖ್ ಪರವಾಗಿ ಅಬ್ದುಲ್ ಜಬ್ಬಾರ್ ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು, 'ಮದರಸಾ ಶಿಕ್ಷಣ ಸಂಸ್ಥೆಗಳಲ್ಲಿನ ಮಕ್ಕಳಿಗೆ ಧಾರ್ಮಿಕ ಬೋಧನೆ ಮಾತ್ರವಲ್ಲದೆ ಸಾಮಾಜಿಕ ಬದುಕು ಕಟ್ಟಿಕೊಳ್ಳುವ ಇತರ ವಿಷಯಗಳ ಕುರಿತು ಬೋಧನೆ ಮಾಡಲಾಗುವುದು. ಪ್ರಾಯೋಗಿಕವಾಗಿ 100 ಮದರಸಾಗಳಲ್ಲಿ ಈ ರೀತಿ ಬೋಧನೆ ಆರಂಭಿಸಲಾಗುವುದು' ಎಂದರು.

' ವಕ್ಫ್ ಆಸ್ತಿಗಳಲ್ಲಿ ಹಾಗೂ ವಕ್ಫ್ ಸಂಸ್ಥೆಗಳಿಂದ ನಡೆಸಲಾಗುತ್ತಿರುವ ನೋಂದಾಯಿತ ಮದರಸಾಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಮಕ್ಕಳಿಗೆ ಪ್ರಾಯೋಗಿಕವಾಗಿ ಎರಡು ವರ್ಷ ಕನ್ನಡ, ಇಂಗ್ಲೀಷ್, ವಿಜ್ಞಾನ, ಗಣಿತ ಹಾಗೂ ಇತರೆ ವಿಷಯಗಳ ಬಗ್ಗೆ ಸತತವಾಗಿ ಬೋಧಿಸಿ, ರಾಷ್ಟ್ರೀಯ ಮುಕ್ತ ಶಾಲೆಗಳ ಮೂಲಕ ಎಸ್ಸೆಸ್ಸೆಲ್ಸಿ, ಪಿಯುಸಿ ಮತ್ತು ಪದವಿ ಪರೀಕ್ಷೆ ಬರೆಯುವಂತೆ ಮಾಡಲಾಗುವುದು. ಈ ಸಂಬಂಧ ಈಗಾಗಲೇ ಆದೇಶ ಹೊರಡಿಸಲಾಗಿದೆ' ಎಂದರು.

'ಪೊಲೀಸ್– ವಕೀಲರ ಸಂಘರ್ಷ ತಪ್ಪಿಸಿ'

ಚಿಕ್ಕಮಗಳೂರಿನಲ್ಲಿ ಇತ್ತೀಚೆಗೆ ವಕೀಲರೊಬ್ಬರ ಮೇಲೆ ಪೊಲೀಸರು ಹಲ್ಲೆ ನಡೆಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ವಕೀಲರು ಪ್ರತಿಭಟನೆ ನಡೆಸಿದ್ದು, ಅದಕ್ಕೆ ಪ್ರತಿಯಾಗಿ ಪೊಲೀಸರೂ ಪ್ರತಿಭಟನೆ ನಡೆಸಿದ್ದಾರೆ. ಇದು ಅತ್ಯಂತ ಕಳವಳಕಾರಿ ವಿಚಾರ ಎಂದು ಬಿಜೆಪಿಯ ಸುನಿಲ್‌ಕುಮಾರ್ ಹೇಳಿದ್ದಾರೆ.

'ಪೊಲೀಸರೇ ಪ್ರತಿಭಟನೆಗೆ ಇಳಿದರೆ ಸರ್ಕಾರದ ಆಡಳಿತ ವ್ಯವಸ್ಥೆ ಎತ್ತ ಸಾಗಿದೆ ಎಂಬುದು ಗೊತ್ತಾಗುತ್ತದೆ. ಸರ್ಕಾರವು ವಕೀಲರು ಮತ್ತು ಪೊಲೀಸರನ್ನು ಕರೆಸಿ ಮಾತುಕತೆ ನಡೆಸಿ ಪರಿಸ್ಥಿತಿ ತಿಳಿಗೊಳಿಸಬೇಕು. ರಾಜ್ಯದ ಎಲ್ಲೆಡೆ ಈ ಪ್ರತಿಭಟನೆ ವ್ಯಾಪಿಸುವ ಅಪಾಯವಿದೆ' ಎಂದು ಎಚ್ಚರಿಕೆ ನೀಡಿದರು.

ಜಮೀರ್ ಗೈರು: ವಾಗ್ವಾದ

ಪ್ರಜಾವಾಣಿ ವಾರ್ತೆ

ವಿಧಾನ ಪರಿಷತ್: ವಸತಿ ಮತ್ತು ವಕ್ಫ್ ಸಚಿವ ಜಮೀರ್ ಅಹಮ್ಮದ್ ಗೈರಾದ ವಿಷಯ ಆಡಳಿತ ಮತ್ತು ವಿರೋಧ ಪಕ್ಷಗಳ ಸದಸ್ಯರ ಮಧ್ಯೆ ಕಾವೇರಿದ ವಾಗ್ವಾದಕ್ಕೆ ಕಾರಣವಾಯಿತು.

ಪ್ರಶ್ನೋತ್ತರ ಅವಧಿಯಲ್ಲಿ ಕಾಂಗ್ರೆಸ್‌ನ ಅಬ್ದುಲ್ ಜಬ್ಬಾರ್, ವಕ್ಫ್ ಆಸ್ತಿಗಳನ್ನು ಅನಧಿಕೃತವಾಗಿ ಒತ್ತುವರಿ ಮಾಡುತ್ತಿರುವ ಬಗ್ಗೆ ಸಚಿವ ಜಮೀರ್ ಅವರಿಗೆ ಪ್ರಶ್ನೆ ಕೇಳಿದ್ದರು. ಈ ವೇಳೆ ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ಜಮೀರ್ ಪರವಾಗಿ ಉತ್ತರಿಸಿದರು.

ಪ್ರಶ್ನೆ ಮುಗಿಯುತ್ತಿದ್ದಂತೆ ಸಭಾಪತಿ ಅವರು, 'ಸಚಿವರಿಗೆ ಸದನಕ್ಕೆ ಬಂದು ಮುಖ ತೋರಿಸಲು ಹೇಳಿ' ಎಂದು ಸಭಾನಾಯಕ ಎನ್‌.ಎಸ್‌. ಬೋಸರಾಜು ಅವರಿಗೆ ಸಲಹೆ ನೀಡಿದರು.

ಸಭಾಪತಿ ಹೀಗೆ ಹೇಳುತ್ತಿದ್ದಂತೆ ಬಿಜೆಪಿ-ಜೆಡಿಎಸ್ ಸದಸ್ಯರು, 'ಸಚಿವರು ಸದನಕ್ಕೆ ಏಕೆ ಬಂದಿಲ್ಲ?ಸಮಸ್ಯೆ ಏನು? ಅವರು ಅನುಮತಿ ಪಡೆದಿದ್ದಾರೆಯೇ? ಏನು ಕಾರಣ ನೀಡಿದ್ದಾರೆ' ಎಂದು ಬಿಜೆಪಿಯ ಕೋಟ ಶ್ರೀನಿವಾಸ್ ಪೂಜಾರಿ ಪ್ರಶ್ನಿಸಿದರು.

ಬಿಜೆಪಿಯ ವೈ.ಎ. ನಾರಾಯಣ ಸ್ವಾಮಿ. 'ಸರ್ಕಾರಕ್ಕೆ ಸಭಾಪತಿ ಚಾಟಿ ಬೀಸಬೇಕು, ಮುಖ ತೋರಿಸಿ ಎಂದು ಮಾತ್ರ ಹೇಳಿದರೆ ಹೇಗೆ' ಎಂದರು. ಆಗ ಸದನದ ನಿಯಮ ಓದಿದ ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು, ಉಳಿದದ್ದು ಸಭಾಪತಿಗಳ ನಿರ್ಣಯಕ್ಕೆ ಬಿಟ್ಟಿದ್ದು ಎಂದರು.

ಆಗ ಸಭಾಪತಿ, 'ಜಮೀರ್ ಅನುಮತಿ ಪಡೆದುಕೊಂಡಿದ್ದಾರೆ, ಅವರ ಕಾರಣಗಳು ನನಗೆ ಸಂಬಂಧ ಇಲ್ಲ' ಎಂದು ಪುನರುಚ್ಚರಿಸಿದರು.

'ಸಚಿವರು ಪೀಠಕ್ಕೆ ಅವಮಾನ ಆಗುವಂತೆ ಮಾತನಾಡಿದ್ದಾರೆ. ಅದರ ಬಗ್ಗೆ ಚರ್ಚೆ ಮಾಡಲು ನಮಗೆ ಅವಕಾಶ ನೀಡಬೇಕು' ಎಂದು ಕೋಟ ಶ್ರೀನಿವಾಸ ಪೂಜಾರಿ ಕೋರಿದಾಗ, ಚರ್ಚೆಗೆ ಅವಕಾಶ ಮಾಡಿಕೊಡುವುದಾಗಿ ಸಭಾಪತಿ ತಿಳಿಸಿದರು.

'ಕೊಬ್ಬರಿಗೆ ಬೆಂಬಲ ಬೆಲೆ ಇನ್ನೂ ಹೆಚ್ಚಳ'

ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಸದಸ್ಯರ ಮಾತಿನ ಜಟಾಪಟಿ

ಪ್ರಜಾವಾಣಿ ವಾರ್ತೆ

ವಿಧಾನಸಭೆ: ಪ್ರತಿ ಕ್ವಿಂಟಲ್ ಕೊಬ್ಬರಿಗೆ ₹1,250 ಬೆಂಬಲ ಬೆಲೆಯ ಜತೆಗೆ ಹೆಚ್ಚುವರಿಯಾಗಿ ₹250 ನೀಡಲಾಗುವುದು ಎಂದು ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ತಿಳಿಸಿದರು.

ಜೆಡಿಎಸ್‌ನ ಎಚ್‌.ಡಿ.ರೇವಣ್ಣ ಮತ್ತು ಕಾಂಗ್ರೆಸ್‌ನ ಕೆ.ಎಂ. ಶಿವಲಿಂಗೇಗೌಡ ಅವರು ಬುಧವಾರ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ಕೊಬ್ಬರಿ ದರ ಕುಸಿತದ ವಿಷಯಕ್ಕೆ ಪ್ರತಿಕ್ರಿಯಿಸಿ ಭರವಸೆ ನೀಡಿದರು.

ಅಲ್ಲದೇ, 'ರಾಜ್ಯದಲ್ಲಿ ನಾಫೆಡ್‌ನಿಂದ ವರ್ಷವಿಡೀ ಕೊಬ್ಬರಿ ಖರೀದಿಗೆ ಕೇಂದ್ರಕ್ಕೆ ಮನವಿ ಮಾಡಲು ನಿಯೋಗವೊಂದನ್ನು ಒಯ್ಯಲು ತಯಾರಿದ್ದೇನೆ. ಬಿಜೆಪಿ ಸದಸ್ಯರು ಕೇಂದ್ರ ಸಚಿವರ ಸಮಯ ನಿಗದಿ ಮಾಡಿಕೊಡಲಿ' ಎಂದು ಅವರು ಮನವಿ ಮಾಡಿದರು.

ಇದಕ್ಕೆ ಮುನ್ನ ವಿಷಯ ಪ್ರಸ್ತಾಪಿಸಿದ ಕೆ.ಎಂ.ಶಿವಲಿಂಗೇಗೌಡ, ಕೊಬ್ಬರಿ ದರ ಕಳೆದ 6 ತಿಂಗಳಲ್ಲಿ ₹11,875 ಇದ್ದದ್ದು, ₹7,000 ಕ್ಕೆ ಕುಸಿದು ಹೋಗಿದೆ. ಕೇಂದ್ರ ಸರ್ಕಾರ ರೈತರ ನೆರವಿಗೆ ಬರುತ್ತಿಲ್ಲ. ಬಿಜೆಪಿಯ 25 ಸಂಸದರು ಏನೂ ಮಾಡುತ್ತಿಲ್ಲ ಎಂದು ಹೇಳಿದ್ದು ಬಿಜೆಪಿ ಸದಸ್ಯರನ್ನು ಕೆರಳಿಸಿತು. 'ನೀವು ಇಲ್ಲಿ ರಾಜ್ಯ ಸರ್ಕಾರದ ಗಮನ ಸೆಳೆಯಿರಿ, ಕೇಂದ್ರದ ಗಮನ ಸೆಳೆಯಬೇಕೆಂಬ ಅಪೇಕ್ಷೆ ಇದ್ದರೆ ಹಾಸನದಿಂದ ಲೋಕಸಭೆಗೆ ಸ್ಪರ್ಧಿಸಿ ಸಂಸತ್ತಿನಲ್ಲಿ ಪ್ರಶ್ನಿಸಿ' ಎಂದು ಬಿಜೆಪಿಯ ಡಾ.ಸಿ.ಎನ್‌.ಅಶ್ವತ್ಥನಾರಾಯಣ ಛೇಡಿಸಿದರು. ಈ ಹಂತದಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಸದಸ್ಯರ ಮಧ್ಯೆ ಮಾತಿನ ಜಟಾಪಟಿ ನಡೆಯಿತು.

ಎಚ್‌.ಡಿ.ರೇವಣ್ಣ ಅವರು ಮಾತನಾಡಿ, 'ನಿಮ್ಮ ಪಕ್ಷದ ರಾಷ್ಟ್ರೀಯ ಅಧ್ಯಕ್ಷರೇ ರಾಜ್ಯಸಭೆಯ ವಿರೋಧ ಪಕ್ಷದ ನಾಯಕ. ಅವರು ಏಕೆ ಈ ವಿಷಯ ಪ್ರಸ್ತಾಪಿಸಬಾರದು' ಎಂದು ಪ್ರಶ್ನಿಸಿದರು. ಇದಕ್ಕೆ ಕಾಂಗ್ರೆಸ್ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದರು.

ರೇವಣ್ಣ–ಕೆಎಂಶಿ ಜಟಾಪಟಿಗೆ ತೆರೆ

ಕೆ.ಎಂ.ಶಿವಲಿಂಗೇಗೌಡ ಅವರು ಎಚ್‌.ಡಿ.ರೇವಣ್ಣ ಅವರ ವಿರುದ್ಧ ಬಳಸಿದ್ದ ಪದಗಳನ್ನು ಕಡತದಿಂದ ತೆಗೆಸುವ ಮೂಲಕ ಇಬ್ಬರ ನಡುವಿನ ಜಟಾಪಟಿಗೆ ಸಭಾಧ್ಯಕ್ಷ ಯು.ಟಿ.ಖಾದರ್ ತೆರೆ ಎಳೆದರು.

'ಸದಸ್ಯರು ಸಮ್ಮತಿಸಿದರೆ ದರ ಹೆಚ್ಚಳ'

ವಿಧಾನ ಪರಿಷತ್: 'ಸದನದ ಸದಸ್ಯರು ಸಮ್ಮತಿಸಿದರೆ ರೈತರಿಗೆ ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ಹಾಲಿನ ಮಾರಾಟ ದರ ಹೆಚ್ಚಿಸಲು ಸರ್ಕಾರ ಸಿದ್ಧವಿದೆ' ಎಂದು ಪಶುಸಂಗೋಪನೆ ಸಚಿವ ಕೆ. ವೆಂಕಟೇಶ್ ಅವರು ತಿಳಿಸಿದರು.

ಕಾಂಗ್ರೆಸ್ಸಿನ ಕೆ. ಹರೀಶ್‌ಕುಮಾರ್ ಅವರ ಪ್ರಶ್ನೆಗೆ ಉತ್ತರಿಸಿದ ಅವರು, 'ಹಾಲಿನ ಮಾರಾಟ ದರವನ್ನು ಹೆಚ್ಚಳ ಮಾಡಬೇಕೆಂಬ ಬೇಡಿಕೆ ಇದೆ. ಇದರಿಂದ ರೈತರಿಗೆ ಅನುಕೂಲ ಆಗುವುದಾದರೆ ಖಂಡಿತವಾಗಿಯೂ ನಮ್ಮ ಸರ್ಕಾರ ಸಿದ್ಧವಿದೆ. ಆದರೆ, ಅದಕ್ಕೂ ಮೊದಲು ಸದನದ ಸದಸ್ಯರ ಒಪ್ಪಿಗೆ ಅಗತ್ಯ' ಎಂದು ಮನವಿ ಮಾಡಿದರು.

'ಕರ್ನಾಟಕ ಹಾಲು ಮಹಾಮಂಡಳಿಯು ಪಶು ಆಹಾರ ಉತ್ಪಾದನೆಗೆ ಅವಶ್ಯಕವಿರುವ ಕಚ್ಚಾ ಪದಾರ್ಥಗಳ ವೆಚ್ಚದ ಮೇಲೆ ಪಶು ಆಹಾರದ ದರವನ್ನು ಹೆಚ್ಚಳ ಮಾಡಿದೆ. ಇದರಿಂದಾಗಿ ಪಶು ಆಹಾರದ ಬೆಲೆ ಒಂದು ಕೆಜಿಗೆ ₹ 1 ಹೆಚ್ಚಳವಾಗಿದೆ' ಎಂದು ಹೇಳಿದರು.

'ಮೂರು ತಿಂಗಳಲ್ಲಿ ಭೂಹಕ್ಕು'

ಪ್ರತಾಪ ಸಿಂಹ ನಾಯಕ್ ಪ್ರಶ್ನೆಗೆ ಈಶ್ವರ್ ಖಂಡ್ರೆ ಉತ್ತರ

ಪ್ರಜಾವಾಣಿ ವಾರ್ತೆ

ವಿಧಾನ ಪರಿಷತ್: ಅರಣ್ಯ ಪ್ರದೇಶದ ವ್ಯಾಪ್ತಿಯಲ್ಲಿ 1978ಕ್ಕೂ ಮೊದಲು ಸಾಗುವಳಿ ಮಾಡಿದ್ದವರಿಗೆ ಮೂರು ತಿಂಗಳ ಒಳಗೆ ಭೂಹಕ್ಕು ನೀಡಲಾಗುವುದು ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಹೇಳಿದರು.

ಬಿಜೆಪಿಯ ಪ್ರತಾಪ ಸಿಂಹ ನಾಯಕ್ ಪ್ರಶ್ನೆಗೆ ಉತ್ತರಿಸಿದ ಅವರು, ರಾಜ್ಯದ 31 ಜಿಲ್ಲೆಗಳಲ್ಲಿ ಸ್ವೀಕರಿಸಿದ ಎಲ್ಲ ಅರ್ಜಿಗಳನ್ನು ಪರಿಶೀಲಿಸಲಾಗಿದೆ. ಅರ್ಜಿ ಸಲ್ಲಿಕೆಯಾದ ಸ್ಥಳದ ಜಂಟಿ ಸರ್ವೆ ಕಾರ್ಯವೂ ಮುಗಿದಿದೆ. ಸುಮಾರು 8 ಸಾವಿರ ರೈತರಿಗೆ ಸಾಗುವಳಿ ಪತ್ರ ದೊರೆಯಲಿದೆ ಎಂದರು.

ಡ್ರೋನ್ ಸೇರಿದಂತೆ ಆಧುನಿಕ ತಂತ್ರಜ್ಞಾನ ಬಳಸಿಕೊಂಡು ಅರಣ್ಯ ಹಾಗೂ ಕಂದಾಯ ಭೂಮಿಯ ಜಂಟಿ ಸರ್ವೆ ಕಾರ್ಯ ನಡೆಸಲಾಗುವುದು. ನಿಖರವಾಗಿ ಕಂದಾಯ, ಅರಣ್ಯ, ಖಾಸಗಿ ಭೂಮಿ ಗುರುತಿಸಲಾಗುವುದು. ಅಲ್ಲಿಯವರೆಗೂ ಒತ್ತುವರಿ ತೆರವು ಮಾಡುವುದಿಲ್ಲ. ಯಥಾಸ್ಥಿತಿ ಕಾಪಾಡಲಾಗುವುದು. ಜನರು ತಮ್ಮ ಬಳಿ ಇರುವ ದಾಖಲೆಗಳನ್ನು ಸಲ್ಲಿಸಬೇಕು. ಸರ್ವೆ ನಂತರವೂ 30ರಿಂದ 40 ವರ್ಷಗಳ ಹಿಂದೆ ಮನೆಕಟ್ಟಿಕೊಂಡವರಿಗೆ, ಜನವಸತಿಗೆ ತೊಂದರೆಯಾಗದಂತೆ ನೋಡಿಕೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಜನವಸತಿಯಷ್ಟೇ ಅರಣ್ಯ ಭೂಮಿಯೂ ಮುಖ್ಯ. ವನ್ಯಜೀವಿಗಳ ದಾಳಿಯಿಂದ ಎರಡು ವರ್ಷಗಳಲ್ಲಿ 93 ಜನರು ಪ್ರಾಣ ಕಳೆದುಕೊಂಡಿದ್ದಾರೆ. ಹಾಗಾಗಿ, ಸುಪ್ರೀಂಕೋರ್ಟ್ ಆದೇಶಗಳನ್ನು ಗಮನದಲ್ಲಿ ಇಟ್ಟುಕೊಂಡು ದೊಡ್ಡ ಒತ್ತುವರಿಯನ್ನು ತೆರವುಗೊಳಿಸಲಾಗುವುದು, ಅಂಥವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದರು.

ಬೆಂಗಳೂರಿನ 2 ಸಾವಿರ ಎಕರೆ ಸೇರಿದಂತೆ ರಾಜ್ಯದಲ್ಲಿ ಸುಮಾರು 2 ಲಕ್ಷ ಅರಣ್ಯ ಭೂಮಿ ಒತ್ತುವರಿಯಾಗಿದೆ. ಹಿಂದೆ ಸುಪ್ರೀಂಕೋರ್ಟ್‌ಗೆ ಅಫಿಡವಿಟ್ ಸಲ್ಲಿಸುವಾಗ 10 ಲಕ್ಷ ಹೆಕ್ಟೇರ್ ಡೀಮ್ಡ್ ಅರಣ್ಯ ಭೂಮಿ ಎಂದು ನಮೂದಿಸಲಾಗಿತ್ತು. ಈಗ ಮರು ಅಂದಾಜು ಮಾಡಿ 3.30 ಲಕ್ಷ ಹೆಕ್ಟೇರ್‌ಗೆ ಇಳಿಸಲಾಗಿದೆ. ಅದನ್ನೂ ಮರು ಅಂದಾಜು ಮಾಡಲು ಒತ್ತಡವಿದೆ ಎಂದರು.

ಪೂಂಜಾ ಪ್ರಕರಣ: ವಿಚಾರಣೆಗೆ ಸೂಚನೆ

ಅರಣ್ಯಭೂಮಿ ಒತ್ತುವರಿ ತೆರವಿಗೆ ಮುಂದಾಗಿದ್ದ ಅಧಿಕಾರಿಗಳ ಕರ್ತವ್ಯಕ್ಕೆ ಅಡ್ಡಿಪಡಿಸಿದ್ದ ಆರೋಪದ ಮೇಲೆ ಶಾಸಕ ಹರೀಶ್ ಪೂಂಜಾ ಅವರ ವಿರುದ್ಧ ಎಫ್‌ಐಆರ್ ದಾಖಲಿಸಿದ ಪ್ರಕರಣದ ವಿಚಾರಣೆ ನಡೆಸಿ, ವರದಿ ನೀಡಲು ಹಿರಿಯ ಅಧಿಕಾರಿಗಳಿಗೆ ಸೂಚಿಸಲಾಗಿದೆ. ವರದಿ ಬಂದ ನಂತರ ಅಧಿಕಾರಿಗಳ ಲೋಪವಾಗಿದ್ದರೆ ಅರಣ್ಯಾಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲಾಗುವುದು ಎಂದು ಸಚಿವ ಖಂಡ್ರೆ ಹೇಳಿದರು.

7ನೇ ವೇತನ ಆಯೋಗದ ವರದಿ: ಮುಖ್ಯಮಂತ್ರಿಯಿಂದ ಉತ್ತರ ಕೊಡಿಸುತ್ತೇನೆ– ಹೊರಟ್ಟಿ

ಸಭಾಪತಿ ಭರವಸೆ: ವಿಪಕ್ಷ ಧರಣಿ ವಾಪಸ್

ಪ್ರಜಾವಾಣಿ ವಾರ್ತೆ

ವಿಧಾನ ಪರಿಷತ್: 'ಸರ್ಕಾರಿ ನೌಕರರ ವೇತನ ಪರಿಷ್ಕರಣೆಗೆ ರಚಿಸಿದ 7ನೇ ವೇತನ ಆಯೋಗದ ವರದಿಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ ನಾನೇ ಉತ್ತರ ಕೊಡಿಸುತ್ತೇನೆ' ಎಂದು ಸಭಾಪತಿ ಬಸವರಾಜ ಹೊರಟ್ಟಿ ಭರವಸೆ ನೀಡಿದ ಬಳಿಕ ವಿರೋಧ ಪಕ್ಷದ ಸದಸ್ಯರು ಧರಣಿ ಕೈಬಿಟ್ಟರು.

ಬುಧವಾರ ಕಲಾಪ ಆರಂಭವಾಗುತ್ತಿದ್ದಂತೆ ಸಭಾಪತಿ ಪೀಠದ ಎದುರು ಧರಣಿ ನಡೆಸಿದ ಬಿಜೆಪಿ, ಜೆಡಿಎಸ್ ಸದಸ್ಯರು, 'ಆಯೋಗ ವರದಿ ಪೂರ್ಣಗೊಂಡಿದ್ದರೂ ವಿನಾ ಕಾರಣ ಸರ್ಕಾರ ವಿಳಂಬ ಧೋರಣೆ ಅನುಸರಿಸುತ್ತಿದೆ. ಈ ಬಗ್ಗೆ ಮುಖ್ಯಮಂತ್ರಿ ಉತ್ತರ ನೀಡಬೇಕು' ಎಂದು ಪಟ್ಟುಹಿಡಿದರು.

ಮಧ್ಯಪ್ರವೇಶಿಸಿದ ಮುಖ್ಯ ಸಚೇತಕ ಸಲೀಂ ಅಹ್ಮದ್, 'ಮುಖ್ಯಮಂತ್ರಿ ಪರವಾಗಿ ಸಭಾನಾಯಕ ಎನ್‌.ಎಸ್‌. ಬೋಸರಾಜು ಈಗಾಗಲೇ ಉತ್ತರ ನೀಡಿದ್ದಾರೆ' ಎಂದರು.

ಇದರಿಂದ ಕೆರಳಿದ ಬಿಜೆಪಿಯ ಕೋಟ ಶ್ರೀನಿವಾಸ ಪೂಜಾರಿ, ವೈ.ಎ. ನಾರಾಯಣಸ್ವಾಮಿ, ತೇಜಸ್ವಿನಿಗೌಡ ಮತ್ತಿತರರು, 'ರಾಜ್ಯ ಸರ್ಕಾರ ಸಮರ್ಪಕ ಉತ್ತರ ನೀಡಿಲ್ಲ. ಈ ಧೋರಣೆ ಯಾಕೆ? ಈ ವಿಚಾರದಲ್ಲಿ ಮುಖ್ಯಮಂತ್ರಿ ಸದನದಲ್ಲಿ ಸ್ಪಷ್ಟ ನಿಲುವು ಪ್ರಕಟಿಸಲಿ' ಎಂದು ಆಗ್ರಹಿಸಿದರು.


ಆಗ ಸಲೀಂ ಅಹ್ಮದ್, 'ವಿರೋಧ ಪಕ್ಷಗಳ ಸದಸ್ಯರು ಬ್ಲ್ಯಾಕ್‌ಮೇಲ್ ಮಾಡುತ್ತಿದ್ದಾರೆ' ಎಂದರು. ಗದ್ದಲ ಉಂಟಾದ ಕಾರಣ ಸದನವನ್ನು ಸಭಾಪತಿ 10 ನಿಮಿಷ ಮುಂದೂಡಿದರು. ಮತ್ತೆ ಕಲಾಪ ಆರಂಭವಾಗುತ್ತಿದ್ದಂತೆ ವಿರೋಧ ಪಕ್ಷಗಳ ಸದಸ್ಯರು ಧರಣಿ ಮುಂದುವರೆಸಿದರು.

ಸಚಿವ ಕೃಷ್ಣ ಬೈರೇಗೌಡ, 'ನಮ್ಮ ಸರ್ಕಾರಕ್ಕೆ ಬದ್ಧತೆ ಇದೆ. ಮುಖ್ಯಮಂತ್ರಿಯಿಂದ ಉತ್ತರ ಕೊಡಿಸಲು ಪ್ರಯತ್ನಿಸಲಾಗುವುದು. ನಾವು ನುಡಿದಂತೆ ನಡೆಯುವವರು' ಎಂದರು.

ಆಗ ಸಭಾಪತಿ, 'ಸರ್ಕಾರದ ಪರವಾಗಿ ಈಗಾಗಲೇ ಉತ್ತರ ಬಂದಿದೆ. ಇದರ ನಡುವೆಯೂ ಮುಖ್ಯಮಂತ್ರಿ ಅವರ ಬಳಿ ನಾನೇ ಮಾತನಾಡಿ ಉತ್ತರ ಕೊಡಿಸುವೆ' ಎಂದು ಭರವಸೆ ನೀಡಿದರು.



ಬೆಳಗಾವಿಯ ಸುವರ್ಣ ವಿಧಾನಸೌಧದ ವಿಧಾನ ಪರಿಷತ್‌ನಲ್ಲಿ 7ನೇ ವೇತನ ಆಯೋಗದ ವರದಿಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಉತ್ತರ ನೀಡಬೇಕೆಂದು ಆಗ್ರಹಿಸಿ ಬಿಜೆಪಿ ಮತ್ತು ಜೆಡಿಎಸ್ ಸದಸ್ಯರು ಸಭಾಪತಿ ಪೀಠದ ಎದುರು ಧರಣಿ ನಡೆಸಿದರು –ಪ್ರಜಾವಾಣಿ ಚಿತ್ರ



ಸುಭಾಷಿತ

ವಿನಯ ಎನ್ನುವುದು ಎಲ್ಲರ ತೋಟದಲ್ಲಿಯೂ ಬೆಳೆಯದ ಒಂದು ಹೂವು.

-ಅರಿಸ್ಟಾಟಲ್

ಚಂಡಮಾರುತ ತಂದ ಹಾನಿ ಸಜ್ಜಾಗಲು ಇನ್ನೊಂದು ಎಚ್ಚರಿಕೆ

ದೇಶದ ಪೂರ್ವ ಕರಾವಳಿಯಲ್ಲಿ 'ಮಿಚಾಂಗ್' ಚಂಡಮಾರುತವು ಭಾರಿ ಪ್ರಮಾಣದಲ್ಲಿ ಹಾನಿ ಉಂಟುಮಾಡಿದೆ. ತಮಿಳುನಾಡಿನ ಚೆನ್ನೈ ಮತ್ತು ಅದರ ಸುತ್ತಮುತ್ತಲಿನ ಜಿಲ್ಲೆಗಳಲ್ಲಿ, ಆಂಧ್ರಪ್ರದೇಶ ಹಾಗೂ ತೆಲಂಗಾಣದ ಕೆಲವು ಕಡೆಗಳಲ್ಲಿ ಹಾನಿ ಉಂಟಾಗಿದೆ. ಎರಡು ದಿನಗಳ ಅವಧಿಯಲ್ಲಿ ಸುರಿದ ದಾಖಲೆ ಪ್ರಮಾಣದ ಮಳೆ ಹಾಗೂ ಚೆನ್ನೈನಲ್ಲಿ ಉಂಟಾದ ಪ್ರವಾಹ ಪರಿಸ್ಥಿತಿಯು ಜನರ ರಕ್ಷಣೆಗೆ ಮತ್ತು ಪರಿಹಾರ ಕಾರ್ಯಕ್ಕೆ ಸೇನಾ ಸಿಬ್ಬಂದಿಯನ್ನು ಕರೆಸಿಕೊಳ್ಳುವಂತೆ ಮಾಡಿದೆ. ತಮಿಳುನಾಡು, ಪುದುಚೇರಿ, ಆಂಧ್ರಪ್ರದೇಶ ಮತ್ತು ತೆಲಂಗಾಣದಲ್ಲಿ ಎನ್‌ಡಿಆರ್‌ಎಫ್‌ನ ಸರಿಸುಮಾರು 30 ತಂಡಗಳು ನಿಯೋಜನೆಗೊಂಡಿವೆ ಎಂಬ ವರದಿಗಳಿವೆ. ಡಿಸೆಂಬರ್ 4ರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡ 24 ಗಂಟೆಗಳ ಅವಧಿಯಲ್ಲಿ ಚೆನ್ನೈನಲ್ಲಿ 151 ಮಿ.ಮೀ. ಮಳೆ ಸುರಿದಿದೆ. ಅಲ್ಲಿ 24 ಗಂಟೆಗಳ ಅವಧಿಯಲ್ಲಿ ಸುರಿದ ಮೂರನೆಯ ಅತ್ಯಂತ ಗರಿಷ್ಠ ಪ್ರಮಾಣದ ಮಳೆ ಇದು. ಮಂಗಳವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡ 24 ಗಂಟೆಗಳ ಅವಧಿಯಲ್ಲಿನ ಪರಿಸ್ಥಿತಿಯು ಇನ್ನಷ್ಟು ಕಠಿಣವಾಗಿತ್ತು. ರಾಜ್ಯದ ಆಡಳಿತಯಂತ್ರ ಹಾಗೂ ವಿಪತ್ತು ಪರಿಹಾರ ಏಜೆನ್ಸಿಗಳು ಕೂಡ ಜನರ ರಕ್ಷಣೆಯಲ್ಲಿ ತೊಡಗಿವೆ. ಚೆನ್ನೈ ಮತ್ತು ಅದರ ಸುತ್ತಲಿನ ಜಿಲ್ಲೆಗಳಲ್ಲಿ ಮಳೆಯಿಂದಾಗಿ 17 ಮಂದಿ ಪ್ರಾಣ ಕಳೆದುಕೊಂಡಿದ್ದಾರೆ ಎಂದು ವರದಿಯಾಗಿದೆ. ಚೆನ್ನೈ ವಿಮಾನ ನಿಲ್ದಾಣದಲ್ಲಿ ಕಾರ್ಯಾಚರಣೆಯನ್ನು ಗಂಟೆಗಳ ಕಾಲ ಸ್ಥಗಿತಗೊಳಿಸಲಾಗಿತ್ತು. ಚೆನ್ನೈನಲ್ಲಿ ಶಾಲೆಗಳಿಗೆ ರಜೆ ನೀಡಲಾಗಿದೆ. ದೈನಂದಿನ ಜೀವನಕ್ಕೆ ಏಟು ಬಿದ್ದಿದೆ. 2015ರಲ್ಲಿ ಆಗಿದ್ದ ಪ್ರವಾಹದ ನೆನಪುಗಳು ಜನರನ್ನು ಕಾಡಲು ಆರಂಭಿಸಿವೆ. ಪರಿಸ್ಥಿತಿಯು ಬುಧವಾರ ತುಸು ಸುಧಾರಿಸಿದೆ. ಚಂಡಮಾರುತವು ಸಮುದ್ರ ತೀರಕ್ಕೆ ಅಪ್ಪಳಿಸಿದ ಕಾರಣ ಆಂಧ್ರಪ್ರದೇಶ ಮತ್ತು ತೆಲಂಗಾಣದಲ್ಲಿ ಕಟ್ಟೆಚ್ಚರ ಘೋಷಿಸಲಾಗಿದೆ.



ಹವಾಮಾನ ವೈಪರೀತ್ಯದಿಂದ ಉಂಟಾಗುವ ಪರಿಣಾಮಗಳನ್ನು ತಡೆಯುವ ವಿಚಾರವನ್ನು ದೇಶವು ಗಂಭೀರವಾಗಿ ಪರಿಗಣಿಸಬೇಕು

ಹವಾಮಾನ ವೈಪರೀತ್ಯಗಳು, ನಗರ ಪ್ರದೇಶಗಳಲ್ಲಿ ಪ್ರವಾಹ ಪರಿಸ್ಥಿತಿ ನಿರ್ಮಾಣವಾಗುವುದು ಈಗ ಅಪರೂಪದ ವಿದ್ಯಮಾನಗಳಾಗಿ ಉಳಿದಿಲ್ಲ. ದೇಶದ ದೊಡ್ಡ ನಗರಗಳಾದ ಮುಂಬೈ, ಬೆಂಗಳೂರು, ದೆಹಲಿ ಕಳೆದ ಐದು ವರ್ಷಗಳಲ್ಲಿ ಪ್ರವಾಹಗಳನ್ನು ಕಂಡಿವೆ. ಹೀಗೆ ಆಗುತ್ತಿರುವುದಕ್ಕೆ ಸ್ಥಳೀಯ ಕಾರಣಗಳೂ ಇವೆ, ಜಾಗತಿಕ ಕಾರಣಗಳೂ ಇವೆ. ನಗರಗಳಲ್ಲಿ ಆಗುತ್ತಿರುವ ಜನಸಂಖ್ಯಾ ಹೆಚ್ಚಳಕ್ಕೆ ಅನುಗುಣವಾಗಿ ಮೂಲಸೌಕರ್ಯದ ಅಭಿವೃದ್ಧಿ ಆಗಿಲ್ಲ. ಕೆರೆಗಳು, ನದಿ ಹರಿವಿನ ಪಾತ್ರಗಳು ಒತ್ತುವರಿ ಆಗಿವೆ. ಇದರಿಂದಾಗಿ, ಜೋರು ಮಳೆ ಸುರಿದಾಗ ನೀರು ಸರಾಗವಾಗಿ ಹರಿದುಹೋಗಲು ಅವಕಾಶವೇ ಇಲ್ಲದಂತೆ ಆಗಿದೆ. ನಗರಗಳಲ್ಲಿ ಚರಂಡಿಗಳ ನಿರ್ವಹಣೆ ಸರಿಯಾಗಿಲ್ಲ. ವಾಸ್ತವದಲ್ಲಿ, ನಗರ ಆಡಳಿತ ವ್ಯವಸ್ಥೆಯ ಪಾಡು ಹಲವೆಡೆ ನಾಯಿಪಾಡಾಗಿದೆ. ಹವಾಮಾನ ವೈಪರೀತ್ಯದಿಂದ ಉಂಟಾಗುವ ಪರಿಸ್ಥಿತಿಯನ್ನು ನಿಭಾಯಿಸಲು ಇನ್ನಷ್ಟು ಹೆಚ್ಚು ಸದೃಢವಾದ, ತಾಳಿಕೊಳ್ಳಬಹುದಾದ ಮೂಲಸೌಕರ್ಯದ ನಿರ್ಮಾಣ ಆಗಬೇಕಿದೆ. ಜನರ ಜೀವನಶೈಲಿಯಲ್ಲಿ ಬದಲಾವಣೆ ಬೇಕಿದೆ. ಒಂದು ವರ್ಷದ ಅವಧಿಯಲ್ಲಿ ಆಗುವ ಮಳೆಯು ಕೆಲವು ಸಂದರ್ಭಗಳಲ್ಲಿ ಒಂದೆರಡು ದಿನಗಳಲ್ಲಿ ಸುರಿಯುತ್ತದೆ. ಇಂತಹ ಸಂದರ್ಭಗಳಲ್ಲಿ ಅತ್ಯಂತ ಹೆಚ್ಚು ತೊಂದರೆಗೆ ಒಳಗಾಗುವವರು ಬಡವರು.

ನೈಸರ್ಗಿಕ ವಿಕೋಪಗಳು, ಹವಾಮಾನ ವೈಪರೀತ್ಯಗಳು ಜನಜೀವನದ ಮೇಲೆ ಗಂಭೀರ ಪರಿಣಾಮ ಉಂಟುಮಾಡಿವೆ, ಆಸ್ತಿಪಾಸ್ತಿಗೆ ಹಾನಿ ಉಂಟುಮಾಡಿವೆ. ಲಿಬಿಯಾ, ಗ್ರೀಸ್ ಮತ್ತು ಟರ್ಕಿ ಸೆಪ್ಟೆಂಬರ್‌ನಲ್ಲಿ ಬಿರುಗಾಳಿಗೆ ತತ್ತರಿಸಿದ್ದವು. ಲಿಬಿಯಾದಲ್ಲಿ 11 ಸಾವಿರ ಮಂದಿ ಪ್ರಾಣ ಕಳೆದುಕೊಂಡರು. ಈಗ ಭಾರತದ ಪೂರ್ವ ಕರಾವಳಿಯಲ್ಲಿ ಚಂಡಮಾರುತಗಳು ಮತ್ತೆ ಮತ್ತೆ ಸೃಷ್ಟಿಯಾಗುತ್ತಿವೆ. ಈ ವರ್ಷದ ಕಳೆದ ಒಂಬತ್ತು ತಿಂಗಳ ಅವಧಿಯಲ್ಲಿ ಭಾರತವು ಸರಿಸುಮಾರು ಪ್ರತಿದಿನವೂ ಹವಾಮಾನ ವೈಪರೀತ್ಯವನ್ನು ಎದುರಿಸಿದೆ. ಇದರಿಂದಾಗಿ ಮೂರು ಸಾವಿರ ಮಂದಿ ಪ್ರಾಣ ಕಳೆದುಕೊಂಡಿದ್ದಾರೆ ಎಂದು ಸೆಂಟರ್ ಫಾರ್ ಸೈನ್ಸ್ ಆ್ಯಂಡ್ ಎನ್ವಿರಾನ್ಮೆಂಟ್ ಸಂಸ್ಥೆಯ ವರದಿಯೊಂದು ಹೇಳಿದೆ. ಪರಿಸ್ಥಿತಿಯು ಮುಂದಿನ ದಿನಗಳಲ್ಲಿ ಇನ್ನಷ್ಟು ಕೆಟ್ಟದ್ದಾಗಲಿದೆ ಎಂದು ವರದಿಯು ಎಚ್ಚರಿಸಿದೆ. 2023ನೇ ಇಸವಿಯು ವಿಶ್ವ ಕಂಡ ಅತ್ಯಂತ ಹೆಚ್ಚಿನ ತಾಪಮಾನದ ವರ್ಷ ಎಂದು ವಿಶ್ವ ಹವಾಮಾನ ಸಂಘಟನೆ ಹೇಳಿದೆ. ಹವಾಮಾನ ವೈಪರೀತ್ಯದಿಂದ ಹೆಚ್ಚು ತೊಂದರೆಗೆ ಒಳಗಾಗುವ ಸಾಧ್ಯತೆ ಇರುವ ದೇಶಗಳ ಸಾಲಿನಲ್ಲಿ ಭಾರತವೂ ಇದೆ. ಆದರೆ ಇದರ ಪರಿಣಾಮಗಳನ್ನು ತಡೆಯುವ ವಿಚಾರದಲ್ಲಿ ದೇಶವು ಗಂಭೀರವಾಗಿಲ್ಲ. ಮಿಚಾಂಗ್ ಚಂಡಮಾರುತವು ಈ ವಿಚಾರಗಳಲ್ಲಿ ದೇಶಕ್ಕೆ ಇನ್ನೊಂದು ಎಚ್ಚರಿಕೆಯಂತೆ ಇದೆ.

ಶಾಶ್ವತ ಪರಿಹಾರಕ್ಕೆ ಶೋಧಿಸಬೇಕಿದೆ ಸೂಕ್ತ ಮಾರ್ಗೋಪಾಯ

ಮಾನವ–ಆನೆ ಸಂಘರ್ಷ, ಸಹಬಾಳ್ವೆ



ವಿಶ್ಲೇಷಣೆ

ಅಖಿಲೇಶ್ ಚಿಪ್ಪಳಿ

ಮೈಸೂರು ದಸರಾದಲ್ಲಿ ಎಂಟು ಬಾರಿ ಅಂಬಾರಿ ಹೊತ್ತಿದ್ದ ಸಾಕಾನೆ ಅರ್ಜುನ, ಹಾಸನ ಸಮೀಪದ ಅರಣ್ಯದಲ್ಲಿ ಇತ್ತೀಚೆಗೆ ಕಾಡಾನೆ ಸೆರೆ ಕಾರ್ಯಾಚರಣೆ ವೇಳೆ ಕಾಡಾನೆ ದಾಳಿಯಿಂದ ಮೃತಪಟ್ಟಿದೆ. ಇದಕ್ಕೆ ಎರಡು ದಿನಗಳ ಮೊದಲು, ಮೂಡಿಗೆರೆ ತಾಲ್ಲೂಕಿನ ಕೆಳಮೇಕನ ಗದ್ದೆ ಗ್ರಾಮದ ಸಮೀಪದಲ್ಲಿ, ಸಾಕಿದ ಹೆಣ್ಣಾನೆಯನ್ನು ಬಳಸಿಕೊಂಡು ಕಾಡು ಸಲಗವನ್ನು ಹಿಡಿಯುವ ಕಾರ್ಯಾಚರಣೆಯ ಸಂದರ್ಭದಲ್ಲಿ ಕಾಡಾನೆಯೊಂದು ಸಾವಿಗೀಡಾಗಿತ್ತು.


ಪಶ್ಚಿಮಘಟ್ಟ ಪ್ರದೇಶದಲ್ಲಿ ಹೆಚ್ಚಿನ ಕಾಡಾನೆಗಳು ಕಂಡುಬರುತ್ತವೆ. ಮಾನವ- ಆನೆ ಸಂಘರ್ಷವು ಕರ್ನಾಟಕದಲ್ಲಿ ಮಾತ್ರವಲ್ಲದೆ ಪಕ್ಕದ ತಮಿಳುನಾಡಿನಲ್ಲೂ ಇತ್ತು. ಅಲ್ಲಿಯೂ ಕಾಡಾನೆಗಳನ್ನು ಹಿಡಿದು ಸ್ಥಳಾಂತರಿಸುವ ಪರಿಪಾಟವಿತ್ತು. ಆಗ ತಮಿಳುನಾಡಿನ ನೆರವಿಗೆ ಹೋಗಿದ್ದು ಮೈಸೂರಿನ ನೇಚರ್ ಕನ್ಸರ್ವೇಷನ್ ಫೌಂಡೇಷನ್ ಎಂಬ ಸ್ವಯಂಸೇವಾ ಸಂಸ್ಥೆ. ಎಲ್ಲಿ ಆನೆಗಳ ಸಂಖ್ಯೆ ಹೆಚ್ಚಾಗಿದೆ, ಅವು ನಡೆದಾಡುವ ಪಥ ಯಾವುದು, ಕಾಡಾನೆಗಳ ಗುಂಪು ಯಾವ ಸಮಯದಲ್ಲಿ ಯಾವ ಭಾಗದಲ್ಲಿ ಇರುತ್ತದೆ ಎಂಬ ಬಗ್ಗೆ ಕೂಲಂಕಷವಾಗಿ ಅಧ್ಯಯನ ನಡೆಸಿ, ತಮಿಳುನಾಡಿನ ವಾಲ್ಪರೈ ಪ್ರಸ್ಥಭೂಮಿ ವ್ಯಾಪ್ತಿಯ 102 ಹಳ್ಳಿಗಳ ನಿವಾಸಿಗಳಿಗೆ ಹಾಗೂ ಅತಿಹೆಚ್ಚು ಸಂಘರ್ಷಕ್ಕೆ ಗುರಿಯಾಗುವ ಪ್ರದೇಶಗಳಲ್ಲಿನ ಜನರಿಗೆ ಕಾಡಾನೆಗಳ ಚಲನವಲನದ ಬಗ್ಗೆ ಮುಂಚಿತವಾಗಿಯೇ ಮಾಹಿತಿ ನೀಡುವ ಹೊಸ ಹಾಗೂ ಸುಲಭವಾದ ಪದ್ಧತಿಯನ್ನು ಸಂಸ್ಥೆಯು ಪರಿಚಯಿಸಿತು. ಈ ವಿಧಾನ ಬಹಳ ಯಶಸ್ವಿ ಆಗಿದ್ದು, ಹಿಂದಿನ ಇಪ್ಪತ್ತು ವರ್ಷಗಳಲ್ಲಿ ಕಾಡಾನೆಯ ದಾಳಿಗೆ ಒಬ್ಬ ವ್ಯಕ್ತಿ ಮಾತ್ರ ಬಲಿಯಾಗಿದ್ದಾನೆ.

ವನ್ಯಜೀವಿ ಸಂರಕ್ಷಣಾ ಕಾಯ್ದೆ- 1972ರ ಅಡಿಯಲ್ಲಿ ಈ ಬೃಹತ್ ಜೀವಿಗಳು ಸಂರಕ್ಷಣೆಗೆ ಒಳಪಟ್ಟಿವೆ. ಇವುಗಳನ್ನು ಕೊಲ್ಲುವುದು ಶಿಕ್ಷಾರ್ಹ ಅಪರಾಧ. ವಾಲ್ಪರೈ ಪ್ರದೇಶಕ್ಕೂ ಕರ್ನಾಟಕದ ಹಾಸನ ಅರಣ್ಯ ವಿಭಾಗದ ಆನೆಗಳ ಆವಾಸಸ್ಥಾನಕ್ಕೂ ಕೆಲವು ಹೋಲಿಕೆಗಳಿವೆ. ವಾಲ್ಪರೈ ಪ್ರದೇಶದ ಜನಸಂಖ್ಯೆ ಸುಮಾರು ಒಂದು ಲಕ್ಷದಷ್ಟಿದ್ದರೆ, ಹಾಸನ ವಿಭಾಗದಲ್ಲಿ ಅತಿಹೆಚ್ಚು ಸಂಘರ್ಷ ಸಂಭವಿಸುವ ಪ್ರದೇಶದಲ್ಲೂ ಸುಮಾರು ಇಷ್ಟೇ ಜನಸಂಖ್ಯೆಯಿದೆ. 2002ರಿಂದ 2006ರವರೆಗೆ ಹಾಸನ ವಿಭಾಗದಲ್ಲಿ ವಿಜ್ಞಾನಿಗಳ ತಂಡ ಅಧ್ಯಯನ ನಡೆಸಿ, ಹಲವು ವಿಷಯಗಳನ್ನು ಕಂಡುಕೊಂಡಿದೆ. 2014ರಲ್ಲಿ ಈ ವಿಭಾಗದಲ್ಲಿ ಒಟ್ಟು ಇಪ್ಪತ್ತೆರಡು ಕಾಡಾನೆಗಳನ್ನು ಸೆರೆಹಿಡಿಯಲಾಗಿತ್ತು. ಅವುಗಳಲ್ಲಿ ಹದಿನೇಳನ್ನು ಸಾಕಾನೆಗಳನ್ನಾಗಿ ಪರಿವರ್ತಿಸಲಾಯಿತು. ಇನ್ನುಳಿದ ಐದು ಆನೆಗಳನ್ನು ಮಲೆಮಹದೇಶ್ವರ ಬೆಟ್ಟಕ್ಕೆ ಬಿಡಲಾಯಿತು.

ಅರಣ್ಯ ಇಲಾಖೆಯ ಲೆಕ್ಕಾಚಾರದ ಪ್ರಕಾರ, ಈ ಪ್ರದೇಶದಲ್ಲಿ ಆನೆಗಳ ಸಂಖ್ಯೆ ಕಡಿಮೆಯಾಗಿದ್ದರಿಂದ ಮಾನವ- ಕಾಡಾನೆ ಸಂಘರ್ಷ ಇಳಿಮುಖವಾಗಬೇಕಿತ್ತು. ಆದರೆ, ಕೊಡಗು, ಬಿಸಿಲೆ, ಮೂಡಿಗೆರೆ ಭಾಗದ ಆನೆಗಳು ಹಾಸನ ವಿಭಾಗಕ್ಕೆ ಬಂದು ಸೇರಿಕೊಂಡವು. ಒಂದೇ ಬಾರಿಗೆ ಅಷ್ಟು ಆನೆಗಳನ್ನು ಈ ವಿಭಾಗದಲ್ಲಿ ಸೆರೆಹಿಡಿದಿದ್ದರಿಂದ, ಅಲ್ಲೊಂದು ನಿರ್ವಾತ ಸೃಷ್ಟಿಯಾಯಿತು. ಇದು ಬೇರೆ ಪ್ರದೇಶದ ಆನೆಗಳನ್ನು ಈ ಭಾಗಕ್ಕೆ ಸೆಳೆಯಿತು. ಇದೇ ರೀತಿ 2017-19ರ ಅವಧಿಯಲ್ಲಿ 6 ಕಾಡಾನೆಗಳನ್ನು ಸೆರೆಹಿಡಿಯಲಾಯಿತು. ಆಶ್ಚರ್ಯದ ಸಂಗತಿಯೆಂದರೆ, ಇದೇ ಸಮಯದಲ್ಲಿ ಒಟ್ಟು 12 ಹೊಸ ಕಾಡಾನೆಗಳು ಈ ವಿಭಾಗಕ್ಕೆ ಬಂದು ನೆಲೆಸಿದವು. ಅಂದರೆ, ಆನೆಗಳನ್ನು ಹಿಡಿದು ಸ್ಥಳಾಂತರಿಸುವ ಮಾದರಿಯಿಂದಲೂ ಮಾನವ-ಆನೆ ಸಂಘರ್ಷ ಕಡಿಮೆಯಾಗಲಿಲ್ಲ. ಬದಲಿಗೆ, ಅದು ಇನ್ನಷ್ಟು ಹೆಚ್ಚಾಯಿತು.

ಕಾಫಿ, ಟೀ ತೋಟಗಳಿಗೆ ಸೋಲಾರ್ ಆಧಾರಿತ ವಿದ್ಯುತ್ ತಂತಿಬೇಲಿ ನಿರ್ಮಿಸಿರುವುದರಿಂದ ತಿರುಗಾಡಲು ಆನೆಗಳು ಅನಿವಾರ್ಯವಾಗಿ ಮಾನವರು ಬಳಸುವ ರಸ್ತೆಗಳನ್ನೇ ಬಳಸುತ್ತಿವೆ. ಈ ಅಂಶವೂ ಸಂಘರ್ಷ ಹೆಚ್ಚಳಕ್ಕೆ ಕಾರಣವಾಗಿದೆ. ವಿಜ್ಞಾನಿಗಳ ಅಧ್ಯಯನದ ಪ್ರಕಾರ, ಬೆಳಗಿನ 6ರಿಂದ 10 ಗಂಟೆ ಹಾಗೂ ಸಂಜೆಯ 4ರಿಂದ 8 ಗಂಟೆಯ ಸಮಯದಲ್ಲೇ ಅತಿಹೆಚ್ಚು ಸಂಘರ್ಷಗಳು ಉಂಟಾಗಿವೆ. 2010ರಿಂದ 2022ರ ಅವಧಿಯಲ್ಲಿ ಹಾಸನ ಅರಣ್ಯ ವಿಭಾಗದ ವ್ಯಾಪ್ತಿಯಲ್ಲಿ ಒಟ್ಟು 54 ಮಂದಿ ಪ್ರಾಣ ಕಳೆದುಕೊಂಡಿದ್ದಾರೆ. ಈ ಪ್ರದೇಶದಲ್ಲಿ ಆನೆಗಳಿವೆ ಎಂಬುದೇ ಅನೇಕರಿಗೆ ತಿಳಿದಿರಲಿಲ್ಲ. ಬೆಳಗಿನ ಸಮಯದಲ್ಲಿ ಕೂಲಿಗಾಗಿಯೋ ಬೇರೆ ಯಾವುದೋ ಕೆಲಸದ ನಿಮಿತ್ತ ಹೋಗುವಾಗ ಮತ್ತು ಸಂಜೆ ತಿರುಗಿ ಬರುವ ಹೊತ್ತಿನಲ್ಲೇ ಆನೆಗಳು ಸಂಚರಿಸುತ್ತವೆ. ತನ್ನ ಪಥದಲ್ಲಿ ಮನುಷ್ಯನನ್ನು ಕಂಡ ಅವು ರೊಚ್ಚಿಗೇಳುತ್ತವೆ.

ಆನೆಪಥ ಛಿದ್ರಗೊಂಡಿರುವುದು, ಒತ್ತುವರಿ ಆಗಿರುವುದು, ಕಾಡುನಾಶದಂತಹ ಮಾನವನಿರ್ಮಿತ ಚಟುವಟಿಕೆಗಳು ಆನೆಗಳ ದಿಕ್ಕು ತಪ್ಪಿಸುತ್ತಿವೆ. ಇತ್ತ ಹೇಮಾವತಿ ಜಲಾಶಯಗುಂಟ ನಿರ್ಮಿಸಿದ ರೈಲುಕಂಬಿ ಬೇಲಿ, ಅತ್ತ ಚತುಷ್ಪಥ ರಸ್ತೆಯಾಗಿ ಮಾರ್ಪಡುತ್ತಿರುವ ಹಾಸನ- ಮಂಗಳೂರು ಹೆದ್ದಾರಿಯಿಂದ ಆನೆಗಳು ಅನಿವಾರ್ಯವಾಗಿ ಕಾಫಿ ತೋಟಗಳನ್ನೇ ತಮ್ಮ ಪಥವನ್ನಾಗಿ ಬಳಸುತ್ತಿವೆ. ಇದು ಬೆಳೆನಾಶ ಮತ್ತು ಮಾನವನೊಂದಿಗಿನ ಸಂಘರ್ಷಕ್ಕೆ ಕಾರಣವಾಗುತ್ತಿದೆ. ಆನೆಗಳನ್ನು ನಿಯಂತ್ರಿಸುವ ರೈಲುಕಂಬಿ ಬ್ಯಾರಿಕೇಡ್ ತಂತ್ರವೂ ಸಂಘರ್ಷ ತಪ್ಪಿಸುವಲ್ಲಿ ವಿಫಲವಾಗಿದೆ.



ಹಾಗಾದರೆ, ಇದಕ್ಕೊಂದು ಶಾಶ್ವತ ಪರಿಹಾರ ಇಲ್ಲವೇ? ಹಾಸನ, ಸಕಲೇಶಪುರ ಭಾಗಗಳಲ್ಲಿ ಆನೆಗಳ ಜೊತೆಗಿನ ಸಂಘರ್ಷ ಹೆಚ್ಚುತ್ತಿರುವುದರಿಂದ ಅನೇಕ ಕಾಫಿ ತೋಟಗಳ ಮಾಲೀಕರು ತಮ್ಮ ಜಮೀನುಗಳನ್ನು ಮಾರಾಟ ಮಾಡಲು ಮುಂದಾಗಿದ್ದಾರೆ. ಇಂತಹ ಸಾವಿರಾರು ಎಕರೆ ಕಾಫಿ ತೋಟಗಳನ್ನು ಸರ್ಕಾರವೇ ಖರೀದಿಸಿ, ಆ ಪ್ರದೇಶಗಳನ್ನು ಆನೆಗಳಿಗಾಗಿಯೇ ಮೀಸಲಿಡಬಹುದು. ರಕ್ಷಿತಾರಣ್ಯವೆಂಬ ಹೆಸರಿದ್ದರೂ ಅರಣ್ಯದ ಸ್ವರೂಪವನ್ನು ಕಳೆದುಕೊಂಡ, ಅರಣ್ಯ ಇಲಾಖೆಗೆ ಸೇರಿದ ಪ್ರದೇಶಗಳನ್ನು ಆನೆಗಳ ಸ್ವಚ್ಛಂದ ಓಡಾಟ, ಅವು ಆಹಾರ ಹುಡುಕಿಕೊಳ್ಳಲು ಮತ್ತು ಹಗಲಿನಲ್ಲಿ ತಂಗಲು ಅನುಕೂಲವಾಗುವಂತೆ ನೈಸರ್ಗಿಕ ಹಸಿರು ಕವಚವನ್ನು ಹೆಚ್ಚಿಸಬಹುದು. ಅಭಯಾರಣ್ಯಗಳ ಗಡಿಯಿಂದ ಹೊರಗೆ ಆವಾಸಸ್ಥಾನಗಳನ್ನು ಗುರುತಿಸಿಕೊಂಡು ವಾಸಿಸುತ್ತಿರುವ ಆನೆಗಳು ತಿರುಗಾಡುವ ಪಥವನ್ನು ನಿಖರವಾಗಿ ಗುರುತಿಸಿ, ಆ ಭಾಗದ ಜನರಿಗೆ ಅವುಗಳ ಚಲನವಲನಗಳನ್ನು ಮುಂಚಿತವಾಗಿಯೇ ಮೊಬೈಲ್ ಫೋನ್ ಮೂಲಕ ನೀಡಿ ಎಚ್ಚರಿಸುವ ಕೆಲಸ ಮಾಡಲು ಅವಕಾಶ ಇದೆ. ಆಧುನಿಕ ತಂತ್ರಜ್ಞಾನಗಳನ್ನು ಬಳಸಿಕೊಂಡು, ಆನೆಗಳ ಸಂಚಾರವನ್ನು ಹಾಗೂ ಅವು ಚಲಿಸಬಹುದಾದ ಸಂಭಾವ್ಯ ಗಮ್ಯದ ವಿವರಗಳನ್ನು ಆ ಪ್ರದೇಶಗಳ ಜನರಿಗೆ ತಿಳಿಯಪಡಿಸುವುದು ಉತ್ತಮ.

140 ಕೋಟಿಗೂ ಹೆಚ್ಚು ಜನಸಂಖ್ಯೆ ಹೊಂದಿರುವ ಭಾರತ ಅತಿಹೆಚ್ಚು ಜೀವಿವೈವಿಧ್ಯಗಳಿರುವ ಅಪೂರ್ವ ದೇಶವಾಗಿದೆ. 1975ರಿಂದ ಈಚೆಗೆ ಪಶ್ಚಿಮಘಟ್ಟಗಳ ಶೇ 40ರಷ್ಟು ಪ್ರದೇಶ ಮಾನವ ಅತಿಕ್ರಮಣಕ್ಕೆ ಒಳಗಾಗಿದೆ ಎಂದು ಅಂಕಿಅಂಶ ಹೇಳುತ್ತದೆ. ಆದರೂ ಆನೆಗಳಂತಹ ಬೃಹತ್ ಜೀವಿಗಳು ಬದಲಾದ ಸನ್ನಿವೇಶಕ್ಕೆ ಹೊಂದಿಕೊಂಡು ಬದುಕುವುದನ್ನು ರೂಢಿಸಿಕೊಂಡಿವೆ. ಮನುಷ್ಯ ಮತ್ತು ವನ್ಯಜೀವಿಗಳ ನಡುವೆ ಸಹಬಾಳ್ವೆ ಸಾಧ್ಯ ಎಂಬುದು ಅನೇಕ ಬಾರಿ ಸಾಬೀತಾಗಿರುವ ವಿಚಾರ. ವೈವಿಧ್ಯಮಯವಾದ ಪಶ್ಚಿಮಘಟ್ಟ ಪ್ರದೇಶದಲ್ಲಿ ಮಾನವ ಮತ್ತು ಆನೆಗಳು ಹೊಂದಿಕೊಂಡು ಬದುಕುವುದು ಅನಿವಾರ್ಯ.

ಅಭಯಾರಣ್ಯವನ್ನು ಹೊರತುಪಡಿಸಿ, ಎಲ್ಲೆಲ್ಲಿ ಆನೆಗಳ ಆವಾಸಸ್ಥಾನವಿದೆಯೋ ಎಲ್ಲೆಲ್ಲಿ ಆನೆಪಥ ಹಾದುಹೋಗುತ್ತದೆಯೋ ಆ ಭಾಗಗಳಲ್ಲಿ ವಾಸಿಸುವವರಿಗೆ ಆನೆಗಳ ಮನೋಧರ್ಮವನ್ನು ಮೊದಲು ಅರ್ಥ ಮಾಡಿಸುವ ಕೆಲಸವನ್ನು ಸರ್ಕಾರ ಮಾಡಬೇಕು. ಸಂಘರ್ಷಕ್ಕೆ ಕಾರಣವಾಗುವ ಅಂಶಗಳನ್ನು ನಿರ್ದಿಷ್ಟವಾಗಿ ವಿಂಗಡಿಸಿ, ಒಂದೊಂದು ಅಂಶಕ್ಕೂ ಸೂಕ್ತವಾದ ಪರಿಹಾರ ಹುಡುಕುವ ಪ್ರಯತ್ನ ಮಾಡಬೇಕು.

ವಾಲ್ಪರೈ ಭಾಗದಲ್ಲಿ ವಾಸಿಸುತ್ತಿರುವ ಜನರಿಗೆ ಈಗ ಆನೆಗಳನ್ನು ಕಂಡರೆ ರೇಜಿಗೆ ಎನಿಸುವುದಿಲ್ಲ. ಆನೆಗಳನ್ನು ಅಲ್ಲಿ ಆರಾಧನಾ ಭಾವದಿಂದ ನೋಡಲಾಗುತ್ತದೆ. ಹಿಂಡಿನ ಅಥವಾ ಒಂಟಿ ಸಲಗಗಳ ಚಲನವಲನದ ಮೇಲೆ ತೀವ್ರ ನಿಗಾ ಇಡುವ ವ್ಯವಸ್ಥೆಯನ್ನು ಅಲ್ಲಿ ಕಲ್ಪಿಸಿಕೊಳ್ಳಲಾಗಿದೆ. ಆನೆ ಹಿಂಡು ಬೀಡುಬಿಟ್ಟಿರುವ ಹತ್ತಿರದ ಹಳ್ಳಿಗರಿಗೆ, ಆಧುನಿಕ ತಂತ್ರಜ್ಞಾನ ಬಳಸಿಕೊಂಡು ಅವುಗಳ ಇರವನ್ನು ಮೊದಲೇ ತಿಳಿಸಲಾಗುತ್ತದೆ. ಬೆಳಿಗ್ಗೆ ಎದ್ದು ಕೆಲಸಕ್ಕೆ ಹೋಗುವವರಿಗೆ ಈ ಅಂಶ ವರದಾನವಾಗಿದೆ. ಆದ್ದರಿಂದ, ಅಲ್ಲಿ ಸಂಘರ್ಷದ ಪ್ರಮಾಣ ಶೂನ್ಯದ ಸಮೀಪ ಬಂದಿದೆ.

ಚುರುಮುರಿ



ಅಕ್ಕಾವ್ರ ಹುಕುಂ!

• ಗುರು ಪಿ.ಎಸ್.

'**ಎಷ್ಟೊಂದು** ಅಸೂಕ್ಷ್ಮವಾಗಿದೆ ಈ ಸಮಾಜ. ಇವರ್‍ಯಾರೂ ಮನೋವಿಜ್ಞಾನವನ್ನೇ ಅಭ್ಯಸಿಸಿಲ್ಲವೇ? ಮನವು ವ್ಯಾಕುಲಗೊಂಡಾಗ ಯಾವುದೇ ವ್ಯಕ್ತಿಯು ಸ್ವಯಂ ನಿಯಂತ್ರಣ ಕಳೆದುಕೊಳ್ಳುತ್ತಾನೆ. ಆಗ ಅವಾಚ್ಯ ಪದಗಳು ಸಹಜವಾಗಿ ಹೊರಬರುತ್ತವೆ. ಇದು ಸ್ವಾಭಾವಿಕ' ವಿಪರೀತ ಕೋಪದಲ್ಲಿದ್ದರೂ ಮಾತಿನ ರೀತಿಯನ್ನೇ ಬದಲಿಸಿಕೊಂಡಿದ್ದರು ಅಕ್ಕಾವ್ರು.

'ಅಕ್ಕಾ, ಇದೇನ್ ಆಯ್ತಕ್ಕಾ ನಿಂಗೆ, ನಿಮ್ಮ ಬಾಯ್ಲಿ ಕೇಳದೇ ಇರೋ ಪದಗಳೆಲ್ಲ ಹೊರಿಕ್ ಬಂದ್ವಲ್ಲ' ಕೇಳಿದ ಅಕ್ಕಾವ್ರ ಬಂಟ.

'ಥೋ, 2-3 ದಿನಗಳಿಂದ ನ್ಯೂಸ್‌ಪೇಪರ್ ಓದ್ತಾ ಇವ್ನಿ. ಅದಕ್ಕೇ ಕೇಳ್ದೆ ಇರೋ ಪದಗಳೆಲ್ಲ ಬರ್ತಾ ಅವೆ' ನಾರ್ಮಲ್ ಮೋಡ್‌ಗೆ ಜಾರಿದರು ಅಕ್ಕಾವ್ರು.

'ನೀವ್ ಹಿಂಗೆಲ್ಲ ಸಾಧು ಮಾತಾಡಿದಂಗ ಮಾತಾಡಬ್ಯಾಡಿ. ನೀವು ಹುಲಿ ಅಕ್ಕಾ, ಹೆಣ್ ಹುಲಿ. ಹಂಗೇ ಮಾತಾಡಿ' ಎಂದ.

'ಹೌದಲ್ವ, ನೋಡ್ಲಾ ಈ ಜನ ಎಂಗೆಲ್ಲ ಮಾತಾಡ್ತಾ ಅವ್ರೆ, ನನ್ ಒಂದೂವರೆ ಕೋಟಿ ರೂಪಾಯ್ ಕಾರ್‌ಗೆ ಅಡ್ಡ ಬಂದ ಅವನ್ಯಾವನಿಗೋ ಒಂದ್ ನಾಕು ಶಬ್ದ ಬೈಯ್ಯಕ್ಕೆ ಅಧಿಕಾರ ಇಲ್ವೇನ್ಲಾ ನಂಗೆ. ಅಲ್ಲಿರೋರೆಲ್ಲ ಅವನ ಪ್ರಾಣದ ಬಗ್ಗೆ ಮಾತಾಡ್ತಾ ಅವ್ರೆ, ಒಬ್ಬನಾದ್ರೂ ನನ್ ಒಂದೂವರೆ ಕೋಟಿ ರೂಪಾಯಿ ಕಾರ್ ಬಗ್ಗೆ ತಲೆ ಕೆಡಿಸಿಕೊಂಡ್ರಾ, ಕರುಣೆ ಇಲ್ಲದ ಜನ'.

'ಹೌದಕ್ಕಾ, ಅಷ್ಟೆಲ್ಲ ಆದ್ರೂ ನೀವು ಎಷ್ಟ್ ಸರಳವಾಗಿ ಮಾತಾಡಿದ್ರಿ, ಮೈಮೇಲೆ ಕೆಜಿಗಟ್ಟಲೆ ಬಂಗಾರ ಹಾಕ್ಕೊಂಡಿದ್ರೂ ಅದರ ಬಗ್ಗೆ ಕೊಚ್ಚಿಕೊಳ್ಳಿಲ್ಲ, ಮನೆಯಲ್ಲಿ ಕೋಟಿ ರೂಪಾಯಿಯ ಇನ್ನೂ ನಾಕೈದು ಕಾರುಗಳಿದ್ರೂ ಅದರ ಬಗ್ಗೆನೂ ಹೇಳಿಕೊಳ್ಳಿಲ್ಲ. ನಿಮ್ ಮನೆಯಲ್ಲೇ ಪಿಎಂ, ಸಿಎಂ, ಮಿನಿಸ್ಟರ್, ಎಂಪಿ, ಎಮ್ಮೆಲ್ಲೆಗಳನ್ನೆಲ್ಲ ಕಂಡಿದ್ರೂ, ಅವರ್‍ಯಾರ ಬಗ್ಗೆನೂವೆ ಜಂಬ ಕೊಚ್ಚಿಕೊಳ್ಳಿಲ್ಲ'.

'ಸರಳವಾಗಿರೋದು ಅಂದ್ರೆ ನಂಗಿಷ್ಟ ಕಣ್ಲ. ಆದ್ರೂ, ಅವನು ಬಲಗಡೆಯಿಂದ ಬಂದ. ರೋಡ್‌ನಲ್ಲಿ ರೈಟ್ ಯಾವಾಗಲೂ ರಾಂಗ್ ಅಲ್ವೇನ್ಲಾ?'

'ಹೌದೌದು ಅಕ್ಕಾ, ದೊಡ್ಡವರ ವಿಷಯದಲ್ಲಿ 'ರಾಂಗ್' ಯಾವಾಗಲೂ 'ರೈಟ್'.

ದಿನದ ಟ್ವೀಟ್


ನಡೆಯಲಿ ಆತ್ಮಾವಲೋಕನ



ಚುನಾವಣೆ ನಡೆದ ಮೂರು ರಾಜ್ಯಗಳಲ್ಲಿ ಎಸ್.ಸಿ, ಎಸ್.ಟಿಗೆ ಮೀಸಲಾದ 176 ಕ್ಷೇತ್ರಗಳ ಪೈಕಿ ಕಾಂಗ್ರೆಸ್ ಪಕ್ಷ 2018ರಲ್ಲಿ ಶೇ 62ರಷ್ಟು ಕ್ಷೇತ್ರಗಳಲ್ಲಿ ಜಯ ಸಾಧಿಸಿತ್ತು. 2023ರಲ್ಲಿ ಈ ಪ್ರಮಾಣ ಶೇ 38ಕ್ಕೆ ಕುಸಿದಿದೆ. ಕಾಂಗ್ರೆಸ್‌ಗೆ ಅತ್ಯಂತ ಸಹಜವಾಗಿದ್ದ ಮತಬ್ಯಾಂಕ್, ಈಗ ಅದರಿಂದ ದೂರವಾಗಿದ್ದೇಕೆ ಎಂಬುದು ನಿಜವಾಗಿ ಆತ್ಮಾವಲೋಕನ ಮಾಡಿಕೊಳ್ಳಬೇಕಾದ ಸಂಗತಿ.

ಸ್ನೇಹಸಿಸ್ ಮುಖೋಪಾಧ್ಯಾಯ, ಟೆಕಿ

ಕಿಡಿನುಡಿ



ನಾವು ಪಾದಚಾರಿಗಳನ್ನು ಗಮನದಲ್ಲಿಟ್ಟು ನಮ್ಮ ರಸ್ತೆಗಳನ್ನು ವಿನ್ಯಾಸಗೊಳಿಸದೇ ಹೋದರೆ, ಅವರು ಅಪಾಯವನ್ನು ಮೈಮೇಲೆ ಎಳೆದುಕೊಳ್ಳುತ್ತಾರೆ. ಇದು ಕೆಲವೊಮ್ಮೆ ಸಾವಿಗೂ ಕಾರಣವಾಗುತ್ತದೆ.

ಶ್ರೀನಿವಾಸ್ ಅಲವಿಲ್ಲಿ, ಸಹ ಸಂಸ್ಥಾಪಕ, ಸಿಟಿಜನ್ಸ್ ಫಾರ್ ಬೆಂಗಳೂರು

25 ವರ್ಷಗಳ ಹಿಂದೆ

ಸೋಮವಾರ, 7-12-1998

• ಬಾಬ್ರಿ ಮಸೀದಿ ಪ್ರಕರಣ: ದೇಶದಾದ್ಯಂತ ಪ್ರತಿಭಟನೆ

ನವದೆಹಲಿ, ಡಿ. 6 (ಪಿಟಿಐ, ಯುಎನ್‌ಐ)– ಅಯೋಧ್ಯೆಯ ಬಾಬ್ರಿ ಮಸೀದಿ ನೆಲಸಮಗೊಂಡ ಆರನೇ ವರ್ಷಾಚರಣೆ ದಿನವಾದ ಇಂದು ಕೇರಳದ ಕೆಲವೆಡೆ ಕಲ್ಲು ತೂರಾಟದಂಥ ಹಿಂಸಾಚಾರ ಪ್ರಕರಣಗಳು ನಡೆದರೆ, ಪುದುಚೇರಿಯಲ್ಲಿ ಅರೆಸೇನಾ ಪಡೆಯ ಯೋಧರು ಪಥಸಂಚಲನ ನಡೆಸಿದರು.

ಡಿಸೆಂಬರ್ 6, 1992ರಂದು ಅಯೋಧ್ಯೆಯಲ್ಲಿ ಸಂಘ ಪರಿವಾರದ ಕಾರ್ಯಕರ್ತರು ಬಾಬ್ರಿ ಮಸೀದಿ ನೆಲಸಮ ಮಾಡಿದ್ದನ್ನು ಪ್ರತಿಭಟಿಸಿ ದೇಶದಾದ್ಯಂತ ಮೆರವಣಿಗೆಗಳು, ಪ್ರದರ್ಶನಗಳು ಹಾಗೂ ಸಭೆಗಳು ನಡೆದವು.

• ದೇವಲಗಾಣಗಾಪುರ: ಘರ್ಷಣೆ, ಗಾಳಿಯಲ್ಲಿ ಗುಂಡು

ಕಲ್ಬುರ್ಗಿ, ಡಿ. 6– ದೇವಲಗಾಣಗಾಪುರದಲ್ಲಿ ಎರಡು ಪ್ರಬಲ ರಾಜಕೀಯ ಗುಂಪುಗಳ ನಡುವಿನ ವೈಷಮ್ಯ ಸ್ಫೋಟಿಸಿ ಗುಂಡು ಹಾರಿಸಲಾಯಿತಲ್ಲದೆ, ಬಹುಜನ ಸಮಾಜ ಪಕ್ಷದ ರಾಜ್ಯ ಘಟಕದ ಉಪಾಧ್ಯಕ್ಷ ವಿಠ್ಠಲ ಹೇರೂರ ಅವರು ತೀವ್ರವಾಗಿ ಗಾಯಗೊಂಡಿದ್ದಾರೆ.

ಅಫ್ಜಲಪುರ ತಾಲ್ಲೂಕಿನ ದೇವಲಗಾಣಗಾಪುರದಲ್ಲಿ ಜಿಲ್ಲಾ ಸಚಿವ ಮಾಲೀಕಯ್ಯ ಗುತ್ತೇದಾರ್ ಹಾಗೂ ವಿಠ್ಠಲ ಹೇರೂರ ಅವರ ಗುಂಪುಗಳ ನಡುವೆ ಘರ್ಷಣೆ ಇಂದೂ ಮುಂದುವರಿದು, ಹೇರೂರ ಹಾಗೂ ಅವರ ಅಂಗರಕ್ಷಕ ತೀವ್ರ ಗಾಯಗೊಂಡಿದ್ದಾರೆ. ಪರಿಸ್ಥಿತಿ ಈಗ ಶಾಂತವಾಗಿದೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

50 ವರ್ಷಗಳ ಹಿಂದೆ

ಶುಕ್ರವಾರ, 7-12-1973

• ಮುಂದಿನ ವಾರದ ಮಧ್ಯೆ ಪುನರ್‌ರಚಿತ ಸಂಪುಟ; ದೆಹಲಿಗೆ ಅರಸು

ಬೆಂಗಳೂರು, ಡಿ. 6– ತಮ್ಮ ಮಂತ್ರಿಮಂಡಲದ ಎಲ್ಲ ಸಹೋದ್ಯೋಗಿಗಳ ರಾಜೀನಾಮೆಯ ಬೆಂಬಲ ಪಡೆದು, ಇಂದು ಮಧ್ಯಾಹ್ನ ಇಲ್ಲಿಂದ ದೆಹಲಿಗೆ ತೆರಳಿದ ಮುಖ್ಯಮಂತ್ರಿ ದೇವರಾಜ ಅರಸು ಅವರು, ಮುಂದಿನ ವಾರದ ಮಧ್ಯಭಾಗದಲ್ಲಿ ಪುನರ್ ರಚಿತ ಮಂತ್ರಿಮಂಡಲವನ್ನು ಪ್ರಕಟಿಸುವ ನಿರೀಕ್ಷೆಯಿದೆ.

ಪ್ರಧಾನಿ ಮತ್ತು ಕಾಂಗ್ರೆಸ್ ವರಿಷ್ಠರ ಮಾರ್ಗದರ್ಶನ ಪಡೆದು, ಈ ಮಧ್ಯೆ ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯ ಸಭೆಯಲ್ಲಿ ಭಾಗವಹಿಸಿ, ಸೋಮವಾರದಂದು ಮರಳಿದ ಮೇಲೆ ಹೊಸ ಮಂತ್ರಿಮಂಡಲವನ್ನು ಪ್ರಕಟಿಸುವುದಾಗಿ ಅರಸು ಅವರು ಬೆಳಿಗ್ಗೆ ರಾಜ್ಯಪಾಲರನ್ನು ಭೇಟಿ ಮಾಡಿದಾಗ ತಿಳಿಸಿದರೆಂದು ತಿಳಿದುಬಂದಿದೆ.

• ದೆಹಲಿಯಲ್ಲಿ ಅರಸು ಕೈಗೆ ಬಸವಲಿಂಗಪ್ಪ ಅವರ ರಾಜೀನಾಮೆ

ನವದೆಹಲಿ, ಡಿ. 6– ಕರ್ನಾಟಕದ ಮುಖ್ಯಮಂತ್ರಿ ಡಿ.ದೇವರಾಜ ಅರಸು ಅವರು ಇಂದು ಇಲ್ಲಿಗೆ ಬಂದ ಕೂಡಲೇ, ವಿವಾದಾತ್ಮಕ ಪೌರಾಡಳಿತ ಸಚಿವ ಬಿ.ಬಸವಲಿಂಗಪ್ಪ ಅವರು ಮುಖ್ಯಮಂತ್ರಿಯನ್ನು ಭೇಟಿ ಮಾಡಿ ರಾಜೀನಾಮೆ ಸಲ್ಲಿಸಿದರು.

ಶಿಕ್ಷಣ ಸಚಿವರಾದ ಎ.ಆರ್. ಬದರೀನಾರಾಯಣ ಈ ದಿನ ಬೆಳಿಗ್ಗೆ ತಂತಿಯ ಮೂಲಕ ರಾಜೀನಾಮೆ ಕಳಿಸಿದ್ದಾರೆ. ಈಗ ಸಂಪುಟದಲ್ಲಿ ರಾಜೀನಾಮೆ ಸಲ್ಲಿಸದಿರುವ ಏಕೈಕ ಸದಸ್ಯರೆಂದರೆ ಅರಸು ಒಬ್ಬರೇ.

ಸಂಗತ

ಸೇನಾನಿಗಳ ನೆರವಿಗೆ ಮುಕ್ತ ಮನಸ್ಸಿರಲಿ

ನಾಡಿನ ನೆಮ್ಮದಿಗಾಗಿ ಶ್ರಮಿಸುವ ನಮ್ಮ ಸೇನಾನಿಗಳ ಕಷ್ಟ – ಸುಖಕ್ಕೆ ಸ್ಪಂದಿಸುವುದು ನಾಗರಿಕರ ಜವಾಬ್ದಾರಿ

• ಸಿ.ಎ.ಹಿರೇಮಠ

ರಾಷ್ಟ್ರದಾದ್ಯಂತ ಡಿಸೆಂಬರ್ 7ರಂದು 'ಸಶಸ್ತ್ರ ಪಡೆಗಳ ಧ್ವಜದಿನ'ವನ್ನು ಆಚರಿಸಲಾಗುತ್ತದೆ. ಈ ಆಚರಣೆಯ ಹಿಂದೆ ಮಹೋನ್ನತವಾದ ಉದ್ದೇಶವಿದೆ, ನೊಂದವರಿಗೆ ನೆರವು ನೀಡುವ ಗುರಿ ಇದೆ.

ದೇಶದ ಮೂರೂ ಪಡೆಗಳ ಯೋಧರಿಗೆ ಒದಗಿಸಬೇಕಾದ ಸವಲತ್ತು, ಕಲ್ಪಿಸಬೇಕಾದ ಅಗತ್ಯ ನೆರವಿನಂತಹ ಸಂಗತಿಗಳು ರಕ್ಷಣಾ ಸಚಿವಾಲಯದ ವ್ಯಾಪ್ತಿಗೆ ಒಳಪಡುತ್ತವೆ. ಈ ಸಚಿವಾಲಯದಡಿ ನಿವೃತ್ತ ಸೈನಿಕರ ಯೋಗಕ್ಷೇಮವನ್ನು ರಾಷ್ಟ್ರಮಟ್ಟದಲ್ಲಿ ಕೇಂದ್ರ ಸೈನಿಕ ಕಲ್ಯಾಣ ಮಂಡಳಿ, ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶದ ಮಟ್ಟದಲ್ಲಿ ರಾಜ್ಯ ಮತ್ತು ಕೇಂದ್ರಾಡಳಿತ ಸೈನಿಕ ಕಲ್ಯಾಣ ಮಂಡಳಿ, ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಸೈನಿಕ ಮಂಡಳಿಗಳು ನೋಡಿಕೊಳ್ಳುತ್ತವೆ. ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಕಲ್ಪಿಸುವ ಗುರಿಯೊಂದಿಗೆ ರಾಜ್ಯ ಹಾಗೂ ಕೇಂದ್ರಾಡಳಿತದ 32 ಮಂಡಳಿಗಳು, 392 ಜಿಲ್ಲಾ ಸೈನಿಕ ಮಂಡಳಿಗಳು ಕಾರ್ಯನಿರ್ವಹಿಸುತ್ತಿವೆ.

ದೇಶ ವಿಭಜನೆ, ಯುದ್ಧ, ಆರ್ಥಿಕ ಸಂಕಷ್ಟದಂತಹ ಕಾರಣಗಳಿಂದ ಕಡುಕಷ್ಟದಲ್ಲಿದ್ದ ಸೈನಿಕರಿಗೆ ಸಮರ್ಪಕವಾಗಿ ಗೌರವ ಸಲ್ಲಿಸುವ, ಸಹಾಯಹಸ್ತ ಚಾಚುವ ಸದುದ್ದೇಶದಿಂದ 1949ರಲ್ಲಿ ಅಂದಿನ ರಕ್ಷಣಾ ಸಚಿವ ಬಲದೇವ್ ಸಿಂಗ್ ಅವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಲಾಯಿತು. ಸಶಸ್ತ್ರ ಪಡೆಗಳ ಸೇನಾನಿಗಳಿಗೆ ನೀಡಬೇಕಾದ ಸೌಲಭ್ಯಗಳು, ಯುದ್ಧಾನಂತರದಲ್ಲಿ ಅವರು ಅನುಭವಿಸುವ ಸಂಕಷ್ಟಗಳಿಗೆ ಪರಿಹಾರ, ಜಾರಿಗೊಳಿಸಬೇಕಾದ ಪುನರ್ವಸತಿ ಯೋಜನೆಯಂತಹವುಗಳ ಬಗ್ಗೆ ಸಮಿತಿಯು ಕೂಲಂಕಷವಾಗಿ ಪರಿಶೀಲಿಸಿ, ವರದಿಯೊಂದನ್ನು ಸಿದ್ಧಪಡಿಸಿತು. ಯೋಧರಿಗೆ ಸರ್ಕಾರದಿಂದ ಮಾತ್ರ ಸಹಾಯ ನೀಡುವುದಕ್ಕಿಂತ, ಸಾರ್ವಜನಿಕರನ್ನೂ ಒಳಗೊಂಡು ನೆರವಿನ ಯೋಜನೆ ರೂಪಿಸುವುದು ಸಮಂಜಸ ಎಂಬ ಅಭಿಪ್ರಾಯ ವ್ಯಕ್ತವಾಯಿತು. ಅದರಂತೆ, ತತ್ಕಾಲೀನ ಆರ್ಥಿಕ ಪರಿಸ್ಥಿತಿಯನ್ನು ಸಹ ಗಮನದಲ್ಲಿ ಇಟ್ಟುಕೊಂಡು 'ಧ್ವಜದಿನ' ಆಚರಣೆಯನ್ನು ಜಾರಿಗೆ ತರಲಾಯಿತು.

ಭರತಭೂಮಿಯ ಸಂರಕ್ಷಣಾ ಕಾರ್ಯದಲ್ಲಿ ನಮ್ಮ ಸಶಸ್ತ್ರ ಪಡೆಗಳ ಸಾವಿರಾರು ಸೈನಿಕರು ಸಾವಿನ ಸನಿಹ ಹೋಗಿಬರುತ್ತಾರೆ. ದೈಹಿಕ ಅಂಗವೈಕಲ್ಯಕ್ಕೆ ಒಳಗಾಗುತ್ತಾರೆ. ಕೆಲವು ಬಾರಿ ಸಮರಾಂಗಣದಲ್ಲಿ ಹುತಾತ್ಮರಾದ ಸೈನಿಕರ ಮೃತದೇಹಗಳೇ ಪತ್ತೆಯಾಗುವುದಿಲ್ಲ. ಎಷ್ಟೋ ಮಕ್ಕಳು ತಾಯಿಯ ಗರ್ಭದಲ್ಲಿರುವಾಗಲೇ ತಂದೆಯನ್ನು ಕಳೆದುಕೊಂಡು ಜೀವನಪೂರ್ತಿ ಕೊರಗುವುದನ್ನು ನಾವು ಕಂಡಿದ್ದೇವೆ. ವಿವಾಹಕ್ಕೆಂದು ರಜೆ ಹಾಕಿ ಊರಿಗೆ ಬರುವ ಮುನ್ನವೇ ಹುತಾತ್ಮರಾದವರ ಕರುಣಾಜನಕ ಕಥೆಗಳನ್ನೂ ಕೇಳಿದ್ದೇವೆ. ನಮಗಾಗಿ ಇಷ್ಟೊಂದು ಪರಿಶ್ರಮಪಡುವ, ನಮ್ಮ ರಕ್ತಸಂಬಂಧಿಗಳಲ್ಲದ, ಆದರೆ ನಮಗಾಗಿ ತಮ್ಮ ನೆತ್ತರನ್ನು ಹರಿಸುವ ಈ ಯೋಧರ ಧೈರ್ಯ, ಸಾಹಸ, ಬದ್ಧತೆಯನ್ನು ಜನಸಾಮಾನ್ಯರೂ ಪ್ರಶಂಸಿಸಿ ತಮ್ಮ ಗೌರವ ಸಲ್ಲಿಸಲಿ, ಹುತಾತ್ಮರಾದ ಯೋಧರನ್ನು ಸ್ಮರಿಸಲಿ, ಅವರಿಂದಲೂ ಅಲ್ಪಸ್ವಲ್ಪ ನೆರವು ಹರಿದುಬರಲಿ ಎಂಬ ಉದ್ದೇಶವೂ ಧ್ವಜ ದಿನಾಚರಣೆಯ ಹಿಂದಿದೆ.

ನಮ್ಮ ಸುಖಕ್ಕಾಗಿ ಸ್ಪಂದಿಸುವ ನಮ್ಮ ಸೇನಾನಿಗಳ ಕಷ್ಟಸುಖಕ್ಕೆ ಪ್ರತಿಸ್ಪಂದಿಸುವುದು ನಾಗರಿಕರ ಜವಾಬ್ದಾರಿ. ಅದಕ್ಕಾಗಿಯೇ ಬಡವ ಬಲ್ಲಿದರೆಲ್ಲರೂ ಶಕ್ತ್ಯಾನುಸಾರ ಧ್ವಜ ಖರೀದಿಸುವ ಮೂಲಕ ಸಹಾಯಹಸ್ತ ಚಾಚಲಿ ಎಂಬ ಕಾರಣಕ್ಕೆ, ಯುನೈಟೆಡ್ ಕಿಂಗ್‌ಡಮ್‌ನ ರಕ್ಷಣಾ ಇಲಾಖೆಯ ಧ್ವಜವನ್ನು ಹೋಲುವ, ಮೂರೂ ಪಡೆಗಳನ್ನು ಪ್ರತಿನಿಧಿಸುವಂತೆ ಕೆಂಪು, ಕಡುನೀಲಿ ಮತ್ತು ತಿಳಿನೀಲಿ ವರ್ಣದ 10, 20, 50, 100 ರೂಪಾಯಿ ಮೌಲ್ಯದ ಧ್ವಜಗಳನ್ನು ಕೇಂದ್ರ ಸರ್ಕಾರವು ಪ್ರತಿವರ್ಷ ದೇಶದಾದ್ಯಂತ ಮಾರಾಟಕ್ಕೆ ಬಿಡುಗಡೆ ಮಾಡುತ್ತದೆ. ಈ ಧ್ವಜದ ಆಕಾರ, ವರ್ಣಗಳನ್ನು ಕಾಮನ್‌ವೆಲ್ತ್ ರಾಷ್ಟ್ರಗಳಾದ ಭಾರತ, ಸೈಪ್ರಸ್, ಕೆನ್ಯಾ ಮತ್ತು ನೈಜೀರಿಯಾ ಸೇನಾ ಧ್ವಜಗಳಲ್ಲಿ ಬಳಸಲಾಗುತ್ತಿದೆ.

ರಕ್ಷಣಾ ಸಚಿವರ ನೇತೃತ್ವದ ಸಮಿತಿಯು 1949ರಲ್ಲಿಯೇ 'ಧ್ವಜದಿನ ನಿಧಿ'ಯನ್ನು ಸ್ಥಾಪಿಸಿತು. ಆದರೆ ರಕ್ಷಣಾ ಇಲಾಖೆಯು 1993ರಲ್ಲಿ ವಿವಿಧ ನಿಧಿಗಳನ್ನು ಏಕತ್ರಗೊಳಿಸಿ 'ಸಶಸ್ತ್ರ ಪಡೆಗಳ ಧ್ವಜದಿನ ನಿಧಿ'ಯಾಗಿ ಮಾರ್ಪಡಿಸಿತು. ಇದರಿಂದ ವಿವಿಧ ಹೆಸರುಗಳಲ್ಲಿ, ವಿವಿಧ ಲೆಕ್ಕ ಶೀರ್ಷಿಕೆಗಳ ಅಡಿಯಲ್ಲಿ ಸಂಗ್ರಹವಾಗುತ್ತಿದ್ದ, ಧ್ವಜ ಮಾರಾಟದಿಂದ ಬರುತ್ತಿದ್ದ ಹಣದ ಶೀಘ್ರ ಬಳಕೆ ಸುಲಭವಾಯಿತು.



ಧ್ವಜ ಖರೀದಿಸುವಂತೆ ವಿವಿಧ ಸರ್ಕಾರಿ ಕಚೇರಿಗಳ ಸಿಬ್ಬಂದಿ ವಿನಂತಿಸಿದರೆ, ಬಹುತೇಕ ನಾಗರಿಕರು ನೂರೆಂಟು ಸಬೂಬು ಹೇಳುತ್ತಾರೆ ಎಂಬ ಮಾತಿದೆ. ಇದು ವಿಷಾದದ ಸಂಗತಿ. ಧ್ವಜ ಖರೀದಿ ಒಂದು ಹೊರೆ ಎಂದು ಭಾವಿಸುವ ಬದಲು, ನಾಡಿನ ಗಡಿಯ ರಕ್ಷಣೆಗಾಗಿ ತೆರಳಲು ನಮಗೆ ಸಾಧ್ಯವಿಲ್ಲದಿದ್ದರೂ, ದೇಶಸೇವೆಗೆ ತನುಮನವನ್ನು ಮುಡಿಪಾಗಿಟ್ಟಿರುವವರ ನೆರವಿಗೆ ನಮಗೆ ಇದೊಂದು ಸುವರ್ಣಾವಕಾಶ ಎಂದು ಭಾವಿಸಬಾರದೇಕೆ? ಹೀಗೆ ಮಾರಾಟವಾದ ಧ್ವಜಗಳಿಂದ ಬರುವ ಹಣವನ್ನು ಅನ್ಯ ಉದ್ದೇಶಕ್ಕೆ ಬಳಸದೆ, ಸೇವಾನಿರತ-ನಿವೃತ್ತ ಸೈನಿಕರ ಕಲ್ಯಾಣಕ್ಕಾಗಿ ಮಾತ್ರ ಬಳಸಲಾಗುತ್ತದೆ.

ಪ್ರತಿಯೊಬ್ಬ ಭಾರತೀಯ ಉದಾರ ಮನಸ್ಸಿನಿಂದ, ಹೃತ್ಪೂರ್ವಕವಾಗಿ ಈ ಧ್ವಜಗಳನ್ನು ಖರೀದಿಸಿ, ನಮ್ಮ ಸೇನಾಶೂರರನ್ನು ಹುರಿದುಂಬಿಸಬೇಕಾದ ಅಗತ್ಯ ಇದೆ. ಸೈನಿಕರು ಹುತಾತ್ಮರಾದಾಗ ಒಂದೆರಡು ದಿನಗಳ ಕಾಲ ಕಣ್ಣೀರು ಸುರಿಸಿ, ಶೋಕಾಚರಣೆ ಮಾಡಿದರೆ ಸಾಲದು. ಸೇನಾನಿಗಳ ಜಾತಿ, ಪ್ರಾಂತ್ಯ, ಲಿಂಗಭೇದವನ್ನು ಮೀರಿದ ನೆರವು ನೀಡುವ ಮನಸ್ಸು ನಮಗಿದ್ದರೆ, ಈ ಬಾರಿ ಮುಕ್ತ ಮನಸ್ಸಿನಿಂದ ಸಶಸ್ತ್ರ ಪಡೆಗಳ ಧ್ವಜಗಳನ್ನು ಖರೀದಿಸಿ ಪ್ರೋತ್ಸಾಹಿಸುವ ಸಂಕಲ್ಪ ಮಾಡೋಣ.

ವಾಚಕರ ವಾಣಿ

ಸ್ಮಾರಕ ಬೇಡ, ವಿದ್ಯಾರ್ಥಿ ವೇತನ ನೀಡಿ

ಕಾಡಾನೆಗಳ ಸೆರೆಗಾಗಿ ನಡೆದ ಕಾರ್ಯಾಚರಣೆಯ ವೇಳೆ ಮೃತಪಟ್ಟ ಆನೆ ಅರ್ಜುನನ ನೆನಪಿಗಾಗಿ ಮೈಸೂರು ಮತ್ತು ಹಾಸನದಲ್ಲಿ ಸ್ಮಾರಕ ನಿರ್ಮಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಿಳಿಸಿರುವುದಾಗಿ ನ್ಯೂಸ್ ಚಾನೆಲ್ ಒಂದು ವರದಿ ಮಾಡಿದೆ.

ಇದು ನಿಜವೇ ಆಗಿದ್ದಲ್ಲಿ ಇದರ ಅಗತ್ಯದ ಬಗ್ಗೆ ಯೋಚಿಸಬೇಕಾಗಿದೆ. ಸ್ಮಾರಕ ನಿರ್ಮಿಸುವುದರಿಂದ ಯಾರಿಗೆ ಪ್ರಯೋಜನ ಇದೆಯೋ ಗೊತ್ತಿಲ್ಲ. ಆದರೆ ಖಂಡಿತ ಸ್ಮಾರಕ ನಿರ್ಮಾಣ ಕಾರ್ಯಕ್ಕೆ ಮುಂದಾಗುವವರು ಹಣ ಮಾಡಿಕೊಳ್ಳಲು ಅನುಕೂಲ ಆಗುತ್ತದೆ.

ಅದರ ಬದಲು, ಆನೆಗಳನ್ನು ತಮ್ಮ ಮನೆಯ ಸದಸ್ಯರಂತೆ ಸಲಹುವ ಮಾವುತರು ಮತ್ತು ಕಾವಾಡಿಗರ ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲ ಆಗುವಂತೆ ಅರ್ಜುನನ ಹೆಸರಿನಲ್ಲಿ ವಿದ್ಯಾರ್ಥಿ ವೇತನ ನೀಡಬಹುದು. ಅರ್ಜುನನ ಕಥೆಯನ್ನು ಪ್ರಚುರಪಡಿಸುವ ದಿಸೆಯಲ್ಲಿ ಆತನಿಗೆ ಸಂಬಂಧಿಸಿದ ಛಾಯಾಚಿತ್ರಗಳನ್ನು ಮೈಸೂರು ಮೃಗಾಲಯದಲ್ಲಿ ಪ್ರದರ್ಶಿಸುವುದು ಸೂಕ್ತ. ಜೊತೆಗೆ, ಈ ಹಿಂದೆ ದಸರಾದಲ್ಲಿ ಪಾಲ್ಗೊಂಡು ದುರಂತದಲ್ಲಿ ಮೃತಪಟ್ಟ ಆನೆಗಳ ಛಾಯಾಚಿತ್ರಗಳನ್ನೂ ಈ ಪ್ರದರ್ಶನದಲ್ಲಿ ಸೇರಿಸಬಹುದು.

ಗೌಡಯ್ಯ, ಮೈಸೂರು

ಕೆಂಪೇಗೌಡ ಪ್ರತಿಮೆ: ದೀಪ ಬೆಳಗಲಿ

ಬೆಂಗಳೂರಿನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಈ ವರ್ಷದ ಮಾರ್ಚ್ ತಿಂಗಳಲ್ಲಿ ಎರಡು ಬಾರಿ ರಾತ್ರಿ ವೇಳೆಯಲ್ಲಿ ಹೋಗಿ ಬಂದಿದ್ದೆ. ಆ ಸಂದರ್ಭದಲ್ಲಿ ಕೆಂಪೇಗೌಡರ ಪ್ರತಿಮೆ ಕಣ್ಣಿಗೆ ಬೀಳಲಿಲ್ಲ. ಮೊನ್ನೆ ಭಾನುವಾರ ಮಧ್ಯರಾತ್ರಿ ವಿಮಾನ ನಿಲ್ದಾಣಕ್ಕೆ ಹೋಗುವಾಗ, ಕಾರು ಚಾಲನೆ ಮಾಡುತ್ತಿದ್ದ ಸೋದರನ ಮಗನಿಗೆ ಕೆಂಪೇಗೌಡರ ಪ್ರತಿಮೆ ತೋರಿಸುವಂತೆ ಕೇಳಿದೆ. ಆತ ತೋರಿಸಿದಾಗ ಕುತೂಹಲದಿಂದ ನೋಡಿದೆ. ಪ್ರತಿಮೆ ಸರಿಯಾಗಿ ಕಾಣಲಿಲ್ಲ. ಏಕೆಂದರೆ, ಪ್ರತಿಮೆ ಕಾಣುವಂತೆ ವಿದ್ಯುತ್ ದೀಪದ ವ್ಯವಸ್ಥೆ ಅಲ್ಲಿರಲಿಲ್ಲ. ಆದರೆ ಸುತ್ತಮುತ್ತ ಅಳವಡಿಸಿರುವ ಜಾಹೀರಾತು ಫಲಕಗಳು ಮಾತ್ರ ವಿದ್ಯುತ್ ಬೆಳಕಿನಲ್ಲಿ ರಾರಾಜಿಸುತ್ತಿದ್ದವು. ಇವುಗಳ ನಡುವೆ, ಕೆಂಪೇಗೌಡರ ಪ್ರತಿಮೆಯನ್ನು ಕತ್ತಲೆಯ ಪಂಜರದಲ್ಲಿ ಹಾಕಿರುವಂತೆ ಭಾಸವಾಗಿ ಬೇಸರವಾಯಿತು.

ರಾಜ್ಯ ಸರ್ಕಾರ ಪ್ರತಿ ಮನೆಗೆ 200 ಯೂನಿಟ್ ವಿದ್ಯುತ್ ಉಚಿತ ಎಂದು ಹೇಳಿದೆ. ಆದರೆ ರಾಜ್ಯ ಸರ್ಕಾರವೇ ನಿರ್ಮಿಸಿರುವ, ಬೆಂಗಳೂರು ನಿರ್ಮಾಪಕ ಕೆಂಪೇಗೌಡರ ಪ್ರತಿಮೆ ಎದ್ದು ಕಾಣುವಂತೆ ಅಲ್ಲಿ ವಿದ್ಯುತ್ ಬೆಳಕಿನ ವ್ಯವಸ್ಥೆ ಮಾಡದಿರುವುದು ಸರಿಯಲ್ಲ. ರಾತ್ರಿ ವೇಳೆ ಸಾವಿರಾರು ಮಂದಿ ಈ ಮಾರ್ಗದಲ್ಲಿ ಸಂಚರಿಸುತ್ತಾರೆ. ಈಗಲಾದರೂ ಸರ್ಕಾರ ಎಚ್ಚೆತ್ತುಕೊಂಡು ಕೆಂಪೇಗೌಡರ ಪ್ರತಿಮೆಗೆ ಸೂಕ್ತ ರೀತಿಯಲ್ಲಿ ವಿದ್ಯುತ್ ದೀಪಗಳನ್ನು ಅಳವಡಿಸಲು ಕ್ರಮ ಕೈಗೊಳ್ಳಲಿ.

ಸಿ.ಸಿದ್ದರಾಜು ಆಲಕೆರೆ, ಮಂಡ್ಯ

ಗುಣಮಟ್ಟದ ಸಾಹಿತ್ಯಕ್ಕೆ ಸೋಲಿಲ್ಲ

'ಪ್ರಶಸ್ತಿ, ಪ್ರೇರಣೆ ಮತ್ತು ಸಾಹಿತ್ಯ' ಎಂಬ ಅರುಣ್ ಜೋಳದಕೂಡ್ಲಿಗಿ ಅವರ ಲೇಖನದಲ್ಲಿನ (ಸಂಗತ, ಡಿ. 6) ಅಂಶಗಳನ್ನು ಪೂರ್ಣವಾಗಿ ಒಪ್ಪಲಾಗದು. ಬರೆಯುವ ಹುಕಿ ಇದ್ದವರು ಪ್ರಶಸ್ತಿಗೆ, ಬಹುಮಾನಕ್ಕೆ ಎಂದು ಬರೆಯಲಾರರು. ಬರೆದಿದ್ದನ್ನು ಆ ಕ್ಷಣಕ್ಕೆ ಆಹ್ವಾನಿತ ಸ್ಪರ್ಧೆಗೆ ಕಳಿಸುತ್ತಾರೆ. ಬಹಳ ಹಿಂದಿನಿಂದಲೂ ಪತ್ರಿಕೆಗಳ ಕಥೆ, ಕವನ ಸ್ಪರ್ಧೆಗಳಲ್ಲಿ ಗೆದ್ದವರು ನಾಡಿನ ಪ್ರಖ್ಯಾತ ಲೇಖಕರಾಗಿ ಗುರುತಿಸಿಕೊಂಡು ಸಾರಸ್ವತ ಲೋಕದಲ್ಲಿ ಗಟ್ಟಿ ಸ್ಥಾನ ಪಡೆದಿದ್ದಾರೆ.

ನೂರಾರು ಪತ್ರಿಕೆ, ಪುಸ್ತಕ, ಸಂಘಟನೆಗಳ ನಡುವೆ ವಿವಿಧ ಸಾಹಿತ್ಯ ಸ್ಪರ್ಧೆಗಳು ಹುಟ್ಟಿಕೊಂಡಿವೆ, ಬರೆಯುವವರೂ ಹೆಚ್ಚಾಗಿದ್ದಾರೆ. ಗುಣಮಟ್ಟದ ಸಾಹಿತ್ಯ ಯಾವ ಕಾಲಕ್ಕೂ ಗೆಲ್ಲುತ್ತದೆ. ಒಮ್ಮೆ ಬಹುಮಾನ ತೆಗೆದುಕೊಂಡವರು ಮತ್ತೆ ಮತ್ತೆ ತೆಗೆದುಕೊಳ್ಳಬಾರದೆಂಬ ನಿಯಮ ಇದೆಯೇ? ಒಮ್ಮೆ ಪ್ರಶಸ್ತಿ ಪಡೆದವರು ಮೂರು ವರ್ಷ ಪುನಃ ಆ ಸ್ಪರ್ಧೆಗೆ ಭಾಗವಹಿಸಬಾರದೆಂಬ ನಿಯಮವನ್ನು ಕೆಲವು ಆಯೋಜಕರು ಮಾಡಿದ್ದಾರೆ. ಹಿರಿಯರು, ಕಿರಿಯರು ಕೂಡಿ ಬರೆದಾಗ ಪೈಪೋಟಿ ಹೆಚ್ಚಾಗಿ, ಉತ್ತಮ ಸಾಹಿತ್ಯಕೃಷಿ ಬರಬಲ್ಲದು. ಎಲ್ಲ ಸ್ಪರ್ಧೆ, ಎಲ್ಲ ತೀರ್ಪು, ಎಲ್ಲ ಪ್ರಶಸ್ತಿ ವಿಜೇತರನ್ನೂ ಹಳದಿ ಕಣ್ಣಿನಿಂದ ನೋಡುವುದು ತಪ್ಪು. ವ್ಯಕ್ತಿವಾದಿಗಳಾಗಿ ಅಥವಾ ಜಾತಿವಾದಿಗಳಾಗಿ ರೂಪಿಸುವ ನಡೆ ಬರೀ ಸಾಹಿತ್ಯ ವಲಯದಲ್ಲಿದೆಯೇ? ಇದು ಯಾವ ಕ್ಷೇತ್ರವನ್ನೂ ಬಿಟ್ಟಿಲ್ಲ.

ಗಟ್ಟಿ ಸದಾ ಕಾಲ ಉಳಿಯುತ್ತದೆ. ನಾಡಿನಾದ್ಯಂತ ಸಾಹಿತ್ಯ ಚರ್ಚೆ, ಸಂವಾದ, ವಿಚಾರ ಮಂಥನ ನಡೆಯುತ್ತಲೇ ಇವೆ. ವಿಮರ್ಶೆ ಕುರಿತಂತೆ ಲೇಖಕರ ಗ್ರಹಿಕೆ ತಪ್ಪು. ಎಲ್ಲ ರೀತಿಯ ಸಾಹಿತ್ಯ ವಿಮರ್ಶೆಗಳೂ ಬರುತ್ತಿವೆ. ಹಳೆಯದು ಹೊನ್ನು ಎಂದು ಕೂತರೆ, ಇಂದಿನದು ಮುಂದೆ ಹಳತಾಗುತ್ತದೆ, ಹೊನ್ನೂ ಆಗುತ್ತದೆ.

ಸಂತೆಬೆನ್ನೂರು ಫೈಜ್ನಟ್ರಾಜ್, ಸಂತೆಬೆನ್ನೂರು

ಅರ್ಥಶಾಸ್ತ್ರದ ವಿದ್ವತ್ತು ಹೀಗೂ ಬಳಕೆಯಾಯಿತು!

ಪ್ರತಿಬಾರಿ ಲೋಕಾಯುಕ್ತ ದಾಳಿ ನಡೆದಾಗ, ದಾಳಿಗೆ ಒಳಗಾದವರಲ್ಲಿ ವಿಭಿನ್ನ ಬಗೆಯ ಸರ್ಕಾರಿ ಅಧಿಕಾರಿಗಳು ಇರುವುದನ್ನು ಗಮನಿಸಬಹುದಾಗಿದೆ. ಈ ಬಾರಿ ದಾಳಿಗೊಳಗಾದ ಅಧಿಕಾರಿಗಳಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಅರ್ಥಶಾಸ್ತ್ರ ವಿಭಾಗದ ಪ್ರಾಧ್ಯಾಪಕರೊಬ್ಬರು ಆದಾಯಕ್ಕಿಂತ ಹೆಚ್ಚಿನ ಆಸ್ತಿ ಹೊಂದಿರುವ ಬಗ್ಗೆ ವರದಿಯಾಗಿದೆ. ಇವರಲ್ಲಿನ ವಿಶೇಷವೆಂದರೆ, ಇವರು ಸ್ಟೀಲ್ ಉತ್ಪನ್ನ, ರಿಯಲ್ ಎಸ್ಟೇಟ್, ಬಟ್ಟೆ ಅಂಗಡಿ, ಶಿಕ್ಷಣ ಸಂಸ್ಥೆ, ವರ್ಗಾವಣೆ ದಂಧೆಯಂತಹ ವಿವಿಧ ಆದಾಯ ಮೂಲಗಳಿಗೆ ಕೈಹಾಕಿರುವುದು.

ರಾವಣ ಪರಸ್ತ್ರೀ ವ್ಯಾಮೋಹದಿಂದ ಭ್ರಷ್ಟನಾದರೂ ಅವನ ಶಿವಭಕ್ತಿಯನ್ನು ಲೋಕ ಕೊಂಡಾಡುತ್ತದೆ. ಈ ಪ್ರಾಧ್ಯಾಪಕ ಅನ್ಯಮಾರ್ಗಗಳ ಮೂಲಕ ಆದಾಯ ಹೆಚ್ಚಿಸಿಕೊಳ್ಳಲು ತಮ್ಮ ಅರ್ಥಶಾಸ್ತ್ರದ ವಿದ್ವತ್ತನ್ನು ಬಳಸಿಕೊಂಡ ಪರಿ ಅಚ್ಚರಿಯೆನಿಸುತ್ತದೆ. ಒಬ್ಬ ವ್ಯಕ್ತಿಗೆ ಜೀವನೋಪಾಯಕ್ಕೆ ಒಂದು ಸ್ವಂತ ಮನೆ ಸಾಕು. ಆದರೆ, ಕರ್ನಾಟಕದ ಯಾವುದೇ ಜಿಲ್ಲೆ, ತಾಲ್ಲೂಕುಗಳಲ್ಲಿ ಹೊಸ ಲೇಔಟ್‌ಗಳನ್ನು ನಿರ್ಮಾಣ ಮಾಡಿದರೂ, ಅಲ್ಲಿ ತಮ್ಮ ಕುಟುಂಬದವರ ಹೆಸರಿನಲ್ಲಿ ಒಂದೊಂದು ನಿವೇಶನ ಖರೀದಿ ಮಾಡುವ ಇಂತಹವರು ವಿದ್ಯಾರ್ಥಿಗಳಿಗೆ ಯಾವ ರೀತಿಯ ನೈತಿಕ ಶಿಕ್ಷಣ ನೀಡಬಲ್ಲರು ಎನ್ನುವುದೇ ಯಕ್ಷಪ್ರಶ್ನೆಯಾಗಿದೆ.

ತಿಮ್ಮೇಶ ಮುಸ್ಟೂರು, ಜಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ದೇಶದ್ರೋಹದ ಕಾನೂನು
965 ಪ್ರಕರಣ, ಐದರಲ್ಲಷ್ಟೇ ಶಿಕ್ಷೆ



● ಜಯಸಿಂಹ ಆರ್.


ಕೇಂದ್ರ ಸರ್ಕಾರ ಮತ್ತು ಅದರ ನೀತಿಗಳನ್ನು ಟೀಕಿಸುವವರ ವಿರುದ್ಧ ದೇಶದ್ರೋಹದ ಕಾನೂನನ್ನು ದುರ್ಬಳಕೆ ಮಾಡಿಕೊಳ್ಳಲಾಗುತ್ತಿದೆ ಎಂಬುದು ವಿರೋಧ ಪಕ್ಷಗಳ ಆರೋಪ. 2019–2022ರ ಮಧ್ಯೆ ದೇಶದಾದ್ಯಂತ ದಾಖಲಾದ ದೇಶದ್ರೋಹದ ಪ್ರಕರಣಗಳು ಮತ್ತು ಅವುಗಳ ಸ್ಥಿತಿಗತಿಯು ವಿರೋಧ ಪಕ್ಷಗಳ ಈ ಆರೋಪವನ್ನು ಪುಷ್ಟೀಕರಿಸುತ್ತವೆ. ಹೀಗೆ ದಾಖಲಾದ ಪ್ರಕರಣಗಳು ತನಿಖೆ ಮತ್ತು ವಿಚಾರಣೆ ಹಂತದಲ್ಲೇ ಕೊಳೆಯುತ್ತಿವೆ. ತನಿಖೆ ಮತ್ತು ನ್ಯಾಯಾಲಯದ ಹಂತದಲ್ಲಿ ವಿಲೇವಾರಿಯಾದ ಪ್ರಕರಣಗಳ ಪ್ರಮಾಣ ತೀರಾ ಕಡಿಮೆ ಇದೆ. ಆದರೆ ಈ ಪ್ರಕರಣಗಳಲ್ಲಿ ಬಂಧನಕ್ಕೆ ಒಳಗಾದವರಲ್ಲಿ ಬಹುತೇಕ ಮಂದಿ ಇತ್ತ ಬಿಡುಗಡೆಯೂ ಆಗದೆ, ಅತ್ತ ಶಿಕ್ಷೆಯೂ ಆಗದೆ ಜೈಲುಗಳಲ್ಲೇ ಸೆರೆವಾಸ ಅನುಭವಿಸುತ್ತಿದ್ದಾರೆ.

2019ರಿಂದ 2022ರ ಮಧ್ಯೆ ದೇಶದಾದ್ಯಂತ ದೇಶದ್ರೋಹದ (ಐಪಿಸಿ ಸೆಕ್ಷನ್ 124ಎ) ಕಾನೂನಿನ ಅಡಿಯಲ್ಲಿ ಪೊಲೀಸರು ಒಟ್ಟು 262 ಪ್ರಕರಣಗಳನ್ನು ದಾಖಲಿಸಿದ್ದಾರೆ. 2019ಕ್ಕೂ ಮುನ್ನ ಈ ಸೆಕ್ಷನ್ ಅಡಿಯಲ್ಲಿ ದಾಖಲಾಗಿದ್ದ ಮತ್ತು ಹೊಸದಾಗಿ ದಾಖಲಾದವೂ ಸೇರಿ ಪೊಲೀಸರು 965 ಪ್ರಕರಣಗಳಲ್ಲಿ ತನಿಖೆ ನಡೆಸಿದ್ದಾರೆ. 2019ರ ಜನವರಿಯಿಂದ 2022ರ ಡಿಸೆಂಬರ್ ಅಂತ್ಯದವರೆಗೆ ಪೊಲೀಸರು ತನಿಖೆ ಪೂರ್ಣಗೊಳಿಸಿದ್ದು 196 ಪ್ರಕರಣಗಳಲ್ಲಿ ಮಾತ್ರ. ಉಳಿದ ಪ್ರಕರಣಗಳಲ್ಲಿ ಬಂಧನಕ್ಕೆ ಒಳಗಾದ ಜನರು ಇನ್ನೂ ಜೈಲುಗಳಲ್ಲೇ ಇದ್ದಾರೆ.

196 ಪ್ರಕರಣಗಳನ್ನು ಪೊಲೀಸರು ವಿಲೇವಾರಿ ಮಾಡಿದ್ದರೂ ಅವುಗಳಲ್ಲಿ ಆರೋಪಪಟ್ಟಿ ಸಲ್ಲಿಕೆಯಾಗಿ, ನ್ಯಾಯಾಲಯಕ್ಕೆ ವಿಚಾರಣೆಗೆ ಹೋಗಿದ್ದು 103 ಪ್ರಕರಣಗಳು. 58 ಪ್ರಕರಣಗಳನ್ನು ಸಾಕ್ಷ್ಯದ ಕೊರತೆ ಎಂದು ಮತ್ತು 35 ಪ್ರಕರಣಗಳನ್ನು ಸುಳ್ಳು ಎಂದು ಪೊಲೀಸರೇ ವಜಾ ಮಾಡಿದ್ದಾರೆ. ಆದರೆ 769 ಪ್ರಕರಣಗಳು ಪೊಲೀಸರ ಬಳಿ ತನಿಖೆಯ ಹಂತದಲ್ಲೇ ಉಳಿದಿವೆ. ಇವೆಲ್ಲವೂ ಬಹಳ ಹಳೆಯ ಪ್ರಕರಣಗಳಾದರೂ ತನಿಖೆ ಪೂರ್ಣಗೊಳ್ಳದೆ ಇರುವುದು, ಅವೆಲ್ಲವೂ ಸುಳ್ಳು ಪ್ರಕರಣಗಳು ಇರಬಹುದು ಎಂಬ ಸಂದೇಹಕ್ಕೆ ಕಾರಣವಾಗಿದೆ.


2019ಕ್ಕೂ ಹಿಂದೆಯೇ ಮತ್ತು 2019–2022ರ ಅವಧಿಯಲ್ಲಿ ನ್ಯಾಯಾಲಯಕ್ಕೆ ಹೋದ ಪ್ರಕರಣಗಳಲ್ಲೂ ವಿಚಾರಣೆ ಹಾಗೂ ನ್ಯಾಯದಾನ ತ್ವರಿತಗತಿಯಲ್ಲಿ ನಡೆಯುತ್ತಿಲ್ಲ. ಈ ಅವಧಿಯಲ್ಲಿ ಹೊಸದಾಗಿ ಬಂದ ಮತ್ತು ಮೊದಲೇ ಇದ್ದವೂ ಸೇರಿ ನ್ಯಾಯಾಲಯಗಳ ಬಳಿ 492 ಪ್ರಕರಣಗಳು ವಿಚಾರಣೆ ಹಂತದಲ್ಲಿದ್ದವು. ಇವುಗಳಲ್ಲಿ ನ್ಯಾಯಾಲಯಗಳು ವಿಲೇವಾರಿ ಮಾಡಿದ್ದು 48 ಪ್ರಕರಣಗಳನ್ನು ಮಾತ್ರ. ಆದರೆ, ಉಳಿದ 444 ಪ್ರಕರಣಗಳಲ್ಲಿ ಆರೋಪಿಗಳು ಸೆರೆವಾಸದಲ್ಲೇ ಉಳಿದಿದ್ದಾರೆ ಇಲ್ಲವೇ ಜಾಮೀನಿನ ಮೇಲೆ ಹೊರಗಿದ್ದಾರೆ.

ನ್ಯಾಯಾಲಯಗಳು ವಿಲೇವಾರಿ ಮಾಡಿದ 48 ಪ್ರಕರಣಗಳಲ್ಲಿ ಖುಲಾಸೆಯಾದ ಪ್ರಕರಣಗಳದ್ದೇ ದೊಡ್ಡಪಾಲು. 37 ಪ್ರಕರಣಗಳು ಖುಲಾಸೆಯಲ್ಲಿ ಅಂತ್ಯವಾಗಿದ್ದರೆ, 6 ಪ್ರಕರಣಗಳು ನ್ಯಾಯಾಲಯಗಳು ವಜಾ ಮಾಡಿವೆ. ಶಿಕ್ಷೆಯಾಗಿದ್ದು 5 ಪ್ರಕರಣಗಳಲ್ಲಿ ಮಾತ್ರ. ನ್ಯಾಯಾಲಯವು ವಿಲೇವಾರಿ ಮಾಡಿದ ದೇಶದ್ರೋಹದ ಪ್ರಕರಣಗಳಲ್ಲಿ ಬಹುತೇಕವು ಬಿದ್ದುಹೋಗುತ್ತವೆ ಎಂದು ಈ ದತ್ತಾಂಶಗಳು ಹೇಳುತ್ತವೆ. ಈ ಎಲ್ಲಾ ಅಂಶಗಳು ದೇಶದ್ರೋಹದ ಕಾನೂನನ್ನು ದುರ್ಬಳಕೆ ಮಾಡಿಕೊಳ್ಳಲಾಗುತ್ತಿದೆ ಎಂಬುದನ್ನೇ ಸೂಚಿಸುತ್ತವೆ. ಪೊಲೀಸರು ದಾಖಲಿಸಿದ ಒಟ್ಟು ಪ್ರಕರಣಗಳಲ್ಲಿ ಬಹುತೇಕ ಪ್ರಕರಣಗಳನ್ನು (ಶೇ 80ರಷ್ಟು) ನ್ಯಾಯಾಲಯಕ್ಕೆ ಬರುತ್ತಲೇ ಇಲ್ಲ ಎಂಬ ಅಂಶವೂ ದುರ್ಬಳಕೆ ಆರೋಪವನ್ನು ಪುಷ್ಟೀಕರಿಸುತ್ತದೆ.




ಸೆಕ್ಷನ್ 124ಎ: ಬಂಧಿತರ ಸ್ಥಿತಿಗತಿ

ದೇಶದ್ರೋಹದ ಆರೋಪದಲ್ಲಿ 2019–2022ರ ಮಧ್ಯೆ ಪೊಲೀಸರು ಒಟ್ಟು 264 ಜನರನ್ನು ಬಂಧಿಸಿದ್ದಾರೆ. ಆದರೆ ಆರೋಪ ಪಟ್ಟಿ ಸಲ್ಲಿಕೆಯಾಗಿದ್ದು 192 ಜನರ ವಿರುದ್ಧ ಮಾತ್ರ. ಇವರಲ್ಲಿ ಆರೋಪ ಸಾಬೀತಾಗದೆ ಬಿಡುಗಡೆಯಾದವರು 10 ಮಂದಿಯಾದರೆ, ಸಾಕ್ಷ್ಯಗಳ ಕೊರತೆಯಿಂದ ಖುಲಾಸೆ ಆದವರು 41 ಮಂದಿ. 208 ಮಂದಿ ಇನ್ನೂ ಸೆರೆವಾಸದಲ್ಲೇ ಇದ್ದಾರೆ



10 2019–2022ರ ಅವಧಿಯಲ್ಲಿ ದೇಶದ್ರೋಹದ ಆರೋಪದ ಅಡಿಯಲ್ಲಿ ಬಂಧನಕ್ಕೊಳಗಾದ ಮಹಿಳೆಯರ ಸಂಖ್ಯೆ. ಇವರಲ್ಲಿ ಒಬ್ಬರೂ ಬಿಡುಗಡೆಯಾಗಿಲ್ಲ




ದೇಶದ್ರೋಹದ ಕಾನೂನೂ ರದ್ದು: ವಾಸ್ತವ ಮರೆಮಾಚಿಸಿದ್ದ ಶಾ ಹೇಳಿಕೆ

ಬ್ರಿಟಿಷರ ಆಳ್ವಿಕೆಯ ಕಾಲದ ದೇಶದ್ರೋಹದ ಕಾನೂನಿನ (ಐಪಿಸಿ 124ಎ) ದುರ್ಬಳಕೆ ತಡೆಯುವ ಸಲುವಾಗಿ, ಆ ಕಾನೂನನ್ನೇ ರದ್ದುಪಡಿಸಬೇಕು ಎಂದು ವಿರೋಧ ಪಕ್ಷಗಳು ಮತ್ತು ಸಾಮಾಜಿಕ ಕಾರ್ಯಕರ್ತರು ಆಗ್ರಹಿಸುತ್ತಲೇ ಇದ್ದರು. ಈ ಸಲುವಾಗಿ ಸುಪ್ರೀಂ ಕೋರ್ಟ್‌ಗೆ ಹಲವು ಅರ್ಜಿಗಳನ್ನೂ ಸಲ್ಲಿಸಲಾಗಿತ್ತು. 'ಇಂತಹ ಕಾನೂನಿನ ಅಗತ್ಯವಿದೆ' ಎಂದು ಕೇಂದ್ರ ಸರ್ಕಾರವು ನ್ಯಾಯಾಲಯದಲ್ಲಿ ಪ್ರತಿಪಾದಿಸಿತ್ತು.

ಈಚೆಗೆ ಕಾನೂನು ಕಾಯ್ದೆಗಳಿಗೆ ಮರುನಾಮಕರಣ ಮಾಡುವ ಮಸೂದೆಗಳನ್ನು ಮಂಡಿಸಿದಾಗ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಲೋಕಸಭೆಯಲ್ಲಿ, ದೇಶದ್ರೋಹದ ಕಾನೂನನ್ನು ಸಂಪೂರ್ಣವಾಗಿ ರದ್ದುಪಡಿಸಿದ್ದೇವೆ ಎಂದು ಹೇಳಿದ್ದರು. ಆದರೆ ಅವರು ಹೇಳಿಕೆ ವಾಸ್ತವಿಕ ಸಂಗತಿಗೆ ವ್ಯತಿರಿಕ್ತವಾಗಿತ್ತು.

ಭಾರತೀಯ ದಂಡ ಸಂಹಿತೆಯನ್ನು ಭಾರತೀಯ ಕಾನೂನು ಸಂಹಿತೆ ಎಂದು ಬದಲಿಸುವ ಮಸೂದೆಯಲ್ಲಿ 124ಎ ಸೆಕ್ಷನ್ ಅನ್ನು ಮಾತ್ರ ರದ್ದುಪಡಿಸಲಾಗಿತ್ತು. ಈ ಸೆಕ್ಷನ್ ಅಡಿಯಲ್ಲಿ ವಿವರಿಸಲಾಗಿದ್ದ 'ದೇಶದ್ರೋಹ'ದ ವ್ಯಾಖ್ಯಾನವನ್ನು ಹೊಸದಾಗಿ ರೂಪಿಸಲಾಗಿದ್ದ 150ನೇ ಸೆಕ್ಷನ್‌ನ ಅಡಿಯಲ್ಲಿ ಸೇರಿಸಲಾಗಿತ್ತು.


ಅಮಿತ್ ಶಾ

ನೂತನ ಸೆಕ್ಷನ್‌ನಲ್ಲಿ 'ದೇಶದ್ರೋಹ' ಎಂಬುದನ್ನು 'ಭಾರತದ ಒಗ್ಗಟ್ಟು, ಸಾರ್ವಭೌಮತೆ ಮತ್ತು ಏಕತೆಗೆ ಧಕ್ಕೆ ತರುವಂತಹ ಕೃತ್ಯಗಳು' ಎಂದು ಬದಲಿಸಲಾಗಿತ್ತು. ಜತೆಗೆ ಈ ಸೆಕ್ಷನ್‌ನ ಅಡಿಯಲ್ಲಿ ಬರುವ ಕೃತ್ಯಗಳ ಸಂಖ್ಯೆಯನ್ನೂ ಹೆಚ್ಚಿಸಲಾಗಿತ್ತು. ಅದಲ್ಲದೆ, ಈ ಕೃತ್ಯಗಳಿಗೆ ವಿಧಿಸಬಹುದಾದ ಶಿಕ್ಷೆ ಮತ್ತು ದಂಡದ ಮೊತ್ತವನ್ನು ಭಾರಿ ಪ್ರಮಾಣದಲ್ಲಿ ಏರಿಕೆ ಮಾಡಲಾಗಿತ್ತು.

ಈ ಕಾನೂನನ್ನು ಕಠಿಣಗೊಳಿಸಿದ್ದರೂ ಅಮಿತ್ ಶಾ ಅವರು, ದೇಶದ್ರೋಹದ ಕಾನೂನನ್ನು ಸಂಪೂರ್ಣವಾಗಿ ರದ್ದುಪಡಿಸಲಾಗಿದೆ ಎಂದು ಲೋಕಸಭೆಯಲ್ಲೇ ಹೇಳುವ ಮೂಲಕ ವಾಸ್ತವಾಂಶ ಮುಚ್ಚಿಟ್ಟಿದ್ದರು.

ಆಧಾರ: ಎನ್‌ಸಿಆರ್‌ಬಿಯ ಭಾರತದಲ್ಲಿ ಅಪರಾಧ–2018, 2019, 2020, 2021, 2022 ವರದಿಗಳು, ಪಿಟಿಐ

ಸಿನಿ ಬಿಟ್ಸ್



ಗೋಲ್ಡನ್ ಸ್ಟಾರ್ ಗಣೇಶ್, ಮಾಳವಿಕ ನಾಯರ್ ಜೋಡಿಯಾಗಿ ನಟಿಸಿರುವ 'ಕೃಷ್ಣಂ ಪ್ರಣಯ ಸಖಿ' ಚಿತ್ರದ ಚಿತ್ರೀಕರಣ ಮುಕ್ತಾಯಗೊಂಡಿದ್ದು, ಡಬ್ಬಿಂಗ್ ಪ್ರಾರಂಭವಾಗಿದೆ.


ಶ್ರೀನಿವಾಸರಾಜು ನಿರ್ದೇಶನದ ಚಿತ್ರವನ್ನು ಬೆಂಗಳೂರು, ಇಟಲಿ ಹಾಗೂ ಮಾಲ್ಟಾದಲ್ಲಿ ಚಿತ್ರೀಕರಿಸಲಾಗಿದೆ. ಡಬ್ಬಿಂಗ್ ಕೂಡ ಮುಕ್ತಾಯ ಹಂತ ತಲುಪಿದ್ದು, ಸದ್ಯದಲ್ಲೇ ಚಿತ್ರದ ಬಿಡುಗಡೆ ದಿನಾಂಕ ಘೋಷಿಸುವುದಾಗಿ ಚಿತ್ರತಂಡ ಹೇಳಿದೆ. ಚಿತ್ರದಲ್ಲಿ ಐದು ಹಾಡುಗಳಿದ್ದು, ಅರ್ಜುನ್ ಜನ್ಯ ಸಂಗೀತ ನೀಡಿದ್ದಾರೆ. ವೆಂಕಟ್ ಪ್ರಸಾದ್ ಛಾಯಾಗ್ರಹಣ ಹಾಗೂ ಕೆ.ಎಂ.ಪ್ರಕಾಶ್ ಸಂಕಲನ ಚಿತ್ರಕ್ಕಿದೆ.

ಕೌಟುಂಬಿಕ ಕಥಾಹಂದರ ಹೊಂದಿರುವ ಈ ಚಿತ್ರವನ್ನು ತ್ರಿಶೂಲ್ ಎಂಟರ್‌ಟೈನ್‌ಮೆಂಟ್ ಲಾಂಛನದಲ್ಲಿ ಪ್ರಶಾಂತ್ ಜಿ. ರುದ್ರಪ್ಪ ನಿರ್ಮಾಣ ಮಾಡಿದ್ದಾರೆ. ಶರಣ್ಯ ಶೆಟ್ಟಿ, ಶ್ರೀನಿವಾಸಮೂರ್ತಿ, ಸಾಧುಕೋಕಿಲ, ರಂಗಾಯಣ ರಘು, ಶಶಿಕುಮಾರ್, ಶ್ರುತಿ, ಭಾವನ, ಅಶೋಕ್, ರಾಮಕೃಷ್ಣ, ಶಿವಧ್ವಜ್ ಮುಂತಾದ ಕಲಾವಿದರು ಚಿತ್ರದ ತಾರಾಬಳಗದಲ್ಲಿದ್ದಾರೆ.

ಶೂಟಿಂಗ್ ಅಖಾಡದಲ್ಲಿ 'ಅಧಿಪತ್ರ'

'ಬಿಗ್‌ಬಾಸ್' ವಿಜೇತ ರೂಪೇಶ್ ಶೆಟ್ಟಿ ನಟನೆಯ 'ಅಧಿಪತ್ರ' ಸಿನಿಮಾದ ಶೂಟಿಂಗ್ ಭರದಿಂದ ಸಾಗಿದೆ. ಚಿತ್ರತಂಡ ಸದ್ಯ ಕುಂದಾಪುರದ ಕೆರಾಡಿ ಭಾಗದಲ್ಲಿ ಚಿತ್ರೀಕರಣ ನಡೆಸುತ್ತಿದೆ. ಈಗಾಗಲೇ ಎರಡು ವಾರಗಳ ಚಿತ್ರೀಕರಣ ಪೂರ್ಣಗೊಂಡಿದ್ದು, ಪೊಲೀಸ್ ಅಧಿಕಾರಿಯಾಗಿ ರೂಪೇಶ್ ಈ ಚಿತ್ರದಲ್ಲಿ ಕಾಣಿಸಿಕೊಂಡಿದ್ದಾರೆ.

ತುಳು ಸಿನಿಮಾರಂಗದಿಂದ ಚಂದನವನಕ್ಕೆ ಕಾಲಿಡುತ್ತಿರುವ ರೂಪೇಶ್, ಸಿನಿಮಾದ ನಾನಾ ವಿಭಾಗಗಳಲ್ಲಿ ಕೆಲಸ ಮಾಡಿದ್ದಾರೆ. ನಟನಾಗಿ ಮತ್ತು ನಿರ್ದೇಶಕನಾಗಿ ಅವರು ತುಳು ಚಿತ್ರರಂಗದಲ್ಲಿ ಮಿಂಚಿದ್ದಾರೆ. ತುಳುವಿನ 'ಸರ್ಕಸ್' ಅವರಿಗೆ ಖ್ಯಾತಿ ತಂದ ಸಿನಿಮಾ. 'ಡೇಂಜರ್ ಝೋನ್', 'ನಿಶ್ಯಬ್ದ-2', 'ಅನುಷ್ಕಾ', 'ಮಂಕು ಭಾಯ್ ಫಾಕ್ಸಿ ರಾಣಿ' ಸೇರಿದಂತೆ ಹಲವು ಚಿತ್ರಗಳಲ್ಲಿ ನಟಿಸಿರುವ ರೂಪೇಶ್ ಇದೀಗ ಹೊಸ ಪ್ರಾಜೆಕ್ಟ್‌ನಲ್ಲಿ ತೊಡಗಿಸಿಕೊಂಡಿದ್ದಾರೆ. ಚಿತ್ರದಲ್ಲಿ ರೂಪೇಶ್‌ಗೆ ನಾಯಕಿಯಾಗಿ 'ಬೃಹತಿ' ಎಂಬ ಪಾತ್ರದಲ್ಲಿ ನಿರೂಪಕಿ ಜಾಹ್ನವಿ ನಟಿಸಿದ್ದು, ಇದು ಅವರ ಚೊಚ್ಚಲ ಸಿನಿಮಾ.


ರೂಪೇಶ್ ಶೆಟ್ಟಿ

ಸಹಾಯಕ ನಿರ್ದೇಶಕರಾಗಿ ಕೆಲಸ ಮಾಡಿದ ಅನುಭವ ಇರುವ ಚಯನ್ ಶೆಟ್ಟಿ, 'ಅಧಿಪತ್ರ' ಚಿತ್ರದ ಮೂಲಕ ನಿರ್ದೇಶಕರಾಗಿದ್ದಾರೆ. ಕೆ.ಆರ್. ಸಿನಿಕಂಬೈನ್ಸ್ ಬ್ಯಾನರ್ ಈ ಚಿತ್ರಕ್ಕೆ ಬಂಡವಾಳ ಹೂಡಿದ್ದು, ನೈಜ ಘಟನೆಯಿಂದ ಸ್ಫೂರ್ತಿ ಪಡೆದ ಸಸ್ಪೆನ್ಸ್ ಥ್ರಿಲ್ಲರ್ ಶೈಲಿಯ ಸಿನಿಮಾ ಇದಾಗಿದೆ ಎಂದಿದೆ ಚಿತ್ರತಂಡ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

'ಸರ್ಕಾರವೇ ಜನಾಂದೋಲನ ಮಾಡಬೇಕು'

ಕರ್ನಾಟಕ 25 ವರ್ಷಗಳ ಮುನ್ನೋಟ

ಕರ್ನಾಟಕದ ಅಣೆಕಟ್ಟೆಗಳಲ್ಲಿ ಕೆಲವು ಹಳೆಯವಾಗಿದ್ದರೆ, ಇನ್ನು ಕೆಲವು ಹೂಳಿನಲ್ಲಿ ಹುದುಗುತ್ತಿವೆ. ಮುಂದಿನ ದಿನಗಳಲ್ಲಿ ಇವುಗಳಿಂದ ಪ್ರಯೋಜನಕ್ಕಿಂತ ಅಪಾಯಗಳೇ ಹೆಚ್ಚು ಎನ್ನುವುದು ಮೇಲ್ನೋಟಕ್ಕೆ ಕಾಣುತ್ತಿರುವ ಸಂಗತಿ. ನೀರಾವರಿ ಉದ್ದೇಶದಿಂದ ಕಟ್ಟಿದ ಉತ್ತರ ಕರ್ನಾಟಕದ ಜಲಾಶಯಗಳಿಂದ ಸತತ ಹರಿದ ನೀರು ಅಲ್ಲಿನ ಭೂಮಿಯ ಫಲವತ್ತತೆಯನ್ನು ಕಡಿಮೆ ಮಾಡಿದೆಯೆಂದರೆ ನಾವು ಮಾಡಿದ, ಮಾಡುತ್ತಿರುವ ಕೆಲಸದಲ್ಲಿ ಮುಂದಾಲೋಚನೆಯ ಕೊರತೆ ತೀವ್ರವಾಗಿದೆ ಎಂದೆನ್ನಿಸುತ್ತದೆ. ಹಿಂದಿನ ಇಂತಹ ಹಲವು ತಪ್ಪು ನಡೆಗಳು ನಮ್ಮ ಕಣ್ಣಮುಂದಿವೆ. ಆ ಕಾಲಕ್ಕೆ ಅದು ಕ್ರಾಂತಿಕಾರಕವಾಗಿತ್ತು ಎಂದೆನ್ನಿಸಿದರೂ ಮುಂದಿನ ಕೇವಲ ಕೆಲವೇ ದಶಕಗಳಲ್ಲಿ ಅವುಗಳ ವೈಫಲ್ಯ ಎದ್ದುಕಾಣುವಂತಾಗಿದೆ.

ಟೀಕೆ ಮಾಡುತ್ತಾ ಕೂರೋಣವೆ? ಪ್ರಯೋಜನವಿಲ್ಲ. ಆದರೆ ಪಾಠ ಕಲಿಯಬಹುದಲ್ಲವೆ? ತಿದ್ದಿಕೊಳ್ಳಬಹುದಲ್ಲವೆ?

ಪ್ರಸ್ತುತ ಕರ್ನಾಟಕದಲ್ಲಿ ಅಂದಾಜು ಮೂರುಕೋಟಿ ಎಕರೆ ಭೂಮಿಯಲ್ಲಿ ಸಾಗುವಳಿ ಮಾಡಲಾಗುತ್ತಿದೆ. ಈ ಭೂಮಿಯಲ್ಲಿ ಪ್ರತಿ ಎಕರೆಗೆ ಒಂದು ಗುಂಟೆ ಜಾಗದಲ್ಲಿ ಅಂದರೆ 33 × 33 ಅಳತೆಯ ಜಾಗದಲ್ಲಿ ಕೇವಲ 5 ಅಡಿ ಆಳದ ಇಂಗುಗುಂಡಿ ತೋಡುವುದರಿಂದ ನಮ್ಮ ಅಂತರ್ಜಲವನ್ನು ಸಮೃದ್ಧವಾಗಿಸಬಹುದಲ್ಲವೆ? ಇದಕ್ಕೆ ಸರ್ಕಾರ ಬರಿದೇ ಆದೇಶ ಹೊರಡಿಸಿ, ಯಾವುದೋ ಇಲಾಖೆಗೆ ಜವಾಬ್ದಾರಿ ಹೊರಿಸಿದರೆ ಸಾಲದು. ಇದಕ್ಕಾಗಿ ಸರ್ಕಾರವೇ ಜನಾಂದೋಲನ ನಡೆಸಬೇಕು.

ಅಂಬರದಿಂದ ಭೂಮಿಗೆ ಬೀಳುವ ಮಳೆಯ ಪ್ರಮಾಣ ಕಡಿಮೆಯೇನಾಗಿಲ್ಲ. ಆದರೆ ಬೀಳಬೇಕಾದ ಜಾಗದಲ್ಲಿ, ಸಮಯದಲ್ಲಿ ಬೀಳುತ್ತಿಲ್ಲವಷ್ಟೆ. ಬಿದ್ದಷ್ಟಾದರೂ ಮಳೆಯ ನೀರನ್ನು ನಾವು ಎಷ್ಟು ನಿಲ್ಲಿಸಿಕೊಳ್ಳಲು ಯತ್ನಿಸುತ್ತಿದ್ದೇವೆ? ಅದೇ ಒಂದಿಷ್ಟು ಅಣೆಕಟ್ಟುಗಳಲ್ಲಿ ಒಂದಿಷ್ಟು ಪ್ರಮಾಣ. ಆದರೆ ಈ ಅಣೆಕಟ್ಟುಗಳು ಏನು ಪರಿಣಾಮ ಬೀರುತ್ತಿವೆ ಎಂದು ಈಗಾಗಲೇ ಹೇಳಿ ಆಗಿದೆಯಲ್ಲ. ಅದಕ್ಕೆ ಒಂದು ಗುಂಟೆ, ಒಂದು ದೊಡ್ಡ ಪರ್ಯಾಯ ಪರಿಹಾರವಾದೀತು ಎಂಬುದು ಒಂದು ಅನಿಸಿಕೆ. ಅದೇ ರೀತಿ ಕನಿಷ್ಠ ಒಂದುಕೋಟಿ ಮನೆಗಳಲ್ಲಿ ನೀರಿನ ಸಂಪನ್ನು ನಿರ್ಮಿಸುವಂತೆ ಕ್ರಮ ಕೈಗೊಂಡು ಬಿದ್ದ ಮಳೆನೀರನ್ನು ಸಂಗ್ರಹಿಸಿಕೊಳ್ಳುವಂತೆ ಸಮರೋಪಾದಿಯಲ್ಲಿ ಯೋಜನೆಯೊಂದನ್ನು ರೂಪಿಸಿ ಜನಾಂದೋಲನವಾಗಿಸುವುದು ಕೂಡಾ ಸರ್ಕಾರದ ಕೆಲಸದ ಭಾಗವಾಗಬೇಕು. ಬರಿದೇ ಆದೇಶ, ಅದಕ್ಕೊಂದಿಷ್ಟು ದುಡ್ಡು ಎತ್ತಿಡುವುದಾದರೆ ಸರ್ಕಾರಕ್ಕೆ ಈ ಉಸಾಬರಿ ಬೇಡ. ಈ ಯೋಜನೆ ಫಲಪ್ರದವಾಗಿ ಅನುಷ್ಠಾನಗೊಂಡಲ್ಲಿ ಕರ್ನಾಟಕದ ಜನರ 6 ತಿಂಗಳ ಕುಡಿವ ನೀರಿನ ಬವಣೆಯನ್ನು ತೊಲಗಿಸಿಬಿಡುತ್ತದೆ.

ಮುಂದಿನ 25 ವರ್ಷಗಳ ಬದುಕನ್ನು ಮುಂದಿಟ್ಟುಕೊಂಡು ಇಂದಿನಿಂದಲೇ ಅದಕ್ಕೆ ತಕ್ಕ ಹೆಜ್ಜೆ ಹಾಕುವತ್ತ ಈಗಿನ ಸರ್ಕಾರ ಮನಸ್ಸು ಮಾಡಬೇಕು. ಮಾನ್ಯ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಮತ್ತು ಸಂಪುಟದ ಎಲ್ಲಾ ಸಚಿವರು ಈ ಕುರಿತು ಕಾರ್ಯೋನ್ಮುಖರಾಗುವರೆಂದು ಆಶಿಸೋಣವೆ?

-ಚಂದ್ರಶೇಖರ್ ಎನ್., ಸಿರಿವಂತೆ

ನುಡಿ ಬೆಳಗು

ಉಪಕಾರ ನೆನೆಯೋಣ ಅಪಕಾರ ಮರೆಯೋಣ



ದೀಪಾ ಹಿರೇಗುತ್ತಿ, ಇಂಗ್ಲಿಷ್ ಉಪನ್ಯಾಸಕಿ

ಇಬ್ಬರು ಅತ್ಯಾಪ್ತ ಸ್ನೇಹಿತರು ಪ್ರವಾಸ ಹೊರಟಿದ್ದರು. ದಾರಿಯಲ್ಲಿ ಇಬ್ಬರಿಗೂ ಏನೋ ವಾಗ್ವಾದ ನಡೆದು ಒಬ್ಬ ಮತ್ತೊಬ್ಬನ ಕೆನ್ನೆಗೆ ಒಂದೇಟು ಬಿಗಿದ. ಹೊಡೆಸಿಕೊಂಡ ಸ್ನೇಹಿತನಿಗೆ ಬಹಳ ಬೇಸರವಾದರೂ ಅದನ್ನು ತೋರಿಸಿಕೊಳ್ಳದೇ ಮುನ್ನಡೆದ. ಮಧ್ಯೆ ಒಂದೆಡೆ ಸಮುದ್ರತೀರದಲ್ಲಿ ನಡೆಯುವಾಗ 'ಇವತ್ತು ನನ್ನ ಆಪ್ತಮಿತ್ರ ನನ್ನ ಕೆನ್ನೆಗೆ ಹೊಡೆದ' ಎಂದು ಮರಳಿನ ಮೇಲೆ ಬರೆದ. ಹಾಗೆಯೇ ಸಮುದ್ರದಲ್ಲಿ ಆಟವಾಡುತ್ತಿರುವಾಗ ನಡುವೆ ಒಂದೆಡೆ ಅಲೆಗಳಿಗೆ ಸಿಕ್ಕಿ ಕೆನ್ನೆಗೆ ಹೊಡೆಸಿಕೊಂಡವನು ಸಮುದ್ರದ ಪಾಲಾಗುವುದರಲ್ಲಿದ್ದ. ಅಷ್ಟರಲ್ಲಿ ಸ್ನೇಹಿತ ಬಂದು ಜೀವದ ಹಂಗು ತೊರೆದು ಅವನನ್ನು ಕಾಪಾಡಿದ. ಸಂಜೆ ಸಮುದ್ರ ತಟದ ಬಂಡೆಗಲ್ಲೊಂದರ ಮೇಲೆ 'ಇವತ್ತು ನನ್ನ ಆಪ್ತಮಿತ್ರ ನನ್ನ ಜೀವ ಉಳಿಸಿದ' ಎಂದು ಚೂಪುಗಲ್ಲೊಂದರಿಂದ ಕೆತ್ತಿದ ಬದುಕುಳಿದವ. ಇದನ್ನು ನೋಡುತ್ತಿದ್ದ ಜೀವ ಉಳಿಸಿದ ಸ್ನೇಹಿತ ಕೇಳಿದ, 'ನಾನು ಹೊಡೆದಾಗ ಅದನ್ನು ನೀನು ಮರಳಿನ ಮೇಲೆ ಬರೆದೆ, ಅದೇ ಕಾಪಾಡಿದಾಗ ಕಲ್ಲಿನ ಮೇಲೆ ಬರೆದೆಯಲ್ಲ ಏಕೆ?' ಆಗ ಸ್ನೇಹಿತ ಹೇಳಿದ, 'ಬೇರೆಯವರು ನಮಗೆ ನೋವನ್ನು ನೀಡಿದಾಗ ಅದನ್ನು ಮರಳಿನ ಮೇಲೆ ಬರೆಯಬೇಕು. ಏಕೆಂದರೆ ಕ್ಷಮೆಯ ಗಾಳಿ ಅದನ್ನು ಅಳಿಸಿಹಾಕಬಹುದು. ಆದರೆ ಯಾರಾದರೂ ನಮಗೆ ಒಳ್ಳೆಯದನ್ನು ಮಾಡಿದಾಗ ಅದನ್ನು ಕಲ್ಲಿನಲ್ಲಿ ಕೆತ್ತಬೇಕು, ಆಗ ಯಾವ ಮರೆವಿನ ಗಾಳಿಯೂ ಅದನ್ನು ಅಳಿಸಲಾರದು.'

ನಿಜ, ಬಹಳ ಸಂದರ್ಭದಲ್ಲಿ ನಾವು ನೆನಪಿಟ್ಟುಕೊಳ್ಳಬೇಕಾದ ವಿಷಯವನ್ನು ಮರೆಯುತ್ತೇವೆ. ಚಿಕ್ಕ ಉದಾಹರಣೆಯೆಂದರೆ ನಮ್ಮವರಿಗ್ಯಾರಿಗೋ ಅಪಘಾತವಾದಾಗ ಯಾರೋ ಪುಣ್ಯಾತ್ಮರು ರಕ್ತ ಕೊಡುತ್ತಾರೆ. ಅಷ್ಟೇ. ಆಮೇಲೆ ಹೋಗಿ ಅವರಿಗೆ ಒಂದಿಷ್ಟು ಹಣ್ಣು ಕೊಟ್ಟು ಧನ್ಯವಾದ ಹೇಳುವುದು ಬದಿಗಿರಲಿ, ಅವರು ಯಾರೆಂದು ತಿಳಿಯುವ ಪ್ರಯತ್ನವನ್ನೂ ಬಹುತೇಕರು ಮಾಡುವುದೇ ಇಲ್ಲ! ಅಪರಿಚಿತರಿಗೆ ರಕ್ತ ಕೊಡುವುದು ಒಂದು ಉದಾತ್ತ ಮನಸ್ಸಿನ ದಾನ.

ಇನ್ನು ನಾವು ಅದೆಷ್ಟೋ ಸಲ ಬೇರೆಯವರ ಮನಸ್ಸನ್ನು ನೋಯಿಸಿರುತ್ತೇವೆ. ಅವರೂ ನಮ್ಮನ್ನು ಕ್ಷಮಿಸಿರುತ್ತಾರೆ. ಅದೇ ರೀತಿ ನಾವೂ ಇತರರಿಗೆ ಇನ್ನೊಂದು ಅವಕಾಶ ಕೊಡಬೇಕಾಗುತ್ತದೆ. ಸಣ್ಣ ಪುಟ್ಟ ತಪ್ಪುಗಳನ್ನೆಲ್ಲ ಮರೆಯದಿದ್ದರೆ ಜಗತ್ತಿನ ಪ್ರತೀ ವ್ಯಕ್ತಿಯೂ ಒಂಟಿಯಾಗಿಬಿಡುವ ಅಪಾಯವಿದೆ! ಹಾಗಾಗಿ ಇತರರ ತಪ್ಪುಗಳನ್ನು ಮರಳಿನ ಮೇಲೂ ಉಪಕಾರವನ್ನು ಕಲ್ಲಿನ ಮೇಲೂ ಬರೆಯುವ ಮನಸ್ಸು ನಮ್ಮದಾಗಲಿ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಗುರುವಾರ ಡಿಸೆಂಬರ್ 7, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಕೃಷ್ಣದಶಮಿ ಗಂ. 29-07 ನಕ್ಷತ್ರ: ಉತ್ತರಫಲ್ಗುನಿ ಗಂ. 06-29 ಯೋಗ: ಆಯುಷ್ಮಾನ್ ಗಂ 24-00 ಕರಣ: ವಣಿಜ ಗಂ. 16-10, ವೃಶ್ಚಿಕ ಮಾಸದ 21 ನೇ ದಿನ, ಮಳೆನಕ್ಷತ್ರ: ಜ್ಯೇಷ್ಠ 2.
ರಾಹುಕಾಲ: ಮಧ್ಯಾಹ್ನ 01-30 - 03-00
ಸೂರ್ಯೋದಯ: 06-45 ಸೂರ್ಯಾಸ್ತ: 05-59
ಮುಸ್ಲಿಂ ದಿನಾಂಕ: 22 ಜುಮಾದುಲ್ಲಾವಲ್
ಅದೃಷ್ಟ ಸಂಖ್ಯೆ: 3, 10

ಮೇಷ: ಧ್ಯಾನ ಮಾಡುವುದರಿಂದ ಮನಸ್ಸು ನಕಾರಾತ್ಮಕ ಭಾವನೆಯಿಂದ ಹೊರ ಬರಲಿದೆ. ವೃತ್ತಿ ಪ್ರಾಮಾಣಿಕತೆಗೆ ನೀರಿಕ್ಷೆ ಮೀರಿದ ಗೌರವ ಲಭ್ಯವಾಗುವುದು. ಸಾಂಸಾರಿಕ ಜೀವನದಲ್ಲಿ ನೆಮ್ಮದಿ ಇರುವುದು.

ವೃಷಭ: ಕುಟುಂಬಕ್ಕೆ ಸಂಬಂಧಿಸಿದಂತೆ ಶುಭ ವಾರ್ತಾ ಶ್ರವಣದ ಭಾಗ್ಯ ಒದಗಿಬರುವುದು. ಮನೆ ನಿರ್ಮಾಣ ಕಾರ್ಯವನ್ನು ಅಡೆತಡೆಯಿಲ್ಲದೆ ಸಂಪೂರ್ಣಗೊಳಿಸುವಿರಿ. ನಿಮ್ಮ ಗುರಿ ತಲುಪಲು ಬಹಳ ಶ್ರಮ ಪಡಬೇಕಾಗುತ್ತದೆ.

ಮಿಥುನ: ವಿದ್ಯಾರ್ಥಿಗಳ ಅಧ್ಯಯನದಲ್ಲಿ ಹೆಚ್ಚಿನ ಪ್ರಗತಿಯು ಹಿರಿಯರ ಅಥವಾ ಗುರುಗಳ ಸಲಹೆಗಳ ಸ್ವೀಕಾರದಿಂದ ಕಂಡುಬರಲಿದೆ. ಕ್ರೀಡಾಪಟುಗಳಿಗೆ ಸಂತಸದ ದಿನವಾಗಿದೆ. ಭೂ ವ್ಯವಹಾರಗಳು ನಿಧಾನವಾಗಿ ಕೈಗೂಡುವುದು.

ಕರ್ಕಾಟಕ: ಧವಸ ಧಾನ್ಯಗಳ ವ್ಯಾಪಾರಸ್ಥರು ಹೆಚ್ಚಿನ ಎಚ್ಚರಿಕೆಯಿಂದಿದ್ದರೆ ಬಂಡವಾಳದ ಮೂಲಧನವನ್ನು ಕಾಪಾಡಿಕೊಳ್ಳಲು ಸಾಧ್ಯವಾಗುತ್ತದೆ. ಇಂದು ರಾಜಕೀಯ ಚಟುವಟಿಕೆಗಳಲ್ಲಿ ಬಿರುಸಿನ ಓಡಾಟವಿರುವುದು.

ಸಿಂಹ: ಹೂಡಿಕೆ ವಿಚಾರದಲ್ಲಿ ಆಳವಾಗಿ ಯೋಚಿಸಿ ತೀರ್ಮಾನ ಕೈಗೊಳ್ಳುವಂತೆ ಮಿತ್ರರಿಂದ ಸಲಹೆ ಬರುವುದು. ವಸ್ತ್ರ ವಿನ್ಯಾಸಗಾರರಿಗೆ ವಿಶೇಷವಾದ ಪರಿಣಿತಿಯು ಅಗತ್ಯವೆನಿಸಲಿದೆ. ಮಕ್ಕಳಿಗಾಗಿ ವಿಶೇಷ ವಸ್ತು ಕೊಳ್ಳುವಿರಿ.

ಕನ್ಯಾ: ಬಹಳ ದಿನಗಳಿಂದ ಸ್ಥಗಿತಗೊಂಡ ಕಾರ್ಯಕ್ಕೆ ಪುನಃ ಚಾಲನೆ ದೊರೆತು ಸಂತಸ ಹೊಂದುವಿರಿ. ಮಹಿಳೆಯರಿಗೆ ಉದ್ಯೋಗದಲ್ಲಿ ಅದೃಷ್ಟ ಹುಡುಕಿಕೊಂಡು ಬರಲಿದೆ. ವ್ಯವಹಾರದ ಗೌಪ್ಯತೆಯನ್ನು ಕಾಪಾಡಿಕೊಳ್ಳಿ.

ತುಲಾ: ವೃತ್ತಿರಂಗದಲ್ಲಿ ರಚನಾತ್ಮಕ ಕಾರ್ಯಗಳ ನಿರ್ವಹಣೆಯಿಂದ ಮುಂದಿನ ಅಭಿವೃದ್ಧಿಗೆ ಹೆಚ್ಚಿನ ಅವಕಾಶಗಳು ಲಭ್ಯವಾಗಲಿದೆ. ಉದ್ಯೋಗಕ್ಕಾಗಿ ಹೊರ ದೇಶದ ಪ್ರಯಾಣದ ಅವಕಾಶಗಳು ಸಹ ಸಿಗಬಹುದು.

ವೃಶ್ಚಿಕ: ರಾಜಕೀಯ ವಲಯದಲ್ಲಿ ನಿರೀಕ್ಷಿತ ಕಾರ್ಯಗಳು ಸರಾಗವಾಗಿ ನೆರವೇರುವುದು. ಸಾಹಿತ್ಯ ಕ್ಷೇತ್ರದಲ್ಲಿ ಭಾಗಿಯಾಗಿ ಸಂತೋಷವಾಗುವುದು. ಹೆಚ್ಚಿನ ಪರಿಶ್ರಮದಿಂದ ಎಲ್ಲಾ ಕೊರತೆಯನ್ನು ಹೋಗಲಾಡಿಸಿಕೊಳ್ಳಬಹುದು.

ಧನು: ಉದ್ಯೋಗಾಕಾಂಕ್ಷಿಗಳಿಗೆ ಪ್ರಭಾವಿ ವ್ಯಕ್ತಿಗಳ ಆಶ್ವಾಸನೆಯಿಂದ ಸಮಾಧಾನ ಸಿಗಲಿದೆ. ಮದುವೆ ಮುಂತಾದ ವಿಷಯಗಳತ್ತ ಗಮನಹರಿಸುವಂತೆ ಮನೆಯವರಿಂದ ಒತ್ತಡ. ವೃತ್ತಿಯಲ್ಲಿ ಸಂಚಾರದಿಂದ ಅಧಿಕ ಲಾಭ.

ಮಕರ: ಪೆಟ್ರೋಲಿಯಂ ಉತ್ಪನ್ನಗಳ ಮಾರಾಟದಿಂದ ಹೆಚ್ಚಿನ ಆದಾಯದ ಜತೆ ಸಾಗಾಣಿಕೆಯಲ್ಲಿ ಸಣ್ಣ ಸಮಸ್ಯೆಗಳೂ ಕಾಡಬಹುದು. ಉತ್ತಮ ಅವಕಾಶಗಳು ನಿಮ್ಮೆಡೆಗೆ ಬರಲಿದೆ. ಅವುಗಳನ್ನು ಉಪಯೋಗಿಸಿಕೊಳ್ಳಿ.


ಕುಂಭ: ಸಂಘ ಸಂಸ್ಥೆಗಳ ವಿಚಾರವನ್ನು ಚರ್ಚಿಸಿ ನಂತರದಲ್ಲಿ ಕೆಲಸಗಳನ್ನು ಕಾರ್ಯರೂಪಕ್ಕೆ ತರುವುದು ಉತ್ತಮ. ಸಾಲ ತೆಗೆದುಕೊಂಡ ಹಣವನ್ನು ಹಿಂದಿರುಗಿಸುವ ಬಗ್ಗೆ ಯೋಚಿಸಿ. ರೇಷ್ಮೆ ಬೆಳೆಗಾರರಿಗೆ ಹೆಚ್ಚಿನ ಕೆಲಸ ಇರಲಿದೆ.

ಮೀನ: ಕಾಫಿ, ಕಾಳುಮೆಣಸು ಹಾಗೂ ಏಲಕ್ಕಿ ಬೆಳೆಗಾರರು ಉತ್ತಮ ಫಸಲನ್ನು ಎದುರು ನೋಡಬಹುದು. ವೈಯಕ್ತಿಕ ವಿಚಾರಗಳಲ್ಲಿ ಸೃಷ್ಟಿಯಾದ ಸಣ್ಣಪುಟ್ಟ ಬದಲಾವಣೆಯಿಂದ ಮಾನಸಿಕ ನೆಮ್ಮದಿಯನ್ನು ಕಳೆದುಕೊಳ್ಳುವಿರಿ.

ಪದಬಂಧ 5522 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಯಾಗದಲ್ಲಿ ಬಲಿ ಕೊಡುವ ಪ್ರಾಣಿ (4)
3.ನೀರಿನಲ್ಲಿ ಹುಟ್ಟಿದುದು (3)
4.ಕನ್ನಡಿಗರ ನಾಡು (4)
6.ಮಾತುಲನಾಡಿದ ನುಡಿ (2)
7.ಅನಿರೀಕ್ಷಿತ ಘಟನೆ (4)
8.ರತಿ ಪತಿಯಿಂದ ಬಂದಿರುವ ಆಸೆ (3)
9.ಪಟ ಹಿಡಿದಿರುವುದಕ್ಕೇ ಈ ಪೇಚಾಟ! (4)
12.ಪರಂಪರೆಯಲ್ಲಿಯೇ ಈ ಗಲಾಟೆ! (2)
13.ಬೇರೆಯ ಉಪಾಯ (4)
15.ಏರ್ಪಾಟು ಎಂದು ಹೀಗೆನ್ನಿ (3)
16.ಯೋಗ ಕೊನೆಯಲ್ಲಿದ್ದಾಗ ಈ ಹಂಚಿಕೆ! (4)

ಮೇಲಿಂದ ಕೆಳಕ್ಕೆ
1.ಮಾನವುಳ್ಳ ಒಡೆಯ ಇಲ್ಲಿದ್ದಾನೆ (4)
2.ಶುನಕ ನೋಡುತ್ತಿರುವ ಗಿಣಿ (2)
3.ಜಲ ತರುವಾಗಿನ ಕ್ಲಿಷ್ಟತೆ (3)
5.ಬಂಗಾರವನ್ನು ಹೀಗೂ ಹೇಳುವರು (3)
7.ಆ ಮನೆ ಮುಂದೆ ಬಂದಿರುವ ಗಜ (2)
8.ಕಾದಾಟದಲ್ಲಿರುವ ತೊಂದರೆ (2)
9.ಉತ್ತರದವರ ಮಂಚ (3)
10.ಯೋಗವಿದ್ದಾಗಿನ ಪ್ರಯೋಜನ! (4)
11.ಬಣ್ಣ ಹಚ್ಚಿ ಮಾಡಿದ ವಿಸ್ತಾರವಾದ ನಿರೂಪಣೆ (3)
14.ಸೂರ್ಯನ ಇನ್ನೊಂದು ಹೆಸರು (2)



5521ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಸತ್ಯಾಗ್ರಹಿ 3.ಶಿಲುಬೆ
5.ತಿರುಕ 7.ಒಯ್ಯಾರ
8.ಸಮೂಹಗಾನ 11.ಗಲಾಟೆ
12.ದುಮ್ಮಾನ 15.ರಿಕಾಪು
16.ಕೆನೆಹಾಲು

ಮೇಲಿಂದ ಕೆಳಕ್ಕೆ:
1.ಸವತಿ 2.ಹಿಮ
3.ಶಿಶಿರ 4.ಬೆದರಿಸು
6.ಕಳಸ 7.ಒಣಹರಟೆ
9.ನಮೂದು 10.ಮದಕರಿ
11.ಗಲ್ಲಿಂಪು 13.ನವಿಲು
14.ಶಂಕೆ

ಸುಡೊಕು 5908

			8		1	9		
		2					3	1
3		1	2		9		5	6
	1	7			8	3		
				2			8	4
8		3	9				6	
1			7		2	4		3
		8		4			1	
	3		1		5	6		8

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5907 ಸುಡೊಕು

4	9	6	3	7	8	5	2	1
8	5	3	2	1	9	4	7	6
1	7	2	4	6	5	3	9	8
6	1	9	7	2	3	8	4	5
2	8	7	5	4	6	9	1	3
3	4	5	8	9	1	2	6	7
5	6	4	9	3	7	1	8	2
7	2	8	1	5	4	6	3	9
9	3	1	6	8	2	7	5	4

ಸಂಕ್ಷಿಪ್ತ ಸುದ್ದಿ

‘₹11 ಸಾವಿರ ಕೋಟಿ ಕೂಡಲೇ ವಾಪಸ್ ಮಾಡಿ’

ಬೆಂಗಳೂರು: ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಸಮುದಾಯಕ್ಕೆ ಮಂಜೂರಾದ ₹11,144 ಕೋಟಿ ಅನುದಾನವನ್ನು ಬೇರೆಡೆ ವರ್ಗಾಯಿಸಿ, ದುರ್ಬಳಕೆ ಮಾಡಿಕೊಂಡಿದ್ದಾರೆ ಎಂದು ಮಾಜಿ ಸಚಿವ ಗೋವಿಂದ ಕಾರಜೋಳ ಆರೋಪಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಆ ಹಣವನ್ನು ವಾಪಸ್ ಕೊಟ್ಟು ದಲಿತರ ಶಿಕ್ಷಣ, ಉದ್ಯೋಗ, ಭೂಒಡೆತನ ಯೋಜನೆ ಮತ್ತು ಗಂಗಾಕಲ್ಯಾಣ ಯೋಜನೆಗೆ ನೀಡಲು ಒತ್ತಾಯಿಸಿದ್ದೇವೆ. ಎಷ್ಟೇ ಒತ್ತಾಯ ಮಾಡಿದರೂ ಸಿದ್ದರಾಮಯ್ಯನವರು ಹಣ ವಾಪಸ್ ಕೊಡುತ್ತಿಲ್ಲ. ಆದ್ದರಿಂದ ಹೋರಾಟ ನಡೆಸುವುದು ಅನಿವಾರ್ಯ ಎಂದು ಹೇಳಿದರು.

ಕಾಡಾನೆ ಸೆರೆ: ಮಾರ್ಗಸೂಚಿ ಬದಲು: ಖಂಡ್ರೆ

ಬೆಳಗಾವಿ: ‘ಕಾಡಾನೆ ಸೆರೆ ಕಾರ್ಯಾಚರಣೆ ಮಾರ್ಗಸೂಚಿಯಲ್ಲಿ ನ್ಯೂನತೆಗಳಿವೆ. ಅದಕ್ಕೆ ಅದನ್ನು ಬದಲಿಸಿ, ಮುಂದೆ ದುರ್ಘಟನೆ ನಡೆಯದಂತೆ ಕ್ರಮ ವಹಿಸುತ್ತೇವೆ’ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಹೇಳಿದರು.

‘ಪುಂಡಾನೆಗಳನ್ನು ಹಿಮ್ಮೆಟ್ಟಿಸುವ ಕಾರ್ಯಾಚರಣೆ ಕರ್ನಾಟಕ ಹೊರತುಪಡಿಸಿದರೆ ಬೇರೆಡೆ ನಡೆಯುವುದಿಲ್ಲ. ಅದಕ್ಕೆ ತಜ್ಞರ ಸಲಹೆ ಪಡೆದು ಮುಂದುವರಿಯುತ್ತೇವೆ’ ಎಂದು ಅವರು ಬುಧವಾರ ಸುದ್ದಿಗಾರರಿಗೆ ತಿಳಿಸಿದರು.

ಅರ್ಜುನ ಆನೆಯ ಸಾವಿನ ತನಿಖೆ ಬಗ್ಗೆ ಪ್ರತಿಕ್ರಿಯಿಸಿದ ಅವರು, ‘ಸಮಗ್ರ ರೀತಿಯ ವರದಿ ತರಿಸಿಕೊಂಡು ತನಿಖೆ ಮಾಡುತ್ತೇವೆ. ಲೋಪ ಕಂಡುಬಂದರೆ ಕ್ರಮ ಜರುಗಿಸುತ್ತೇವೆ’ ಎಂದರು.

ಹಾಸನ ಜಿಲ್ಲೆಯಲ್ಲಿ ಅರಣ್ಯಾಧಿಕಾರಿಗಳು ಭ್ರಷ್ಟಾಚಾರದಲ್ಲಿ ತೊಡಗಿದ್ದಾರೆ ಎಂಬ ಆರೋಪಕ್ಕೆ ಪ್ರತಿಕ್ರಿಯಿಸಿದ ಅವರು, ‘ಭ್ರಷ್ಟಾಚಾರದಲ್ಲಿ ತೊಡಗಿದ ಅಧಿಕಾರಿಗಳ ವಿರುದ್ಧ ಕ್ರಮ ನಿಶ್ಚಿತ’ ಎಂದರು.

ಬಜೆಟ್‌ನ 143 ಘೋಷಣೆಗಳ ಪೈಕಿ 83ಕ್ಕೆ ಆದೇಶ– ಮುಖ್ಯಮಂತ್ರಿ ಸಿದ್ದರಾಮಯ್ಯ

‘ಜನಸ್ಪಂದನ’ಕ್ಕೆ ಡಿ.ಸಿಗಳಿಗೆ ಕಟ್ಟಪ್ಪಣೆ

ಪ್ರಜಾವಾಣಿ ವಾರ್ತೆ



ಸಿದ್ದರಾಮಯ್ಯ

ಬೆಳಗಾವಿ: ಆಯಾ ಜಿಲ್ಲೆಯಲ್ಲಿ ಜನರು ಅನುಭವಿಸುತ್ತಿರುವ ಸಮಸ್ಯೆಗಳನ್ನು ಖುದ್ದಾಗಿ ಆಲಿಸಿ, ಸ್ಥಳದಲ್ಲೇ ಪರಿಹಾರ ಕಲ್ಪಿಸಲು ಜಿಲ್ಲಾಧಿಕಾರಿಗಳು ಪ್ರತಿ 15 ದಿನಕ್ಕೊಮ್ಮೆ ‘ಜನಸ್ಪಂದನ’ ನಡೆಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕಟ್ಟಪ್ಪಣೆ ವಿಧಿಸಿದ್ದಾರೆ.

ಇಲ್ಲಿನ ಸುವರ್ಣ ವಿಧಾನಸೌಧದಲ್ಲಿ ಬುಧವಾರ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು, ಎಲ್ಲ ಇಲಾಖೆಗಳ ಪ್ರಧಾನ ಕಾರ್ಯದರ್ಶಿಗಳು ಹಾಗೂ ಕಾರ್ಯದರ್ಶಿಗಳ ಸಭೆ ನಡೆಸಿದರು.

ಜಿಲ್ಲಾಧಿಕಾರಿಗಳು ನಿಯಮಿತವಾಗಿ ಈ ಕೆಲಸ ಮಾಡುತ್ತಿದ್ದಾರೆಯೇ ಎಂಬುದನ್ನು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ನಿಗಾವಹಿಸಬೇಕು. ಬೆಂಗಳೂರಿನಲ್ಲಿ ಕುಳಿತು ಮಾಹಿತಿ ಪಡೆಯುವ ಬದಲು, ಉಸ್ತುವಾರಿ ವಹಿಸಿದ ಜಿಲ್ಲೆಗಳಿಗೆ ತೆರಳಿ ಅಲ್ಲಿನ ಅಧಿಕಾರಿಗಳ ಕಾರ್ಯಕ್ಷಮತೆ ಪರಿಶೀಲಿಸಿ, ನಿರಂತರವಾಗಿ ಮೌಲ್ಯಮಾಪನ ಮಾಡಬೇಕು ಎಂದರು.

ಬರಗಾಲದಿಂದಾಗಿ ಬೆಳೆ ನಾಶವಾಗಿದ್ದು, ಸಂಕಷ್ಟಕ್ಕೆ ಒಳಗಾಗಿರುವ ರೈತರಿಗೆ ₹2 ಸಾವಿರದವರೆಗಿನ ಮೊದಲ ಹಂತದ ಪರಿಹಾರವನ್ನು ಮುಂದಿನ ವಾರದೊಳಗೆ ವಿತರಿಸಲು ಕ್ರಮ ಕೈಗೊಳ್ಳಬೇಕು, ಬರ ಪರಿಹಾರ ಕಾಮಗಾರಿಗಳನ್ನು ಯುದ್ಧೋಪಾದಿಯಲ್ಲಿ ಕೈಗೆತ್ತಿಕೊಳ್ಳಬೇಕು ಎಂದು ನಿರ್ದೇಶನ ನೀಡಿದರು.

ಬಜೆಟ್‌ನಲ್ಲಿ 143 ಘೋಷಣೆಗಳನ್ನು ಮಾಡಲಾಗಿದ್ದು, ಇದರಲ್ಲಿ ಈಗಾಗಲೇ 83 ಘೋಷಣೆಗಳಿಗೆ ಸರ್ಕಾರಿ ಆದೇಶ ಹೊರಡಿಸಲಾಗಿದೆ. ಉಳಿದ ಘೋಷಣೆಗಳನ್ನೂ ಶೀಘ್ರವೇ ಅನುಷ್ಠಾನಕ್ಕೆ ತರಲು ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ಕಾರ್ಯಾಗಾರದಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯಲ್, ಅಭಿವೃದ್ಧಿ ಆಯುಕ್ತೆ ಶಾಲಿನಿ ರಜನೀಶ್ ಪಾಲ್ಗೊಂಡಿದ್ದರು.

‘ಪರಿಷ್ಕೃತ ಟೆಂಡರ್‌ಗಳಿಗೆ ಕಡಿವಾಣ ಹಾಕಿ’

ಕಾಮಗಾರಿಗಳ ಟೆಂಡರ್ ಅಂದಾಜನ್ನು ಸಿದ್ಧಪಡಿಸುವಾಗಲೇ ಎಲ್ಲ ಅಂಶಗಳನ್ನೂ ಒಳಗೊಂಡಂತೆ ಸಮಗ್ರವಾಗಿ ಸಿದ್ಧಪಡಿಸಬೇಕು. ಪರಿಷ್ಕೃತ ಅಂದಾಜು ತಯಾರಿಸುವುದರಿಂದಾಗಿ ಯೋಜನೆಯ ವೆಚ್ಚ ಹೆಚ್ಚುತ್ತಿದೆ. ಇದಕ್ಕೆ ಕಡಿವಾಣ ಹಾಕಿ’ ಎಂದು ಸಿದ್ದರಾಮಯ್ಯ ಸೂಚಿಸಿದರು.

ಅನಗತ್ಯ ವೆಚ್ಚಗಳಿಗೆ ಕಡಿವಾಣ ಹಾಕುವ ಕುರಿತು ಆದ್ಯತೆ ನೀಡಲು ಸಲಹೆ ನೀಡಿದ ಅವರು, ಪರಿಷ್ಕೃತ ಅಂದಾಜುಗಳನ್ನು ಸಲ್ಲಿಸುವುದರಿಂದ ಅನುಷ್ಠಾನವು ವಿಳಂಬವಾಗುತ್ತದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

‘ಇದಕ್ಕೆ ಸಂಬಂಧಿಸಿದಂತೆ ಆರ್ಥಿಕ ಇಲಾಖೆಯ ಹಿರಿಯ ಅಧಿಕಾರಿಗಳ ಸಮಿತಿ ರಚಿಸಿದ್ದು, ಮಾರ್ಗಸೂಚಿಗಳನ್ನು ರೂಪಿಸಲಾಗುತ್ತಿದೆ. ಇದು ಅಂತಿಮ ಹಂತದಲ್ಲಿದ್ದು, ಶೀಘ್ರವೇ ಮುಖ್ಯಮಂತ್ರಿಗಳಿಗೆ ಸಲ್ಲಿಸಲಾಗುವುದು’ ಎಂದು ಆರ್ಥಿಕ ಇಲಾಖೆ ಹಾಗೂ ಮುಖ್ಯಮಂತ್ರಿಯವರ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್.ಕೆ. ಅತೀಕ್ ಸಭೆಗೆ ತಿಳಿಸಿದರು.

ಸುದ್ದಿ 2 ನಿಮಿಷ

ಬರ ಪರಿಹಾರ ಬಿಡುಗಡೆಗೆ ಆಗ್ರಹ

ನವದೆಹಲಿ: ಭೀಕರ ಬರಗಾಲದಿಂದ ತತ್ತರಿಸಿರುವ ಕರ್ನಾಟಕಕ್ಕೆ ರಾಷ್ಟ್ರೀಯ ವಿಪತ್ತು ನಿರ್ವಹಣಾ ನಿಧಿಯಿಂದ (ಎನ್‌ಡಿಆರ್‌ಎಫ್) ₹18,171 ಕೋಟಿ ಬಿಡುಗಡೆ ಮಾಡಬೇಕು ಎಂದು ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದರು.

ರಾಜ್ಯಸಭೆಯಲ್ಲಿ ಬುಧವಾರ ಶೂನ್ಯ ವೇಳೆಯಲ್ಲಿ ವಿಷಯ ಪ್ರಸ್ತಾಪಿಸಿದ ಅವರು, ‘ರಾಜ್ಯಕ್ಕೆ ಈ ವರ್ಷ 123 ವರ್ಷಗಳಲ್ಲೇ ಅತ್ಯಂತ ಭೀಕರ ಬರ ಎದುರಾಗಿದೆ. ₹35,162 ಕೋಟಿ ಬೆಳೆ ಹಾನಿ ಆಗಿದೆ. ಶೇ 40ರಿಂದ ಶೇ 90ರಷ್ಟು ಬೆಳೆ ನಷ್ಟವಾಗಿದೆ. ಸಂತ್ರಸ್ತರಿಗೆ ನೆರವಾಗಲು ಎನ್‌ಡಿಆರ್‌ಎಫ್‌ನಿಂದ ₹18,171 ಕೋಟಿ ಅನುದಾನ ನೀಡುವಂತೆ ರಾಜ್ಯ ಸರ್ಕಾರ ಪ್ರಸ್ತಾವ ಸಲ್ಲಿಸಿದೆ. ಕರ್ನಾಟಕದ ಸಚಿವರು ಕೇಂದ್ರ ಸಚಿವರನ್ನು ಭೇಟಿ ಮಾಡಿ ಮನವಿ ಮಾಡಿದ್ದಾರೆ. ಆದರೆ, ಈವರೆಗೆ ಹಣ ಬಿಡುಗಡೆಯಾಗಿಲ್ಲ’ ಎಂದರು.

‘ಇನ್‌ಪುಟ್ ಸಬ್ಸಿಡಿ ಒದಗಿಸಲು, ಕಡಿಮೆ ಮಳೆಯಿಂದಾಗಿ ತತ್ತರಿಸಿರುವ ಜನರಿಗೆ ತುರ್ತು ಪರಿಹಾರ ನೀಡಲು ಕೂಡಲೇ ಅನುದಾನ ಬಿಡುಗಡೆ ಮಾಡಬೇಕು’ ಎಂದು ಅವರು ಒತ್ತಾಯಿಸಿದರು.

ರಾಜ್ಯದ ಅನೇಕ ಜಲಾಶಯಗಳಲ್ಲಿ ನೀರಿನ ಮಟ್ಟ ಕನಿಷ್ಠ ಮಟ್ಟಕ್ಕೆ ತಲುಪಿದ್ದು, ಮುಂದಿನ ದಿನಗಳಲ್ಲಿ ಕುಡಿಯುವ ನೀರಿಗೂ ಹಾಹಾಕಾರ ಉಂಟಾಗಬಹುದು ಎಂದು ಅವರು ಹೇಳಿದರು.

ಚೆನ್ನೈ ಸೇರಿದಂತೆ ತಮಿಳುನಾಡಿನ ಕೆಲವು ಭಾಗಗಳಲ್ಲಿ ಪ್ರವಾಹ ಪರಿಸ್ಥಿತಿಯ ಬಗ್ಗೆಯೂ ಖರ್ಗೆ ಮಾತನಾಡಿದರು.



‘ಚುನಾವಣೆಯಲ್ಲಿ ಗೆದ್ದಿರುವುದರಿಂದ ಜನರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಬಿಜೆಪಿ ಗಮನ ಹರಿಸುತ್ತಿಲ್ಲ’ ಎಂದು ಆರೋಪಿಸಿದರು.

ಬಿಜೆಪಿ ಹಾಳು ಮಾಡಿದ ಇಬ್ಬರು ಸಿಂಗ್‌ಗಳು: ಯತ್ನಾಳ ಆರೋಪ

ಬೆಳಗಾವಿ: ‘ಕೇಂದ್ರ ಮತ್ತು ರಾಜ್ಯ ಮಟ್ಟದ ಇಬ್ಬರು ಸಿಂಗ್‌ಗಳು, ಮಹಾನುಭಾವರು ಸೇರಿಕೊಂಡು ಕರ್ನಾಟಕದಲ್ಲಿ ಪಕ್ಷವನ್ನು ಹಾಳುಗೆಡವಿದರು’ ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

ಸುದ್ದಿಗಾರರ ಜತೆಗೆ ಬುಧವಾರ ಮಾತನಾಡಿದ ಅವರು, ಪಕ್ಷದ ನಾಯಕರ ವಿರುದ್ಧ ಮತ್ತೊಮ್ಮೆ ಹರಿಹಾಯ್ದರು. ‘ನನ್ನ ಬಾಯಿ ಮುಚ್ಚಿಸಲು ಯಾರಿಂದಲೂ ಸಾಧ್ಯವಿಲ್ಲ’ ಎಂದರು. ‘ಪಕ್ಷ ಹಾಳು ಮಾಡಿದವರು ಯಾರು ಎಂಬ ಬಗ್ಗೆ ಎಲ್ಲ ಮಾಹಿತಿಯನ್ನೂ ವರಿಷ್ಠರ ಗಮನಕ್ಕೆ ತಂದಿದ್ದೇನೆ. ದೆಹಲಿಗೆ ಬರಲು ಕರೆ ಮಾಡುವುದಾಗಿ ಅವರು ಹೇಳಿದ್ದಾರೆ. ಕರೆ ಬಂದ ಕೂಡಲೇ ಹೋಗಿ ಎಲ್ಲವನ್ನೂ ವಿವರಿಸುತ್ತೇನೆ. ರಮೇಶ ಜಾರಕಿಹೊಳಿ ಅವರಿಗೆ ಕರೆ ಬರಬಹುದು. ಬಂದರೆ ಒಟ್ಟಿಗೆ ಹೋಗುತ್ತೇವೆ’ ಎಂದರು.

ಉಪ ನಾಯಕನಿಗೆ ಏನು ಕೆಲಸ?: ‘ಅರವಿಂದ ಬೆಲ್ಲದ ಅವರನ್ನು ವಿರೋಧ ಪಕ್ಷದ ಉಪ ನಾಯಕರಾಗಿ ಮಾಡುತ್ತಾರಂತಲ್ಲ’ ಎಂಬ ಬಗ್ಗೆ ಪ್ರತಿಕ್ರಿಯಿಸಿದ ಅವರು, ಎಲ್ಲ ತೀರ್ಮಾನಗಳನ್ನು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರು, ಪ್ರತಿಪಕ್ಷ ನಾಯಕರೇ ತೆಗೆದುಕೊಳ್ಳುತ್ತಾರೆ. ಹಾಗಿರುವಾಗ ಉಪ ನಾಯಕನಿಗೆ ಏನು ಕೆಲಸ? ಉಪ ಸಭಾಧ್ಯಕ್ಷರ ಸ್ಥಾನವಿದ್ದಂತೆ. ಸಭಾಧ್ಯಕ್ಷರು ತಮ್ಮ ಜಾಗದಲ್ಲಿ ಕೂರಲು ಅವರಿಗೆ ಅವಕಾಶವನ್ನೇ ಕೊಡುವುದಿಲ್ಲ. ಉಪ ನಾಯಕನಿಗೂ ಸಮಾಜದಲ್ಲಿ ಗೌರವ ಏನೂ ಸಿಗುವುದಿಲ್ಲ’ ಎಂದರು.

ಸೋಮಣ್ಣಗೆ ರಾಜಕೀಯದಲ್ಲಿ ಮುಂದೆ ಉಜ್ವಲ ಭವಿಷ್ಯವಿದೆ: ಸಚಿವ ಪರಮೇಶ್ವರ

ಕಾಂಗ್ರೆಸ್ ಸೇರಲು ಪರೋಕ್ಷ ಆಹ್ವಾನ

ಪ್ರಜಾವಾಣಿ ವಾರ್ತೆ

ತುಮಕೂರು: ‘ಮಾಜಿ ಸಚಿವ ವಿ. ಸೋಮಣ್ಣ ಅವರಿಗೆ ರಾಜಕೀಯದಲ್ಲಿ ಮುಂದೆ ಉಜ್ವಲ ಭವಿಷ್ಯವಿದೆ. ಈಗಲೇ ನಿರಾಶರಾಗುವ ಅಗತ್ಯವಿಲ್ಲ. ಆದರೆ, ಮನಸ್ಸು ಮಾಡಬೇಕು’ ಎಂದು ಜಿಲ್ಲಾ ಉಸ್ತುವಾರಿ ಸಚಿವ ಜಿ. ಪರಮೇಶ್ವರ ಹೇಳಿದರು.

ಸಿದ್ಧಗಂಗಾ ಮಠದಲ್ಲಿ ಸೋಮಣ್ಣ ಪ್ರತಿಷ್ಠಾನದಿಂದ ನಿರ್ಮಾಣ ಮಾಡಿರುವ ಗುರುಭವನವನ್ನು ಬುಧವಾರ ಲೋಕಾರ್ಪಣೆಗೊಳಿಸಿ ಅವರು ಮಾತನಾಡಿದರು.

ಕಳೆದ ವಿಧಾನಸಭೆ ಚುನಾವಣೆಯಲ್ಲಿ ಸೋಮಣ್ಣ ಸೋಲಿನ ವಿಚಾರ ಪ್ರಸ್ತಾಪಿಸಿದ ಅವರು, ‘ಸೋಲು–ಗೆಲುವು ಸಾಮಾನ್ಯ. ಮುಂದಿನ ರಾಜಕಾರಣದಲ್ಲಿ ಉಜ್ವಲ ಭವಿಷ್ಯವಿದೆ’ ಎಂದು ಪರೋಕ್ಷವಾಗಿ ಕಾಂಗ್ರೆಸ್‌ಗೆ ಆಹ್ವಾನ ನೀಡಿದರು.

‘ಹಿಂದೆ ಸೋಮಣ್ಣ ಕಾಂಗ್ರೆಸ್‌ನಲ್ಲೇ ಇದ್ದರು. ಪಕ್ಷದ ವರಿಷ್ಠರಾದ ಸೋನಿಯಾ ಗಾಂಧಿ ಅವರನ್ನು ಭೇಟಿಯಾಗಿ ಸೋಮಣ್ಣ ಅವರನ್ನು ಕೆಪಿಸಿಸಿ ಅಧ್ಯಕ್ಷರನ್ನಾಗಿ ಮಾಡುವಂತೆ ಮನವಿ ಮಾಡಿದ್ದೆ. ಅದಕ್ಕೆ ಅವರು ಒಪ್ಪಿಕೊಂಡಿದ್ದರು. ಇದಾದ ಒಂದು ವಾರದಲ್ಲೇ ಬಿಜೆಪಿ ಸೇರಿಕೊಂಡರು. ಹೀಗೇಕೆ ಮಾಡಿದ್ದೀರಿ? ಕೆಪಿಸಿಸಿ ಅಧ್ಯಕ್ಷರನ್ನಾಗಿ ಮಾಡುತ್ತಿದ್ದೆವು ಎಂದೆ. ಅದಕ್ಕೆ ಜಿ.ಎಸ್. ಬಸವರಾಜು ಕರೆದುಕೊಂಡು ಹೋದರು ಎಂದು ಹೇಳಿದರು.

ಆ ಪಕ್ಷದಲ್ಲೂ ಸಚಿವರಾಗಿದ್ದು, ಈಗ ಸೋತಿದ್ದಾರೆ. ರಾಜಕಾರಣದಲ್ಲಿ ಭಯಪಡುವ ಅಗತ್ಯವಿಲ್ಲ’ ಎಂದು ಹೇಳಿದರು.

ಮಠದಲ್ಲಿ ನಡೆದ ಕಾರ್ಯಕ್ರಮ ರಾಜಕೀಯ ವಿಚಾರಗಳನ್ನು ಪ್ರಸ್ತಾಪಿಸುವ ವೇದಿಕೆಯಾಗಿ ಮಾರ್ಪಟ್ಟಿತು.



ತುಮಕೂರಿನ ಸಿದ್ಧಗಂಗಾ ಮಠದಲ್ಲಿ ಬುಧವಾರ ಗುರುಭವನ ಸಮರ್ಪಣೆ ಕಾರ್ಯಕ್ರಮದಲ್ಲಿ ‘ಶಿವಯೋಗಿ’ ಕೃತಿ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಸೋಮಣ್ಣ ಪ್ರತಿಷ್ಠಾನದ ಅಧ್ಯಕ್ಷೆ ಶೈಲಜಾ, ಮಾಜಿ ಸಚಿವ ವಿ.ಸೋಮಣ್ಣ, ಸಚಿವರಾದ ಜಿ.ಪರಮೇಶ್ವರ, ಕೆ.ಎನ್‌.ರಾಜಣ್ಣ, ಸಿದ್ಧಲಿಂಗ ಸ್ವಾಮೀಜಿ ಪಾಲ್ಗೊಂಡಿದ್ದರು

‘ನಾಯಿ, ನರಿಯಿಂದ ಸಮಸ್ಯೆ’

ಬಿಜೆಪಿ ಮುಖಂಡರ ವಿರುದ್ಧ ವಾಗ್ದಾಳಿ ಮುಂದುವರಿಸಿರುವ ಮಾಜಿ ಸಚಿವ. ಸೋಮಣ್ಣ, ‘ಕೆಲ ನಾಯಿ, ನರಿಗಳಿಂದ ಸ್ವಲ್ಪ ವ್ಯತ್ಯಾಸವಾಗಿ ಸಮಸ್ಯೆಯಾಗಿದೆ’ ಎಂದು ಹರಿಹಾಯ್ದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಕೆಲವು ಸಂದರ್ಭಗಳಲ್ಲಿ ನನ್ನ ದುರಹಂಕಾರ ನನಗೆ ತೊಂದರೆ ಕೊಟ್ಟಿದೆ. ಮೇಲೆ ಆಕಾಶ ಇದೆ ಎಂದು ತಿಳಿಯದೆ ಅತ್ತ ಕಡೆಗೆ ಉಗುಳಿದೆ. ಅದು ನನ್ನ ಮೇಲೆ ಬಿದ್ದಿದೆ. ಅದನ್ನು ಒರೆಸಿಕೊಂಡು ಮುಂದೆ ಹೋಗುವ ಕೆಲಸ ಮಾಡುತ್ತೇನೆ’ ಎಂದರು.

‘ಬಿಜೆಪಿ ವರಿಷ್ಠರ ಭೇಟಿಗೆ ನ. 30ರಂದು ಸಮಯ ನೀಡಿದ್ದರು. ಅಂದು ಹೋಗಿ ಭೇಟಿಯಾಗಲು ಸಾಧ್ಯವಾಗಲಿಲ್ಲ. ಮುಂದೆ ಏನಾಗುವುದೋ ಗೊತ್ತಿಲ್ಲ. ಆಗಿರುವ ತಪ್ಪುಗಳನ್ನು ಹೈಕಮಾಂಡ್ ಯಾವ ರೀತಿ ಸರಿಪಡಿಸಲಿದೆ ಎಂಬುದು ಗೊತ್ತಿಲ್ಲ. ಕೆಲ ದಿನಗಳು ನೋಡುತ್ತೇನೆ. ಎಲ್ಲವನ್ನೂ ಜನರ ಮುಂದೆ ಹೇಳುತ್ತೇನೆ. ನಂತರ ನಿರ್ಧಾರ ಮಾಡುತ್ತೇನೆ’ ಎಂದರು

ಸೋಮಣ್ಣ ಬಿಜೆಪಿ ಬಿಡಲ್ಲ: ಬಿಎಸ್‌ವೈ

ಶಿವಮೊಗ್ಗ: ಮಾಜಿ ಸಚಿವ ವಿ. ಸೋಮಣ್ಣ ಬಿಜೆಪಿ ಬಿಟ್ಟು ಎಲ್ಲಿಗೂ ಹೋಗಲ್ಲ. ಅವರು ನಮ್ಮ ಜೊತೆಯೇ ಇರಲಿದ್ದಾರೆ ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಹೇಳಿದರು.

ವಿ.ಸೋಮಣ್ಣ ಕಾಂಗ್ರೆಸ್ ಸೇರ್ಪಡೆ ಆಗಲು ಬೆಂಬಲಿಗರ ಸಭೆ ನಡೆಸುವುದಾಗಿ ಹೇಳಿಕೆ ನೀಡಿರುವ ಬಗ್ಗೆ ಬುಧವಾರ ಇಲ್ಲಿ ಸುದ್ದಿಗಾರರ ಪ್ರಶ್ನೆಗೆ ಅವರು ಪ್ರತಿಕ್ರಿಯಿಸಿದರು.

‘ಅಲ್ಪಸಂಖ್ಯಾತರ ಅಭಿವೃದ್ಧಿಗೆಂದು ರಾಜ್ಯ ಸರ್ಕಾರ ಹಣಕೊಟ್ಟರೆ ಅಭ್ಯಂತರವಿಲ್ಲ. ಆದರೆ, ₹ 10,000 ಕೋಟಿ ಕೊಡುತ್ತಿದ್ದೇವೆ ಎಂದು ದೊಡ್ಡದಾಗಿ ಬಿಂಬಿಸುವುದು ಸರ್ಕಾರಕ್ಕೆ ಶೋಭೆ ತರುವುದಿಲ್ಲ’ ಎಂದ ಯಡಿಯೂರಪ್ಪ, ‘ಕೇವಲ ಅಲ್ಪಸಂಖ್ಯಾತರ ಅಭಿವೃದ್ಧಿಗೆಂದು ಹಣ ನೀಡುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೀಡಿರುವ ಹೇಳಿಕೆ ಹಿಂದೂಗಳ ಆಕ್ರೋಶಕ್ಕೆ ಕಾರಣವಾಗಲಿದೆ’ ಎಂದು ಎಚ್ಚರಿಸಿದರು.

‘ಯತ್ನಾಳ–ಸಿಬಿಐ ಮಧ್ಯೆ ಹೊಂದಾಣಿಕೆ’

ಡಿ.ಕೆ.ಶಿವಕುಮಾರ್ ವಿರುದ್ಧದ ಪ್ರಕರಣ: ಸಂಪುಟ ನಿರ್ಧಾರ ಪ್ರಶ್ನಿಸಿ ರಿಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಮತ್ತು ಸಿಬಿಐ ನಡುವೆ ವ್ಯವಸ್ಥಿತ ಹೊಂದಾಣಿಕೆ ಏರ್ಪಟ್ಟಿದೆ’ ಎಂದು ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ ಹೈಕೋರ್ಟ್‌ಗೆ ಅರುಹಿದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಿರುದ್ಧದ ಅಕ್ರಮ ಆಸ್ತಿಗಳಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಬಿಐ ತನಿಖೆಗೆ ನೀಡಲಾಗಿದ್ದ ಅನುಮತಿಯನ್ನು ವಾಪಸು ಪಡೆದ ಈಗಿನ ರಾಜ್ಯ ಸಚಿವ ಸಂಪುಟದ ನಿರ್ಧಾರವನ್ನು ಪ್ರಶ್ನಿಸಿ; ಬಸನಗೌಡ ಪಾಟೀಲ ಯತ್ನಾಳ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ಸಂಜೆ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲ ವೆಂಕಟೇಶ್ ಪಿ.ದಳವಾಯಿ, ‘ಸಿಬಿಐ ತನಿಖೆಗೆ ನೀಡಲಾಗಿದ್ದ ಅನುಮತಿ ಹಿಂಪಡೆದಿರುವ ರಾಜ್ಯ ಸಚಿವ ಸಂಪುಟದ ನಿರ್ಧಾರ ಕಾನೂನಿಗೆ ವಿರುದ್ಧವಾಗಿದೆ. ಆರೋಪಿಯು ಇದೇ ಸಚಿವ ಸಂಪುಟದ ಸದಸ್ಯರಾಗಿದ್ದಾರೆ. ಇದೊಂದು ಕಳಂಕಿತ ನಿರ್ಧಾರ. ಈ ನಿರ್ಧಾರಕ್ಕೆ ತಡೆ ನೀಡಬೇಕು‘ ಎಂದು ಕೋರಿದರು.

ಇದಕ್ಕೆ ಪ್ರತಿಕ್ರಿಯಿಸಿದ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ, ‘ಈ ಅರ್ಜಿ ಸಲ್ಲಿಕೆಯ ಹಿಂದೆ ಸಿಬಿಐ ಮತ್ತು ಅರ್ಜಿದಾರರ ಮಧ್ಯೆ ಸೆಟ್–ಅಪ್ (ವ್ಯವಸ್ಥಿತ ಹೊಂದಾಣಿಕೆ) ಆಗಿದೆ’ ಎಂದು ಆಕ್ಷೇಪಿಸಿದರು. ಸಿಬಿಐ ಪರ ವಕೀಲ ಪಿ.ಪ್ರಸನ್ನ ಕುಮಾರ್, ‘ಸೂಕ್ತ ಸಮಯದಲ್ಲಿ ನಾವು ನಮ್ಮ ನಿಲುವು ಪ್ರಕಟಿಸುತ್ತೇವೆ’ ಎಂದರು.

ಅರ್ಜಿದಾರರ ಮನವಿ ಮೇಲೆ ಕಣ್ಣಾಡಿಸಿದ ನ್ಯಾಯಪೀಠ, ‘ನಿಮ್ಮ ಮನವಿ ಕಾನೂನು ಬದ್ಧವಾಗಿರುವುದೇನೊ ನಿಜ. ಆದರೆ, ಇದನ್ನು ನೀವು ಸಾರ್ವಜನಿಕ ಹಿತಾಸಕ್ತಿ ಅರ್ಜಿ ವ್ಯಾಪ್ತಿಯಲ್ಲಿ ಪ್ರಶ್ನಿಸಬಹುದಿತ್ತಲ್ಲವೇ’ ಎಂದು ಪ್ರಶ್ನಿಸಿತು. ‘ಆದಾಗ್ಯೂ, ಇದರಲ್ಲಿ ನೀವು ಹೇಗೆ ಸಂತ್ರಸ್ತರಾಗುತ್ತೀರಿ, ಈ ಪ್ರಕರಣದಲ್ಲಿ ಮೊಕದ್ದಮೆ ದಾಖಲಿಸಲು ನಿಮಗೇನು ಅಧಿಕಾರವಿದೆ ಎಂಬುದನ್ನು ಕೋರ್ಟ್‌ಗೆ ಮನದಟ್ಟು ಮಾಡಿ’ ಎಂದು ಸೂಚಿಸಿ ವಿಚಾರಣೆಯನ್ನು ಇದೇ 15ಕ್ಕೆ ಮುಂದೂಡಿತು.

ಬಿಜೆಪಿ ಸರ್ಕಾರ ಸಿಬಿಐ ತನಿಖೆಗೆ ಅನುಮತಿ ನೀಡಿ 2021ರ ಸೆಪ್ಟೆಂಬರ್ 25ರಂದು ಹೊರಡಿಸಿದ್ದ ಆದೇಶವನ್ನು ಸಿದ್ದರಾಮಯ್ಯ ಸರ್ಕಾರ 2023ರ ನ. 23ರಂದು ಸಂಜೆ ನಡೆದ ಸಚಿವ ಸಂಪುಟ ಸಭೆಯಲ್ಲಿ ವಾಪಸು ಪಡೆದಿತ್ತು.

ಕಲಬುರ್ಗಿ, ಗೌರಿ ಹತ್ಯೆ: ವಿಚಾರಣೆಗೆ ವಿಶೇಷ ನ್ಯಾಯಾಲಯ ಸ್ಥಾಪನೆ

ಒಂದನೇ ಪುಟದಿಂದ...

ಆ ಸಂಬಂಧ ಸ್ಥಳೀಯ ವಿದ್ಯಾಗಿರಿ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಅದಾದ ಮೇಲೆ ಸಿಐಡಿ ತನಿಖೆ ನಡೆಸಿತ್ತು. ನಂತರ, ಪ್ರಕರಣದ ತನಿಖೆಯನ್ನು ವಿಶೇಷ ತನಿಖಾ ದಳಕ್ಕೆ ವಹಿಸಲಾಗಿತ್ತು.

‘ಕಲಬುರ್ಗಿ ಹತ್ಯೆ ಪ್ರಕರಣದಲ್ಲಿ ಒಟ್ಟು 17 ಆರೋಪಿಗಳನ್ನು ಎಸ್‌ಐಟಿ ಬಂಧಿಸಿತ್ತು. ಆರೋಪಿಗಳು ಕರ್ನಾಟಕ, ಮಹಾರಾಷ್ಟ್ರ ಹಾಗೂ ಗೋವಾ ರಾಜ್ಯಗಳಲ್ಲಿ ಸಂಚು ರೂಪಿಸಿದ್ದರು. ಮೂರು ರಾಜ್ಯಗಳಲ್ಲಿ ಓಡಾಡಿದ್ದ ಪ್ರಮುಖ ಆರೋಪಿಗಳು ಹತ್ಯೆಗೆಂದೇ ತಂಡ ರಚಿಸಿದ್ದರು’ ಎಂದು ಮೂಲಗಳು ಹೇಳಿವೆ.

‘2017ರ ಸೆ.5ರಂದು ಗೌರಿ ಲಂಕೇಶ್ ಅವರ ಹತ್ಯೆಯಾಗಿತ್ತು. ತನಿಖೆಗೆ ವಿಶೇಷ ತನಿಖಾ ದಳ ರಚಿಸಲಾಗಿತ್ತು. 1,200 ಪುರಾವೆಗಳು ಹಾಗೂ 500ಕ್ಕೂ ಹೆಚ್ಚು ಸಾಕ್ಷ್ಯಾಧಾರ ಸಹಿತ ನ್ಯಾಯಾಲಯಕ್ಕೆ ಎಸ್‌ಐಟಿ ದೋಷಾರೋಪಪಟ್ಟಿ ಸಲ್ಲಿಕೆ ಮಾಡಿದೆ. ನ್ಯಾಯಾಲಯದಲ್ಲಿ ಪ್ರಕರಣದ ವಿಚಾರಣೆ ನಡೆಯುತ್ತಿದ್ದು, ಇತರೆ ಪ್ರಕರಣಗಳಿರುವ ಕಾರಣಕ್ಕೆ ವಿಚಾರಣೆ ನಿಧಾನಗತಿಯಲ್ಲಿ ಸಾಗುತ್ತಿದೆ.

ವಿಶೇಷ ನ್ಯಾಯಾಲಯ ಸ್ಥಾಪಿಸಿ ಪೂರ್ಣಾವಧಿ ನ್ಯಾಯಾಧೀಶರನ್ನು ನೇಮಿಸುವಂತೆ ಗೌರಿ ಸಹೋದರಿ ಕವಿತಾ ಲಂಕೇಶ್ ಮನವಿ ಮಾಡಿದ್ದರು’ ಎಂದು ಮುಖ್ಯಮಂತ್ರಿ ಟಿಪ್ಪಣಿಯಲ್ಲಿ ಉಲ್ಲೇಖಿಸಿದ್ದಾರೆ.

ರಾಜರಾಜೇಶ್ವರಿನಗರದ ಐಡಿಯಲ್ ಹೋಮ್ಸ್ ಟೌನ್‌ಶಿಪ್‌ನ ಮನೆ ಎದುರೇ ಗೌರಿ ಅವರನ್ನು ಗುಂಡಿಕ್ಕಿ ಹತ್ಯೆ ಮಾಡಲಾಗಿತ್ತು. ಗೌರಿ ಹತ್ಯೆ ಪ್ರಕರಣದಲ್ಲಿ ಒಟ್ಟು 18 ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಮೌಲ್ವಿ ಪೀರಾ ನಂಟಿನ ತನಿಖೆಗೆ ಯತ್ನಾಳ ಆಗ್ರಹ

ಒಂದನೇ ಪುಟದಿಂದ...

ಹುಬ್ಬಳ್ಳಿಯಲ್ಲಿ ಸೋಮವಾರ ಸಂಜೆ ನಡೆದ ದಕ್ಷಿಣ ಭಾರತದ ಮುಸ್ಲಿಂ ಧರ್ಮಗುರುಗಳ ಸಮಾವೇಶದಲ್ಲಿ ತನ್ವಿರ್ ಪೀರಾ ಅವರ ಜತೆ ಮುಖ್ಯಮಂತ್ರಿ ಸಿದ್ದರಾಮಯ್ಯ ವೇದಿಕೆ ಹಂಚಿಕೊಂಡಿದ್ದಾರೆ. ಮುಖ್ಯಮಂತ್ರಿ ಕಾರ್ಯಕ್ರಮ ಎಂದರೆ, ಅಲ್ಲಿ ಯಾರ್‍ಯಾರು ಪಾಲ್ಗೊಳ್ಳುತ್ತಾರೆ ಎಂಬ ಮಾಹಿತಿ ಗುಪ್ತಚರ ಇಲಾಖೆಗೆ ಇರುತ್ತದೆ.

ಪೀರಾ ಅವರಿಗೆ ಐಎಸ್ ಸಂಪರ್ಕ ಇದ್ದ ಬಗ್ಗೆ ಮಾಹಿತಿ ಇರಲಿಲ್ಲವೇ ಎಂದೂ ಅವರು ಪ್ರಶ್ನಿಸಿದ್ದಾರೆ. ಪೀರಾ ಅವರು ಅನೇಕ ಬಾರಿ ಸಿದ್ದರಾಮಯ್ಯನವರನ್ನು ಭೇಟಿ ಮಾಡಿದ್ದಾರೆ. ಇದರ ಬಗ್ಗೆಯೂ ತನಿಖೆ ನಡೆಸಬೇಕು ಎಂದು ಅಮಿತ್ ಶಾಗೆ ಬರೆದ ಪತ್ರದಲ್ಲಿ ಕೋರಿದ್ದಾರೆ. ತನ್ವಿರ್ ಪೀರಾ ಅವರು ಯೆಮೆನ್, ಸೌದಿ ಹಾಗೂ ಮಧ್ಯಪ್ರಾಚ್ಯ ದೇಶಗಳಲ್ಲಿ ಕೈಗೊಂಡ ಪ್ರವಾಸಗಳ ವೇಳೆ ಭಯೋತ್ಪಾದಕ ಸಂಘಟನೆಗಳ ಪ್ರಮುಖರನ್ನು ಭೇಟಿಯಾಗಿರುವ ಚಿತ್ರಗಳು ಇಲ್ಲಿವೆ ಎಂದು ‘ಎಕ್ಸ್’ ಖಾತೆಯಲ್ಲಿ ಹೇಳಿದ್ದಾರೆ.

‘ಆರೋಪ ಸಾಬೀತಾದರೆ ದೇಶವನ್ನೇ ತೊರೆಯುವೆ’

ಒಂದನೇ ಪುಟದಿಂದ...

‘12 ವರ್ಷಗಳ ಹಿಂದೆ ನಾನು ಇರಾಕ್ ದೇಶದ ಬಾಗ್ದಾದ್ ನಗರದ ಅಂತರರಾಷ್ಟ್ರೀಯ ಪ್ರಸಿದ್ಧ ಸೂಫಿ ಮಹೆಬೂಬ್ ಎಸುಭಾನಿ ಗೌಸ್ ಎ ಆಜಂ ಅವರ ದರ್ಶನಕ್ಕೆ ಹೋದಾಗ ಅಲ್ಲಿನ ದರ್ಗಾದ ಪೀಠಾಧಿಪತಿ ಖಲೀದ್ ಜಿಲಾನಿ ಅವರ ಆಶೀರ್ವಾದ ಪಡೆಯುವ ಸಂದರ್ಭದಲ್ಲಿ ತೆಗೆದಂತಹ ಚಿತ್ರಗಳಾಗಿವೆ. ಮತ್ತೊಂದು ಚಿತ್ರವನ್ನು ಅವರ ಅಂಗರಕ್ಷಕ ನನ್ನನ್ನು ಪೀಠಕ್ಕೆ ಕರೆದುಕೊಂಡು ಹೋಗುವಾಗ ತೆಗೆದದ್ದು’ ಎಂದು ಅವರು ತಿಳಿಸಿದ್ದಾರೆ.

‘ಯತ್ನಾಳ ಆರೋಪದಲ್ಲಿ ಯಾವುದೇ ಸತ್ಯಾಂಶ ಇಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜನಪ್ರಿಯತೆ ಸಹಿಸಲಾಗದೇ ಹತಾಶರಾಗಿ ಅವರನ್ನು ಗುರಿಯಾಗಿಸಿಕೊಂಡು ಹೇಳಿಕೆ ನೀಡಿದ್ದಾರೆ’ ಎಂದು ತಿಳಿಸಿದ್ದಾರೆ. ‘ಐಎಸ್’ ನಂತಹ ಭಯೋತ್ಪಾದಕ ಸಂಘಟನೆ ಜೊತೆ ನನಗೆ ನಂಟಿದೆ ಎಂಬುದರ ಬಗ್ಗೆ ಶಾಸಕರು ಒಂದು ವಾರದೊಳಗೆ ದಾಖಲೆ ಬಿಡುಗಡೆ ಮಾಡಬೇಕು. ಇಲ್ಲದಿದ್ದರೆ, ಅವರ ವಿರುದ್ಧ ಕಾನೂನಾತ್ಮಕ ಕ್ರಮ ಕೈಗೊಳ್ಳಲಾಗುವುದು’ ಎಂದು ಹೇಳಿದ್ದಾರೆ.

‘ಅಂತರರಾಷ್ಟ್ರೀಯ ಮಟ್ಟದಲ್ಲಿ ಭಯೋತ್ಪಾದನೆ ಖಂಡಿಸುವ ಅನೇಕ ಸಮ್ಮೇಳನ, ಕಾರ್ಯಕ್ರಮಗಳಲ್ಲಿ ನಾನು ಹಲವು ಬಾರಿ ಭಾರತವನ್ನು ಪ್ರತಿನಿಧಿಸಿದ್ದೇನೆ. ರಾಷ್ಟ್ರ, ರಾಜ್ಯದ ಹಲವು ಕೋಮು ಸೌಹಾರ್ದ ಸಮ್ಮೇಳನಗಳಲ್ಲಿ ಪಾಲ್ಗೊಂಡಿದ್ದೇನೆ’ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸರ್ಕಾರ ತನಿಖೆ ನಡೆಸಲಿ: ಖಾದ್ರಿ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ‘ಮುಸ್ಲಿಂ ಧರ್ಮಗುರುಗಳ ಸಮಾವೇಶದಲ್ಲಿ ಐಎಸ್ ಉಗ್ರರ ಜೊತೆ ಸಂಪರ್ಕ ಹೊಂದಿರುವವರು ಯಾರು ಸಹ ಪಾಲ್ಗೊಂಡಿಲ್ಲ. ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರ ಆರೋಪದಲ್ಲಿ ಹುರುಳಿಲ್ಲ. ಅಗತ್ಯವಿದ್ದರೆ ಸರ್ಕಾರ ತನಿಖೆ ನಡೆಸಲಿ’ ಎಂದು ಬಾಷಾಪೀರಾ ದರ್ಗಾದ ಧರ್ಮಗುರು ಸಯ್ಯದ್ ತಾಜುದ್ದೀನ್ ಖಾದ್ರಿ ಹೇಳಿದರು.

‘ಐಎಸ್ ಬೆಂಬಲಿಗ ವ್ಯಕ್ತಿ ಜೊತೆ ವೇದಿಕೆ ಹಂಚಿಕೊಂಡ ಸಿದ್ದರಾಮಯ್ಯ’ ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಮಾಡಿರುವ ಆರೋಪಕ್ಕೆ ಬುಧವಾರ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, ‘ಯತ್ನಾಳ ಅವರು ಡೈನಾಮಿಕ್ ಶಾಸಕರು. ಅವರು ಅಷ್ಟು ಆತ್ಮವಿಶ್ವಾಸದಿಂದ ಹೇಳಿಕೆ ನೀಡುತ್ತಾರೆ ಎಂದಾದರೆ, ಸತ್ಯ ಏನೆಂದು ಹೊರಬರಲಿ’ ಎಂದರು.

‘ಶಾಸಕರ ಆರೋಪಕ್ಕಷ್ಟೇ ಅಲ್ಲ, ಐಎಸ್ ಉಗ್ರರ ನಂಟು ಯಾರ್‍ಯಾರು ಇಟ್ಟುಕೊಂಡಿದ್ದಾರೆ ಎನ್ನುವ ಕುರಿತು ಸಂಪೂರ್ಣ ತನಿಖೆಯಾಗಬೇಕು. ಅಂದು ನಡೆದ ವೇದಿಕೆ ಕಾರ್ಯಕ್ರಮದಲ್ಲಿ ಯಾರ್‍ಯಾರು ಇದ್ದರೋ ಅವರೆಲ್ಲರನ್ನೂ ಬೇಕಾದರೆ ತನಿಖೆಗೆ ಒಳಪಡಿಸಲಿ’ ಎಂದರು. ‘ನಾವು ಭಾರತದಲ್ಲಿಯೇ ಹುಟ್ಟಿದ್ದೇವೆ, ಇಲ್ಲಿಯೇ ಸಾಯುತ್ತೇವೆ. ಅಂತಹ ಕೆಲಸ ಮಾಡುವವರಿಗೆ ಬೆಂಬಲವೂ ನೀಡುವುದಿಲ್ಲ. ಪೊಲೀಸ್, ಗುಪ್ತಚರ ಇಲಾಖೆಯ ಭದ್ರತೆ ನಡುವೆ, ಅಂಥವರು ಬರಲು ಸಾಧ್ಯವಿಲ್ಲ. ಯಾರ್‍ಯಾರು ಪಾಲ್ಗೊಂಡಿದ್ದರು ಎಂಬ ಮಾಹಿತಿ ನೀಡುತ್ತೇನೆ’ ಎಂದರು.

ಹುಬ್ಬಳ್ಳಿಯಲ್ಲಿ ಸಿದ್ದರಾಮಯ್ಯ ಪಾಲ್ಗೊಂಡಿದ್ದ ಮುಸ್ಲಿಂ ಧರ್ಮಗುರುಗಳ ಸಮ್ಮೇಳನದಲ್ಲಿ ಐಎಸ್ ಏಜೆಂಟರೂ ಭಾಗವಹಿಸಿದ್ದರು ಎಂಬ ಆರೋಪದ ಬಗ್ಗೆ ಸಿಬಿಐ ಅಥವಾ ಎನ್‌ಐಎ ವಿಶೇಷ ಗಮನ ಹರಿಸಬೇಕು


ಸಿ.ಟಿ. ರವಿ, ಬಿಜೆಪಿ ಮುಖಂಡ

ಯತ್ನಾಳ ಆರೋಪದಲ್ಲಿ ಹುರುಳಿಲ್ಲ: ‘ಶಾಸಕ ಯತ್ನಾಳ ಅವರು ಹುಚ್ಚರ ಹಾಗೆ ಮಾತನಾಡುತ್ತಾರೆ. ಅವರ ಆರೋಪದಲ್ಲಿ ಯಾವುದೇ ಸತ್ಯವಿಲ್ಲ’ ಎಂದು ಮುಸ್ಲಿಂ ಮುಖಂಡ ಎ.ಎಂ. ಹಿಂಡಸಗೇರಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸುಭಾಷ್ ಛಾಯಾಗೋಳ ಹೇಳಿಕೆ, ಕ್ಷಮೆಯಾಚನೆ

‘ಪೊಲೀಸರ ಕೊಲೆ ಮಾಡಿಸ್ತೀವಿ’

ಪ್ರಜಾವಾಣಿ ವಾರ್ತೆ



ಸುಭಾಷ್ ಛಾಯಾಗೋಳ

ವಿಜಯಪುರ: ಚಿಕ್ಕಮಗಳೂರಿನಲ್ಲಿ ಪೊಲೀಸರು-ವಕೀಲರ ನಡುವೆ ನಡೆದ ಸಂಘರ್ಷ ಖಂಡಿಸಿ ವಿಜಯಪುರದ ಗಾಂಧಿ ಚೌಕದಲ್ಲಿ ಮಂಗಳವಾರ ನಡೆದ ವಕೀಲರ ಪ್ರತಿಭಟನೆ ವೇಳೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆಪ್ತ, ಗಡಿನಾಡ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ, ವಕೀಲ ಸುಭಾಷ್ ಛಾಯಾಗೋಳ ಅವರು ಪೊಲೀಸರಿಗೆ ಬಹಿರಂಗವಾಗಿ ಎಚ್ಚರಿಕೆ ನೀಡಿರುವ ವಿವಾದಾತ್ಮಕ ಮಾತುಗಳು ಚರ್ಚೆಗೆ ಗ್ರಾಸವಾಗಿವೆ.

‘ಇನ್ಮೇಲೆ ಯಾರಾದರೂ ಪೊಲೀಸರು ವಕೀಲರ ಮೇಲೆ ಹಲ್ಲೆ ಮಾಡಿದ್ರೆ ನಾವು ವಕೀಲರು ನೂರು ಪೊಲೀಸರ ಕೊಲೆ ಮಾಡುವ ಕೆಲಸ ಮಾಡ್ತಿವಿ. ಯಾಕಂದ್ರೆ ಇದು ಪೊಲೀಸರ ರಾಜ್ಯವಲ್ಲ, ವಕೀಲರ ರಾಜ್ಯ’ ಎಂದು ಅವರು ಹೇಳಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದೆ.

ಕ್ಷಮೆಯಾಚನೆ: ಈ ಹೇಳಿಕೆಗೆ ಖಂಡನೆ ವ್ಯಕ್ತವಾದ ಬೆನ್ನಲ್ಲೇ ವಕೀಲ ಛಾಯಾಗೋಳ, ಪೊಲೀಸರ ಬಳಿ ಕ್ಷಮೆಯಾಚಿಸುವ ವಿಡಿಯೊವನ್ನು ಸುದ್ದಿ ಮಾಧ್ಯಮಗಳಿಗೆ ಬಿಡುಗಡೆ ಮಾಡಿದ್ದಾರೆ. ‘ನಾಲಿಗೆ ತಪ್ಪಿ ನೀಡಿರುವ ಹೇಳಿಕೆಯಿಂದ ಪೊಲೀಸರಿಗೆ ನೋವಾಗಿದ್ದರೆ ಕ್ಷಮೆಯಾಚಿಸುತ್ತೇನೆ’ ಎಂದಿದ್ದಾರೆ.

ಸಿಐಡಿ ತನಿಖೆ ಆರಂಭ

ಚಿಕ್ಕಮಗಳೂರು: ಪೊಲೀಸರು ಮತ್ತು ವಕೀಲರ ನಡುವಿನ ಘರ್ಷಣೆ ಪ್ರಕರಣದ ತನಿಖೆಯನ್ನು ಸಿಐಡಿ ತಂಡ ಬುಧವಾರ ಆರಂಭಿಸಿದೆ.

ಸಿಐಡಿ ಎಸ್ಪಿ ಎನ್.ವೆಂಕಟೇಶ್ ಮೇಲುಸ್ತುವಾರಿ ವಹಿಸಲಿದ್ದು, ಡಿವೈಎಸ್ಪಿ ಎಂ.ಎಚ್. ಉಮೇಶ್ ತನಿಖಾಧಿಕಾರಿಯಾಗಿದ್ದಾರೆ. ಕಾನೂನು ಸಲಹೆಗಾರ ಆರ್.ಕೆ. ಕಾಳೆ ತಂಡದಲ್ಲಿದ್ದಾರೆ. ಪೊಲೀಸರ ಕಪಾಳಕ್ಕೆ ಹೊಡೆದ ಆರೋಪದಲ್ಲಿ ದಾಖಲಾಗಿದ್ದ ಪ್ರಕರಣದಲ್ಲಿ ವಕೀಲ ಪ್ರೀತಮ್‌ಗೆ ಜಿಲ್ಲಾ ನ್ಯಾಯಾಲಯ ನಿರೀಕ್ಷಣಾ ಜಾಮೀನು ಮಂಜೂರು ಮಾಡಿದೆ.

ಮಧ್ಯಪ್ರದೇಶ ಮುಖ್ಯಮಂತ್ರಿ ಸ್ಥಾನ: ತೋಮರ್, ಪ್ರಹ್ಲಾದ್ ಸಿಂಗ್ ಹೆಸರು ಮುಂಚೂಣಿಗೆ

ತುರುಸಿನ ಸ್ಪರ್ಧೆ, ಹೆಚ್ಚಿದ ಕಾತರ

ಪ್ರಜಾವಾಣಿ ವಾರ್ತೆ

ಭೋಪಾಲ್: ಮಧ್ಯಪ್ರದೇಶದಲ್ಲಿ ಭಾರಿ ಬಹುಮತದೊಂದಿಗೆ ಅಧಿಕಾರಕ್ಕೆ ಮರಳಿರುವ ಬಿಜೆಪಿಯಲ್ಲಿ ಮುಖ್ಯಮಂತ್ರಿ ಸ್ಥಾನದ ಬಗೆಗಿನ ಊಹಾಪೋಹಗಳು ವ್ಯಾಪಕವಾಗಿ ಹರಡುತ್ತಿವೆ.

ವಿಧಾನಸಭೆ ಚುನಾವಣೆಗೆ ಸ್ಪರ್ಧಿಸಿದ್ದ ಏಳು ಸಂಸದರಲ್ಲಿ ಐವರು ಜಯ ಗಳಿಸಿದ್ದು ಇವರು ಬುಧವಾರ ಲೋಕಸಭಾ ಸದಸ್ಯತ್ವಕ್ಕೆ ರಾಜೀನಾಮೆ ಸಲ್ಲಿಸಿದರು. ಆ ಬಳಿಕ ಕುತೂಹಲ ಮತ್ತಷ್ಟು ಹೆಚ್ಚಾಗಿದೆ. ರಾಜ್ಯ ಶಾಸಕಾಂಗ ಪಕ್ಷದಿಂದ ಈಗಾಗಲೇ ಆಕಾಂಕ್ಷಿಗಳ ಉದ್ದ ಪಟ್ಟಿಯೇ ಸಿದ್ಧವಾಗಿದೆ. ಐವರು ಸಂಸದರ ರಾಜೀನಾಮೆಯಿಂದಾಗಿ ಮುಖ್ಯಮಂತ್ರಿ ಆಯ್ಕೆ ಕಾರ್ಯ ಮತ್ತಷ್ಟು ಸಂಕೀರ್ಣವಾದಂತೆ ಕಾಣುತ್ತಿದೆ.

ಮುಖ್ಯಮಂತ್ರಿ ಸ್ಥಾನಕ್ಕೆ ಕೇಂದ್ರ ನಾಗರಿಕ ವಿಮಾನಯಾನ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಅವರ ಹೆಸರೂ ಕೇಳಿ ಬಂದಿದೆ.

ಲೋಕಸಭೆ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ ಸಂಸದರಲ್ಲಿ ನರೇಂದ್ರ ಸಿಂಗ್ ತೋಮರ್ ಮತ್ತು ಪ್ರಹ್ಲಾದ್ ಸಿಂಗ್ ಪಟೇಲ್ ಅವರ ಹೆಸರು ಮಧ್ಯಪ್ರದೇಶದ ಮುಖ್ಯಮಂತ್ರಿ ಸ್ಥಾನದ ಸ್ಪರ್ಧಿಗಳಲ್ಲಿ ಮುಂಚೂಣಿಯಲ್ಲಿದೆ. ಇತರ ಶಾಸಕರಿಗೆ ಸಂಪುಟದಲ್ಲಿ ಪ್ರಮುಖ ಖಾತೆಗಳನ್ನು ನೀಡಬಹುದು ಎಂಬ ಲೆಕ್ಕಾಚಾರವಿದೆ. ಲೋಕಸಭೆ ಚುನಾವಣೆಯಲ್ಲಿ ಎಲ್ಲಾ 29 ಸ್ಥಾನಗಳನ್ನು ಗೆಲ್ಲಿಸುವ ಪ್ರಮುಖ ಹೊಣೆಗಾರಿಕೆಯೂ ಇವರ ಮೇಲಿರಲಿದೆ.



ಮಧ್ಯಪ್ರದೇಶದಲ್ಲಿ ಬುಧವಾರದಿಂದ ಮಿಷನ್–29ಕ್ಕೆ ಚಾಲನೆ ನೀಡಿದ್ದೇವೆ. ನರೇಂದ್ರ ಮೋದಿ ಅವರು ಮತ್ತೆ ಪ್ರಧಾನಿಯಾಗಲು ನಾವು ಎಲ್ಲಾ 29 ಸ್ಥಾನಗಳಲ್ಲಿ ಜಯ ಗಳಿಸುತ್ತೇವೆ

ಶಿವರಾಜ್ ಸಿಂಗ್ ಚೌಹಾಣ್
ಮಧ್ಯಪ್ರದೇಶದ ಮುಖ್ಯಮಂತ್ರಿ

ಈ ಮಧ್ಯೆ ಹಾಲಿ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಅವರು ಈಗಾಗಲೇ ತಮ್ಮ ಉದ್ದೇಶವನ್ನು ಸ್ಪಷ್ಟಪಡಿಸಿದ್ದಾರೆ. ಮಿಷನ್ 29ರ ಪ್ರಕಾರ ಚೌಹಾಣ್ ಅವರು ಬುಧವಾರ ಕಮಲ್‌ನಾಥ್ ಅವರ ಕ್ಷೇತ್ರವಾದ ಛಿಂದವಾಡಾಕ್ಕೆ ತೆರಳಿದ್ದಾರೆ. ಅಲ್ಲಿ ಅವರು 'ಲಾಡ್ಲಿ ಬೆಹ್‌ನಾ' ಕಾರ್ಯಕ್ರಮದಲ್ಲಿ ಮತ್ತು ಕಾರ್ಯಕರ್ತರ ಸಭೆಯಲ್ಲಿ ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, 'ನಿಮ್ಮ ಮಾಮಾ (ಸ್ವತಃ ಚೌಹಾಣ್) ರಾಜ್ಯದಲ್ಲಿ ನಿರಂತರ ಪ್ರವಾಸ ಕೈಗೊಂಡಿದ್ದರೆ, ನಿಮ್ಮ ದಾದಾಜಿ (ಕಮಲ್‌ನಾಥ್) ಛಿಂದವಾಡಾದಲ್ಲಿ ಮಾತ್ರ ಸಿಲುಕಿಕೊಂಡಿದ್ದರು. ಬಿಜೆಪಿಗೆ ಅವರು ಮುಕ್ತ ಅವಕಾಶ ಬಿಟ್ಟುಕೊಟ್ಟರು. ಬಿಜೆಪಿ ಭರ್ಜರಿ ಜಯದೊಂದಿಗೆ ಅಧಿಕಾರಕ್ಕೆ ಮರಳಿದೆ. ಏಳು ಕ್ಷೇತ್ರಗಳಲ್ಲಿ ಪಕ್ಷ ಸೋತಿದ್ದರೂ ಈಗ ಛಿಂದವಾಡಾ ಸೇರಿದಂತೆ ಲೋಕಸಭೆಯ ಎಲ್ಲಾ ಕ್ಷೇತ್ರಗಳನ್ನು ಗೆಲ್ಲಲು ತಕ್ಕ ಸಿದ್ಧತೆ ಮಾಡಿಕೊಳ್ಳುತ್ತೇವೆ' ಎಂದರು.

ಈಗ ಛಿಂದವಾಡಾದ ಎಲ್ಲಾ ಏಳು ವಿಧಾನಸಭಾ ಕ್ಷೇತ್ರಗಳಲ್ಲಿ ಅಭಿವೃದ್ಧಿ ಕಾರ್ಯ ಕೈಗೊಳ್ಳುವುದಾಗಿ ನಾನು ಭರವಸೆ ನೀಡುತ್ತೇನೆ' ಎಂದು ಅವರು ಹೇಳಿದರು. ವಿಧಾನಸಭೆ ಚುನಾವಣೆಯಲ್ಲಿ ಜಯ ಗಳಿಸಿದ ಬಳಿಕ ಚೌಹಾಣ್ ಅವರು ಮೊದಲು ಛಿಂದವಾಡಾ ನಗರಕ್ಕೆ ಭೇಟಿ ನೀಡಿದ್ದಾರೆ.

ಎಎಪಿಯ ಐವರಿಗೆ 5 ಸಾವಿರಕ್ಕೂ ಹೆಚ್ಚು ಮತ

ರಾಯಪುರ (ಪಿಟಿಐ): ಛತ್ತೀಸಗಢ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಎಎಪಿಯ 53 ಅಭ್ಯರ್ಥಿಗಳಲ್ಲಿ ಐವರು 5 ಸಾವಿರಕ್ಕೂ ಹೆಚ್ಚು ಮತ ಪಡೆದಿದ್ದಾರೆ. ಒಂಬತ್ತು ಕ್ಷೇತ್ರಗಳಲ್ಲಿ ನೋಟಾಗಿಂತ ಹೆಚ್ಚು ಮತಗಳನ್ನು ಪಕ್ಷದ ಅಭ್ಯರ್ಥಿಗಳು ಪಡೆದಿದ್ದಾರೆ ಎಂದು ಚುನಾವಣಾ ಆಯೋಗ ಮಾಹಿತಿ ನೀಡಿದೆ.

ಛತ್ತೀಸಗಢದಲ್ಲಿ ಎರಡನೇ ಬಾರಿಗೆ ಅದೃಷ್ಟ ಪರೀಕ್ಷಿಸಿದ್ದ ಎಎಪಿಗೆ ಶೇ 0.93 ಮತಗಳು ದೊರಕಿವೆ.

2018ರಲ್ಲಿ 90 ಕ್ಷೇತ್ರಗಳ ಪೈಕಿ 85ರಲ್ಲಿ ಎಎಪಿ ತನ್ನ ಅಭ್ಯರ್ಥಿಗಳನ್ನು ಕಣಕ್ಕಿಳಿಸಿತ್ತು. ಅವರಲ್ಲಿ ಎಲ್ಲರೂ ಠೇವಣಿ ಕಳೆದುಕೊಂಡಿದ್ದರು. ಪಕ್ಷವು ಶೇ 0.87 ಮತ ಪಡೆದಿತ್ತು.

ಭಾನುಪ್ರತಾಪ್‌ಪುರ ಕ್ಷೇತ್ರದಿಂದ ಸ್ಪರ್ಧಿಸಿದ್ದ ಛತ್ತೀಸಗಢ ಎಎಪಿ ರಾಜ್ಯ ಘಟಕದ ಅಧ್ಯಕ್ಷ ಕೋಮಲ್ ಹುಪೆಂಡಿ ಅವರು 15,255 ಮತ ಪಡೆದಿದ್ದಾರೆ. ಸಂತ್ರಾಮ್ ಸಲಾಮ್, ಬಲೂರಾಮ್ ಭವಾನಿ, ಖಾದ್ರಾಜ್ ಸಿಂಗ್ ಮತ್ತು ಜಸ್ವೀರ್ ಸಿಂಗ್ ಅವರು 5 ಸಾವಿರಕ್ಕೂ ಹೆಚ್ಚು ಮತ ಪಡೆದಿರುವ ಇತರ ಅಭ್ಯರ್ಥಿಗಳು.



ವಿರೋಧ ಪಕ್ಷಗಳ 'ಇಂಡಿಯಾ' ಮೈತ್ರಿಕೂಟದ ಸಭೆಯು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ನಿವಾಸದಲ್ಲಿ ಬುಧವಾರ ನಡೆಯಿತು. ಪಕ್ಷದ ನಾಯಕ ರಾಹುಲ್ ಗಾಂಧಿ ಮತ್ತು ಲೋಕಸಭೆ ಕಾಂಗ್ರೆಸ್ ನಾಯಕ ಅಧೀರ್ ರಂಜನ್ ಚೌಧರಿ, ವಿರೋಧಪಕ್ಷಗಳ ಹಲವು ನಾಯಕರು ಸಭೆಯಲ್ಲಿ ಪಾಲ್ಗೊಂಡಿದ್ದರು –ಪಿಟಿಐ ಚಿತ್ರ

'ಇಂಡಿಯಾ' ಸಭೆ: ಟಿಎಂಸಿ, ಶಿವಸೇನಾ ನಾಯಕರ ಗೈರು

ಪ್ರಜಾವಾಣಿ ವಾರ್ತೆ

ನವದೆಹಲಿ: 'ಇಂಡಿಯಾ' ಮೈತ್ರಿಕೂಟದ ನಾಯಕರಿಗಾಗಿ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಬುಧವಾರ ಏರ್ಪಡಿಸಿದ್ದ ಔತಣಕೂಟದಲ್ಲಿ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಮತ್ತು ಶಿವಸೇನಾ (ಯುಟಿಬಿ) ಪ್ರತಿನಿಧಿಗಳು ಗೈರು ಹಾಜರಾಗಿದ್ದು ಎದ್ದುಕಂಡಿತು. 17 ಪಕ್ಷಗಳ 31 ನಾಯಕರು ಸಭೆಯಲ್ಲಿ ಹಾಜರಿದ್ದರು.

ಔತಣಕೂಟದಲ್ಲಿ ಯಾವ ನಿರ್ದಿಷ್ಟ ವಿಚಾರದ ಕುರಿತೂ ಚರ್ಚೆ ನಡೆಯುವುದಿಲ್ಲ. ಇನ್ನು ಕೆಲವೇ ದಿನಗಳಲ್ಲಿ 'ಇಂಡಿಯಾ' ನಾಯಕರ ಸಭೆ ನಡೆಯಲಿದೆ. ಸಭೆಗೆ ಟಿಎಂಸಿ ತಪ್ಪದೇ ಹಾಜರಾಗುತ್ತದೆ ಎಂದು ಮೂಲಗಳು ಹೇಳಿವೆ.

ಪೂರ್ವನಿಗದಿತ ಕಾರ್ಯಕ್ರಮದ ಕಾರಣ ಸಭೆಗೆ ಬರಲು ಆಗುವುದಿಲ್ಲ ಎಂದು ಟಿಎಂಸಿ ಹೇಳಿತ್ತು. ಶಿವಸೇನಾ (ಯುಟಿಬಿ) ನಾಯಕ ಸಂಜಯ್ ರಾವುತ್ ಅವರು ಸಭೆಗೆ ಹಾಜರಾಗುವುದಾಗಿ ಈ ಮೊದಲು ತಿಳಿಸಿದ್ದರು. ಆದರೆ ಪಕ್ಷದ ಯಾರೊಬ್ಬರೂ ಸಭೆಯಲ್ಲಿ ಪಾಲ್ಗೊಂಡಿರಲಿಲ್ಲ. ಸೆಪ್ಟೆಂಬರ್ 1ರ ಬಳಿಕ 'ಇಂಡಿಯಾ' ಸಭೆ ಆಯೋಜಿಸದೇ ಇದ್ದದ್ದಕ್ಕೆ ಎಎಪಿ ನಾಯಕರು ಈ ವೇಳೆ ಆಕ್ಷೇಪ ವ್ಯಕ್ತಪಡಿಸಿದರು.

ಸರ್ಕಾರದ ಮೂರು ಹೊಸ ಮಸೂದೆಗಳು, ಸರ್ಕಾರದ ನಡುವಳಿಕೆ ಹಾಗೂ ಇತರ ವಿಚಾರಗಳ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು ಎಂದು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸದಸ್ಯ ಸಯ್ಯದ್ ನಾಸಿರ್ ಹುಸೇನ್ ಅವರು ವರದಿಗಾರರಿಗೆ ತಿಳಿಸಿದರು.

ಇನ್ನು 2–3 ದಿನಗಳಲ್ಲಿ 'ಇಂಡಿಯಾ' ನಾಯಕರ ಸಭೆಯ ದಿನಾಂಕ ಘೋಷಿಸಲಾಗುವುದು ಎನ್ನಲಾಗಿದೆ.

ಮಿಜೋರಾಂ: ಲಾಲ್ದುಹೋಮಾ ಪದಗ್ರಹಣ ನಾಳೆ

ಐಜ್ವಾಲ್ (ಪಿಟಿಐ): ಝೋರಂ ಪೀಪಲ್ಸ್ ಮೂವ್‌ಮೆಂಟ್‌ನ (ಝಡ್‌ಪಿಎಂ) ಮುಖ್ಯಸ್ಥ ಲಾಲ್ದುಹೋಮಾ ಅವರು ಮಿಜೋರಾಂನ ಮುಖ್ಯಮಂತ್ರಿಯಾಗಿ ಶುಕ್ರವಾರ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



ಲಾಲ್ದು ಹೋಮಾ

ರಾಜಭವನದಲ್ಲಿ ಬೆಳಿಗ್ಗೆ 11 ಗಂಟೆಗೆ ನಡೆಯುವ ಸಮಾರಂಭದಲ್ಲಿ ಲಾಲ್ದುಹೋಮಾ ಜೊತೆ ಅವರ ಸಚಿವ ಸಂಪುಟದ ಇತರ ಸದಸ್ಯರೂ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ.

ರಾಜ್ಯದ ರಾಜ್ಯಪಾಲ ಹರಿಬಾಬು ಕಂಭಂಪತಿ ಅವರನ್ನು ರಾಜಭವನದಲ್ಲಿ ಬುಧವಾರ ಬೆಳಿಗ್ಗೆ ಭೇಟಿಯಾಗಿದ್ದ ಲಾಲ್ದುಹೋಮಾ ಅವರು, ಸರ್ಕಾರ ರಚಿಸಲು ಹಕ್ಕು ಮಂಡಿಸಿದ್ದರು. ಪ್ರಮಾಣ ವಚನ ಸ್ವೀಕರಿಸಲು ರಾಜ್ಯಪಾಲರು ಆಹ್ವಾನ ನೀಡಿದ್ದಾರೆ.

ಝಡ್‌ಪಿಎಂ ಸಲಹಾ ಮಂಡಳಿಯು ಲಾಲ್ದುಹೋಮಾ ಅವರನ್ನು ಗುರುವಾರ ಭೇಟಿಯಾಗಿ ಹೊಸದಾಗಿ ರಚನೆಯಾಗಲಿರುವ ಸರ್ಕಾರದ ಸ್ವರೂಪ ಕುರಿತು ಚರ್ಚಿಸಲಿದೆ ಎಂದು ಪಕ್ಷದ ಮಾಧ್ಯಮ ಘಟಕದ ಪ್ರಧಾನ ಕಾರ್ಯದರ್ಶಿ ಎಡಿ ಜೊಸಾಂಗ್ಲಿಯಾನ ಕೋಲ್ನೆ ತಿಳಿಸಿದ್ದಾರೆ.

ಝಡ್‌ಪಿಎಂ ಶಾಸಕರ ಸಭೆಯು ಮಂಗಳವಾರ ನಡೆಯಿತು. ಲಾಲ್ದುಹೋಮಾ ಅವರನ್ನು ಝಡ್‌ಪಿಎಂ ಶಾಸಕಾಂಗ ಪಕ್ಷದ ನಾಯಕನಾಗಿ ಆರಿಸಲಾಯಿತು. ಕೆ. ಸಪ್‌ಡಾಂಗಾ ಅವರನ್ನು ಉಪ ನಾಯಕನನ್ನಾಗಿ ಆಯ್ಕೆ ಮಾಡಲಾಯಿತು.

ತೆಲಂಗಾಣ: ಸಂಪುಟ ಕಸರತ್ತು

ಮಲ್ಲು ಭಟ್ಟಿ ವಿಕ್ರಮಾರ್ಕ, ಮಹಿಳೆಯೊಬ್ಬರಿಗೆ ಉಪಮುಖ್ಯಮಂತ್ರಿ ಸ್ಥಾನ?

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಎ. ರೇವಂತ್ ರೆಡ್ಡಿ ಅವರು ಗುರುವಾರ ತೆಲಂಗಾಣ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಲು ತ್ವರಿತ ಸಿದ್ಧತೆಗಳು ನಡೆಯುತ್ತಿರುವಂತೆಯೇ, ಕಾಂಗ್ರೆಸ್‌ನಲ್ಲಿನ ಅನೇಕರು ಸಂಪುಟದಲ್ಲಿ ತಮಗೆ ಸ್ಥಾನ ಸಿಗಬಹುದೆಂಬ ಆಶಾಭಾವ ಹೊಂದಿದ್ದಾರೆ.

ನಿಯಮಾವಳಿ ಪ್ರಕಾರ ಮುಖ್ಯಮಂತ್ರಿ ಸೇರಿದಂತೆ 18 ಸದಸ್ಯರು ರಾಜ್ಯ ಸಂಪುಟದ ಭಾಗವಾಗಬಹುದು. ಮುಖ್ಯಮಂತ್ರಿ ಆಯ್ಕೆ ಪ್ರಕ್ರಿಯೆ ಪೂರ್ಣಗೊಳ್ಳುತ್ತಿದ್ದಂತೆ ಈಗ ಎಲ್ಲರ ಗಮನ ಸಂಪುಟ ರಚನೆಯತ್ತ ತಿರುಗಿದೆ. ರೇವಂತ್ ರೆಡ್ಡಿ ಅವರ ಸಂಪುಟದಲ್ಲಿ ಭಾಗಿಯಾಗಲು ಹಲವು ಮಂದಿ ಆಕಾಂಕ್ಷಿಗಳು ಲಾಬಿ ನಡೆಸುತ್ತಿದ್ದಾರೆ.

ಮಲ್ಲು ಭಟ್ಟಿ ವಿಕ್ರಮಾರ್ಕ ಅವರೊಂದಿಗೆ ಶಾಸಕಿಯನ್ನು ಕೂಡ ಉಪ ಮುಖ್ಯಮಂತ್ರಿಯಾಗಿ ನೇಮಿಸಲಾಗುತ್ತದೆ ಎನ್ನಲಾಗಿದೆ. ಇಬ್ಬರು ಉಪ ಮುಖ್ಯಮಂತ್ರಿಗಳ ಸ್ಥಾನಗಳಿಗೆ ಎಐಸಿಸಿ ನಾಯಕರು ಒಪ್ಪಿಗೆ ನೀಡಿದರೆ ಮುಲುಗು ಶಾಸಕಿ, ಧನಸರಿ ಅನಸೂಯ ಅಲಿಯಾಸ್ ಸೀತಕ್ಕ ಅಥವಾ ಕೊಂಡಾ ಸುರೇಖಾ ಅವರಿಗೆ ಅವಕಾಶ ಸಿಗುವ ಸಾಧ್ಯತೆ ಇದೆ.

ಶಾಸಕ ಎನ್. ಉತ್ತಮ್ ಕುಮಾರ್ ರೆಡ್ಡಿ ಅವರು ಸಂಪುಟ ಸೇರುವ ಬಗ್ಗೆ ಉತ್ಸಾಹ ತೋರಿಲ್ಲ. ಅವರ ಪತ್ನಿ ಪದ್ಮಾವತಿ ಅವರು ಸಂಪುಟಕ್ಕೆ ಸೇರ್ಪಡೆಯಾಗಬಹುದು. ಸಂಪುಟ ದರ್ಜೆ ಸಚಿವರಾಗುವ ಆಕಾಂಕ್ಷಿಗಳ ಪಟ್ಟಿಯಲ್ಲಿ ಕಾಂಗ್ರೆಸ್‌ನಲ್ಲಿರುವ ಕಮ್ಮ ಸಮುದಾಯದ ಏಕೈಕ ಶಾಸಕ ತುಮ್ಮಲ ನಾಗೇಶ್ವರ ರಾವ್ ಮತ್ತು ಪಿ. ಶ್ರೀನಿವಾಸ್ ರೆಡ್ಡಿ ಅವರು ಮುಂಚೂಣಿಯಲ್ಲಿದ್ದಾರೆ. ವೈ. ರಾಜಶೇಖರ್ ರೆಡ್ಡಿ ಸರ್ಕಾರದಲ್ಲಿ ಉಪ ಮುಖ್ಯಮಂತ್ರಿಯಾಗಿದ್ದ ದಾಮೋದರ್ ರಾಜಾ ನರಸಿಂಹ ಅವರು ಕೂಡ ಸಂಪುಟಕ್ಕೆ ಸೇರುವ ವಿಶ್ವಾಸ ಹೊಂದಿದ್ದಾರೆ. ಶಾಸಕ ಪೊನ್ನಾಮ್ ಪ್ರಭಾಕರ್ ಅವರೂ ಸಂಪುಟ ಸೇರಬಯಸಿದ್ದಾರೆ.

ರೇಮಂತ್ ರೆಡ್ಡಿ ನಿಷ್ಠರಾಗಿರುವ ಶಬ್ಬೀರ್ ಅಲಿ, ನಿಜಾಮಬಾದ್ ನಗರ ಕ್ಷೇತ್ರದಲ್ಲಿ ಸೋತಿದ್ದಾರೆ. ಅವರೂ ಖಾತೆ ಪಡೆಯಬೇಕೆಂಬ ಆಕಾಂಕ್ಷೆ ಹೊಂದಿದ್ದಾರೆ. ಅವರನ್ನು ಸಂಪುಟಕ್ಕೆ ಸೇರಿಸಿಕೊಳ್ಳಲು ಅವರನ್ನು ವಿಧಾನಪರಿಷತ್ ಸದಸ್ಯರಾಗಿಸಬೇಕಾಗುತ್ತದೆ.



ರೇವಂತ್ ರೆಡ್ಡಿ ಅವರು ದೆಹಲಿಯಲ್ಲಿ ಬುಧವಾರ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡಿದರು ಪಿಟಿಐ ಚಿತ್ರ

ವೆಂಕಟರೆಡ್ಡಿ ಅವರು ಪ್ರಮುಖ ಖಾತೆ ಪಡೆಯಲು ಪ್ರಯತ್ನ ನಡೆಸಿದ್ದಾರೆ. ದುಡ್ಡಿಳ್ಳ ಶ್ರೀಧರ ಬಾಬು ಅವರು ಸ್ಪೀಕರ್ ಸ್ಥಾನ ಅಥವಾ ಸಂಪುಟ ದರ್ಜೆ ಪಡೆಯಲಿದ್ದಾರೆ ಎಂದು ಹೇಳಲಾಗಿದೆ. ಈ ಹಿಂದೆ ಸಚಿವರಾಗಿದ್ದ ಗಡ್ಡಂ ವಿನೋದ್ ಕೂಡ ಸಂಪುಟ ಸೇರಲು ಪ್ರಯತ್ನಿಸಿದ್ದು ಈಗಾಗಲೇ ಅವರು ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅವರನ್ನೂ ಭೇಟಿ ಮಾಡಿ ಮನವಿ ಸಲ್ಲಿಸಿದ್ದಾರೆ. ಗಡ್ಡಂ ವಿನೋದ್ ಅವರ ತಮ್ಮ ಗಡ್ಡಂ ವಿವೇಕಾನಂದ ಕೂಡ ಸ್ಪರ್ಧೆಯಲ್ಲಿದ್ದಾರೆ.

ಚುನಾವಣೆ ಮುನ್ನವಷ್ಟೇ ಬಿಜೆಪಿಯಿಂದ ಕಾಂಗ್ರೆಸ್‌ಗೆ ಸೇರಿದ ಅವರು ಸಂಪುಟ ದರ್ಜೆ ಪಡೆಯುವ ವಿಶ್ವಾಸ ಹೊಂದಿದ್ದಾರೆ. ಪಕ್ಷವು ಅಧಿಕಾರಕ್ಕೆ ಬಂದರೆ ಸಂಪುಟ ದರ್ಜೆ ಸಚಿವ ಸ್ಥಾನ ನೀಡುವ ಭರವಸೆಯನ್ನು ಹೈಕಮಾಂಡ್ ನೀಡಿದ ನಂತರವೇ ಅವರು ಕಾಂಗ್ರೆಸ್‌ಗೆ ಮರಳಿದ್ದರು. ವಿವೇಕ್ ಅವರು ಚೆನ್ನೂರ್ ಕ್ಷೇತ್ರದಿಂದ ಜಯ ಗಳಿಸಿದ್ದಾರೆ. ಕುಟುಂಬದಲ್ಲಿ ಒಬ್ಬರು ಮಾತ್ರ ಸಚಿವರಾಗುವ ಅವಕಾಶ ಇದ್ದು ದಲಿತ ಸಮುದಾಯದ ಪ್ರಾತಿನಿಧ್ಯದಡಿ ಗಡ್ಡಂ ಸೋದರರಲ್ಲಿ ಒಬ್ಬರಿಗೆ ಸಂಪುಟದಲ್ಲಿ ಸ್ಥಾನ ದೊರಕುವ ಸಾಧ್ಯತೆ ಇದೆ.

'ಇಂಡಿಯಾ' ಮೈತ್ರಿಕೂಟದ ಒಗ್ಗಟ್ಟು ಪ್ರದರ್ಶನ?

ನವದೆಹಲಿ: ರೇವಂತ್ ರೆಡ್ಡಿ ಅವರ ಪ್ರಮಾಣ ವಚನ ಸಮಾರಂಭವನ್ನು 'ಇಂಡಿಯಾ' ಮೈತ್ರಿಕೂಟದ ಒಗ್ಗಟ್ಟು ಪ್ರದರ್ಶನವಾಗಿ ಮಾಡಲು ಕಾಂಗ್ರೆಸ್ ಯತ್ನಿಸಿದ್ದು, ಮೈತ್ರಿಕೂಟದ ನಾಯಕರಿಗೆ ಆಹ್ವಾನ ನೀಡಲಾಗಿದೆ.

ರೇವಂತ್ ಅವರು ದೂರವಾಣಿ ಮೂಲಕ ಮಮತಾ ಬ್ಯಾನರ್ಜಿ, ಎಂ.ಕೆ. ಸ್ಟಾಲಿನ್ ಸೇರಿದಂತೆ ಹಲವರನ್ನು ಸಂಪರ್ಕಿಸಿ ಸಮಾರಂಭಕ್ಕೆ ಬರುವಂತೆ ಆಹ್ವಾನ ನೀಡಿದ್ದಾರೆ. ಅತ್ಯಂತ ಕಡಿಮೆ ಕಾಲಾವಕಾಶದಲ್ಲೇ ನಾಯಕರಿಗೆ ಆಹ್ವಾನ ನೀಡಿದ್ದು ಕಾರ್ಯಕ್ರಮದಲ್ಲಿ ಉಪಸ್ಥಿತರಿರುವಂತೆ ಕೋರಲಾಗಿದೆ ಎಂದು ಮೂಲಗಳು ಹೇಳಿವೆ.

ಸಮಾರಂಭಕ್ಕೆ ಬರಲು ಆಗುವುದಿಲ್ಲ ಎಂದು ಮಮತಾ ಹೇಳಿದ್ದು ತಮ್ಮ ಪರವಾಗಿ ತೃಣಮೂಲ ಕಾಂಗ್ರೆಸ್‌ನ ನಾಯಕ ಡೆರಿಕ್ ಒಬ್ರಯಾನ್ ಅವರಿಗೆ ಹೈದರಾಬಾದ್‌ಗೆ ತೆರಳಲು ಸೂಚಿಸಿದ್ದಾರೆ. ತಮಿಳುನಾಡಿನಲ್ಲಿ ಪ್ರವಾಹ ಪರಿಸ್ಥಿತಿ ಇರುವ ಕಾರಣ ಸ್ಟಾಲಿನ್ ಅವರ ಉಪಸ್ಥಿತಿ ಬಗ್ಗೆಯೂ ಅನುಮಾನವಿದೆ.

ಸಿಪಿಐನ ಪ್ರಧಾನ ಕಾರ್ಯದರ್ಶಿ ಡಿ. ರಾಜಾ, ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೊರೇನ್, ಆಂಧ್ರಪ್ರದೇಶದ ಮುಖ್ಯಮಂತ್ರಿ, ವೈ.ಎಸ್. ಜಗನ್‌ಮೋಹನ ರೆಡ್ಡಿ ಅವರಿಗೂ ಆಹ್ವಾನ ನೀಡಲಾಗಿದೆ. ರೇವಂತ್ ಅವರು ಸಿಪಿಎಂ ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚೂರಿ ಅವರಿಗೂ ಕರೆ ಮಾಡಿದ್ದರು ಎಂದು ಮೂಲಗಳು ಹೇಳಿವೆ. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ.

'ಕಾರ್ಯತಂತ್ರ ಸಿದ್ಧವಾಗಬೇಕು'

ಪಟ್ನಾ (ಪಿಟಿಐ): 'ಇಂಡಿಯಾ' ಮೈತ್ರಿಕೂಟವು ತನ್ನ ಮುಂದಿನ ಕಾರ್ಯತಂತ್ರವನ್ನು ಅಂತಿಮಗೊಳಿಸಲು ತಕ್ಷಣ ಮುಂದಡಿ ಇರಿಸಬೇಕು ಎಂದು ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಹೇಳಿದ್ದಾರೆ. ಅಲ್ಲದೆ, ಹಿಂದಿ ಭಾಷಿಕ ಮೂರು ರಾಜ್ಯಗಳಲ್ಲಿ ಬಿಜೆಪಿ ಸಾಧಿಸಿರುವ ಭರ್ಜರಿ ಗೆಲುವಿನ ಬಗ್ಗೆ 'ಬಹಳ ಚರ್ಚೆ ಮಾಡುವ ಅಗತ್ಯವಿಲ್ಲ' ಎಂದು ಅಭಿಪ್ರಾಯಪಟ್ಟಿದ್ದಾರೆ.



ನಿತೀಶ್ ಕುಮಾರ್

ಈ ತಿಂಗಳ ಮೂರನೆಯ ವಾರದಲ್ಲಿ ನಡೆಯಲಿರುವ 'ಇಂಡಿಯಾ' ಮೈತ್ರಿಕೂಟದ ಸಭೆಯ ಕಡೆ ತಮ್ಮ ಗಮನ ಇರುವುದಾಗಿ ನಿತೀಶ್ ಹೇಳಿದ್ದಾರೆ.

'ಮಧ್ಯಪ್ರದೇಶ, ರಾಜಸ್ಥಾನ ಮತ್ತು ಛತ್ತೀಸಗಢದಲ್ಲಿ ಕಾಂಗ್ರೆಸ್ ಒಳ್ಳೆಯ ಸಾಧನೆ ತೋರಿದೆ. ಚುನಾವಣಾ ರಾಜಕೀಯದಲ್ಲಿ ಇವೆಲ್ಲ ಇದ್ದಿದ್ದೇ. ಇಲ್ಲಿ ಕೆಲವು ರಾಜ್ಯಗಳಲ್ಲಿ ಮೊದಲು ಕಾಂಗ್ರೆಸ್ ಆಡಳಿತವಿತ್ತು. ಈಗ ಬಿಜೆಪಿ ಜಯಗಳಿಸಿದೆ. ಇಂಥವುಗಳ ಬಗ್ಗೆ ಬಹಳ ಚರ್ಚಿಸುವ ಅಗತ್ಯವಿಲ್ಲ. ಈ ಬಾರಿ ಕಾಂಗ್ರೆಸ್ ತೆಲಂಗಾಣದಲ್ಲಿ ಗೆದ್ದಿದೆ' ಎಂದು ನಿತೀಶ್ ಅವರು ಸುದ್ದಿಗಾರರಿಗೆ ಪ್ರತಿಕ್ರಿಯೆ ನೀಡಿದರು.

'ಇಂಡಿಯಾ ಮೈತ್ರಿಕೂಟವು ಮುಂದಿನ ಸಭೆಯಲ್ಲಿ ಸೀಟು ಹಂಚಿಕೆ ಸೇರಿದಂತೆ ಭವಿಷ್ಯದ ಕಾರ್ಯತಂತ್ರವನ್ನು ತ್ವರಿತವಾಗಿ ಅಂತಿಮಗೊಳಿಸಬೇಕು ಎಂಬುದು ನನ್ನ ಬಯಕೆ' ಎಂದು ಅವರು ಹೇಳಿದರು. 'ಇಂಡಿಯಾ' ಮೈತ್ರಿಕೂಟದ ಮುಂದಿನ ಸಭೆಗೆ ತಾವು ಹಾಜರಾಗುವುದಾಗಿ ನಿತೀಶ್ ತಿಳಿಸಿದರು.

ಸೀಟು ಹಂಚಿಕೆ ಬಗ್ಗೆ ಸಭೆಯಲ್ಲಿ ಚರ್ಚೆ ಆಗಲಿದೆ, ಇತರ ಹಲವು ಕಾರ್ಯತಂತ್ರಗಳನ್ನು ಅಂತಿಮಗೊಳಿಸಲಾಗುವುದು ಎಂದು ಅವರು ತಿಳಿಸಿದರು. '2024ರ ಲೋಕಸಭಾ ಚುನಾವಣೆಗೂ ಮೊದಲು ಸಾಧ್ಯವಾದಷ್ಟು ಹೆಚ್ಚಿನ ಸಂಖ್ಯೆಯಲ್ಲಿ ರಾಜಕೀಯ ಪಕ್ಷಗಳನ್ನು ಒಗ್ಗೂಡಿಸುವುದು ನನ್ನ ಬಯಕೆ. ವೈಯಕ್ತಿಕವಾಗಿ ಯಾವುದೇ ಆಸೆ ಇಲ್ಲ. ಆದರೆ ಎಲ್ಲವನ್ನೂ ಆದಷ್ಟು ಬೇಗ ಅಂತಿಮಗೊಳಿಸಬೇಕು' ಎಂದು ಅವರು ಹೇಳಿದರು.

ಠಾಕೂರ್ ಸಲಹೆ: 'ಇಂಡಿಯಾ' ಮೈತ್ರಿಕೂಟಕ್ಕೆ ನಿತೀಶ್ ಕುಮಾರ್ ಅವರನ್ನು ಸಂಚಾಲಕರನ್ನಾಗಿ ನೇಮಕ ಮಾಡಬೇಕು ಎಂದು ಜೆಡಿಯು ನಾಯಕ ರಾಮನಾಥ್ ಠಾಕೂರ್ ಒತ್ತಾಯಿಸಿದ್ದಾರೆ.

'ಬಿಹಾರದಲ್ಲಿ ನಿತೀಶ್ ಅವರು ಸಂಪಾದಿಸಿರುವ ಹೆಸರಿನ ಕಾರಣದಿಂದಾಗಿ, ಅವರು ಇಂಡಿಯಾ ಮೈತ್ರಿಕೂಟದ ನಾಯಕರಾದರೆ ಒಳ್ಳೆಯದು' ಎಂದು ಠಾಕೂರ್ ಹೇಳಿದ್ದಾರೆ.

ಕಾಂಗ್ರೆಸ್ಸಿಗೆ ಅಸ್ತಿತ್ವವಿಲ್ಲ: ಎಸ್‌ಪಿ

ಪ್ರಜಾವಾಣಿ ವಾರ್ತೆ

ಲಖನೌ: ಲೋಕಸಭಾ ಚುನಾವಣೆಗೆ ಸಮಾಜವಾದಿ ಪಕ್ಷ ಮತ್ತು ಕಾಂಗ್ರೆಸ್ ನಡುವೆ ಉತ್ತರ ಪ್ರದೇಶದ ಸೀಟು ಹಂಚಿಕೆ ಅಂತಿಮಗೊಂಡ ನಂತರವಷ್ಟೇ ಆ ಪಕ್ಷದ ಜೊತೆ ಮುಂದಿನ ಮಾತುಕತೆ ಸಾಧ್ಯ ಎಂಬ ಸುಳಿವನ್ನು ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್ ನೀಡಿದ್ದಾರೆ.

ಉತ್ತರ ಪ್ರದೇಶದಲ್ಲಿ ಸರಿಸುಮಾರು ಎರಡು ಡಜನ್ ಸ್ಥಾನಗಳನ್ನು ತನಗೆ ಬಿಟ್ಟುಕೊಡಬೇಕು ಎಂದು ಕಾಂಗ್ರೆಸ್ ಮುಂದಿಟ್ಟಿರುವ ಬೇಡಿಕೆಗೆ ಒಪ್ಪಲು ತಾವು ಸಿದ್ಧರಿಲ್ಲ ಎಂಬ ಸಂದೇಶವನ್ನೂ ಅವರು ರವಾನಿಸಿದ್ದಾರೆ.

'ನಿಜವಾಗಿ ಹೇಳಬೇಕು ಎಂದಾದರೆ, ಉತ್ತರ ಪ್ರದೇಶದಲ್ಲಿ ಕಾಂಗ್ರೆಸ್ಸಿಗೆ ಎರಡು ಸ್ಥಾನಗಳನ್ನು ಮಾತ್ರ ಬಿಟ್ಟುಕೊಡಬೇಕು. ಅಮೇಠಿ ಮತ್ತು ರಾಯ್‌ಬರೇಲಿ ಆ ಎರಡು ಸ್ಥಾನಗಳು. ಇವೆರಡನ್ನು ಹೊರತುಪಡಿಸಿದರೆ ಬೇರೆಡೆ ಕಾಂಗ್ರೆಸ್ಸಿಗೆ ಅಸ್ತಿತ್ವವಿಲ್ಲ' ಎಂದು ಸಮಾಜವಾದಿ ಪಕ್ಷದ ನಾಯಕರೊಬ್ಬರು ಹೇಳಿದ್ದಾರೆ.

ಎಲೆಕ್ಟ್ರಾನಿಕ್ ಉಪಕರಣ ವಶ: ಕೇಂದ್ರದ ಹೊಸ ಮಾರ್ಗಸೂಚಿ

ನವದೆಹಲಿ (ಪಿಟಿಐ): ತನಿಖಾ ಸಂಸ್ಥೆಗಳು ಫೋನ್ ಮತ್ತು ಲ್ಯಾಪ್‌ಟಾಪ್‌ನಂತಹ ಎಲೆಕ್ಟ್ರಾನಿಕ್ ಉಪಕರಣಗಳನ್ನು ವಶಪಡಿಸಿಕೊಳ್ಳುವಾಗ ಅನುಸರಿಸಬೇಕಿರುವ ಕ್ರಮಗಳ ಬಗ್ಗೆ ಮಾರ್ಗಸೂಚಿ ಸಿದ್ಧಪಡಿಸಲಾಗುತ್ತದೆ, ಇದಕ್ಕೆ ಸಂಬಂಧಿಸಿದಂತೆ ಸಮಿತಿಯೊಂದನ್ನು ರಚಿಸಲಾಗುತ್ತಿದೆ ಎಂದು ಕೇಂದ್ರ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಬುಧವಾರ ತಿಳಿಸಿದೆ.

ವ್ಯಕ್ತಿಗಳ, ಅದರಲ್ಲೂ ಮುಖ್ಯವಾಗಿ ಮಾಧ್ಯಮ ಪ್ರತಿನಿಧಿಗಳ, ಎಲೆಕ್ಟ್ರಾನಿಕ್ ಉಪಕರಣಗಳನ್ನು ವಶಕ್ಕೆ ಪಡೆಯುವಾಗ ಅನುಸರಿಸಬೇಕಿರುವ ಕ್ರಮಗಳ ಬಗ್ಗೆ ಮಾರ್ಗಸೂಚಿ ರೂಪಿಸುವಂತೆ ಸುಪ್ರೀಂ ಕೋರ್ಟ್ ನವೆಂಬರ್ 7ರಂದು ಕೇಂದ್ರ ಸರ್ಕಾರಕ್ಕೆ ಸೂಚಿಸಿತ್ತು. ಇದು ಗಂಭೀರ ವಿಚಾರ ಎಂದು ಕೂಡ ಹೇಳಿತ್ತು.

ಮಾರ್ಗಸೂಚಿ ರೂಪಿಸಲಾಗುತ್ತದೆ ಎಂಬ ಮಾಹಿತಿಯನ್ನು ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ. ರಾಜು ಅವರು ನ್ಯಾಯಮೂರ್ತಿಗಳಾದ ಎಸ್.ಕೆ. ಕೌಲ್ ಮತ್ತು ಸುಧಾಂಶು ಧುಲಿಯಾ ಅವರಿದ್ದ ನ್ಯಾಯಪೀಠಕ್ಕೆ ತಿಳಿಸಿದರು. ಮಾರ್ಗಸೂಚಿ ರೂಪಿಸುವಂತೆ ಕೋರಿ ಸಲ್ಲಿಕೆಯಾಗಿರುವ ಎರಡು ಅರ್ಜಿಗಳ ವಿಚಾರಣೆಯನ್ನು ಪೀಠ ನಡೆಸುತ್ತಿದೆ. ವಿಚಾರಣೆಯನ್ನು ಡಿಸೆಂಬರ್ 14ಕ್ಕೆ ಮುಂದೂಡಲಾಗಿದೆ.

ನ್ಯೂಸ್‌ಕ್ಲಿಕ್ ಪ್ರಕರಣದಲ್ಲಿ 90 ಮಂದಿ ಪತ್ರಕರ್ತರ 300 ಉಪಕರಣಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಅರ್ಜಿದಾರರ ಪರ ಹಾಜರಿದ್ದ ಹಿರಿಯ ವಕೀಲೆ ನಿತ್ಯಾ ರಾಮಕೃಷ್ಣನ್ ಅವರು ವಕೀಲರು ಪೀಠಕ್ಕೆ ತಿಳಿಸಿದರು. 'ಉಪಕರಣಗಳು ಇಲ್ಲವಾದ ಕಾರಣ ಅವರಿಗೆ ಕೆಲಸ ಮಾಡಲು ಕೂಡ ಆಗುತ್ತಿಲ್ಲ. ಇದು ಮಾಧ್ಯಮ ಸ್ವಾತಂತ್ರ್ಯದ ಮೇಲಿನ ಹಲ್ಲೆ' ಎಂದು ಅವರು ಹೇಳಿದರು.

ಮಾರ್ಗಸೂಚಿ ರೂಪಿಸುವಲ್ಲಿ ಕೇಂದ್ರ ಸರ್ಕಾರ ವಿಳಂಬ ಧೋರಣೆ ಅನುಸರಿಸುತ್ತಿದೆ ಎಂದು ನಿತ್ಯಾ ಹೇಳಿದರು. 'ರಾಜು ಅವರೇ, ಏನು ಸಮಸ್ಯೆ? ಒಂದು ಕಾಲಮಿತಿ ಇರಬೇಕು' ಎಂದು ನ್ಯಾಯಮೂರ್ತಿ ಕೌಲ್ ಹೇಳಿದರು. 'ನಾವು ಪೂರಕವಾಗಿ ಕೆಲಸ ಮಾಡುತ್ತಿದ್ದೇವೆ, ಕೆಲವು ಮಾರ್ಗಸೂಚಿಗಳು ಬರಲಿವೆ' ಎಂದು ರಾಜು ಸ್ಪಷ್ಟಪಡಿಸಿದರು.

ಚೋಕ್ಸಿ ದಂಪತಿ ವಿರುದ್ಧದ ಎಫ್‌ಐಆರ್ ರದ್ದತಿ ಆದೇಶ ವಜಾ

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶಭ್ರಷ್ಟ ಉದ್ಯಮಿ ಮೆಹುಲ್ ಚೋಕ್ಸಿ ಮತ್ತು ಅವರ ಪತ್ನಿ ಪ್ರೀತಿ ಚೋಕ್ಸಿ ಅವರ ವಿರುದ್ಧ ಕ್ರಿಮಿನಲ್ ವಿಶ್ವಾಸದ್ರೋಹ ಮತ್ತು ವಂಚನೆ ಪ್ರಕರಣಕ್ಕೆ ಸಂಬಂಧಿಸಿ ದಾಖಲಾಗಿದ್ದ ಎಫ್‌ಐಆರ್ ರದ್ದುಪಡಿಸಿ ಗುಜರಾತ್ ಹೈಕೋರ್ಟ್ ನೀಡಿದ್ದ ಆದೇಶವನ್ನು ಸುಪ್ರೀಂ ಕೋರ್ಟ್ ಬುಧವಾರ ವಜಾಗೊಳಿಸಿದೆ.

2013ರಲ್ಲಿ ಗೀತಾಂಜಲಿ ಜ್ಯೂವೆಲ್ಲರಿ ರಿಟೇಲ್ ಲಿಮಿಟೆಡ್ ಜೊತೆ ಮಾಡಿಕೊಂಡಿದ್ದ ಒಪ್ಪಂದದಂತೆ 24 ಕ್ಯಾರಟ್ ಚಿನ್ನದ ಗಟ್ಟಿಗಳನ್ನು ಹಿಂದಿರುಗಿಸಲು ವಿಫಲರಾದ ಪ್ರಕರಣದಲ್ಲಿ ಗುಜರಾತ್‌ನ ಗಾಂಧಿನಗರದ ಪೊಲೀಸ್ ಠಾಣೆಯೊಂದರಲ್ಲಿ 2015ರ ಜನವರಿಯಲ್ಲಿ ಎಫ್‌ಐಆರ್ ದಾಖಲಿಸಲಾಗಿತ್ತು. ಈ ಪ್ರಕರಣದ ತನಿಖೆಯನ್ನು ಮುಂದುವರೆಸುವಂತೆ ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಮತ್ತು ಎಸ್‌ವಿಎನ್ ಭಟ್ಟಿ ಅವರಿದ್ದ ನ್ಯಾಯಪೀಠವು ಗುಜರಾತ್ ಪೊಲೀಸರಿಗೆ ನಿರ್ದೇಶಿಸಿದೆ. ಎಫ್‌ಐಆರ್ ರದ್ದುಪಡಿಸುವ ಮೊದಲು ಪ್ರಕರಣದ ವಿಚಾರವಾಗಿ ಹೈಕೋರ್ಟ್ ಕೂಲಂಕಷವಾಗಿ ಪರಿಶೀಲನೆ ನಡೆಸಿಲ್ಲ ಮತ್ತು ಅಂತಿಮ ನಿಲುವನ್ನು ದಾಖಲಿಸಿಲ್ಲ ಎಂದು ನ್ಯಾಯಪೀಠ ತಿಳಿಸಿದೆ.

ತನಿಖಾಧಿಕಾರಿಗಳು 17 ಜನರನ್ನು ವಿಚಾರಣೆಗೆ ಒಳಪಡಿಸಿದ್ದಾರೆ. ಅಪರಾಧ ಪ್ರಕ್ರಿಯಾ ಸಂಹಿತೆ– 1973ರ ಸೆಕ್ಷನ್ 161 ಮತ್ತು ಸೆಕ್ಷನ್ 164ರ ಅಡಿ ಹೇಳಿಕೆ ದಾಖಲಿಸಿರುವುದಾಗಿ 2016ರ ಸೆಪ್ಟೆಂಬರ್ 14ರಂದು ಹೈಕೋರ್ಟ್ ನೀಡಿರುವ ಆದೇಶದಲ್ಲಿ ಹೇಳಲಾಗಿದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ರಾಜಸ್ಥಾನದಲ್ಲಿ ಪ್ರತಿಭಟನೆ, ಬಂದ್

ಪ್ರಜಾವಾಣಿ ವಾರ್ತೆ

ಜೈಪುರ: ರಾಷ್ಟ್ರೀಯ ರಜಪೂತ ಕರ್ಣಿ ಸೇನಾ ಮುಖ್ಯಸ್ಥ ಸುಖದೇವ್ ಸಿಂಗ್ ಗೊಗಾಮೆಡಿ ಅವರ ಹತ್ಯೆ ಖಂಡಿಸಿ ರಾಜಸ್ಥಾನದಾದ್ಯಂತ ಬುಧವಾರ ಬಂದ್ ಆಚರಿಸಲಾಯಿತು.

ರಾಷ್ಟ್ರೀಯ ರಜಪೂತ ಕರ್ಣಿ ಸೇನಾ ರಾಜ್ಯದಾದ್ಯಂತ ಬಂದ್‌ಗೆ ಕರೆ ನೀಡಿತ್ತು. ಕರ್ಣಿ ಸೇನಾ ಬೆಂಬಲಿಗರು ಹಲವೆಡೆ ರಸ್ತೆ ತಡೆ ನಡೆಸಿದರು. ನಗರದ ವಿವಿಧೆಡೆ ತೆರಳಿ ಅಂಗಡಿಗಳನ್ನು ಮುಚ್ಚಿಸಿದರು. ರೈಲ್ವೆ ಹಾಗೂ ಬಸ್ ಸೇವೆಗೆ ಅಡ್ಡಿಪಡಿಸಿದರು. ಬಂದ್ ಕಾರಣ ಶಾಲಾ ಕಾಲೇಜುಗಳಿಗೆ ರಜೆ ಘೋಷಿಸಲಾಗಿತ್ತು.

ಉದಯಪುರಲ್ಲಿ ಜಿಲ್ಲಾಧಿಕಾರಿ ಕಚೇರಿವರೆಗೆ ಸಾಮೂಹಿಕ ರ‍್ಯಾಲಿ ನಡೆಸಿ, ದುಷ್ಕರ್ಮಿಗಳನ್ನು ಬಂಧಿಸುವಂತೆ ಆಗ್ರಹಿಸಿದರು.

ಭಿಲ್ವಾರ ಹಾಗೂ ಜೋಧಪುರಲ್ಲೂ ಪ್ರತಿಭಟನಕಾರರು ರಸ್ತೆ ತಡೆ ನಡೆಸಿ, ರೈಲು ಹಾಗೂ ಬಸ್ ಸೇವೆಗೆ ಅಡ್ಡಿಪಡಿಸಿದರು. ಸವಾಯ್ ಮಾಧೋಪುರ್, ಬುಂದಿ, ಅಜ್ಮೀರ್ ಚಿತ್ತೂರುಗಢ ನಗರಗಳಲ್ಲಿ ನಡೆದ ರ‍್ಯಾಲಿಗಳಿಂದಾಗಿ ಜನಜೀವನ ಅಸ್ತವ್ಯಸ್ತವಾಯಿತು.



ರಾಷ್ಟ್ರೀಯ ರಜಪೂತ ಕರ್ಣಿ ಸೇನಾ ಮುಖ್ಯಸ್ಥ ಸುಖದೇವ್ ಸಿಂಗ್ ಗೊಗಾಮೆಡಿ ಹತ್ಯೆ ಖಂಡಿಸಿ ಸಂಘಟನೆಯ ಕಾರ್ಯಕರ್ತರು ಜೈಪುರದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು ಪಿಟಿಐ ಚಿತ್ರ

ಎಸ್‌ಐಟಿ ರಚನೆ: ರಾಜಸ್ಥಾನ ಡಿಜಿಪಿ ಉಮೇಶ್ ಮಿಶ್ರಾ ಅವರು ಹತ್ಯೆ ಪ್ರಕರಣದ ತನಿಖೆಗಾಗಿ ಹೆಚ್ಚುವರಿ ಪೊಲೀಸ್ ಕಮಿಷನರ್ ಕೈಲಾಶ್ ಚಂದ್ ಬಿಷ್ಣೋಯ್ ಅವರ ನೇತೃತ್ವದಲ್ಲಿ ವಿಶೇಷ ತನಿಖಾ ತಂಡವನ್ನು (ಎಸ್‌ಐಟಿ) ರಚಿಸಿದ್ದಾರೆ.

ಆರೋಪಿಗಳನ್ನು ಜೈಪುರ ನಿವಾಸಿ ರೋಹಿತ್ ರಾಥೋರ್ ಮಕ್ರಾನಾ ಹಾಗೂ ಹರಿಯಾಣದ ನಿತಿನ್ ಫೌಜಿ ಎಂದು ಗುರುತಿಸಲಾಗಿದೆ.

ಸಂಸದರ ರಾಜೀನಾಮೆ

ಒಂದನೇ ಪುಟದಿಂದ

ಶಿವರಾಜ್ ಸಿಂಗ್ ಚೌಹಾಣ್ ಜೊತೆಯಲ್ಲಿ ತೋಮರ್ ಮತ್ತು ಪ್ರಹ್ಲಾದ್ ಪಟೇಲ್ ಸಹ ಮಧ್ಯಪ್ರದೇಶದ ಮುಖ್ಯಮಂತ್ರಿ ಸ್ಪರ್ಧೆಯಲ್ಲಿರುವ ಪ್ರಮುಖ ನಾಯಕರು ಎನ್ನಲಾಗಿದೆ. ತೋಮರ್ ಅವರು ಕೇಂದ್ರ ಸಂಪುಟದ ಸದಸ್ಯರೂ ಹೌದು. ಸಂಪುಟದಲ್ಲಿ ಅವರ ಸ್ಥಾನಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು ಹೊಸಬರನ್ನು ತರಲಿದ್ದಾರೆಯೇ ಎಂಬ ಪ್ರಶ್ನೆಯನ್ನು ಮೂಡಿಸಿದೆ.

ರಾಜೀನಾಮೆ ನೀಡಿರುವ ರಾಜಸ್ಥಾನದ ಸಂಸದರ ಪೈಕಿ ಒಬ್ಬರನ್ನು ಮುಖ್ಯಮಂತ್ರಿಯನ್ನಾಗಿ ಮಾಡಲಾಗುತ್ತದೆ ಎಂಬ ನಿರೀಕ್ಷೆ ಪಕ್ಷದೊಳಗೇ ಇದೆ.

ಛತ್ತೀಸಗಢದಲ್ಲೂ ಇದೇ ಲೆಕ್ಕಾಚಾರಗಳು ನಡೆಯುತ್ತಿವೆ. ಗೋಮತಿ ಸಾಯ್ ಅವರು ಇತರ ಹಿಂದುಳಿದ ವರ್ಗಗಳಿಗೆ (ಒಬಿಸಿ) ಸೇರಿದ ನಾಯಕರು ಮತ್ತು ಅರುಣ್ ಸಾವ್ ಅವರು ಪರಿಶಿಷ್ಟ ವರ್ಗಗಳಿಗೆ ಸೇರಿದವರು. ಇವರಿಬ್ಬರ ಸಾಮಾಜಿಕ ಹಿನ್ನೆಲೆ, ವ್ಯಕ್ತಿತ್ವ ಮತ್ತು ಕಿರಿ ವಯಸ್ಸಿನ ಕಾರಣ ಅವರಿಬ್ಬರಲ್ಲಿ ಒಬ್ಬರನ್ನು ಮುಖ್ಯಮಂತ್ರಿ ಹುದ್ದೆಗೇರಿಸುವ ನಿರೀಕ್ಷೆ ಇದೆ.

ಲೋಕಸಭೆ ಚುನಾವಣೆಗೆ ಇನ್ನು ಕೇವಲ ಐದು ತಿಂಗಳಿದ್ದು, ತನ್ನ ಸಾಮಾಜಿಕ ಕಾರ್ಯಸೂಚಿ ಕುರಿತು ಬಿಜೆಪಿಯು ಮುಖ್ಯಮಂತ್ರಿ ಆಯ್ಕೆ ಮೂಲಕವೇ ದೊಡ್ಡ ಮಟ್ಟದಲ್ಲಿ ಸಂದೇಶ ರವಾನಿಸುವ ನಿರೀಕ್ಷೆ ಇದೆ. ಸಾಮಾಜಿಕ ಸಮೀಕರಣದಲ್ಲಿ ಸಮತೋಲನ ಸಾಧಿಸುವ ಉದ್ದೇಶದಿಂದ ಮೂರು ರಾಜ್ಯಗಳಲ್ಲಿ ಉಪಮುಖ್ಯಮಂತ್ರಿ ಸ್ಥಾನ ಸೃಷ್ಟಿಸುವ ಸಾಧ್ಯತೆಯನ್ನು ಮೂಲಗಳು ಅಲ್ಲಗಳೆದಿಲ್ಲ.

ಲೋಕಸಭೆಯಲ್ಲಿ ಅಮಿತ್ ಶಾ ವಾಗ್ದಾಳಿ, ವಿರೋಧ ಪಕ್ಷದ ಸದಸ್ಯರಿಂದ ಸಭಾತ್ಯಾಗ

ನೆಹರೂ ಪ್ರಮಾದದಿಂದಾಗಿ ಕಾಶ್ಮೀರ ಸಮಸ್ಯೆ

ನವದೆಹಲಿ (ಪಿಟಿಐ): ಭಾರತದ ಮೊದಲ ಪ್ರಧಾನಿ ಜವಾಹರಲಾಲ್ ನೆಹರೂ ಅವರ ಎರಡು ಪ್ರಮುಖ ಪ್ರಮಾದಗಳಿಂದಾಗಿ ಜಮ್ಮು ಮತ್ತು ಕಾಶ್ಮೀರದ ಜನ ಕಷ್ಟ ಅನುಭವಿಸಬೇಕಾಯಿತು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ದೂರಿದರು. ಇಡೀ ಕಾಶ್ಮೀರವನ್ನು ಗೆದ್ದುಕೊಳ್ಳುವ ಮೊದಲೇ ಕದನ ವಿರಾಮ ಘೋಷಿಸಿದ್ದು ಹಾಗೂ ಸಮಸ್ಯೆಯನ್ನು ವಿಶ್ವಸಂಸ್ಥೆಯ ಅಂಗಳಕ್ಕೆ ಒಯ್ದಿದ್ದು ಆ ಪ್ರಮಾದಗಳು ಎಂದು ಅವರು ಹೇಳಿದರು.



ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಲೋಕಸಭೆಯಲ್ಲಿ ಬುಧವಾರ ಮಾತನಾಡಿದರು. –ಪಿಟಿಐ ಚಿತ್ರ

ಜಮ್ಮು ಮತ್ತು ಕಾಶ್ಮೀರ ಮೀಸಲಾತಿ (ತಿದ್ದುಪಡಿ) ಮಸೂದೆ, ಜಮ್ಮು ಮತ್ತು ಕಾಶ್ಮೀರ ಮರುವಿಂಗಡಣೆ (ತಿದ್ದುಪಡಿ) ಮಸೂದೆ ಮೇಲಿನ ಚರ್ಚೆಗೆ ಉತ್ತರ ನೀಡಿದ ಶಾ ಅವರು, ನೆಹರೂ ಅವರನ್ನು ಗುರಿಯಾಗಿಸಿ ವಾಗ್ದಾಳಿ ನಡೆಸಿದರು. ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಕಾಂಗ್ರೆಸ್ ಮುಖಂಡ ಅಧೀರ್ ರಂಜನ್ ಚೌಧರಿ, ಕಾಶ್ಮೀರದ ವಿಚಾರ ಪ್ರಸ್ತಾಪವಾದಾಗಲೆಲ್ಲ ಬಿಜೆಪಿ ನಾಯಕರು ನೆಹರೂ ಅವರನ್ನು ಅನಗತ್ಯವಾಗಿ ಟೀಕಿಸುತ್ತಾರೆ ಎಂದರು. ಎರಡೂ ಮಸೂದೆಗಳಿಗೆ ಲೋಕಸಭೆಯು ಅಂಗೀಕಾರ ನೀಡಿದೆ.

ನೆಹರೂ ಅವರು ಸರಿಯಾದ ಹೆಜ್ಜೆ ಇರಿಸಿದ್ದಿದ್ದರೆ ಕಾಶ್ಮೀರದ ಬಹುದೊಡ್ಡ ಭಾಗವೊಂದನ್ನು ಬಿಟ್ಟುಕೊಡ ಬೇಕಾಗಿ ಬರುತ್ತಿರಲಿಲ್ಲ, ಪಾಕ್ ಆಕ್ರಮಿತ ಕಾಶ್ಮೀರವು ಭಾರತದ ಭೂಭಾಗ ಆಗಿರುತ್ತಿತ್ತು ಎಂದು ಶಾ ಹೇಳಿದರು. 'ನೆಹರೂ ಅವರ ಅವಧಿಯಲ್ಲಿ ಆದ ಎರಡು ಪ್ರಮಾದಗಳು, ಅವರ ತೀರ್ಮಾನದ ಕಾರಣದಿಂದಾಗಿಯೇ ಆದವು ಎಂಬುದನ್ನು ನಾನು ಜವಾಬ್ದಾರಿಯಿಂದಲೇ ಹೇಳುತ್ತಿದ್ದೇನೆ' ಎಂದರು.

'ನೆಹರೂ ಅವರು ಮೂರು ದಿನ ತಡವಾಗಿ ಕದನವಿರಾಮ ಘೋಷಿಸಿದ್ದಿದ್ದರೆ ಪಾಕ್ ಆಕ್ರಮಿತ ಕಾಶ್ಮೀರವು ಭಾರತದ ಭಾಗ ಆಗಿರುತ್ತಿತ್ತು' ಎಂದು ಗೃಹ ಸಚಿವರು ಹೇಳಿದರು. ಶಾ ಅವರು ನೆಹರೂ ಬಗ್ಗೆ ಆಡಿದ ಮಾತುಗಳಿಗೆ ವಿರೋಧ ಪಕ್ಷಗಳ ಸದಸ್ಯರು ಆಕ್ಷೇಪಿಸಿ, ಸಭಾತ್ಯಾಗ ನಡೆಸಿದರು. ನಂತರ ಅವರು ತಮ್ಮ ಸ್ಥಾನಗಳಿಗೆ ಮರಳಿದರು.

ಗೃಹ ಸಚಿವರು 'ಹಿಮಾಲಯನ್ ಬ್ಲಂಡರ್' (ನೆಹರೂ ಅವರ ಕೆಲವು ನಡೆಗಳ ಪರಿಣಾಮವಾಗಿ 1962ರಲ್ಲಿ ಚೀನಾದೊಂದಿಗೆ ಯುದ್ಧ ನಡೆಸಬೇಕಾದ ಸನ್ನಿವೇಶ ಸೃಷ್ಟಿಯಾಗಿದ್ದು) ಬಗ್ಗೆಯೂ ಮಾತನಾಡಬೇಕು ಎಂದು ಬಿಜೆಡಿ ಸದಸ್ಯ ಭರ್ತೃಹರಿ ಮಹ್ತಾಬ್ ಆಗ್ರಹಿಸಿದರು.

'ನಾನು ಎರಡು ಪ್ರಮಾದಗಳ ಬಗ್ಗೆ ಹೇಳಿದ್ದಕ್ಕೆ ಅವರು ಬೇಸರಗೊಂಡಿದ್ದಾರೆ. ಹಿಮಾಲಯನ್ ಬ್ಲಂಡರ್ ಪದ ಬಳಸಿದ್ದಿದ್ದರೆ ಅವರು ತಮ್ಮ ಸ್ಥಾನಗಳಿಗೆ ರಾಜೀನಾಮೆ ನೀಡಿಬಿಡುತ್ತಿದ್ದರು' ಎಂದು ಶಾ ಚಟಾಕಿ ಹಾರಿಸಿದರು.

ಕದವಿರಾಮ ಘೋಷಿಸಿದ್ದು ತಪ್ಪು ಎಂದು ನೆಹರೂ ಅವರು ನಂತರದಲ್ಲಿ ಹೇಳಿದ್ದರು ಎಂದು ಶಾ ಉಲ್ಲೇಖಿಸಿದರು.

ಎರಡು ಮಸೂದೆಗಳ ಪೈಕಿ ಒಂದು ಮಸೂದೆಯು, ಕಾಶ್ಮೀರಿ ವಲಸಿಗ ಸಮುದಾಯದ ಇಬ್ಬರನ್ನು ಅಲ್ಲಿನ ವಿಧಾನಸಭೆಗೆ ನಾಮನಿರ್ದೇಶನ ಮಾಡಲು ಅವಕಾಶ ಕಲ್ಪಿಸುತ್ತದೆ. ಜಮ್ಮು ಮತ್ತು ಕಾಶ್ಮೀರದ ವಿಧಾನಸಭೆಯಲ್ಲಿ ಒಂದು ಸ್ಥಾನವನ್ನು ಪಾಕ್ ಆಕ್ರಮಿತ ಕಾಶ್ಮೀರದಿಂದ ನೆಲೆ ಕಳೆದುಕೊಂಡು ಬಂದವರಿಗೆ ಮೀಸಲಿಡಲು ಮಸೂದೆ ಅವಕಾಶ ಕಲ್ಪಿಸಿದೆ ಎಂದು ಶಾ ವಿವರಿಸಿದರು.

'ಪಾಕ್ ಆಕ್ರಮಿತ ಕಾಶ್ಮೀರ ನಮ್ಮದು'

'ಜಮ್ಮು ಮತ್ತು ಕಾಶ್ಮೀರದ ಕ್ಷೇತ್ರ ಮರುವಿಂಗಡಣೆ ಕಾರ್ಯ ಪೂರ್ಣಗೊಂಡ ನಂತರದಲ್ಲಿ ಜಮ್ಮು ಪ್ರದೇಶದಲ್ಲಿ 43 ಕ್ಷೇತ್ರಗಳು ಇರಲಿವೆ, ಕಾಶ್ಮೀರ ಕಣಿವೆಯಲ್ಲಿ 47 ಸ್ಥಾನಗಳು ಇರಲಿವೆ' ಎಂದು ಅಮಿತ್ ಶಾ ಹೇಳಿದರು.

'ಪಾಕ್ ಆಕ್ರಮಿತ ಕಾಶ್ಮೀರದ ಜನರಿಗಾಗಿ 24 ಸ್ಥಾನಗಳನ್ನು ಮೀಸಲಾಗಿ ಇಡಲಾಗಿದೆ. ಏಕೆಂದರೆ ಅದು ನಮ್ಮ ಭೂಭಾಗ' ಎಂದು ಶಾ ಹೇಳಿದರು.

ಜಮ್ಮು ಮತ್ತು ಕಾಶ್ಮೀರದಲ್ಲಿ ಭಯೋತ್ಪಾದನಾ ಕೃತ್ಯಗಳು ಶೂನ್ಯಕ್ಕೆ ಇಳಿಯಬೇಕು ಎಂಬ ಗುರಿಯನ್ನು ಹೊಂದಲಾಗಿದ್ದು, ಅದನ್ನು 2026ಕ್ಕೆ ಮೊದಲು ಸಾಧಿಸಿ ತೋರಿಸಲಾಗುತ್ತದೆ ಎಂದು ಹೇಳಿದರು.

ಲೋಕಸಭಾ ಕಲಾಪಕ್ಕೆ ಕನ್ನಡದ ಕಂಪು

ಪ್ರಜಾವಾಣಿ ವಾರ್ತೆ

ನವದೆಹಲಿ: ಲೋಕಸಭೆಯ ಅಧಿವೇಶನದಲ್ಲಿ ಇನ್ನು ಮುಂದೆ ಕನ್ನಡದ ಕಂಪು ಇನ್ನಷ್ಟು ಇರಲಿದೆ. ಲೋಕಸಭೆಯ ಪ್ರತಿಯೊಂದು ಕಾರ್ಯಕಲಾಪವು ಕನ್ನಡ ಸೇರಿದಂತೆ 21 ಭಾಷೆಗಳಿಗೆ ಭಾಷಾಂತರಗೊಳ್ಳಲಿದೆ.

ಕಾರ್ಯಕಲಾಪಗಳನ್ನು ಭಾರತೀಯ ಭಾಷೆಗಳಲ್ಲಿ ಭಾಷಾಂತರ ಮಾಡಿಸಲು ಹೊಸ ಸಂಸತ್ ಭವನದಲ್ಲಿ ವ್ಯವಸ್ಥೆ ಮಾಡಲಾಗಿದೆ. ಅದಕ್ಕಾಗಿ ಸಂವಿಧಾನದ ಎಂಟನೇ ಪರಿಚ್ಛೇದಕ್ಕೆ ಸೇರ್ಪಡೆಯಾಗಿರುವ ಎಲ್ಲ ಭಾಷೆಗಳಿಗೂ ತಲಾ ಐದು ಕನ್ಸಲ್ಟಂಟ್ ಹುದ್ದೆಗಳನ್ನು ಸೃಜಿಸಲಾಗಿದೆ.

ಕೊಂಕಣಿ ಸೇರಿದಂತೆ ಹಲವು ಭಾಷೆಗಳ 64 ಭಾಷಾಂತರಕಾರರಿಗೆ ಈ ವರ್ಷದ ಜೂನ್–ಜುಲೈ ತಿಂಗಳಲ್ಲಿ ತರಬೇತಿ ನೀಡಲಾಗಿದೆ. ಈ ಪೈಕಿ, ಕನ್ನಡ ಸೇರಿದಂತೆ 10 ಭಾಷೆಗೆ ಕಾರ್ಯ ಕಲಾಪವು ಮುಂದಿನ ಸೋಮವಾರ ದಿಂದ ಭಾಷಾಂತರಗೊಳ್ಳಲಿದೆ.

ಇದಲ್ಲದೆ, ಕಾರ್ಯಕಲಾಪ ಪಟ್ಟಿಯು ಈ ಮುನ್ನ ಇಂಗ್ಲಿಷ್ ಅಥವಾ ಹಿಂದಿಯಲ್ಲಿ ಲಭ್ಯವಾಗುತ್ತಿತ್ತು. ಇದೀಗ, ಕನ್ನಡದಲ್ಲಿ ಕಾರ್ಯಕಲಾಪ ಪಟ್ಟಿ ಲಭ್ಯವಾಗಲಿದೆ.

ಪ್ರಸ್ತುತ ಜಾರಿಯಲ್ಲಿರುವ ಭಾಷಾಂತರ ವ್ಯವಸ್ಥೆಯು ಏಕಮುಖವಾಗಿತ್ತು. ಅಂದರೆ ಕರ್ನಾಟಕದ ಸಂಸದರು ಕನ್ನಡದಲ್ಲಿ ಮಾತನಾಡಿದಾಗ ಅದನ್ನು ಇಂಗ್ಲಿಷ್ ಅಥವಾ ಹಿಂದಿಗೆ ಭಾಷಾಂತರ ಮಾಡಲಾಗುತ್ತಿತ್ತು. ಹೊಸ ಭಾಷಾಂತರ ವ್ಯವಸ್ಥೆಯಲ್ಲಿ ಹಿಂದಿ, ಇಂಗ್ಲಿಷ್ ಸೇರಿ ಇತರ ಭಾಷೆಗಳಲ್ಲಿ ನಡೆಯುವ ಸಂಸತ್ತಿನ ಕಲಾಪದ ಸಂಪೂರ್ಣ ಚರ್ಚೆಗಳನ್ನು ಕನ್ನಡದಲ್ಲಿ ಕೇಳಿಸಿಕೊಳ್ಳಲು ಅವಕಾಶ ಕಲ್ಪಿಸಲಾಗುತ್ತಿದೆ. ಉದಾಹರಣೆಗೆ, ಈಶಾನ್ಯ ರಾಜ್ಯದ ಸಂಸದರೊಬ್ಬರು ತಮ್ಮ ಮಾತೃ ಭಾಷೆಯಲ್ಲಿ ಸದನದಲ್ಲಿ ಮಾತನಾಡಿದರೆ ಅದು ಇಂಗ್ಲಿಷ್ ಹಾಗೂ ಹಿಂದಿಗೆ ಭಾಷಾಂತರಗೊಳ್ಳಲಿದೆ. ಅದೇ ಸಮಯದಲ್ಲಿ ಪ್ರಾದೇಶಿಕ ಭಾಷೆಗೆ ಭಾಷಾಂತರಕಾರರು ಅನುವಾದ ಮಾಡಲಿದ್ದಾರೆ.

ಕ್ಷಮೆ ಕೋರಿದ ಸಂಸದ ಸೆಂಥಿಲ್‌ಕುಮಾರ್

ಉತ್ತರ ಮತ್ತು ದಕ್ಷಿಣ ಭಾರತದ ನಡುವಿನ ವ್ಯತ್ಯಾಸ ಕುರಿತು ವಿವಾದಿತ ಮಾತು

ನವದೆಹಲಿ (ಪಿಟಿಐ): ಉತ್ತರ ಮತ್ತು ದಕ್ಷಿಣ ಭಾರತದ ನಡುವಿನ ವ್ಯತ್ಯಾಸ ಕುರಿತು ತಾವು ಆಡಿದ್ದ ವಿವಾದಿತ ಮಾತುಗಳಿಗೆ ಡಿಎಂಕೆ ಸಂಸದ ಡಿ.ಎನ್.ವಿ. ಸೆಂಥಿಲ್ ಕುಮಾರ್ ಬುಧವಾರ ಕ್ಷಮೆ ಯಾಚಿಸಿದ್ದಾರೆ. ಅವರ ಮಾತಿಗೆ ತೀವ್ರ ವಿರೋಧ ವ್ಯಕ್ತವಾಗಿತ್ತು.

ಕುಮಾರ್ ಅವರು ಬಿಜೆಪಿ ವಿರುದ್ಧ ಮಾತನಾಡುವ ಸಂದರ್ಭದಲ್ಲಿ ಹಿಂದಿ ಭಾಷಿಕ ಪ್ರದೇಶಗಳ ಬಗ್ಗೆ ನಿಂದನಾತ್ಮಕ ಪದ ಬಳಸಿದ್ದರು. ಅವರ ಮಾತುಗಳ ಪರಿಣಾಮವಾಗಿ ಸದನದಲ್ಲಿ ಗದ್ದಲ ಉಂಟಾಗಿತ್ತು, ಕಲಾಪವನ್ನು ಮುಂದೂಡಬೇಕಾಗಿ ಬಂದಿತ್ತು. ಅವರು ಬಳಸಿದ ಕೆಲವು ಪದಗಳನ್ನು ಸ್ಪೀಕರ್ ಓಂ ಬಿರ್ಲಾ ಅವರು ಲೋಕಸಭೆಯ ಕಡತಗಳಿಂದ ತೆಗೆದುಹಾಕಲು ಆದೇಶಿಸಿದ್ದರು.

ಬುಧವಾರ ಶೂನ್ಯವೇಳೆಗೆ ಸದನವು ಮತ್ತೆ ಸೇರಿದಾಗ, ಕೇಂದ್ರ ಸಚಿವ ಅರ್ಜುನ್ ರಾಮ್ ಮೇಘವಾಲ್ ಅವರು ಕುಮಾರ್ ಆಡಿದ್ದ ಮಾತಿನ ಕುರಿತು ಪ್ರಸ್ತಾಪಿಸಿದರು. ಡಿಎಂಕೆ ನಾಯಕ ಟಿ.ಆರ್. ಬಾಲು ಮತ್ತು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು, ಕುಮಾರ್ ಆಡಿರುವ ಮಾತುಗಳಿಗೆ ಸಹಮತ ಹೊಂದಿದ್ದಾರೆಯೇ ಎಂದು ಪ್ರಶ್ನಿಸಿದರು.

'ಮೂರು ರಾಜ್ಯಗಳಲ್ಲಿ ಮತದಾರರು ಬಿಜೆಪಿಯನ್ನು ಗೆಲ್ಲಿಸಿದ್ದಾರೆ. ಇವರು ಇಲ್ಲಿ ಇಂತಹ ಮಾತು ಆಡುತ್ತಿದ್ದಾರೆ. ಇದು ಭಾರತವನ್ನು ವಿಭಜಿಸುವ ಆಲೋಚನೆ. ಇದಕ್ಕೆ ನಾವು ಅವಕಾಶ ಕೊಡುವುದಿಲ್ಲ' ಎಂದು ಮೇಘವಾಲ್ ಹೇಳಿದರು. ಕುಮಾರ್ ಆಡಿರುವ ಮಾತುಗಳು ಸರಿಯಲ್ಲ ಎಂದು ಬಾಲು ಅವರೂ ಹೇಳಿದರು.

ಅಲ್ಲದೆ, ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು ಕುಮಾರ್ ಅವರಿಗೆ ಎಚ್ಚರಿಕೆ ನೀಡಿದ್ದಾರೆ ಎಂದು ಕೂಡ ಬಾಲು ತಿಳಿಸಿದರು. ಇದಾದ ನಂತರ ಕುಮಾರ್ ಅವರು ತಮ್ಮ ಮಾತಿಗೆ ವಿಷಾದ ವ್ಯಕ್ತಪಡಿಸಿದರು. ತಮ್ಮ ಮಾತುಗಳಿಂದ ಜನರ ಭಾವನೆಗಳಿಗೆ ನೋವಾಗಿದ್ದರೆ ಮಾತನ್ನು ಹಿಂಪಡೆಯುವುದಾಗಿ ಹೇಳಿದರು.

ಕುಮಾರ್ ಅವರು ತಮ್ಮ ಮಾತುಗಳಿಗೆ ಮಂಗಳವಾರವೂ ಕ್ಷಮೆ ಯಾಚಿಸಿದ್ದರು. 'ಈಚೆಗೆ ನಡೆದ ಐದು ರಾಜ್ಯಗಳ ಚುನಾವಣಾ ಫಲಿತಾಂಶದ ಬಗ್ಗೆ ಮಾತನಾಡುವಾಗ ನಾನು ಪದವೊಂದನ್ನು ಸೂಕ್ತವಲ್ಲದ ರೀತಿಯಲ್ಲಿ ಬಳಸಿದ್ದೇನೆ. ಆ ಪದವನ್ನು ನಾನು ಯಾವುದೇ ಉದ್ದೇಶದೊಂದಿಗೆ ಬಳಸಿಲ್ಲ. ತಪ್ಪು ಸಂದೇಶ ರವಾನಿಸಿದ್ದಕ್ಕಾಗಿ ನಾನು ಕ್ಷಮೆ ಯಾಚಿಸುತ್ತಿದ್ದೇನೆ' ಎಂದು ಕುಮಾರ್ ಅವರು ಎಕ್ಸ್ ವೇದಿಕೆಯಲ್ಲಿ ಬರೆದಿದ್ದರು.

> ಅವರು ದೇಶದ ಸಂಸ್ಕೃತಿಯನ್ನು ಅವಮಾನಿಸುವುದನ್ನು ಮುಂದುವರಿಸಿದರೆ, 'ಇಂಡಿಯಾ' ಮೈತ್ರಿಕೂಟವು ದಕ್ಷಿಣ ಭಾರತದಿಂದಲೂ ಅಳಿಸಿಹೋಗುತ್ತದೆ.
> **ಜಿ.ವಿ.ಎಲ್. ನರಸಿಂಹ ರೆಡ್ಡಿ,** ಬಿಜೆಪಿ ಮುಖಂಡ

> ಹಿಂದಿ ಭಾಷಿಕ ಪ್ರದೇಶದಲ್ಲಿ ಬಿಜೆಪಿಗೆ ಸವಾಲು ಒಡ್ಡುವ ಇಂಡಿಯಾ ಮೈತ್ರಿಕೂಟದ ಪ್ರಯತ್ನಗಳನ್ನು ಬೇಜವಾಬ್ದಾರಿ ಹೇಳಿಕೆಗಳು ದುರ್ಬಲಗೊಳಿಸುತ್ತವೆ ಎಂಬುದನ್ನು ಡಿಎಂಕೆ ಅರಿಯಬೇಕು.
> **ಮಿಲಿಂದ್ ದೇವ್ರಾ,** ಕಾಂಗ್ರೆಸ್ ಮುಖಂಡ

ಸ್ಟಾಲಿನ್‌ಗೆ ರಾಜೀವ್ ಪ್ರಶ್ನೆ

ನವದೆಹಲಿ (ಪಿಟಿಐ): ಸನಾತನ ಧರ್ಮದ ವಿರುದ್ಧವಾಗಿ ಮಾತನಾಡಿದ್ದ ಡಿಎಂಕೆ ನಾಯಕರಿಗೆ ಕ್ಷಮೆ ಯಾಚಿಸುವಂತೆ ಪಕ್ಷದ ಮುಖ್ಯಸ್ಥ ಎಂ.ಕೆ. ಸ್ಟಾಲಿನ್ ಸೂಚಿಸಲಿದ್ದಾರೆಯೇ ಎಂದು ಕೇಂದ್ರ ಸಚಿವ ರಾಜೀವ್ ಚಂದ್ರಶೇಖರ್ ಪ್ರಶ್ನಿಸಿದ್ದಾರೆ.

'ಸ್ಟಾಲಿನ್ ಅವರು ಸೆಂಥಿಲ್ ಕುಮಾರ್ ಅವರಿಗೆ ಇಂತಹ ಹೇಳಿಕೆ ನೀಡಬಾರದು ಎಂದು ಸೂಚಿಸಿದ್ದಾರೆ ಎಂಬುದಾಗಿ ಟಿ.ಆರ್. ಬಾಲು ಹೇಳಿದ್ದಾರೆ. ಆದರೆ, ಉದಯನಿಧಿ ಸ್ಟಾಲಿನ್ ಅವರ ಹೇಳಿಕೆ ಏನಾಯಿತು? ಉದಯನಿಧಿ ಅವರಿಗೆ ಕ್ಷಮೆ ಕೇಳುವಂತೆ ಸ್ಟಾಲಿನ್ ಸೂಚಿಸಿದ್ದಾರೆಯೇ? ಎ. ರಾಜಾ ಬಗ್ಗೆ ಏನು? ಅವರಿಗೆ ಕ್ಷಮೆ ಕೇಳುವಂತೆ ಸೂಚಿಸಲಾಗಿದೆಯೇ' ಎಂದು ರಾಜೀವ್ ಅವರು ಸುದ್ದಿಗೋಷ್ಠಿಯಲ್ಲಿ ಪ್ರಶ್ನಿಸಿದರು.

'ಮತಗಳಿಗಾಗಿ ಧರ್ಮದ ಹೆಸರಿನಲ್ಲಿ ಒಡೆಯುವ ಯತ್ನಕ್ಕೆ ಈಗ ಮುಕ್ತಾಯಗೊಂಡಿರುವ ವಿಧಾನಸಭಾ ಚುನಾವಣೆಗಳಲ್ಲಿ ಯಶಸ್ಸು ಸಿಗದ ಕಾರಣಕ್ಕೆ ಇಂಡಿಯಾ ಮೈತ್ರಿಕೂಟದ ಪಕ್ಷಗಳು ವಿಭಜನಕಾರಿ ರಾಜಕಾರಣದಲ್ಲಿ ಹೊಸ ಅಧ್ಯಾಯವೊಂದನ್ನು ಶುರುಮಾಡಿವೆ. ಉತ್ತರ ಭಾರತ ಮತ್ತು ದಕ್ಷಿಣ ಭಾರತದ ಬಗ್ಗೆ ವಿಭಜನಕಾರಿ ಹೇಳಿಕೆ ನೀಡುತ್ತಿವೆ' ಎಂದು ರಾಜೀವ್ ದೂರಿದರು.

'ಒಬಿಸಿ ಮೀಸಲಾತಿ ಹೆಚ್ಚಿಸುವ ಪ್ರಸ್ತಾವ ಇಲ್ಲ'

ನವದೆಹಲಿ (ಪಿಟಿಐ): ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಜನಸಂಖ್ಯೆ ಆಧರಿಸಿ ಇತರ ಹಿಂದುಳಿದ ವರ್ಗಗಳ (ಒಬಿಸಿ) ಮೀಸಲಾತಿಯನ್ನು ಹೆಚ್ಚಿಸುವ ಪ್ರಸ್ತಾವನೆ ಕೇಂದ್ರ ಸರ್ಕಾರದ ಮುಂದೆ ಇಲ್ಲ ಎಂದು ಬುಧವಾರ ರಾಜ್ಯಸಭೆಗೆ ತಿಳಿಸಲಾಯಿತು.

ಕೇಂದ್ರ ಪಂಚಾಯತಿ ರಾಜ್ ರಾಜ್ಯ ಖಾತೆ ಸಚಿವ ಕಪಿಲ್ ಮೋರೇಶ್ವರ್ ಪಾಟೀಲ್ ಅವರು ಈ ಕುರಿತ ಪ್ರಶ್ನೆಯೊಂದಕ್ಕೆ ಪ್ರಶ್ನೋತ್ತರ ಅವಧಿಯಲ್ಲಿ ಉತ್ತರಿಸಿದರು. ಸಂವಿಧಾನದ ವಿಧಿ 243ಡಿ ಅಡಿ ಒಬಿಸಿಗೆ ಮೂರನೇ ಒಂದರಷ್ಟು ಮೀಸಲಾತಿ ನೀಡಲಾಗುತ್ತಿದೆ. ದೇಶದ 21 ರಾಜ್ಯಗಳು ಮೀಸಲಾತಿಯನ್ನು ಶೇ 50ಕ್ಕೆ ಹೆಚ್ಚಿಸಿವೆ ಎಂದರು.

'ಸಂಸದರು ಗೋಮಾತೆ ಮತ್ತು ಸನಾತನಧರ್ಮದ ಬಗ್ಗೆ ನಿಂದನಾತ್ಮಕವಾಗಿ ಮಾತನಾಡಿರುವುದು ದುರದೃಷ್ಟಕರ. ನಾನೂ ಸೇರಿದಂತೆ ಹಲವರು ನಮ್ಮನ್ನು ನಾವು ಸನಾತನಿಗಳು ಎಂದು ಭಾವಿಸಿದ್ದೇವೆ' ಎಂದು ಕಾಂಗ್ರೆಸ್ ಮುಖಂಡ ಮಿಲಿಂದ್ ದೇವ್ರಾ ಹೇಳಿದ್ದರು.

ಸಂಕಷ್ಟದಲ್ಲಿ ಚೆನ್ನೈ ನಾಗರಿಕರು: ಪರಿಹಾರ ಕಾರ್ಯ ಚುರುಕು

ಎಲ್ಲೆಲ್ಲೂ ನೀರು: ವಿದ್ಯುತ್ ವ್ಯತ್ಯಯ

ಚೆನ್ನೈ (ಪಿಟಿಐ): ಎರಡು ದಿನಗಳ ಹಿಂದೆ ಅಬ್ಬರಿಸಿದ್ದ ಚಂಡಮಾರುತ ಮಿಚಾಂಗ್‌ನಿಂದ ಚೆನ್ನೈ ನಗರದ ಹಲವು ಪ್ರದೇಶಗಳು ಮುಳುಗಡೆಯಾಗಿವೆ.

ಪ್ರವಾಹಪೀಡಿತ ಪ್ರದೇಶಗಳಲ್ಲಿ ಜನ ಜೀವನ ಅಸ್ತವ್ಯಸ್ತಗೊಂಡಿದೆ. ವಿದ್ಯುತ್ ವ್ಯವಸ್ಥೆಯೂ ಹದಗೆಟ್ಟಿದ್ದು, ನಾಗರಿಕರು ಮತ್ತಷ್ಟು ಸಂಕಷ್ಟ ಎದುರಿಸುವಂತಾಗಿದೆ. ಹಲವು ಕಡೆಗಳಲ್ಲಿ ವಿದ್ಯುತ್ ಕೇಬಲ್‌ಗಳು ನೀರಿನಲ್ಲಿ ಮುಳುಗಡೆಯಾಗಿವೆ. ಮುನ್ನೆಚ್ಚರಿಕಾ ಕ್ರಮವಾಗಿ ವಿದ್ಯುತ್ ಸರಬರಾಜು ಕಡಿತಗೊಳಿಸಿರುವುದಾಗಿ ಸರ್ಕಾರ ಹೇಳಿದೆ. ಶೀಘ್ರದಲ್ಲೇ ವ್ಯವಸ್ಥೆ ಸಹಜ ಸ್ಥಿತಿಗೆ ಮರಳಲಿದೆ ಎಂದು ತಿಳಿಸಿದೆ.

ಪ್ರಬಲ ಚಂಡಮಾರುತದ ರುದ್ರನರ್ತನದಿಂದಾಗಿ ಚೆನ್ನೈನ ವೇಲಾಚೇರಿ ಮತ್ತು ತಾಂಬರಂ ಪ್ರದೇಶಗಳು ನೀರಿನಲ್ಲಿ ಮುಳುಗಡೆಯಾಗಿವೆ. ಚಂಡಮಾರುತದ ಅಬ್ಬರ ತಗ್ಗಿದರೂ, ಮಳೆ ನೀರು ಮಾತ್ರ ಕಡಿಮೆಯಾಗುತ್ತಿಲ್ಲ. ಹೀಗಾಗಿ, ಬುಧವಾರವೂ ನಾಗರಿಕರು ಸುರಕ್ಷಿತ ಪ್ರದೇಶಗಳಿಗೆ ತಮ್ಮ ಮಕ್ಕಳೊಂದಿಗೆ ತೆರಳಿದರು. ಹಲವರು ಸಹಾಯಕ್ಕಾಗಿ ಅಧಿಕಾರಿಗಳನ್ನು ಅಂಗಲಾಚುತ್ತಿದ್ದರು. ಮತ್ತಷ್ಟು ದೋಣಿಗಳ ವ್ಯವಸ್ಥೆ ಕಲ್ಪಿಸುವಂತೆ ಆಗ್ರಹಿಸಿದರು.

ಶಾಲೆ–ಕಾಲೇಜುಗಳಿಗೆ ನೀಡಲಾಗಿದ್ದ ರಜೆಯನ್ನು ಡಿ.7ರವರೆಗೆ ವಿಸ್ತರಿಸಲಾಗಿದೆ. ಚೆನ್ನೈನ 11 ಅಂಡರ್‌ಪಾಸ್‌ಗಳಲ್ಲಿ ನೀರು ನಿಂತಿದ್ದು, ವಾಹನ ಸಂಚಾರ ನಿಷೇಧಿಸಲಾಗಿದೆ. ಹಲವು ರೈಲುಗಳ ಸಂಚಾರ ವ್ಯತ್ಯಯಗೊಂಡಿದೆ.

ಸಂಕಷ್ಟ ಹಂಚಿಕೊಂಡ ನಾಗರಿಕರು: ಚೆನ್ನೈನ ಹಲವು ಪ್ರದೇಶಗಳಲ್ಲಿ ನೀರು ಮನೆಗಳನ್ನು ಸುತ್ತುವರಿದಿರುವುದು, ಜನ ಹೊರ ಬರಲಾಗದೇ ಪರದಾಡುತ್ತಿರುವ ವಿಡಿಯೊ ಮತ್ತು ಫೋಟೊಗಳನ್ನು ಹಲವರು ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಂಡಿದ್ದಾರೆ.

'ನಮ್ಮ ಸಂಬಂಧಿಗಳು ಕಳೆದ ಮೂರು ದಿನಗಳಿಂದ ಮನೆಯಿಂದ ಹೊರಬರಲಾಗದೆ, ಆಹಾರ, ಕುಡಿಯುವ ನೀರಿಲ್ಲದೇ ಪರಿತಪಿಸುತ್ತಿದ್ದಾರೆ' ಎಂದು 'ಎಕ್ಸ್' ಬಳಕೆದಾರರೊಬ್ಬರು ಪೋಸ್ಟ್ ಮಾಡಿದ್ದಾರೆ.

ಹಲವು ಪ್ರದೇಶಗಳಲ್ಲಿ ಹಾಲು ಪೂರೈಕೆಯಾಗುತ್ತಿಲ್ಲ ಎಂಬ ದೂರುಗಳಿವೆ. ನೆರೆಪೀಡಿತ ವೇಲಾಚೇರಿ ಮತ್ತು ತಾಂಬರಂನಲ್ಲಂತೂ ಹೆಚ್ಚಿನ ದರಕ್ಕೆ ಹಾಲು ಮಾರಾಟ ಮಾಡಲಾಗುತ್ತಿದೆ ಎಂದು ನಾಗರಿಕರು ದೂರಿದ್ದಾರೆ.

> ನಾನಿರುವ ಪ್ರದೇಶದಲ್ಲಿ 30 ಗಂಟೆಗಳಿಂದ ವಿದ್ಯುತ್ ಇಲ್ಲ. ಪರಿಸ್ಥಿತಿ ಹೇಗಿರಬಹುದು ನೀವೇ ಊಹಿಸಿ. ಎಲ್ಲವೂ ಸರಿಹೋಗಲು ಇನ್ನಷ್ಟು ಸಮಯ ಬೇಕಾಗುತ್ತದೆ.
> **ರವಿಚಂದ್ರನ್ ಅಶ್ವಿನ್,** ಕ್ರಿಕೆಟಿಗ



ಚೆನ್ನೈನಲ್ಲಿ ಜಲಾವೃತಗೊಂಡಿದ್ದ ರಸ್ತೆಯಲ್ಲೇ ನಾಗರಿಕರು ಸಾಗಿದರು –ಪಿಟಿಐ ಚಿತ್ರ

ಹಿಂಸಾಚಾರಕ್ಕೆ ತಿರುಗಿದ ಎಸ್‌ಎಫ್‌ಐ ಪ್ರತಿಭಟನೆ

ತಿರುವನಂತಪುರ (ಪಿಟಿಐ): ಕೇರಳ ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ಅವರು ಉನ್ನತ ಶಿಕ್ಷಣ ಕ್ಷೇತ್ರವನ್ನು ಕೇಸರೀಕರಣಗೊಳಿಸುತ್ತಿದ್ದಾರೆ ಎಂದು ಆರೋಪಿಸಿ ಆಡಳಿತಾರೂಢ ಸಿಪಿಎಂನ ವಿದ್ಯಾರ್ಥಿ ಸಂಘಟನೆಯಾದ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ಬುಧವಾರ ಇಲ್ಲಿ ನಡೆಸಿದ ಪ್ರತಿಭಟನಾ ಮೆರವಣಿಯು ಹಿಂಸಾಚಾರಕ್ಕೆ ತಿರುಗಿದೆ.


ರಾಜ್ಯಪಾಲರ ನಡೆ ವಿರೋಧಿಸಿ ರಾಜ್ಯದಾದ್ಯಂತ ಕರೆ ನೀಡಿದ್ದ ಶೈಕ್ಷಣಿಕ ಮುಷ್ಕರದ ಅಂಗವಾಗಿ ಈ ಪ್ರತಿಭಟನಾ ಮೆರವಣಿಗೆ ನಡೆದಿದೆ. ಪ್ರತಿಭಟನಕಾರರನ್ನು ನಿಯಂತ್ರಿಸಲು ಪೊಲೀಸರು ಜಲಫಿರಂಗಿ ಬಳಸಿದ್ದಾರೆ. ಅಲ್ಲದೆ ಹಲವರನ್ನು ವಶಕ್ಕೆ ಪಡೆದರು.

ಉಕ್ರೇನ್ ಮೇಲೆ 48 ಡ್ರೋನ್‌ಗಳಿಂದ ದಾಳಿ ನಡೆಸಿದ ರಷ್ಯಾ

ಕೀವ್ (ಎಎಫ್‌ಪಿ): ಉಕ್ರೇನ್ ಮೇಲೆ ರಷ್ಯಾವು ಇರಾನ್ ನಿರ್ಮಿತ 48 ಡ್ರೋನ್‌ಗಳಿಂದ ಮಂಗಳವಾರ ರಾತ್ರಿ ದಾಳಿ ನಡೆಸಿದೆ.

ರಷ್ಯಾದ ಪಡೆಗಳು ವಿದ್ಯುತ್ ಗ್ರಿಡ್‌ಗಳನ್ನು ಗುರಿಯಾಗಿಸಿ ಡ್ರೋನ್ ಮತ್ತು ಕ್ಷಿಪಣಿ ದಾಳಿ ನಡೆಸಿವೆ. ಪ್ರತಿದಾಳಿ ನಡೆಸಿ 41 ಡ್ರೋನ್‌ಗಳನ್ನು ಹೊಡೆದುರುಳಿಸಲಾಗಿದೆ ಎಂದು ಉಕ್ರೇನ್‌ನ ವಾಯುಪಡೆಯ ಮೂಲಗಳು ತಿಳಿಸಿವೆ. ಕಳೆದ ಚಳಿಗಾಲದಲ್ಲಿ ರಷ್ಯಾಪಡೆಗಳು ವಿದ್ಯುತ್ ಗ್ರಿಡ್‌ಗಳ ಮೇಲೆ ದಾಳಿ ನಡೆಸಿದ್ದರ ಪರಿಣಾಮ ಉಕ್ರೇನ್‌ನ ಲಕ್ಷಾಂತರ ಮಂದಿ ಚಳಿಯಿಂದ ಸಂಕಷ್ಟ ಅನುಭವಿಸಿದ್ದರು. ಪಾಶ್ಚಾತ್ಯ ದೇಶಗಳು ನೀಡಿರುವ ಶಸ್ತ್ರಾಸ್ತ್ರಗಳ ಸಹಾಯದಿಂದ ಉಕ್ರೇನ್‌ನ ವಾಯುಪಡೆಯು ರಷ್ಯಾದ ಪಡೆಗಳ ಮೇಲೆ ಪ್ರತಿ ದಾಳಿ ನಡೆಸುತ್ತಿದೆ ಎಂದು ಮೂಲಗಳು ಹೇಳಿವೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	20,855
ಇಂದಿನ ಅಂತ್ಯ	20,937
▲	82
ದಿನದ ಗರಿಷ್ಠ	20,961

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹545
12 ಮೊಟ್ಟೆಗೆ	₹75
ಮೈಸೂರು	
100 ಮೊಟ್ಟೆಗೆ	₹547

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1600 (1610)
ಸೋಯಾ (ರಿಫೈನ್ಡ್)	₹915 (930)
ಸೂರ್ಯಕಾಂತಿ (ರಿಫೈನ್ಡ್)	₹920 (935)
ಪಾಮೋಲಿನ್	₹827 (836)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹277-490
ದ್ವಿತಳಿ (ಬಿ.ವಿ)	₹282-608

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹4000-4600
ಮಧ್ಯಮ	₹3000-4000
ಸಣ್ಣ	₹2000-3000

ವಿನಿಮಯ ದರ

$ ಡಾಲರ್	83.30
£ ಪೌಂಡ್	105.00
€ ಯುರೊ	89.94
¥ ಯೆನ್ (100ಕ್ಕೆ)	57

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ತಿಪಟೂರು	₹7000-8100
ತುರುವೇಕೆರೆ	₹7750-7900

ಹೊಸ ಎತ್ತರಕ್ಕೆ ಸೆನ್ಸೆಕ್ಸ್, ನಿಫ್ಟಿ

ಮುಂಬೈ (ಪಿಟಿಐ): ದೇಶದ ಷೇರುಪೇಟೆಗಳ ಸೂಚ್ಯಂಕಗಳು ಸತತ ಏಳನೇ ದಿನವೂ ಏರಿಕೆ ಕಂಡವು. ಬುಧವಾರದ ವಹಿವಾಟಿನಲ್ಲಿಯೂ ಷೇರುಪೇಟೆಗಳು ಸಾರ್ವಕಾಲಿಕ ಗರಿಷ್ಠ ಮಟ್ಟ ತಲುಪಿದವು.

ರಿಲಯನ್ಸ್ ಇಂಡಸ್ಟ್ರಿಸ್, ಐಟಿಸಿ ಮತ್ತು ಎಲ್ ಆ್ಯಂಡ್ ಟಿ ಕಂಪನಿಗಳ ಷೇರುಗಳ ಗಳಿಕೆ ಮತ್ತು ವಿದೇಶಿ ಬಂಡವಾಳ ಒಳಹರಿವು ಸೂಚ್ಯಂಕಗಳ ಏರಿಕೆಗೆ ನೆರವಾದವು.

ಮುಂಬೈ ಷೇರುಪೇಟೆ ಸೂಚ್ಯಂಕ (ಬಿಎಸ್‌ಇ) ಸೆನ್ಸೆಕ್ಸ್ 357 ಅಂಶ ಏರಿಕೆ ಕಂಡು 69,653 ಅಂಶಗಳಿಗೆ ತಲುಪಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ (ಎನ್‌ಎಸ್‌ಇ) ನಿಫ್ಟಿ 82 ಅಂಶ ಹೆಚ್ಚಾಗಿ 20,937 ಅಂಶಗಳಲ್ಲಿ ವಹಿವಾಟು ಅಂತ್ಯಗೊಂಡಿತು.

ಬಿಎಸ್‌ಇನಲ್ಲಿ ವಿಪ್ರೊ ಷೇರು ಮೌಲ್ಯ ಶೇ 3.85ರಷ್ಟು ಹೆಚ್ಚಾಯಿತು. ಐಟಿಸಿ ಶೇ 2.51, ಎಲ್ ಆ್ಯಂಡ್ ಟಿ ಶೇ 2.31ರಷ್ಟು ಗಳಿಕೆ ಕಂಡಿತು.

ಅದಾನಿ ಷೇರು ಗಳಿಕೆ: ಅದಾನಿ ಸಮೂಹದ ಕಂಪನಿಗಳ ಷೇರು ಮೌಲ್ಯವು ಬುಧವಾರದ ವಹಿವಾಟಿನಲ್ಲಿ ಶೇ 20ರವರೆಗೂ ಏರಿಕೆ ಕಂಡಿತು. ಅದಾನಿ ಸಮೂಹವು ನವೀಕರಿಸಬಲ್ಲ ಇಂಧನ ತಯಾರಿಕೆಗೆ ₹6.24 ಲಕ್ಷ ಕೋಟಿ ಹೂಡಿಕೆ ಮಾಡುವುದಾಗಿ ಹೇಳಿದ ಬಳಿಕ ಷೇರುಗಳ ಮೌಲ್ಯದಲ್ಲಿ ಏರಿಕೆ ಕಂಡುಬಂದಿತು.

ಬಿಎಸ್‌ಇನಲ್ಲಿ ಅದಾನಿ ಟೋಟಲ್ ಗ್ಯಾಸ್ ಷೇರು ಶೇ 19.98ರಷ್ಟು ಹೆಚ್ಚಾಯಿತು. ಅದಾನಿ ಗ್ರೀನ್ ಎನರ್ಜಿ ಷೇರು ಶೇ 16.11, ಅದಾನಿ ಎನರ್ಜಿ ಸಲ್ಯೂಷನ್ಸ್ ಷೇರು ಶೇ 7.36ರಷ್ಟು ಏರಿಕೆ ಕಂಡಿತು.

ಎಸಿಸಿ ಷೇರು ಮೌಲ್ಯ ಶೇ 2.59, ಅದಾನಿ ಎಂಟರ್‌ಪ್ರೈಸಸ್ ಶೇ 2.53 ಮತ್ತು ಅಂಬುಜಾ ಸಿಮೆಂಟ್ಸ್ ಷೇರು ಮೌಲ್ಯ ಶೇ 1.48ರಷ್ಟು ಇಳಿಕೆ ಕಂಡಿತು.

ಸಮೂಹದ ಕಂಪನಿಗಳ ಒಟ್ಟು ಬಂಡವಾಳ ಮೌಲ್ಯ ₹14.54 ಲಕ್ಷ ಕೋಟಿಗೆ ತಲುಪಿತು.

ನವೆಂಬರ್ ತಿಂಗಳಿನಲ್ಲಿ ಒಟ್ಟು 28.54 ಲಕ್ಷ ವಾಹನಗಳ ಮಾರಾಟ: ಎಫ್‌ಎಡಿಎ

ದಾಖಲೆ ಮಟ್ಟಕ್ಕೇರಿದ ವಾಹನಗಳ ಮಾರಾಟ

ನವದೆಹಲಿ (ಪಿಟಿಐ): ವಾಹನಗಳ ರಿಟೇಲ್ ಮಾರಾಟವು ನವೆಂಬರ್‌ನಲ್ಲಿ ದಾಖಲೆಯ ಮಟ್ಟಕ್ಕೆ ಏರಿಕೆ ಕಂಡಿದೆ. ಪ್ರಯಾಣಿಕ ವಾಹನ ಮತ್ತು ದ್ವಿಚಕ್ರ ವಾಹನ ವಿಭಾಗದಲ್ಲಿ ಕಂಡುಬಂದ ಉತ್ತಮ ಮಾರಾಟದಿಂದ ಇದು ಸಾಧ್ಯವಾಗಿದೆ ಎಂದು ವಾಹನ ವಿತರಕರ ಸಂಘಟನೆಗಳ ಒಕ್ಕೂಟ (ಎಫ್‌ಎಡಿಎ) (ಎಫ್‌ಎಡಿಎ) ಹೇಳಿದೆ.

ಕಳೆದ ವರ್ಷದ ನವೆಂಬರ್‌ಗೆ ಹೋಲಿಸಿದರೆ ಈ ವರ್ಷದ ನವೆಂಬರ್‌ನಲ್ಲಿ ವಾಹನಗಳ ಮಾರಾಟ ಶೇ 18ರಷ್ಟು ಏರಿಕೆ ಕಂಡು 28.54 ಲಕ್ಷಕ್ಕೆ ಏರಿಕೆ ಆಗಿದೆ. 2022ರ ನವೆಂಬರ್‌ನಲ್ಲಿ 24.09 ಲಕ್ಷ ಇತ್ತು.

ಪ್ರಯಾಣಿಕ ವಾಹನಗಳ ಮಾರಾಟವು ಶೇ 17ರಷ್ಟು ಹೆಚ್ಚಾಗಿ 3.60 ಲಕ್ಷಕ್ಕೆ ತಲುಪಿದೆ. 2022ರ ನವೆಂಬರ್‌ನಲ್ಲಿ 3.07 ಲಕ್ಷ ವಾಹನಗಳು ಮಾರಾಟ ಆಗಿದ್ದವು.

ದ್ವಿಚಕ್ರ ವಾಹನ ಮಾರಾಟ ಶೇ 21ರಷ್ಟು ಹೆಚ್ಚಾಗಿದ್ದು, ಒಟ್ಟು 22.47 ಲಕ್ಷ ವಾಹನಗಳು ಮಾರಾಟ ಆಗಿವೆ. ತ್ರಿಚಕ್ರ ವಾಹನ ಮಾರಾಟ ಶೇ 23ರಷ್ಟು ಏರಿಕೆ ಕಂಡು 99,890ಕ್ಕೆ ತಲುಪಿದೆ.

ಭಾರತದ ರಿಟೇಲ್ ವಾಹನ ಉದ್ಯಮಕ್ಕೆ 2023ರ ನವೆಂಬರ್ ಚಾರಿತ್ರಿಕ ತಿಂಗಳಾಗಿದ್ದು 28.54 ಲಕ್ಷ ವಾಹನಗಳು ಮಾರಾಟ ಆಗಿವೆ. ಈ ಹಿಂದೆ 2020ರ ಮಾರ್ಚ್‌ನಲ್ಲಿ ಆಗಿದ್ದ ಮಾರಾಟವನ್ನೂ ಮೀರಿ (25.69 ಲಕ್ಷ) ಬೆಳವಣಿಗೆ ಕಂಡಿದೆ ಎಂದು ಒಕ್ಕೂಟದ ಅಧ್ಯಕ್ಷ ಮನಿಷ್ ರಾಜ್ ಸಿಂಘಾನಿಯಾ ತಿಳಿಸಿದ್ದಾರೆ.

ದ್ವಿಚಕ್ರ ಮತ್ತು ಪ್ರಯಾಣಿಕ ವಾಹನ ವಿಭಾಗವು ಹೊಸ ದಾಖಲೆ ಬರೆದಿದೆ. 2023ರ ನವೆಂಬರ್‌ನಲ್ಲಿ 22.47 ಲಕ್ಷದಷ್ಟು ಮಾರಾಟ ಆಗಿದೆ. 2020ರ ಮಾರ್ಚ್‌ನಲ್ಲಿ ಆಗಿದ್ದ ಮಾರಾಟಕ್ಕೆ ಹೋಲಿಸಿದರೆ 1.77 ಲಕ್ಷದಷ್ಟು ಹೆಚ್ಚಾಗಿದೆ. ಪ್ರಯಾಣಿಕ ವಾಹನ ಮಾರಾಟವು 2023ರ ನವೆಂಬರ್‌ನಲ್ಲಿ 3.6 ಲಕ್ಷ ಕೋಟಿ ಆಗಿದೆ. 2022ರ ಅಕ್ಟೋಬರ್‌ಗೆ ಹೋಲಿಸಿದರೆ ಮಾರಾಟವು 4 ಸಾವಿರಕ್ಕೂ ಹೆಚ್ಚು ಏರಿಕೆ ಆಗಿದೆ ಎಂದು ಸಿಂಘಾನಿಯಾ ಮಾಹಿತಿ ನೀಡಿದ್ದಾರೆ.

ಪೂರೈಕೆ ವ್ಯವಸ್ಥೆಯಲ್ಲಿನ ಸುಧಾರಣೆ, ಹೊಸ ವಾಹನಗಳ ಬಿಡುಗಡೆಯು ನವೆಂಬರ್ ತಿಂಗಳ ಹಬ್ಬದ ಬೇಡಿಕೆಯನ್ನು ಪೂರೈಸಲು ನೆರವಾದವು ಎಂದು ಅವರು ತಿಳಿಸಿದ್ದಾರೆ.

ಮಾರಾಟದ ಮುನ್ನೋಟ:

- ಪ್ರತಿಕೂಲ ಹವಾಮಾನವು ಹಿಂಗಾರು ಬೇಸಾಯದ ಮೇಲೆ ಪರಿಣಾಮ ಬೀರುತ್ತಿದ್ದು ಗ್ರಾಮೀಣ ಭಾಗದ ಆದಾಯಕ್ಕೆ ಪೆಟ್ಟು ಬೀಳುವ ಸಾಧ್ಯತೆ ಇದೆ. ಇದು ದ್ವಿಚಕ್ರ ವಾಹನ ಮಾರಾಟವನ್ನು ತಗ್ಗಿಸಬಹುದು.
- ರಾಜ್ಯಗಳ ಚುನಾವಣಾ ಫಲಿತಾಂಶದ ಬಳಿಕ ದೇಶದಲ್ಲಿ ಉದ್ದಿಮೆ ಚಟುವಟಿಕೆಗಳಿಗೆ ವೇಗ ದೊರೆತಿದೆ. ಅದರಲ್ಲಿಯೂ ಮುಖ್ಯವಾಗಿ ಸಿಮೆಂಟ್ ಮತ್ತು ಕಲ್ಲಿದ್ದಲು ವಲಯದಲ್ಲಿ ಸಕಾರಾತ್ಮಕ ಚಲನೆ ಕಂಡುಬರುತ್ತಿದೆ. ಹೀಗಾಗಿ ವಾಣಿಜ್ಯ ವಾಹನ ವಿಭಾಗದ ಒಂದಿಷ್ಟು ಚೇತರಿಕೆ ಕಂಡುಕೊಳ್ಳುವ ನಿರೀಕ್ಷೆ ಇದೆ.
- ವರ್ಷಾಂತ್ಯದ ಕೊಡುಗೆಗಳು ಮತ್ತು ರಿಯಾಯಿತಿಗಳಿಂದಾಗಿ ಪ್ರಯಾಣಿಕ ವಾಹನ ಮಾರಾಟ ಹೆಚ್ಚಾಗುವ ನಿರೀಕ್ಷೆ ಇದೆ.

ಮುಖ್ಯಾಂಶಗಳು

- ಟ್ರ್ಯಾಕ್ಟರ್ ಮಾರಾಟ ಶೇ 21ರಷ್ಟು ಇಳಿಕೆ
- ಶೇ 2ರಷ್ಟು ತಗ್ಗಿದ ವಾಣಿಜ್ಯ ವಾಹನಗಳ ಮಾರಾಟ



ಸಂಕ್ಷಿಪ್ತ ಸುದ್ದಿ

₹ 6.24 ಲಕ್ಷ ಕೋಟಿ ಹೂಡಿಕೆ: ಅದಾನಿ

ನವದೆಹಲಿ (ಪಿಟಿಐ): ನವೀಕರಿಸಬಲ್ಲ ಇಂಧನ ತಯಾರಿಕೆ ಸಾಮರ್ಥ್ಯವನ್ನು ಹೆಚ್ಚಿಸಲು 2030ರ ವೇಳೆಗೆ ₹6.24 ಲಕ್ಷ ಕೋಟಿ ಹೂಡಿಕೆ ಮಾಡಲು ಅದಾನಿ ಸಮೂಹ ಉದ್ದೇಶಿಸಿದೆ ಎಂದು ಸಮೂಹದ ಅಧ್ಯಕ್ಷ ಗೌತಮ್ ಅದಾನಿ ಬುಧವಾರ ತಿಳಿಸಿದ್ದಾರೆ.



ಗೌತಮ್ ಅದಾನಿ

ಅದಾನಿ ಗ್ರೀನ್ ಎನರ್ಜಿ ಲಿಮಿಟೆಡ್ ಕಂಪನಿಯು ನವೀಕರಿಸಬಲ್ಲ ಇಂಧನ ತಯಾರಿಕೆ ಸಾಮರ್ಥ್ಯವನ್ನು 2030ರ ವೇಳೆಗೆ 45 ಗಿಗಾವಾಟ್‌ಗೆ ಹೆಚ್ಚಿಸಲು ಈ ಹೂಡಿಕೆ ನೆರವಾಗಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜಿಡಿಪಿ ಬೆಳವಣಿಗೆ ಶೇ 6.8ರಷ್ಟು: ಸಿಐಐ

ನವದೆಹಲಿ (ಪಿಟಿಐ): ಮೂಲಸೌಕರ್ಯ ಅಭಿವೃದ್ಧಿ ಮತ್ತು ಸುಲಲಿತ ವಹಿವಾಟಿಗೆ ಕೇಂದ್ರ ಸರ್ಕಾರ ಹೆಚ್ಚಿನ ಉತ್ತೇಜನ ನೀಡುತ್ತಿದೆ. ಹೀಗಾಗಿ ಭಾರತದ ಜಿಡಿಪಿಯು ಪ್ರಸಕ್ತ ಹಣಕಾಸು ವರ್ಷದಲ್ಲಿ ಶೇ 6.8ರಷ್ಟು ಬೆಳವಣಿಗೆ ಕಾಣುವ ನಿರೀಕ್ಷೆ ಇದೆ ಎಂದು ಭಾರತೀಯ ಕೈಗಾರಿಕಾ ಒಕ್ಕೂಟ (ಸಿಐಐ) ಹೇಳಿದೆ.

ಜಿಡಿಪಿಯು ಶೇ 6.5 ರಿಂದ ಶೇ 6.7ರವರೆಗೆ ಬೆಳವಣಿಗೆ ಕಾಣಬಹುದು ಎಂದು ಸಿಐಐ ಈ ಹಿಂದೆ ಹೇಳಿತ್ತು. 2024–25ನೇ ಹಣಕಾಸು ವರ್ಷದಲ್ಲಿ ಜಿಡಿಪಿ ಬೆಳವಣಿಗೆ ಶೇ 7ಕ್ಕೆ ಏರಿಕೆ ಆಗಬಲ್ಲದು ಎಂದು ಅದು ತಿಳಿಸಿದೆ.

ಬೆಂಗಳೂರಿನಲ್ಲಿ 'ವಾಟರ್ಸ್' ಕೆಪಬಿಲಿಟಿ ಸೆಂಟರ್

ಬೆಂಗಳೂರು (ಪಿಟಿಐ): ಆರೋಗ್ಯ ಮತ್ತು ಔಷಧ ತಯಾರಿಕೆ ಕ್ಷೇತ್ರದ ಪ್ರಮುಖ ಕಂಪನಿ ವಾಟರ್ಸ್ ಕಾರ್ಪೊರೇಷನ್ ಬೆಂಗಳೂರಿನಲ್ಲಿ ಜಾಗತಿಕ ಕೆಪಬಿಲಿಟಿ ಸೆಂಟರ್ (ಜಿಸಿಸಿ) ಬುಧವಾರ ಉದ್ಘಾಟನೆಗೊಂಡಿದೆ.

₹133 ಕೋಟಿ ವೆಚ್ಚದಲ್ಲಿ ಬೆಳ್ಳಂದೂರಿನಲ್ಲಿ ಈ ಸೆಂಟರ್ ಸ್ಥಾಪನೆಯಾಗಿದೆ. ಸಾಫ್ಟ್‌ವೇರ್ ಎಂಜಿನಿಯರಿಂಗ್, ತಂತ್ರಜ್ಞಾನ ಮತ್ತು ಉತ್ಪನ್ನ ಅಭಿವೃದ್ಧಿಯ ನಿಟ್ಟಿನಲ್ಲಿ ಈ ಕೇಂದ್ರವು ಕೆಲಸ ಮಾಡಲಿದೆ ಎಂದು ಕಂಪನಿಯ ಅಧ್ಯಕ್ಷ ಮತ್ತು ಸಿಇಒ ಉದಿತ್ ಬಾತ್ರಾ ತಿಳಿಸಿದ್ದಾರೆ.

ಮುಂಬೈ ಧಾರಣೆ

ಶೇಂಗಾ

06-12-2023

ಜಾವಾ 70/80(ಹೊಸ)	12000-12100
ಜಾವಾ 80/90(ಹೊಸ)	11000-11100
ದಪ್ಪ ಮಧ್ಯಪ್ರದೇಶ(ಹೊಸ)	9900-10000
ದಪ್ಪ ಗುಜರಾತ್(ಹೊಸ)	10800-10900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1610 (1620)
ಒಂದು ವಾರದ ಡೆಲಿವರಿ	1605 (1615)
ಸೋಯಾ ಕಚ್ಚಾ	887 (912)
ಪಾಮ್ ವಾರದ ಡೆಲಿವರಿ	829 (834)
ಸೂರ್ಯಕಾಂತಿ ಎಣ್ಣೆ ಕಚ್ಚಾ	880 (890)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ

62,000 (62,100)

ಬೆಳ್ಳಿ ಕೆ.ಜಿ 74,300 (74,450)

ಆವರಣದಲ್ಲಿ ಹಿಂದಿನ ದಿನದ ಧಾರಣೆ

'ಕೈಗೆಟಕುವ ಮನೆ: ನಿಖರ ವ್ಯಾಖ್ಯಾನ ಕಷ್ಟ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೈಗೆಟಕುವ ಮನೆಗೆ ಹಿಂದಿನಂತೆ ಈಗ ನಿಖರವಾದ ವ್ಯಾಖ್ಯಾನ ನೀಡುವುದು ಕಷ್ಟ. ಏಕೆಂದರೆ ಮಾರುಕಟ್ಟೆಯಲ್ಲಿ ಸಾಕಷ್ಟು ಬದಲಾವಣೆಗಳು ಆಗಿವೆ. ಕಳೆದ ದಶಕದಲ್ಲಿ ನಗರಗಳಲ್ಲಿ ಕೈಗೆಟಕುವ ಮನೆಗಳ ದರವು ₹45 ಲಕ್ಷದಿಂದ ₹1.2 ಕೋಟಿಯವರೆಗೆ ಇದೆ ಎಂದು ಪ್ರಾವಿಡೆಂಟ್ ಹೌಸಿಂಗ್ ಲಿಮಿಟೆಡ್‌ನ ಸಿಇಒ ಮಲ್ಲಣ್ಣ ಸಾಸಲು ಹೇಳಿದರು.

ರಿಯಲ್ ಎಸ್ಟೇಟ್‌ನ ವಸತಿ ವಹಿವಾಟಿನಲ್ಲಿ ಕೈಗೆಟಕುವ ಮನೆಗಳ ವಿಭಾಗದ (₹45 ಲಕ್ಷದಿಂದ ₹1.2 ಕೋಟಿ) ಪಾಲೇ ದೊಡ್ಡದು. ಹೀಗಾಗಿ ನಾವು ಈ ವಿಭಾಗದಲ್ಲಿಯೇ ನಮ್ಮ ಗಮನವನ್ನು ಇನ್ನಷ್ಟು ಕೇಂದ್ರೀಕರಿಸಲು ಬಯಸುತ್ತೇವೆ. ಗ್ರಾಹಕರು ನೀಡುವ ಹಣಕ್ಕೆ ಅಳತೆಮಾಡಬಹುದಾದ ರೀತಿಯಲ್ಲಿ ಮೌಲ್ಯ ತಂದುಕೊಡುವ ಭರವಸೆ ನೀಡುತ್ತೇವೆ ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಕಂಪನಿಯು ಪರಿಸರ, ಸಮಾಜ ಮತ್ತು ಆಡಳಿತಕ್ಕೆ (ಇಎಸ್‌ಜಿ) ಸಂಬಂಧಿಸಿದ ವರದಿಯನ್ನು ಬುಧವಾರ ಬಿಡುಗಡೆ ಮಾಡಿತು. 2021–23ರ ಅವಧಿಯಲ್ಲಿ ಹೊಸ ತಂತ್ರಜ್ಞಾನಗಳ ಅಳವಡಿಕೆ ಮತ್ತು ಪರಿಸರದ ಮೇಲೆ ಕಡಿಮೆ ಪರಿಣಾಮ ಬೀರುವಂತೆ ಮಾಡಲು ಅಗತ್ಯವಾದ ಸುಸ್ಥಿರ ಕಾರ್ಯಾಚರಣೆ ಮತ್ತು ವಹಿವಾಟಿನ ಪದ್ಧತಿಯನ್ನು ಕಂಪನಿಯು ಅಳವಡಿಸಿಕೊಂಡಿರುವ ಬಗ್ಗೆ ವರದಿಯು ವಿವರಿಸಿದೆ.

ಕಲ್ಲಿದ್ದಲು ಆಮದು ಶೇ 5ರಷ್ಟು ಇಳಿಕೆ

ನವದೆಹಲಿ (ಪಿಟಿಐ): ಭಾರತವು ಆಮದು ಮಾಡಿಕೊಳ್ಳುವ ಕಲ್ಲಿದ್ದಲು ಪ್ರಮಾಣ ಪ್ರಸಕ್ತ ಹಣಕಾಸು ವರ್ಷದ ಏಪ್ರಿಲ್–ಸೆಪ್ಟೆಂಬರ್ ಅವಧಿಯಲ್ಲಿ ಶೇ 5ರಷ್ಟು ಇಳಿಕೆಯಾಗಿ, 12.5 ಕೋಟಿ ಟನ್‌ಗೆ ತಲುಪಿದೆ.

ಲೋಕಸಭೆಯಲ್ಲಿ ಬುಧವಾರ ಪ್ರಶ್ನೆಗೆ ಉತ್ತರಿಸಿದ ಕೇಂದ್ರ ಕಲ್ಲಿದ್ದಲು ಮತ್ತು ಇಂಧನ ಸಚಿವ ಪ್ರಹ್ಲಾದ್ ಜೋಶಿ, ವಾರ್ಷಿಕ ಸಂಯುಕ್ತ ಬೆಳವಣಿಗೆ ದರದ (ಸಿಎಜಿಆರ್) ಪ್ರಕಾರ 15 ಕೋಟಿ ಟನ್ ಕಲ್ಲಿದ್ದಲಿನ ಆಮದು ಅಗತ್ಯವಿದೆ. ಆದರೆ 12.5 ಕೋಟಿ ಟನ್ ಮಾತ್ರ ಕಲ್ಲಿದ್ದಲು ಆಮದು ಮಾಡಿಕೊಳ್ಳಲಾಗಿದ್ದು, ಹಿಂದಿನ ಇದೇ ಅವಧಿಗೆ ಹೋಲಿಸಿದರೆ ಶೇ 5ರಷ್ಟು ಇಳಿಕೆಯಾಗಿದೆ ಎಂದರು. ಕಲ್ಲಿದ್ದಲು ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸುವ ಮೂಲಕ ಕಲ್ಲಿದ್ದಲು ಆಮದು ಮೇಲೆ ಅವಲಂಬಿತವಾಗುವುದನ್ನು ಕಡಿಮೆ ಮಾಡಲು ಯತ್ನಿಸಲಾಗುತ್ತಿದೆ ಎಂದು ಸರ್ಕಾರ ತಿಳಿಸಿದೆ.

'ಸದ್ಯಕ್ಕೆ ಬಡ್ಡಿದರ ಕಡಿತ ಅನುಮಾನ'

ಮುಂಬೈ (ಪಿಟಿಐ): ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಮುಂದಿನ ವರ್ಷದ ಜೂನ್ ತಿಂಗಳಿಗೂ ಮೊದಲು ಬಡ್ಡಿದರ ಕಡಿತ ಮಾಡುವುದು ಅನುಮಾನ ಎಂದು ಡಾಯಿಷ್ ಬ್ಯಾಂಕ್ ಹೇಳಿದೆ.

ಆರ್‌ಬಿಐನ ಹಣಕಾಸು ನೀತಿ ಸಮಿತಿಯ 3 ದಿನದ ಸಭೆ ಬುಧವಾರದಿಂದ ಆರಂಭ ಆಗಿದೆ. ಸಭೆಯ ನಿರ್ಧಾರ ಶುಕ್ರವಾರ ಹೊರಬೀಳಲಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ	
ಬಂಟ್ವಾಳ	
ಕೋಕ	15000-27500
ಹೊಸತು	27500-36000
ಹಳತು	42500-45500
ಕಾರ್ಕಳ	
ಹೊಸತು	25000-36500
ಹಳತು	30000-46000
ಕುಮಟ	
ಬೆಟ್ಟೆ	40109-43199
ಚಿಪ್ಪು	27509-34509
ಕೋಕ	20109-31889
ಫ್ಯಾಕ್ಟರಿ	11019-24100
ಹಳೆಚಾಲಿ	36899-39049
ಹೊಸಚಾಲಿ	33099-34799
ಶಿವಮೊಗ್ಗ	
ಬೆಟ್ಟೆ	3900-4200
ಗೊರಬಾಲು	17009-37269
ಹೊಸತು	45898-47159
ರಾಶಿ	36569-47350
ಸರಕು	56999-81000
ಸಿದ್ದಾಪುರ	
ಬಿಳಿಗೋಟು	30389-32690
ಚಾಲಿ	37409-38899
ಕೋಕ	30099-33179
ಕೆಂಪುಗೋಟು	28099-28099
ರಾಶಿ	43899-46209
ತಟ್ಟಿಬೆಟ್ಟೆ	37109-37109
ಶಿರಸಿ	
ಬೆಟ್ಟೆ	38122-41299
ಬಿಳಿಗೋಟು	28909-35426
ಚಾಲಿ	37121-39698
ರಾಶಿ	44208-46909
ಯಲ್ಲಾಪುರ	
ಅಪಿ	57800-59800
ಬಿಳಿಗೋಟು	24299-34970
ಚಾಲಿ	35899-40299
ಕೋಕ	17199-32900
ಕೆಂಪುಗೋಟು	24899-34909
ರಾಶಿ	45550-54399
ತಟ್ಟಿಬೆಟ್ಟೆ	36969-44700

ಮಹಿಳಾ ಟಿ20 ಕ್ರಿಕೆಟ್ • ವೈಟ್, ಬ್ರಂಟ್ ಅರ್ಧಶತಕ • ಸೋಫಿ ಸ್ಪಿನ್ ಮೋಡಿ, ಶೆಫಾಲಿ ಮಿಂಚು

ಇಂಗ್ಲೆಂಡ್ ಗೆಲುವಿನ ಆರಂಭ

ಮುಂಬೈ (ಪಿಟಿಐ): ಡ್ಯಾನಿ ವೈಟ್ ಮತ್ತು ನತಾಲೀ ಶಿವರ್ ಬ್ರಂಟ್ ಅವರಿಬ್ಬರ ಅರ್ಧಶತಕಗಳಿಗೆ ಗೆಲುವಿನ ಶ್ರೇಯ ಲಭಿಸಲು ಇಂಗ್ಲೆಂಡ್ ತಂಡದ ಬೌಲರ್ ಸೋಫಿ ಎಕ್ಲೆಸ್ಟೋನ್ ಕಾರಣರಾದರು.

ವಾಂಖೆಡೆ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಮಹಿಳಾ ಟಿ20 ಕ್ರಿಕೆಟ್ ಸರಣಿಯ ಮೊದಲ ಪಂದ್ಯದಲ್ಲಿ ಆತಿಥೇಯ ಭಾರತ ತಂಡವು 38 ರನ್‌ಗಳ ಅಂತರದಿಂದ ಸೋತಿತು. ಸರಣಿಯಲ್ಲಿ ಇಂಗ್ಲೆಂಡ್ ತಂಡವು 1–0 ಮುನ್ನಡೆ ಸಾಧಿಸಿತು.

ಟಾಸ್ ಗೆದ್ದ ಭಾರತ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಮೊದಲ ಓವರ್‌ನಲ್ಲಿ ಮಧ್ಯಮವೇಗಿ ರೇಣುಕಾ ಸಿಂಗ್ ಅವರ ದಾಳಿಗೆ ಸೋಫಿಯಾ ಡಂಕ್ಲಿ ಮತ್ತು ಅಲೈಸ್ ಕ್ಯಾಪ್ಸಿ ಪೆವಿಲಿಯನ್ ಸೇರಿದರು. ಆಗ ತಂಡದ ಮೊತ್ತ ಕೇವಲ 2 ರನ್‌ಗಳಾಗಿದ್ದವು. ಆದರೆ, ಈ ಹಂತದಲ್ಲಿ ಜೊತೆಗೂಡಿದ ವೈಟ್ (75; 47ಎ, 4X8, 6X2) ಮತ್ತು ಬ್ರಂಟ್ (77; 53ಎ, 4X13) ಮೂರನೇ ವಿಕೆಟ್ ಜೊತೆಯಾಟದಲ್ಲಿ 138 ರನ್ ಸೇರಿಸಿದರು. ಇದರಿಂದಾಗಿ ತಂಡವು 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 197 ರನ್ ಗಳಿಸಿತು.

ಗುರಿ ಬೆನ್ನಟ್ಟಿದ ಭಾರತ ತಂಡಕ್ಕೆ 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 159 ರನ್ ಗಳಿಸಲು ಮಾತ್ರ ಸಾಧ್ಯವಾಯಿತು. ಆರಂಭಿಕ ಬ್ಯಾಟರ್ ಶೆಫಾಲಿ ವರ್ಮಾ (52; 42ಎ) ಅರ್ಧಶತಕ ಬಾರಿಸಿದರು. ಮಧ್ಯಮ ಕ್ರಮಾಂಕದಲ್ಲಿ ನಾಯಕಿ ಹರ್ಮನ್‌ಪ್ರೀತ್ ಕೌರ್ (26; 21ಎ) ಮತ್ತು ರಿಚಾ ಘೋಷ್ (21; 16ಎ) ಅವರು ತಂಡಕ್ಕೆ ಬಲ ತುಂಬಲು ಯತ್ನಿಸಿದರು. ಆದರೆ ಎಡಗೈ ಸ್ಪಿನ್ನರ್ ಸೋಫಿ (15ಕ್ಕೆ3) ಮುಂದೆ ಆತಿಥೇಯರ ಗೆಲುವಿನ ಕನಸು ಕಮರಿತು.


ಮೂರು ವಿಕೆಟ್ ಪಡೆದ ಇಂಗ್ಲೆಂಡ್ ತಂಡದ ಸೋಫಿ ಎಕ್ಲೆಲೆಸ್ಟೋನ್ ಅವರನ್ನು ಸಹ ಆಟಗಾರ್ತಿಯರು ಅಭಿನಂದಿಸಿದರು –ಪಿಟಿಐ ಚಿತ್ರ

ಸಂಕ್ಷಿಪ್ತ ಸ್ಕೋರ್: ಇಂಗ್ಲೆಂಡ್: 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 197 (ಡ್ಯಾನಿ ವೈಟ್ 75, ನಥಾಲಿ ಶಿವರ್ ಬ್ರಂಟ್ 77, ಎಮಿ ಜೋನ್ಸ್ 23, ರೇಣುಕಾ ಸಿಂಗ್ 27ಕ್ಕೆ3, ಶ್ರೇಯಾಂಕ ಪಾಟೀಲ 44ಕ್ಕೆ2, ಸೈಕಾ ಇಶಾಕಿ 38ಕ್ಕೆ1) ಭಾರತ:20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 159 (ಶೆಫಾಲಿ ವರ್ಮಾ 52, ಹರ್ಮನ್‌ಪ್ರೀತ್ ಕೌರ್ 26, ರಿಚಾ ಘೋಷ್ 21, ಸೋಫಿ ಎಕ್ಲೆಸ್ಟೋನ್ 15ಕ್ಕೆ3) **ಫಲಿತಾಂಶ:** ಇಂಗ್ಲೆಂಡ್ ತಂಡಕ್ಕೆ 38 ರನ್ ಜಯ.

ಕನ್ನಡತಿ ಶ್ರೇಯಾಂಕಗೆ ಎರಡು ವಿಕೆಟ್


ಶ್ರೇಯಾಂಕ ಪಾಟೀಲ

ಈ ಪಂದ್ಯದ ಮೂಲಕ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ ಬೆಂಗಳೂರಿನ ಶ್ರೇಯಾಂಕ ಪಾಟೀಲ ಅವರು ಎರಡು ವಿಕೆಟ್ ಗಳಿಸಿದರು.

ಆಫ್‌ಬ್ರೇಕ್ ಬೌಲರ್ ಆಗಿರುವ ಶ್ರೇಯಾಂಕ ನಾಲ್ಕು ಓವರ್‌ಗಳಲ್ಲಿ 44 ರನ್ ಕೊಟ್ಟರು. ಆದರೆ, ಇಂಗ್ಲೆಂಡ್ ತಂಡದ ನಾಯಕಿ ಹೀಥರ್ ನೈಟ್ (6; 7ಎ) ಅವರನ್ನು ಕ್ಲೀನ್ ಬೌಲ್ಡ್ ಮಾಡುವ ಮೂಲಕ ತಮ್ಮ ವಿಕೆಟ್ ಖಾತೆ ತೆರೆದರು. ಇನಿಂಗ್ಸ್‌ನ ಕೊನೆಯ ಓವರ್‌ನಲ್ಲಿ ಅವರು ಎಮಿ ಜೋನ್ಸ್ (23; 9ಎ) ಅವರ ವಿಕೆಟ್ ಕೂಡ ಕಬಳಿಸಿದರು.

12ನೇ ಓವರ್ ಬೌಲಿಂಗ್ ಮಾಡಿದ ಅವರು ವೈಟ್ ಅವರ ಕ್ಯಾಚ್ ಬಿಟ್ಟರು. ಇದರಿಂದ ವೈಟ್ ಅವರು 16ನೇ ಓವರ್‌ನವರೆಗೂ ಬ್ಯಾಟ್ ಬೀಸಿದರು.

ಪೈರೆಟ್ಸ್‌ಗೆ ಮಣಿದ ಟೈಟನ್ಸ್

ಪ್ರೊ ಕಬಡ್ಡಿ ಲೀಗ್: ಯು.ಪಿ. ಯೋಧಾಸ್ ತಂಡಕ್ಕೆ ಜಯ

ಅಹಮದಾಬಾದ್: ಹಾಲಿ ಆವೃತ್ತಿಯಲ್ಲಿ ಸಚಿನ್ ಅವರ ಮೊದಲ 'ಸೂಪರ್ ಟೆನ್' ನೆರವಿನಿಂದ ಪಟ್ನಾ ಪೈರೆಟ್ಸ್ ತಂಡವು ಪ್ರೊ ಕಬಡ್ಡಿ ಲೀಗ್‌ನ 10ನೇ ಆವೃತ್ತಿಯಲ್ಲಿ ಬುಧವಾರ ಶುಭಾರಂಭ ಮಾಡಿತು. ದಿನದ ಎರಡನೇ ಪಂದ್ಯವೂ ಏಕಪಕ್ಷೀಯವಾಗಿದ್ದು ಯು.ಪಿ. ಯೋಧಾಸ್ ತಂಡ, ಹರಿಯಾಣ ಸ್ಟೀಲರ್ಸ್ ತಂಡದ ಮೇಲೆ 30 ಪಾಯಿಂಟ್ ಅಂತರದ ಜಯಗಳಿಸಿತು.

ಟ್ರಾನ್ಸ್ ಸ್ಟೇಡಿಯಾದಲ್ಲಿ ನಡೆದ ಪಂದ್ಯದಲ್ಲಿ ಪೈರೆಟ್ಸ್ ತಂಡವು 50–28ರಿಂದ ತೆಲುವು ಟೈಟನ್ಸ್ ತಂಡವನ್ನು ಸುಲಭವಾಗಿ ಮಣಿಸಿತು. ವಿರಾಮದ ವೇಳೆಯೇ ವಿಜೇತ ತಂಡ 28–16 ಪಾಯಿಂಟ್‌ಗಳ ಉತ್ತಮ ಮುನ್ನಡೆ ಪಡೆದಿತ್ತು.

ಪವನ್ ಸೆಹರಾವತ್ ನೇತೃತ್ವದ ಟೈಟನ್ಸ್ ತಂಡಕ್ಕೆ ಟೂರ್ನಿಯಲ್ಲಿ ಇದು ಸತತ ಎರಡನೇ ಸೋಲು. ಮೊದಲ ಪಂದ್ಯದಲ್ಲಿ ಆತಿಥೇಯ ಗುಜರಾತ್ ಜೈಂಟ್ಸ್ ಎದುರು 38–32ರಿಂದ ಪರಾಭವಗೊಂಡಿತ್ತು.

ಸಾಂಘಿಕ ಆಟ ಪ್ರದರ್ಶಿಸಿದ ಗುಜರಾತ್ ತಂಡ ಎರಡು ಬಾರಿ ಎದುರಾಳಿಯನ್ನು ಆಲೌಟ್ ಮಾಡಿತು. ಸಚಿನ್ ರೈಡಿಂಗ್‌ನಿಂದಲೇ 14 ಪಾಯಿಂಟ್ಸ್ ತಂದುಕೊಟ್ಟರೆ, ಮಂಜಿತ್ 8 ಅಂಕ ಗಳಿಸಿದರು. ಅಂಕಿತ್ ಜಗ್ಲಾನ್ ಮತ್ತು ನೀರಜ್ ಕುಮಾರ್ ಕ್ರಮವಾಗಿ ಟ್ಯಾಕಲ್‌ನಿಂದ 5 ಮತ್ತು 4 ಪಾಯಿಂಟ್ಸ್ ಪಡೆದರು. ತೆಲುಗು ತಂಡದ ನಾಯಕ ಪವನ್ ಶೆರಾವತ್ 11 ಅಂಕಗಳನ್ನು ತಂಡಕ್ಕೆ ಗಳಿಸಿಕೊಟ್ಟರು. ಆದರೆ ಆರು ಬಾರಿ ಅವರನ್ನು ಎದುರಾಳಿಗಳು ಕ್ಯಾಚ್ ಮಾಡಿ ಲಗಾಮು ಹಾಕಿದರು.


ಪಟ್ನಾ ಪೈರೆಟ್ಸ್ ಮತ್ತು ತೆಲುಗು ಟೈಟನ್ಸ್ ತಂಡಗಳ ಪೈಪೋಟಿ

ಯೋಧಾಸ್‌ಗೆ ಜಯ: ದಿನದ ಎರಡನೇ ಪಂದ್ಯದಲ್ಲಿ ಯು.ಪಿ. ಯೋಧಾಸ್ ತಂಡ 57–27 ಪಾಯಿಂಟ್ಸ್‌ಗಳಿಂದ (ವಿರಾಮದ ವೇಳೆ 29–14) ಹರಿಯಾಣ ಸ್ಟೀಲರ್ಸ್ ಮೇಲೆ ಸುಲಭ ಜಯ ಸಾಧಿಸಿತು. ರೈಡರ್‌ಗಳಾದ ಸುರೇಂದರ್ ಗಿಲ್ 13 ಮತ್ತು ಪ್ರದೀಪ್ ನರ್ವಾಲ್ 12 ಪಾಯಿಂಟ್ಸ್ ಗಳಿಸಿ ಯೋಧಾಸ್ ಗೆಲುವಿನಲ್ಲಿ ಮಿಂಚಿದರು. ಲೆಫ್ಟ್ ಕಾರ್ನರ್ ಸುಮಿತ್ ಕ್ಯಾಚಿಂಗ್‌ನಲ್ಲಿ ಎಂಟು ಪಾಯಿಂಟ್ಸ್ ಗಳಿಸಿದ್ದು ಗಮನ ಸೆಳೆಯಿತು.

ಬಾಂಗ್ಲಾ ವಿರುದ್ಧ ಎರಡನೇ ಟೆಸ್ಟ್: ಕುಸಿದ ಕಿವೀಸ್

ಚೆಂಡು ತಡೆದು ಔಟಾದ ರಹೀಂ

ಮೀರಪುರ, ಬಾಂಗ್ಲಾದೇಶ (ಪಿಟಿಐ): ಬಾಂಗ್ಲಾದೇಶ ತಂಡದ ಬ್ಯಾಟರ್ ಮುಷ್ಫಿಕುರ್ ರಹೀಂ ನ್ಯೂಜಿಲೆಂಡ್ ಎದುರಿನ ಟೆಸ್ಟ್‌ನಲ್ಲಿ ಕೈಯಿಂದ ಚೆಂಡು ತಡೆದು 'ಫೀಲ್ಡರ್‌ಗಳಿಗೆ ಅಡ್ಡಿಪಡಿಸಿದ್ದಕ್ಕಾಗಿ' ಔಟಾಗಿದ್ದಾರೆ.

ಟೆಸ್ಟ್ ಕ್ರಿಕೆಟ್‌ನಲ್ಲಿ ಈ ರೀತಿ ಔಟಾದ ಬಾಂಗ್ಲಾದ ಮೊದಲ ಹಾಗೂ ಒಟ್ಟಾರೆ ಎರಡನೇ ಆಟಗಾರ ಅವರಾಗಿದ್ದಾರೆ. ಶೇರ್ ಎ ಬಾಂಗ್ಲಾ ಕ್ರೀಡಾಂಗಣದಲ್ಲಿ ಬುಧವಾರ ಆರಂಭವಾದ 2ನೇ ಟೆಸ್ಟ್‌ನ ಮೊದಲ ದಿನ ಈ ಘಟನೆ ನಡೆಯಿತು. ಕಿವೀಸ್ ವೇಗಿ ಕೈಲ್ ಜೆಮಿಸನ್ ಹಾಕಿದ ನೇರ ಎಸೆತವನ್ನು ಆಡಿದ ರಹೀಮ್, ಆಫ್‌ಸ್ಟಂಪ್‌ನಿಂದ ದೂರದಲ್ಲಿ ಪುಟಿದು ಹಿಂದೆ ಸಾಗುತ್ತಿದ್ದ ಚೆಂಡನ್ನು ರಹೀಮ್ ತಡೆದರು. ಕೂಡಲೇ ಕಿವೀಸ್ ಆಟಗಾರರು ಔಟ್ ನೀಡಬೇಕೆಂದು ಅಪೀಲ್ ಮಾಡಿದರು.

ಅಂಪೈರ್‌ಗಳಾದ ಪಾಲ್ ರಿಫೆಲ್ ಮತ್ತು ರಾಡ್ ಟಕರ್ ಅವರಿಬ್ಬರೂ ಸಮಾಲೋಚನೆ ನಡೆಸಿ ಟಿ.ವಿ. ಅಂಪೈರ್ ಎಹಸಾನ್ ರಝಾ ಅವರಿಗೆ ಪರಿಶೀಲಿಸುವಂತೆ ಕೋರಿದರು. ರಿಪ್ಲೇ ವೀಕ್ಷಿಸಿದ ರಝಾ ಔಟ್ ನೀಡಿದರು.

'ನಿಯಮದ ಪ್ರಕಾರ 37.1.2ರಲ್ಲಿ ಉಲ್ಲೇಖಿಸಿರುವಂತೆ ಫೀಲ್ಡಿಂಗ್‌ಗೆ ಅಡ್ಡಿಪಡಿಸುವ ಬ್ಯಾಟರ್‌ನನ್ನು ಔಟ್ ಎಂದು ಪರಿಗಣಿಸಲಾಗುತ್ತದೆ. 2017ರಲ್ಲಿ ಪರಿಷ್ಕರಣೆಗೊಂಡ ನಿಯಮದಲ್ಲಿ ಇದು ಉಲ್ಲೇಖವಾಗಿದೆ. ಅದಕ್ಕೂ ಮುನ್ನ ಇದನ್ನು ಹ್ಯಾಂಡ್ಲಿಂಗ್ ದಿ ಬಾಲ್ ಎಂದು ಕರೆಯಲಾಗುತ್ತಿತ್ತು. ಬದಲಾವಣೆಯ ನಂತರ ಫೀಲ್ಡಿಂಗ್‌ಗೆ ಅಡ್ಡಿಪಡಿಸುವುದು ಎಂದು ಪರಿಗಣಿಸಲಾಗುತ್ತದೆ'. ಆದರೆ ಈ ವಿಕೆಟ್ ಬೌಲರ್ ಖಾತೆ ಸೇರುವುದಿಲ್ಲ.

2001ರಲ್ಲಿ ಇಂಗ್ಲೆಂಡ್ ತಂಡದ ನಾಯಕರಾಗಿದ್ದ ಮೈಕೆಲ್ ವಾನ್ ಭಾರತ ಎದುರಿನ ಟೆಸ್ಟ್‌ನಲ್ಲಿ ಇದೇ ರೀತಿ ಔಟಾಗಿದ್ದರು.

ರಹೀಂ 83 ಎಸೆತಗಳಲ್ಲಿ 35 ರನ್ ಗಳಿಸಿದರು. ಅದರಲ್ಲಿ ಮೂರು ಬೌಂಡರಿ ಮತ್ತು ಒಂದು ಸಿಕ್ಸರ್ ಸೇರಿವೆ.

ಕುಸಿದ ಕಿವೀಸ್: ಟಾಸ್ ಗೆದ್ದ ಬಾಂಗ್ಲಾದೇಶ ತಂಡವು ಮೊದಲು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ನ್ಯೂಜಿಲೆಂಡ್‌ನ ಸ್ಪಿನ್ನರ್ ಮಿಚೆಲ್ ಸ್ಯಾಂಟನರ್ (65ಕ್ಕೆ3) ಮತ್ತು ಗ್ಲೆನ್ ಫಿಲಿಪ್ಸ್ (31ಕ್ಕೆ3) ಅವರ ದಾಳಿಯ ಮುಂದೆ 66.2 ಓವರ್‌ಗಳಲ್ಲಿ 172 ರನ್ ಗಳಿಸಿ ಕುಸಿಯಿತು.


ಬಾಂಗ್ಲಾದೇಶ ತಂಡದ ಬ್ಯಾಟರ್ ಮುಷ್ಫಿಕುರ್ ರಹೀಂ –ಎಎಫ್‌ಪಿ ಚಿತ್ರ

ಇದಕ್ಕುತ್ತವಾಗಿ ನ್ಯೂಜಿಲೆಂಡ್ ಮೊದಲ ದಿನದಾಟದ ಕೊನೆಗೆ 55 ರನ್‌ಗಳಲ್ಲಿ ಐದು ವಿಕೆಟ್ ಕಳೆದುಕೊಂಡು ಸಂಕಷ್ಟದಲ್ಲಿದೆ. ಬಾಂಗ್ಲಾದ ಮೆಹದಿ ಹಸನ್ ಮಿರಾಜ್ (17ಕ್ಕೆ3) ಮತ್ತು ತೈಜುಲ್ ಇಸ್ಲಾಂ (29ಕ್ಕೆ2) ಕಿವೀಸ್ ಬ್ಯಾಟಿಂಗ್ ಬೆನ್ನೆಲುಬು ಮುರಿದರು. ಡೆರಿಲ್ ಮಿಚೆಲ್ (ಬ್ಯಾಟಿಂಗ್ 12) ಮತ್ತು ಗ್ಲೆನ್ ಫಿಲಿಪ್ಸ್ (ಬ್ಯಾಟಿಂಗ್ 5) ಕ್ರೀಸ್‌ನಲ್ಲಿದ್ದಾರೆ.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಬಾಂಗ್ಲಾದೇಶ: 66.2 ಓವರ್‌ಗಳಲ್ಲಿ 172 (ಮುಷ್ಫಿಕುರ್ ರಹೀಮ್ 35, ಶಹಾದತ್ ಹುಸೇನ್ 31, ಮೆಹದಿ ಹಸನ್ ಮಿರಾಜ್ 20, ಅಜಾಜ್ ಪಟೇಲ್ 54ಕ್ಕೆ2, ಮಿಚೆಲ್ ಸ್ಯಾಂಟನರ್ 65ಕ್ಕೆ3, ಗ್ಲೆನ್ ಫಿಲಿಪ್ಸ್ 31ಕ್ಕೆ3) ನ್ಯೂಜಿಲೆಂಡ್: 12. 4 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 55 (ಕೇನ್ ವಿಲಿಯಮ್ಸನ್ 13, ಡೆರಿಲ್ ಮಿಚೆಲ್ ಬ್ಯಾಟಿಂಗ್ 12, ಗ್ಲೆನ್ ಫಿಲಿಪ್ಸ್ ಬ್ಯಾಟಿಂಗ್ 5, ಮೆಹದಿ ಹಸನ್ ಮಿರಾಜ್ 17ಕ್ಕೆ3, ತೈಜುಲ್ ಇಸ್ಲಾಂ 29ಕ್ಕೆ2).

ಟಿ20 ಕ್ರಿಕೆಟ್ ವಿಶ್ವಕಪ್: ಪಂದ್ಯ ನಡೆಯುವ ತಾಣಗಳ ಪರಿಶೀಲನೆ



ಸೇಂಟ್ ಜಾನ್ಸ್, ಆ್ಯಂಟಿಗಾ (ಪಿಟಿಐ): ಮುಂದಿನ ವರ್ಷ ಟಿ20 ಕ್ರಿಕೆಟ್ ವಿಶ್ವಕಪ್ ಪಂದ್ಯಗಳು ನಡೆಯಲಿರುವ ತಾಣಗಳನ್ನು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ ಮತ್ತು ಕ್ರಿಕೆಟ್ ವೆಸ್ಟ್ ಇಂಡೀಸ್ ನಿಯೋಗವು ಎರಡನೇ ಬಾರಿ ಪರಿಶೀಲನೆ ನಡೆಸಿದವು.

ತಾಣಗಳಲ್ಲಿ ಆಗಿರುವ ಎಲ್ಲ ಸಿದ್ಧತೆಗಳನ್ನು ಎರಡು ವಾರಗಳ ಅವಧಿಯಲ್ಲಿ ಅವಲೋಕಿಸಲಾಗುತ್ತಿದೆ. ನವೆಂಬರ್ 30ರಿಂದ ಆರಂಭವಾಗಿರುವ ಪರಿಶೀಲನೆಯು ಡಿಸೆಂಬರ್ 15ರವರೆಗೂ ನಡೆಯಲಿದೆ.

'ಪಂದ್ಯಗಳು ನಡೆಯಲಿರುವ ಕ್ರೀಡಾಂಗಣಗಳ ಪಿಚ್ ಮತ್ತು ಔಟ್‌ಫೀಲ್ಡ್‌ಗಳ ಸಿದ್ಧತೆ, ಅಭ್ಯಾಸದ ಸೌಲಭ್ಯಗಳು, ಆಟಗಾರರ ಡ್ರೆಸ್ಸಿಂಗ್ ರೂಮ್, ಅಧಿಕೃತ ಪ್ರಸಾರಕರ ಮತ್ತು ಮಾಧ್ಯಮ ಕೇಂದ್ರಗಳ ಸೌಲಭ್ಯಗಳು, ಐಟಿ ಹಾಗೂ ಭದ್ರತಾ ವ್ಯವಸ್ಥೆಗಳು, ಹೋಟೆಲ್ ಮತ್ತು ಅತಿಥಿಗೃಹಗಳು, ಫ್ಯಾನ್ ಪಾರ್ಕ್ ಸೇರಿದಂತೆ ಪ್ರಮುಖ ಸ್ಥಳಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗುವುದು' ಎಂದು ಐಸಿಸಿಯ ಕಾರ್ಯ-ಚಟುವಟಿಕೆಗಳ ಮುಖ್ಯಸ್ಥರಾಗಿರುವ ಖುಷಿಯಾಲ್ ಸಿಂಗ್ ತಿಳಿಸಿದ್ದಾರೆ.

ಒಂಬತ್ತನೇ ಆವೃತ್ತಿಯ ಈ ಟೂರ್ನಿಯಲ್ಲಿ 20 ತಂಡಗಳು ಆಡಲಿವೆ. ತಂಡಗಳನ್ನು ನಾಲ್ಕು ಗುಂಪುಗಳಲ್ಲಿ ವಿಂಗಡಿಸಲಾಗಿದೆ. 55 ಪಂದ್ಯಗಳು ನಡೆಯಲಿವೆ. ಜೂನ್ 4 ರಿಂದ 30ರವರೆಗೆ ಟೂರ್ನಿ ನಡೆಯಲಿದೆ.

ವೆಸ್ಟ್ ಇಂಡೀಸ್ ಮತ್ತು ಅಮೆರಿಕ ಜಂಟಿಯಾಗಿ ಆತಿಥ್ಯ ವಹಿಸುತ್ತಿವೆ.

ಪಂದ್ಯಗಳು ನಡೆಯಬೇಕಿದ್ದ ಪ್ರಮುಖ ಸ್ಥಳಗಲ್ಲಿ ಒಂದಾದ ಡಾಮಿನಿಕಾ ಕ್ರೀಡಾಂಗಣವನ್ನು ಪಟ್ಟಿಯಿಂದ ಕೈಬಿಡಲಾಗಿದೆ.

'ಸಿದ್ಧತೆಗಳನ್ನು ಪೂರ್ಣಗೊಳಿಸಲು ನಿಗದಿಪಡಿಸಿರುವ ಗಡುವಿನಲ್ಲಿ ಗುತ್ತಿಗೆದಾರರಿಗೆ ಸಾಧ್ಯವಾಗಿಲ್ಲವೆಂದು ಡಾಮಿನಿಕಾ ಕ್ರೀಡಾ ಸಚಿವಾಲಯವು ತಿಳಿಸಿದೆ. ಆದ್ದರಿಂದ ಟಿ20 ವಿಶ್ವಕಪ್ ಟೂರ್ನಿಯ ಯಾವುದೇ ಪಂದ್ಯವನ್ನೂ ಅಲ್ಲಿ ಆಯೋಜಿಸದಿರಲು ನಿರ್ಧರಿಸಲಾಗಿದೆ' ಎಂದು ಪ್ರಕಟಣೆಯಲ್ಲಿ ಉಲ್ಲೇಖಿಸಲಾಗಿದೆ.

ಎರಡು ಪಂದ್ಯಗಳಲ್ಲಿ ನಾವೇ ಜಯ ಬಿಟ್ಟುಕೊಟ್ಟೆವು...

ಬುಲ್ಸ್ ತಂಡ ಅತ್ಯುತ್ತಮ: ರಣಧೀರ್

ಬೆಂಗಳೂರು: 'ನಮ್ಮ ತಂಡ ಅತ್ಯುತ್ತಮವಾಗಿದೆ. ಆದರೆ ಹಿರಿಯ ಆಟಗಾರರು ಮಾಡಿದ ತಪ್ಪುಗಳಿಂದಾಗಿಯೇ ನಾವು ಅಹಮದಾಬಾದಿನಲ್ಲಿ ನಡೆದ ಪ್ರೊ ಕಬಡ್ಡಿ ಲೀಗ್‌ನ ಎರಡು ಪಂದ್ಯಗಳನ್ನು ಅಲ್ಪಅಂತರದಲ್ಲಿ ಕಳೆದುಕೊಳ್ಳಬೇಕಾಯಿತು. ಇದು ಪುನರಾವರ್ತನೆಯಾಗದಂತೆ ನೋಡಿಕೊಳ್ಳುತ್ತೇವೆ' ಎಂದು ಬೆಂಗಳೂರು ಬುಲ್ಸ್ ತಂಡದ ಕೋಚ್ ರಣಧೀರ್ ಸಿಂಗ್ ಸೆಹರಾವತ್ ಹೇಳಿದರು.

ಬುಧವಾರ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಅವರು ಮೊದಲ ಚರಣದ ಪಂದ್ಯಗಳಲ್ಲಿ 'ನಮ್ಮ ಎದುರಾಳಿಗಳು (ಗುಜರಾತ್ ಜೈಂಟ್ಸ್ ಮತ್ತು ಬೆಂಗಾಲ್ ವಾರಿಯರ್ಸ್) ಚೆನ್ನಾಗಿ ಆಡಿದರು ಎನ್ನುವುದಕ್ಕಿಂತ ನಾವು ಅವರಿಗೆ ಗೆಲ್ಲಬೇಕಾಗಿದ್ದ ಪಂದ್ಯ ಕೊಟ್ಟೆವು ಎನ್ನುವುದು ಸೂಕ್ತ. ಗೆಲ್ಲುವಂಥ ಪಂದ್ಯದಲ್ಲಿ ನಾವು ಕೊನೆಗಳಿಗೆಯಲ್ಲಿ ತಪ್ಪು ಮಾಡಿದೆವು. ಸುರ್ಜಿತ್ ಅಂಥ ಅನುಭವಿ ಆಟಗಾರರೇ ತಪ್ಪು ಮಾಡಿದರು' ಎಂದು ವಿಶ್ಲೇಷಿಸಿದರು. ಬುಲ್ಸ್ ಮೊದಲ ಪಂದ್ಯದಲ್ಲಿ ಜೈಂಟ್ಸ್ ಎದುರು 34–31ರಲ್ಲಿ ಸೋತರೆ, ಎರಡನೇ ಪಂದ್ಯವನ್ನು ವಾರಿಯರ್ಸ್ ಎದುರು 30–32ರಲ್ಲಿ ಸೋತಿತ್ತು.

'ಕಳೆದ ಬಾರಿ ನಮ್ಮ ರೈಡಿಂಗ್ ಪ್ರಬಲವಾಗಿತ್ತು. ರಕ್ಷಣಾ ವಿಭಾಗ ದುರ್ಬಲವಾಗಿತ್ತು ಎಂಬ ಮಾತುಗಳಿದ್ದವು. ಈ ಸಲ ಎರಡೂ ವಿಭಾಗ ಚೆನ್ನಾಗಿದೆ. ಅನುಭವಿ ಆಟಗಾರರ ಜೊತೆ ಯುವ ಆಟಗಾರರೂ ತಂಡದಲ್ಲಿ ಇದ್ದಾರೆ. ಈಗ ತವರು ನೆಲದಲ್ಲಿ ಆಡುತ್ತಿದ್ದೇವೆ. ಅಭಿಮಾನಿಗಳ ನಿರೀಕ್ಷೆ ಈಡೇರಿಸುತ್ತೇವೆ' ಎಂದು ಅವರು ಭರವಸೆ ನೀಡಿದರು.

ಗೋಷ್ಠಿಯಲ್ಲಿ ಹಾಜರಿದ್ದ ತಂಡದ ಪ್ರಮುಖ ರೈಡರ್ ಭರತ್ ಅವರೂ 'ನಮ್ಮ ತಪ್ಪುಗಳಿಂದಾಗಿ ಸೋಲಬೇಕಾಯಿತು. ಮುಂದಿನ ಪಂದ್ಯಗಳಲ್ಲಿ ತಿದ್ದಿಕೊಳ್ಳುತ್ತೇವೆ. ಅಭಿಮಾನಿಗಳು ಬೆಂಬಲಿಸಬೇಕು' ಎಂದರು.

ಪ್ರೊ ಕಬಡ್ಡಿ ಲೀಗ್‌ಗೆ ಬೆಂಗಳೂರು ಬುಲ್ಸ್ ಕೊಡುಗೆ ಅಪಾರ. ವೀಕ್ಷಕರ ಸಂಖ್ಯೆ ಹೆಚ್ಚಲು ಬುಲ್ಸ್ ಕಾಣಿಕೆಯಿದೆ. ಅಜಯ್ ಠಾಕೂರ್, ಮಂಜಿತ್ ಚಿಲ್ಲಾರ್, ಪ್ರದೀಪ್ ನರ್ವಾಲ್, ಸೌರಬ್ ನಂದಾಲ್, ಪವನ್ ಶೆರಾವತ್, ರವೀಂದ್ರ ಪಹಲ್ ಇವರೆಲ್ಲರೂ ಬುಲ್ಸ್ ತಂಡದಿಂದಲೇ ತಾರೆಗಳಾದವರು' ಎಂದು ಅನುಭವಿ ತರಬೇತುದಾರ ರಣಧೀರ್ ನೆನಪಿಸಿದರು.


ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ರಣಧೀರ್ ಸಿಂಗ್. ಆಟಗಾರ ವಿಕಾಸ್ ಖಂಡೋಲಾ ಕೂಡ ಪಾಲ್ಗೊಂಡಿದ್ದರು.

'ನಾವು ಒಂದೇ ಸಲ ಕಪ್ ಗೆದ್ದಿರಬಹುದು. ಒಂದು ಸಲ ರನ್ನರ್ ಅಪ್ ಆಗಿದ್ದೇವೆ. ನಾಲ್ಕು ಸಲ ಮೂರನೇ ಸ್ಥಾನ ಪಡೆದಿದ್ದೇವೆ. ಆರು ಸಲ ಸೆಮಿಫೈನಲ್ ತಲುಪಿದ್ದೇವೆ. ಬೇರಾವ ತಂಡವೂ ಇಷ್ಟೊಂದು ಯಶಸ್ಸು ಪಡೆದಿಲ್ಲ' ಎಂದರು.

'ತಂಡ ತರಬೇತಿ ಶಿಬಿರ ಆರಂಭಿಸಿದಾಗ ಕೆಲ ಪ್ರಮುಖ ಆಟಗಾರರು ಲಭ್ಯರಾಗಲಿಲ್ಲ. ನೌಕಾಪಡೆಯಲ್ಲಿರುವ ಸುರ್ಜಿತ್ ಸಿಂಗ್, ಭರತ್, ಸಚಿನ್ ನರ್ವಾಲ್ ಅವರು ತಾಂತ್ರಿಕ ಕಾರಣಗಳಿಂದ ಶಿಬಿರಕ್ಕೆ ಸೇರ್ಪಡೆಯಾಗಲು ಆಗಲಿಲ್ಲ. ಹೀಗಾಗಿ ಸಂಯೋಜನೆಗೆ ಸ್ವಲ್ಪ ತೊಡಕಾಯಿತು' ಎಂದರು.

ತಂಡದ ಪ್ರಮುಖ ರೈಡರ್‌ಗಳಲ್ಲಿ ಒಬ್ಬರಾಗಿರುವ ಅಭಿಷೇಕ್ ಸಿಂಗ್ ಕೈ ಮೂಳೆ ಮುರಿತದಿಂದ ಈಗಷ್ಟೇ ಚೇತರಿಸಿಕೊಂಡಿದ್ದಾರೆ. ಅವರು ಪೂರ್ಣಪ್ರಮಾಣದಲ್ಲಿ ಫಿಟ್ ಆದ ಮೇಲೆ ಅವಕಾಶ ಸಿಗುತ್ತದೆ ಎಂದರು.

ತಂಡದ ಹಿರಿಯ ಆಟಗಾರರದ ಸುರ್ಜೀತ್, ವಿಕಾಸ್ ಖಂಡೋಲಾ, ಭರತ್ ಸಿಂಗ್, ಸೌರಭ್ ಉಪಸ್ಥಿತರಿದ್ದರು.

ರ‍್ಯಾಂಕಿಂಗ್: ಅಗ್ರಸ್ಥಾನಕ್ಕೆ ಬಿಷ್ಣೋಯಿ


ರವಿ ಬಿಷ್ಣೋಯಿ

ದುಬೈ (ಪಿಟಿಐ): ಆಸ್ಟ್ರೇಲಿಯಾ ವಿರುದ್ಧ ಇತ್ತೀಚೆಗೆ ಉತ್ತಮ ಬೌಲಿಂಗ್ ಪ್ರದರ್ಶನ ನೀಡಿ 'ಸರಣಿಯ ಆಟಗಾರ' ಗೌರವಕ್ಕೆ ಪಾತ್ರರಾಗಿದ್ದ ಯುವ ಲೆಗ್‌ಸ್ಪಿನ್ನರ್ ರವಿ ಬಿಷ್ಣೋಯಿ ಅವರು ಬುಧವಾರ ಪ್ರಕಟವಾದ ಐಸಿಸಿ ಟಿ20 ವಿಶ್ವಕಪ್ ರ‍್ಯಾಂಕಿಂಗ್ ಪಟ್ಟಿಯ ಬೌಲರ್‌ಗಳ ವಿಭಾಗದಲ್ಲಿ ಅಗ್ರಸ್ಥಾನಕ್ಕೆ ಏರಿದ್ದಾರೆ.

23 ವರ್ಷದ ಬಿಷ್ಣೋಯಿ, ಆಸ್ಟ್ರೇಲಿಯಾ ವಿರುದ್ಧ ಐದು ಪಂದ್ಯಗಳ ಸರಣಿಯಲ್ಲಿ 9 ವಿಕೆಟ್‌ಗಳನ್ನು ಪಡೆದು ಯಶಸ್ವಿ ಬೌಲರ್ ಎನಿಸಿದ್ದರು. 699 ರೇಟಿಂಗ್ ಪಾಯಿಂಟ್ಸ್ ಪಡೆದಿರುವ ಅವರು ಅಫ್ಘಾನಿಸ್ತಾನದ ಸ್ಪಿನ್ನರ್ ರಶೀದ್ ಖಾನ್ (692) ಅವರನ್ನು ಹಿಂದೆಹಾಕಿದ್ದಾರೆ. ಶ್ರೀಲಂಕಾದ ಸ್ಪಿನ್ನರ್ ವನೀಂದು ಹಸರಂಗ ಮತ್ತು ಇಂಗ್ಲೆಂಡ್‌ನ ಅದಿಲ್ ರಶೀದ್ ಜಂಟಿಯಾಗಿ (679) ಮೂರನೇ ಸ್ಥಾನದಲ್ಲಿದ್ದಾರೆ. ಶ್ರೀಲಂಕಾದ ಮಹೀಷ ತೀಕ್ಷಣ (677) ಅವರು ಐದನೇ ಸ್ಥಾನದಲ್ಲಿದ್ದಾರೆ.

ರವಿ ಬಿಷ್ಣೋಯಿ ಮೊದಲ ಹತ್ತರಲ್ಲಿ ಸ್ಥಾನ ಪಡೆದಿರುವ ಭಾರತದ ಏಕೈಕ ಬೌಲರ್ ಆಗಿದ್ದಾರೆ. ಅಕ್ಷರ್ ಪಟೇಲ್ ಬಡ್ತಿ ಪಡೆದಿದ್ದು 9 ಸ್ಥಾನ ಮೇಲೇರಿ 18ನೇ ಸ್ಥಾನದಲ್ಲಿದ್ದಾರೆ.

ಸೂರ್ಯಕುಮಾರ್ ಯಾದವ್ ಬ್ಯಾಟರ್‌ಗಳ ವಿಭಾಗದಲ್ಲಿ ಅಗ್ರಸ್ಥಾನದಲ್ಲೇ ಮುಂದುವರಿದಿದ್ದಾರೆ. ಅವರು ಆಸ್ಟ್ರೇಲಿಯಾ ವಿರುದ್ಧ ಆಡಿದ್ದ ಟಿ20 ತಂಡದ ನಾಯಕರಾಗಿದ್ದು ಭಾರತ 4–1 ರಿಂದ ಸರಣಿ ಜಯಿಸಿತ್ತು.

ಆರಂಭ ಆಟಗಾರ ಋತುರಾಜ್ ಗಾಯಕವಾಡ್ ಅವರು ಒಂದು ಸ್ಥಾನ ಕೆಳಗಿಳಿದಿದ್ದು ಏಳನೇ ಸ್ಥಾನದಲ್ಲಿದ್ದಾರೆ. ಹಾರ್ದಿಕ್ ಪಾಂಡ್ಯ ಆಲ್‌ರೌಂಡರ್‌ಗಳ ಪಟ್ಟಿಯಲ್ಲಿ ಮೂರನೇ ಸ್ಥಾನದಲ್ಲಿದ್ದಾರೆ.

ಕಳಪೆ ಆಹಾರ: ಸ್ಪರ್ಧೆಯಿಂದ ಹೊರಗುಳಿದ ಆಟಗಾರರು

ಬೆಂಗಳೂರು: ಪಂಜಾಬ್‌ನ ಲುಧಿಯಾನದಲ್ಲಿ ನಡೆಯುತ್ತಿರುವ 73ನೇ ಸೀನಿಯರ್ ನ್ಯಾಷನಲ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಕಳಪೆ ಆಹಾರ ಸೇವನೆಯಿಂದಾಗಿ ಮೂರು ಆಟಗಾರರು ಅಸ್ವಸ್ಥಗೊಂಡು ಸ್ಪರ್ಧೆಯಿಂದ ಹೊರಗುಳಿಯುವಂತಾಗಿದೆ.

ಟೂರ್ನಿಗಾಗಿ ನಿರ್ಮಿಸಿದ್ದ ತಾತ್ಕಾಲಿಕ ಅಡುಗೆಮನೆಯಲ್ಲಿ ಆಹಾರವನ್ನು ಅನೈರ್ಮಲ್ಯವಾಗಿ ತಯಾರಿಸುತ್ತಿರುವ ಕುರಿತು ವಿಡಿಯೊ ತುಣುಕನ್ನು ಬಾಸ್ಕೆಟ್‌ಬಾಲ್ ಆಟಗಾರ ಜೋಗಿಂದರ್ ಸಿಂಗ್ ಸಹರಾನ್ ಬುಧವಾರ ಹಂಚಿಕೊಂಡಿದ್ದಾರೆ.

'ಇಂತಹ ಕಳಪೆ ಗುಣಮಟ್ಟದ ಆಹಾರವನ್ನು ನಾವು ಸೇವಿಸಬೇಕೆಂದು ಅವರು ಹೇಗೆ ಯೋಚಿಸುತ್ತಾರೆ? ಬಹುತೇಕ ಆಟಗಾರರಿಗೆ ತಮ್ಮ ಆಹಾರ ಹೇಗೆ ತಯಾರಿಸಲಾಗಿದೆ ಎಂಬುದು ತಿಳಿದಿಲ್ಲ. ಇಲ್ಲಿನ ಅಸಹ್ಯಕರ ಪರಿಸ್ಥಿತಿ ನೋಡಿ ಆಶ್ಚರ್ಯವಾಯಿತು' ಎಂದು ಜೋಗಿಂದರ್ ಹೇಳಿದ್ದಾರೆ.

ಟೂರ್ನಿಯ ವೇಳೆಯಲ್ಲಿ ತಮಿಳುನಾಡಿನ ಒಂದೆರಡು ಆಟಗಾರರ ಮತ್ತು ಕರ್ನಾಟಕದ ಆಟಗಾರರೊಬ್ಬರ ಆರೋಗ್ಯ ಹದಗೆಟ್ಟಿದೆ.

'ನಾನು ಬೆಳಿಗ್ಗಿನ ಉಪಾಹಾರ ಸೇವಿಸಲಿಲ್ಲ. ಆದರೆ ಹಿಂದಿನ ದಿನ ರಾತ್ರಿ ಊಟ ಮಾಡಿದ್ದೆ. ನಂತರ ಹೊಟ್ಟೆ ಕೆಟ್ಟುಹೋಗಿದೆ' ಎಂದು ಕರ್ನಾಟಕದ ಆಟಗಾರರೊಬ್ಬರು ತಿಳಿಸಿದ್ದಾರೆ.

ಡಿ.3ರಂದು ಆರಂಭಗೊಂಡು 10ರವರೆಗೆ ನಡೆಯಲಿರುವ ಟೂರ್ನಿಯಲ್ಲಿ 64ಕ್ಕೂ ಹೆಚ್ಚು ತಂಡಗಳು ಭಾಗವಹಿಸಿವೆ.

ಉಡುಪಿ: ಶಾರ್ಟ್ ಕೋರ್ಸ್ ಈಜು ಇಂದಿನಿಂದ

ಉಡುಪಿ: ಕರ್ನಾಟಕ ರಾಜ್ಯ ಈಜು ಸಂಸ್ಥೆ ಆಯೋಜಿಸಿರುವ ರಾಜ್ಯ 22ನೇ ಶಾರ್ಟ್ ಕೋರ್ಸ್ ಈಜು ಚಾಂಪಿಯನ್‌ಷಿಪ್ ಇಲ್ಲಿನ ಅಜ್ಜರಕಾಡು ಈಜುಕೊಳದಲ್ಲಿ ಗುರುವಾರದಿಂದ 4 ದಿನ ನಡೆಯಲಿದೆ.

ಬಾಲಕ ಬಾಲಕಿಯರ 400 ಮೀಟರ್ಸ್ ಫ್ರೀ ಸ್ಟೈಲ್ ಹೀಟ್ಸ್‌ನೊಂದಿಗೆ ಸ್ಪರ್ಧೆಗಳು ಆರಂಭಗೊಳ್ಳಲಿದ್ದು ಇದರ ಬೆನ್ನಲ್ಲೇ ಮಹಿಳೆಯರ 400 ಮೀಟರ್ಸ್ ಫ್ರೀಸ್ಟೈಲ್ ಹೀಟ್ಸ್ ನಡೆಯಲಿದೆ.

ಪುರುಷ, ಮಹಿಳೆಯರು, ಬಾಲಕ ಮತ್ತು ಬಾಲಕಿಯರ 50 ಮೀಟರ್ಸ್ ಫ್ರೀಸ್ಟೈಲ್, 100 ಮೀಟರ್ಸ್ ಬ್ರೆಸ್ಟ್ ಸ್ಟ್ರೋಕ್, ಮಹಿಳೆಯರು, ಬಾಲಕ, ಬಾಲಕಿಯರ 200 ಮೀಟರ್ಸ್ ಬಟರ್‌ಫ್ಲೈ ಮತ್ತು ಬಾಲಕಿಯರ 4x50 ಮೀಟರ್ಸ್ ಮೆಡ್ಲೆ ರಿಲೆ ಮೊದಲ ದಿನ ನಡೆಯಲಿದೆ.

ಹಾಕಿ: ಇಂದು ಭಾರತ– ಸ್ಪೇನ್ ಹಣಾಹಣಿ

ಕ್ವಾಲಾಲಂಪುರ (ಪಿಟಿಐ): ಎಫ್‌ಐಎಚ್ ಜೂನಿಯರ್ ಪುರುಷರ ವಿಶ್ವಕಪ್ ಹಾಕಿ ಟೂರ್ನಿಯ ಮೊದಲ ಪಂದ್ಯದಲ್ಲಿ ದಕ್ಷಿಣ ಕೊರಿಯಾ ವಿರುದ್ಧ ಗೆಲುವು ಸಾಧಿಸಿ ಆತ್ಮವಿಶ್ವಾಸ ಹೆಚ್ಚಿಸಿಕೊಂಡಿರುವ ಭಾರತ ತಂಡವು, ಗುರುವಾರ ಸ್ಪೇನ್ ತಂಡವನ್ನು ಎದುರಿಸಲಿದೆ.

ಮಂಗಳವಾರ ನಡೆದ ಪಂದ್ಯದಲ್ಲಿ ಉಪನಾಯಕ ಅರಿಜಿತ್ ಸಿಂಗ್ ಹುಂಡಲ್ ಅವರ ಹ್ಯಾಟ್ರಿಕ್ ಗೋಲುಗಳ ನೆರವಿನಿಂದ ಭಾರತವು 4–2ರಿಂದ ಕೊರಿಯಾ ತಂಡವನ್ನು ಮಣಿಸಿತ್ತು. ಎರಡನೇ ಪಂದ್ಯದಲ್ಲೂ ನಾಯಕ ಉತ್ತಮ್ ಸಿಂಗ್ ಬಳಗ ಆಕ್ರಮಣಕಾರಿ ಆಟ ಪ್ರದರ್ಶಿಸುವ ವಿಶ್ವಾಸದಲ್ಲಿದೆ.

ಮೊದಲ ಪಂದ್ಯದಲ್ಲಿ ಭಾರತ ಆಟಗಾರರು ಉತ್ತಮ ಪ್ರದರ್ಶನ ನೀಡಿದರೂ ತಂಡದ ಕೋಚ್ ಸಿ.ಆರ್. ಕುಮಾರ್ ತೃಪ್ತಿ ಹೊಂದಿಲ್ಲ. ಎದುರಾಳಿ ತಂಡಕ್ಕೆ ಅನಗತ್ಯ ಪೆನಾಲ್ಟಿ ಕಾರ್ನರ್‌ಗಳನ್ನು ಬಿಟ್ಟುಕೊಡುವುದನ್ನು ತಪ್ಪಿಸಬೇಕು ಎಂಬುದು ಅವರ ನಿಲುವು.


ಭಾರತ ಹಾಕಿ ತಂಡದ ಆಟಗಾರರು

'ಕೊರಿಯಾಗೆ ಎರಡು ಗೋಲುಗಳನ್ನೂ ಪೆನಾಲ್ಟಿ ಕಾರ್ನರ್‌ಗಳಲ್ಲಿ ಬಿಟ್ಟುಕೊಟ್ಟಿದ್ದೇವೆ. ಇಂತಹ ತಪ್ಪುಗಳು ಮರುಕಳಿಸದಂತೆ ಮುಂದಿನ ಪಂದ್ಯಗಳಲ್ಲಿ ಗಮನ ಹರಿಸಬೇಕಾಗಿದೆ' ಎಂದು ಕುಮಾರ್ ಎಚ್ಚರಿಸಿದ್ದಾರೆ.

ಉತ್ತಮ್ ಸಿಂಗ್ ಮತ್ತು ಅರಿಜಿತ್ ಅವರನ್ನು ಹೊರತುಪಡಿಸಿ ತಂಡದಲ್ಲಿ ಹೊಸ ಆಟಗಾರರೇ ಹೆಚ್ಚು ಇದ್ದಾರೆ. ಇವರಿಬ್ಬರೂ ಕಳೆದ ಆವೃತ್ತಿಯಲ್ಲಿ ಭಾರತ ತಂಡವನ್ನು ಪ್ರತಿನಿಧಿಸಿದ್ದರು. ಭಾರತ ತಂಡ, ಭುವನೇಶ್ವರದಲ್ಲಿ ನಡೆದ ಕೂಟದಲ್ಲಿ ಫ್ರಾನ್ಸ್ ವಿರುದ್ಧ ಸೋತು ನಾಲ್ಕನೇ ಸ್ಥಾನ ಪಡೆದಿತ್ತು.

ವಿಶ್ವ ಕ್ರಮಾಂಕದಲ್ಲಿ ಮೂರನೇ ಸ್ಥಾನದಲ್ಲಿರುವ ಭಾರತ 'ಸಿ' ಗುಂಪಿನ ಕೊನೆಯ ಪಂದ್ಯದಲ್ಲಿ ಪ್ರಬಲ ಕೆನಡಾ ವಿರುದ್ಧ ಶನಿವಾರ ಸೆಣಸಲಿದೆ.

ಟೂರ್ನಿಯಲ್ಲಿ ನಾಲ್ಕು ತಂಡಗಳಿರುವ 4 ಗುಂಪುಗಳನ್ನು ರಚಿಸಲಾಗಿದ್ದು, ಗುಂಪು ಹಂತದ ಪಂದ್ಯಗಳಲ್ಲಿ ಅಗ್ರಸ್ಥಾನ ಪಡೆಯುವ ಎರಡು ತಂಡಗಳು ಕ್ವಾರ್ಟರ್ ಫೈನಲ್ ಪ್ರವೇಶಿಸಲಿವೆ. ಭಾರತವು ಸ್ಪೇನ್ ವಿರುದ್ಧ ಗೆಲುವು ಸಾಧಿಸಿದಲ್ಲಿ ಕ್ವಾರ್ಟರ್ ಫೈನಲ್ ಹಾದಿ ಸುಗಮವಾಗಲಿದೆ.

ಭಾರತ ಈ ಟೂರ್ನಿಯಲ್ಲಿ ಎರಡು ಬಾರಿ (2001, 2016) ಚಾಂಪಿಯನ್ ಆಗಿದ್ದು, ಒಮ್ಮೆ (1997) ರನ್ನರ್ಸ್ ಅಪ್ ಆಗಿದೆ.

ಸಂಕ್ಷಿಪ್ತ ಸುದ್ದಿ

ಆರ್ಚರಿ: 10ರಂದು ಆಯ್ಕೆ ಟ್ರಯಲ್ಸ್

ಬೆಂಗಳೂರು: ರಾಯಪುರದಲ್ಲಿ ಜ.4 ರಿಂದ 13ರ ವರೆಗೆ ನಡೆಯಲಿರುವ 40ನೇ ಎನ್‌ಟಿಪಿಸಿ ಸಬ್ ಜೂನಿ ಯರ್ ರಾಷ್ಟ್ರೀಯ ಆರ್ಚರಿ ಚಾಂಪಿಯನ್ ಷಿಪ್‌ಗೆ (ರಿಕರ್ವ್ ಮತ್ತು ಕಾಂಪೌಂಡ್) ಆಟಗಾರರ ಆಯ್ಕೆ ಟ್ರಯಲ್ಸ್ ಇದೇ 10ರಂದು ಬೆಳಿಗ್ಗೆ 8.30ಕ್ಕೆ ಕಂಠೀರವ ಕ್ರೀಡಾಂಗಣದ ಆರ್ಚರಿ ಮೈದಾನದಲ್ಲಿ ನಡೆಯಲಿದೆ.

ಕರ್ನಾಟಕ ಅಮೆಚೂರ್ ಆರ್ಚರಿ ಸಂಸ್ಥೆಯಲ್ಲಿ ನೋಂದಾಯಿಸಿರುವ ಮತ್ತು 2006 ಜ.1ರ ನಂತರ ಜನಿಸಿದವರು ಸ್ಪರ್ಧೆಯಲ್ಲಿ ಭಾಗವಹಿಸಲು ಅರ್ಹರಾಗಿರುತ್ತಾರೆ. ಮಾಹಿತಿಗೆ ದೂರವಾಣಿ: 080–22275656.

ರಾಷ್ಟ್ರೀಯ ತಂಡಕ್ಕೆ ಫಫ್ ವಾಪಸ್?

ಅಬುಧಾಬಿ (ಪಿಟಿಐ): ಮುಂದಿನ ವರ್ಷ ಟಿ20 ವಿಶ್ವಕಪ್ ನಿಗದಿಯಾಗಿರುವಂತೆ, ದಕ್ಷಿಣ ಆಫ್ರಿಕಾ ಕ್ರಿಕೆಟ್ ತಂಡದ ಮಾಜಿ ನಾಯಕ ಫಫ್ ಡು ಪ್ಲೆಸಿಸ್ ಅವರು ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಮರಳುವ ಸುಳಿವು ನೀಡಿದ್ದಾರೆ. ಸೀಮಿತ ಓವರುಗಳ ತಂಡದ ಕೋಚ್ ರಾಬ್ ವಾಲ್ಟರ್ ಜೊತೆ ವರ್ಷಗಳಿಂದ ಚರ್ಚೆ ನಡೆಸಿದ್ದೇನೆ ಎಂದು ಹೇಳಿದ್ದಾರೆ.

ಬೆಂಗಳೂರಿನಲ್ಲಿ ವಾಲಿಬಾಲ್ ಕ್ಲಬ್ ವಿಶ್ವ ಚಾಂಪಿಯನ್‌ಷಿಪ್

ಸುಂಟೋರಿ ಸನ್‌ಬರ್ಡ್ಸ್ ಶುಭಾರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ವಾಂಗೀಣ ಆಟದ ಪ್ರದರ್ಶನ ನೀಡಿದ ಜಪಾನ್‌ನ ಸುಂಟೋರಿ ಸನ್‌ಬರ್ಡ್ಸ್ ತಂಡ, ಪುರುಷರ ವಾಲಿಬಾಲ್ ಕ್ಲಬ್ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಬುಧವಾರ ನೇರ ಸೆಟ್‌ಗಳ ಗೆಲುವಿನೊಡನೆ ಶುಭಾರಂಭ ಮಾಡಿತು. ಸನ್‌ಬರ್ಡ್ಸ್ ತಂಡ 'ಬಿ' ಗುಂಪಿನ ಈ ಪಂದ್ಯದಲ್ಲಿ ಟರ್ಕಿಯ ಹಾಕ್‌ಬ್ಯಾಂಕ್ ಸ್ಪೋರ್ಟ್ ಕುಲುಬು ತಂಡವನ್ನು ನೇರ ಸೆಟ್‌ಗಳಿಂದ ಸೋಲಿಸಿತು.

ಸನ್‌ಬರ್ಡ್ಸ್ ತಂಡ, ಕೋರಮಂಗಲ ಒಳಾಂಗಣ ಕ್ರೀಡಾಂಗಣದಲ್ಲಿ ಸುಮಾರು ಒಂದು ಗಂಟೆ ಕಾಲ ನಡೆದ ಉದ್ಘಾಟನಾ ಪಂದ್ಯದಲ್ಲಿ 25–23, 25–23, 25–16 ರಲ್ಲಿ ಟರ್ಕಿಯ ತಂಡದ ವಿರುದ್ಧ ಜಯಗಳಿಸಿ ಪೂರ್ಣ ಮೂರು ಪಾಯಿಂಟ್‌ಗಳನ್ನು ಪಡೆಯಿತು.

ಟೂರ್ನಿ ನಿಯಮಗಳ ಪ್ರಕಾರ ವಿಜೇತ ತಂಡ ಒಂದು ಸೆಟ್ ಮಾತ್ರ ಕಳೆದುಕೊಂಡು ಅಥವಾ ಸೆಟ್ ಕಳೆದುಕೊಳ್ಳದೇ ಗೆದ್ದರಷ್ಟೇ ಮೂರು ಪಾಯಿಂಟ್ ಪಡೆಯುತ್ತದೆ. ಹೀಗಾಗಿ ಜಪಾನ್ ತಂಡದ ಸೆಮಿಫೈನಲ್ ಹಾದಿಗೆ ಉಜ್ವಲಗೊಂಡಿದೆ.

ಮೊದಲ ಸೆಟ್‌ನ ಆರಂಭ ನೋಡಿದಾಗ ಪಂದ್ಯ ನೇರ ಸೆಟ್‌ಗಳಲ್ಲಿ ಇತ್ಯರ್ಥವಾಗುವಂತೆ ಕಂಡಿರಲಿಲ್ಲ. ಫ್ರಾನ್ಸ್‌ನ ಎರ್ವಿನ್ ಗಪೆತ್, ನೆದರ್ಲೆಂಡ್ಸ್‌ನ ನಿಮಿರ್ ಅಬ್ದೆಲ್ ಅಝೀಜ್ ಅವರು ಆಕ್ರಮಣಕಾರಿ ಆಟಕ್ಕೆ ಮುಂದಾದರು. ಒಂದು ಹಂತದಲ್ಲಿ ಹಾಕ್‌ಬ್ಯಾಂಕ್ ತಂಡ ಹಿಡಿತ ಸಾಧಿಸಿ 18–14ರಲ್ಲಿ ಮುಂದಿತ್ತು. ಆದರೆ ಈ ಹಂತದಲ್ಲಿ ಜಪಾನ್‌ನ ಕ್ಲಬ್ ತಿರುಗೇಟು ನೀಡಿ ಲೀಡ್ ಪಡೆ ಯಿತು. ಕೆಲವು ಪ್ರಬಲ ಬ್ಲಾಕ್ ಮತ್ತು ಪರಿಣಾಮಕಾರಿ ದಾಳಿಯಿಂದ ಇದು ಸಾಧ್ಯವಾಯಿತು. ರಷ್ಯಾದ ದಿಮಿತ್ರಿ ಮುಸೆರ್ಸ್‌ಕಿ ಮತ್ತು ಕ್ಯೂಬಾದ ಡಿ ಅರ್ಮಾನಸ್ ಬೆರಿಯೊ ಅಲೇನ್ ಜೂನಿ ಯರ್ ಅವರು ಬ್ಲಾಕಿಂಗ್, ಸ್ಮ್ಯಾಶ್‌ಗಳಲ್ಲಿ ಮಿಂಚಿದರು. ಮುಸೆರ್ಸ್‌ಕಿ 2012ರ ಒಲಿಂಪಿಕ್ಸ್‌ನಲ್ಲಿ ಚಿನ್ನ ಗೆದ್ದ ರಷ್ಯಾ ತಂಡದಲ್ಲಿದ್ದರು. ಬೆರಿಯೊ ಜಾಣ್ಮೆಯಿಂದ ಎದುರಾಳಿ ಬ್ಲಾಕರ್‌ಗಳ ದಿಕ್ಕುತಪ್ಪಿಸಿದರು.



ಜಪಾನ್‌ನ ಸನ್‌ಬರ್ಡ್ಸ್ ತಂಡದ ಪಾಸರ್ ಚೆಂಡನ್ನು ದಾಳಿಗಾರನಿಗೆ ಪಾಸ್ ಮಾಡಲು ಯತ್ನಿಸಿದರು.

ಮೊದಲ ಸೆಟ್‌ನ ಗೆಲುವಿನಿಂದ ಜಪಾನ್‌ನ ಕ್ಲಬ್ ಎರಡನೇ ಸೆಟ್ ನಲ್ಲಿ ವಿಶ್ವಾಸದಿಂದ ಆಡಿತು. ಸಾಲದೆಂಬಂತೆ ಟರ್ಕಿಯ ತಂಡ ಸಾಕಷ್ಟು ತಪ್ಪುಗಳನ್ನೂ ಎಸಗಿತು. ಸರ್ವಿಸ್ ವೇಳೆ 17 ತಪ್ಪು ಗಳನ್ನು ಮಾಡಿದ್ದು ದುಬಾರಿಯಾಯಿತು. ನಾಯಕ ನಿಮಿರ್ ಮೂರು ಸೆಟ್‌ಗಳ 13 ಸರ್ವ್‌ಗಳಲ್ಲಿ 5 ಸಲ ತಪ್ಪು ಮಾಡಿದರು. ಮೂರನೇ ಸೆಟ್‌ನಲ್ಲಿ ಟರ್ಕಿಯ ರಕ್ಷಣೆ ಇನ್ನಷ್ಟು ಶಿಥಿಲಗೊಂಡಿತು. ಸನ್‌ಬರ್ಡ್ಸ್ ತಂಡ ಈ ಸೆಟ್‌ನಲ್ಲಿ ಎಂಟು ಬ್ಲಾಕ್ ಪಾಯಿಂಟ್ಸ್ ಪಡೆಯಿತು.

ಅಹಮದಾಬಾದ್ ಡಿಫೆಂಡರ್ಸ್‌ಗೆ ಸೋಲು

ಮತ್ತೊಂದು ಪಂದ್ಯದಲ್ಲಿ ಅಹಮದಾಬಾದ್ ಡಿಫೆಂಡರ್ಸ್ ತಂಡವು ಬಲಿಷ್ಠ ಬ್ರೆಜಿಲ್‌ನ ಇಟಾಂಬೆ ಮಿನಾಸ್ ತಂಡದ ಎದುರು ರೋಚಕವಾಗಿ ಹೋರಾಡಿ ಪರಾಭವಗೊಂಡಿತು.

ಪ್ರತಿಷ್ಠಿತ ಟೂರ್ನಿಯಲ್ಲಿ ಆಡಿದ ಮೊದಲ ಭಾರತೀಯ ಕ್ಲಬ್ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಆತಿಥೇಯ ತಂಡವು 'ಎ' ಗುಂಪಿನ ಪಂದ್ಯದಲ್ಲಿ 22–25, 23–25, 19–25 ರಿಂದ ಮಣಿಯಿತು.

ಉಭಯ ತಂಡಗಳು ಸಮಬಲದ ಹೋರಾಟ ನಡೆಸಿದರೂ ಅಂತಿಮವಾಗಿ ಮಿನಾಸ್ ತಂಡ ಮೇಲುಗೈ ಸಾಧಿಸಿತು.

ಹಿಟ್ಟರ್ ಅಮಿತ್ ಬಲ್ವಾನ್ ಸಿಂಗ್ ಒಟ್ಟು 13 ಅಂಕಗಳೊಂದಿಗೆ ತವರು ತಂಡಕ್ಕೆ ಗರಿಷ್ಠ ಪಾಯಿಂಟ್ಸ್ ತಂದುಕೊಟ್ಟರು. ಎ.ರಾಮಸ್ವಾಮಿ (7), ಎಲ್.ಎಂ. ಮನೋಜ್ (7) ಮತ್ತು ಅಶ್ವಲ್ ರೈ (5) ಕಾಣಿಕೆ ನೀಡಿದರು.

ಆತಿಥೇಯ ತಂಡವು ಡಿ.8ರಂದು ಹಾಲಿ ಚಾಂಪಿಯನ್ ಸರ್ ಸಿಕೋಮಾ ಪೆರುಗಿಯಾ (ಇಟಲಿ) ತಂಡವನ್ನು ಎದುರಿಸಲಿದೆ.

ಹಾಕಿ ಗೋಲ್‌ಕೀಪರ್ ಖಾಲೀದ್ ಇನ್ನಿಲ್ಲ



ಬೆಂಗಳೂರು: ರಾಜ್ಯ ಹಾಕಿ ತಂಡದ ಮಾಜಿ ಗೋಲ್‌ಕೀಪರ್ ಮತ್ತು ಅಂತರ ರಾಷ್ಟ್ರೀಯ ಹಾಕಿ ಕೋಚ್ ಖಾಲೀದ್ ಎಂ ಮೋದಿ (61) ಬುಧವಾರ ನಿಧನರಾದರು.

1980 ಮತ್ತು 90ರದಶಕದಲ್ಲಿ ತಮ್ಮ ಗೋಲ್‌ಕೀಪಿಂಗ್ ಚಾಕಚಾಕ್ಯತೆಯ ಮೂಲಕ ಹೆಸರಾಗಿದ್ದ ಖಾಲೀದ್ ಅವರಿಗೆ ವಿಶ್ವಕಪ್ ಮತ್ತು ಒಲಿಂಪಿಕ್ ಟೂರ್ನಿಗಳಲ್ಲಿ ಆಡುವ ಭಾರತ ತಂಡಗಳಲ್ಲಿ ಹಲವು ಅವಕಾಶಗಳು ಕೊಂಚದರಲ್ಲಿ ತಪ್ಪಿದ್ದವು. ಖಾಲೀದ್ ಕರ್ನಾಟಕ ಮತ್ತು ಕೆನರಾ ಬ್ಯಾಂಕ್ ತಂಡದ ಗೋಲ್‌ಕೀಪರ್ ಆಗಿದ್ದರು.

ಅಲ್ಲದೇ ರಾಜ್ಯ ತಂಡಕ್ಕೆ ಕೋಚ್ ಕೂಡ ಆಗಿದ್ದರು. ಭಾರತದಲ್ಲಿ ಅವರಿಗೆ ಕೋಚ್ ಆಗಿ ಕಾರ್ಯನಿರ್ವಹಿಸಲು ಹೆಚ್ಚು ಅವಕಾಶ ಸಿಗದ ಕಾರಣ ಕತಾರ್ ತಂಡಕ್ಕೆ ತರಬೇತುದಾರರಾಗಿದ್ದರು. ಅಲ್ಲಿಯ ತಂಡವು ಅಂತರರಾಷ್ಟ್ರೀಯ ಉತ್ತಮ ಸಾಧನೆ ಮಾಡುವ ಸಂದರ್ಭದಲ್ಲಿ ಅನಾರೋಗ್ಯಕ್ಕೆ ತುತ್ತಾದ ಖಾಲೀದ್ ಬೆಂಗಳೂರಿಗೆ ಮರಳಿದ್ದರು. ಕೆಲ ವರ್ಷಗಳ ಹಿಂದೆ ಭಾರತ ಮಹಿಳಾ ಹಾಕಿ ತಂಡಕ್ಕೆ ಗೋಲ್‌ಕೀಪಿಂಗ್ ಕೋಚ್ ಆಗಿ ಕಾರ್ಯ ನಿರ್ವಹಿಸಿದ್ದರು.

'1983ರಲ್ಲಿ ಕೆನ್ಯಾ ಪ್ರವಾಸ ಮಾಡಿದ್ದ ಭಾರತ ಜೂನಿಯರ್ ಹಾಕಿ ತಂಡದಲ್ಲಿ ನಾನು ಮತ್ತು ಖಾಲೀದ್ ಜೊತೆಗೆ ಇದ್ದೆವು. ಆ ಟೂರ್ನಿಯಲ್ಲಿ ಅದ್ಭುತವಾಗಿ ಕೀಪಿಂಗ್ ಮಾಡಿದ್ದರು. ಇನ್ನೇನು ಕೆಲವೇ ದಿನಗಳಲ್ಲಿ ಅವರು ಸೀನಿಯರ್ ತಂಡದಲ್ಲಿ ಸ್ಥಾನ ಪಡೆಯುವುದು ಖಚಿತ. ಅಂತರರಾಷ್ಟ್ರೀಯ ಮಟ್ಟದಲ್ಲಿ ಆಡುವರು ಎಂಬ ಭರವಸೆ ನಮ್ಮೆಲ್ಲರಲ್ಲೂ ಮೂಡಿತ್ತು' ಎಂದು ಒಲಿಂಪಿಯನ್ ಹಾಕಿ ಆಟಗಾರ ಜೂಡ್ ಫೆಲಿಕ್ಸ್ ನೆನಪಿಸಿಕೊಂಡರು.

'ಆದರೆ ವಿಷಾದದ ಸಂಗತಿಯೆಂದರೆ, ಭಾರತ ಹಾಕಿ ತಂಡವು ಅವರ ಪ್ರತಿಭೆಯನ್ನು ಬಳಸಿಕೊಳ್ಳಲಿಲ್ಲ. ಖಾಲೀದ್ ಜಾಣ್ಮೆ ಮತ್ತು ಸಭ್ಯ ವ್ಯಕ್ತಿತ್ವದ ಆಟಗಾರನಾಗಿದ್ದರು. ವಿಶ್ವಕಪ್, ಏಷ್ಯನ್ ಗೇಮ್ಸ್ ಮತ್ತು ಒಲಿಂಪಿಕ್ ಕೂಟಗಳಿಗೆ ತೆರಳುವ ತಂಡಗಳ ಆಯ್ಕೆ ಸಂದರ್ಭದಲ್ಲಿ ಖಾಲೀದ್ ಹೆಸರು ಕೇಳಿಬರುತ್ತಿತ್ತು. ಆದರೆ ಅದೇನೊ ಗೊತ್ತಿಲ್ಲ. ಬಳಗದಲ್ಲಿ ಮಾತ್ರ ಅವರಿರುತ್ತಿರಲಿಲ್ಲ' ಎಂದು ಜೂಡ್ ಹೇಳಿದರು.

'ಅವರಿಗೆ ಯಾರೂ ಗಾಡ್‌ಫಾದರ್ ಇರದ ಕಾರಣ ತಂಡದಲ್ಲಿ ಸ್ಥಾನ ಲಭಿಸಿಲಿಲ್ಲ ಎಂದು ನನಗನಿಸುತ್ತದೆ. ಖಾಲೀದ್‌ಗೆ ಭಾರತ ತಂಡದಲ್ಲಿ ಆಡುವ ಅರ್ಹತೆ ಇತ್ತು' ಎಂದರು.

ಖಾಲೀದ್ ಅವರಿಗೆ ಪತ್ನಿ, ಇಬ್ಬರು ಪುತ್ರಿಯರು ಮತ್ತು ಒಬ್ಬ ಪುತ್ರ ಇದ್ದಾರೆ.

'ಕರ್ನಾಟಕದಲ್ಲಿ ಹಾಕಿ ಕ್ರೀಡೆಗೆ ಖಾಲೀದ್ ನೀಡಿದ ಕೊಡುಗೆಯು ಅಸಾಧಾರಣವಾದದ್ದು' ಎಂದು ರಾಜ್ಯ ಹಾಕಿ ಸಂಸ್ಥೆಯ ಕಾರ್ಯದರ್ಶಿ ಕೆ. ಕೃಷ್ಣಮೂರ್ತಿ ಸ್ಮರಿಸಿದರು.



ಶ್ರೀಕ್ಷೇತ್ರ ಧರ್ಮಸ್ಥಳ
ಲಕ್ಷ ದೀಪೋತ್ಸವ








ಧರ್ಮಸ್ಥಳ: ದೀಪದ ಬೆಳಕಲ್ಲಿ ಸಂಸ್ಕೃತಿ ಸಂಭ್ರಮ





ನಾಡಿನ ಪವಿತ್ರ ಕ್ಷೇತ್ರ ಧರ್ಮಸ್ಥಳದಲ್ಲಿ ಕಾರ್ತಿಕ ಮಾಸದಲ್ಲಿ ನಡೆಯುವ ಲಕ್ಷದೀಪೋತ್ಸವ ಕಾರ್ಯಕ್ರಮಗಳು ಡಿ.8ರಿಂದ 12ರವರೆಗೆ ಜರುಗಲಿವೆ. ನಾಳೆ, ಶುಕ್ರವಾರ ಪೂರ್ವಾಹ್ನ 10.30ಕ್ಕೆ ಪುತ್ತೂರು ಉಪವಿಭಾಗದ ಸಹಾಯಕ ಆಯುಕ್ತ ಗಿರೀಶ ನಂದನ್ ಅವರು ರಾಜ್ಯಮಟ್ಟದ ವಸ್ತುಪ್ರದರ್ಶನ ಉದ್ಘಾಟಿಸುವರು.

ಪ್ರತಿದಿನ ಬೆಳಿಗ್ಗೆ 9 ಗಂಟೆಯಿಂದ ರಾತ್ರಿ 11 ಗಂಟೆವರೆಗೆ ವಸ್ತುಪ್ರದರ್ಶನ ವೀಕ್ಷಣೆಗೆ ಉಚಿತ ಅವಕಾಶವಿದೆ. ಧರ್ಮಸ್ಥಳದ ಹೈಸ್ಕೂಲ್ ವಠಾರದಲ್ಲಿ ನಡೆಯುವ ವಸ್ತುಪ್ರದರ್ಶನದಲ್ಲಿ ಧರ್ಮ, ಕಲೆ, ಸಾಹಿತ್ಯ, ವಾಣಿಜ್ಯಕ್ಕೆ ಸಂಬಂಧಿಸಿದ ಇನ್ನೂರಕ್ಕೂ ಮಿಕ್ಕಿ ಮಳಿಗೆಗಳಿವೆ. ಸರ್ಕಾರದ ಆರೋಗ್ಯ ಇಲಾಖೆ, ಅರಣ್ಯ ಇಲಾಖೆ, ಕೃಷಿ ಇಲಾಖೆ, ಬ್ಯಾಂಕಿಂಗ್, ಜೀವವಿಮೆಗೆ ಸಂಬಂಧಿಸಿದ ಮಳಿಗೆಗಳೂ ಇವೆ.

ಗುರುವಾರ ರಾತ್ರಿ ಗಂಟೆ 9 ರಿಂದ ಹೊಸಕಟ್ಟೆ ಉತ್ಸವ ನಡೆಯುತ್ತದೆ. ದೇವಸ್ಥಾನ, ಬಸದಿ, ಪ್ರವೇಶದ್ವಾರ, ಬೀಡು (ಹೆಗ್ಗಡೆಯವರ ನಿವಾಸ), ವಸತಿ ಛತ್ರಗಳನ್ನು ಆಕರ್ಷಕ ವಿನ್ಯಾಸದ ವಿದ್ಯುದ್ದೀಪಗಳಿಂದ ಅಲಂಕರಿಸಲಾಗಿದೆ.

ನೇತ್ರಾವತಿ ಸ್ನಾನಘಟ್ಟದಿಂದ ಧರ್ಮಸ್ಥಳದವರೆಗಿನ ರಸ್ತೆಯ ಇಕ್ಕೆಲಗಳನ್ನೂ ಸಿಂಗರಿಸಲಾಗಿದೆ.

ಧರ್ಮಸ್ಥಳದ ವೈಶಿಷ್ಟ್ಯ: ಎಂಟು ಶತಮಾನಗಳ ಭವ್ಯ ಇತಿಹಾಸ ಮತ್ತು ಪರಂಪರೆಯನ್ನು ಹೊಂದಿರುವ ಧರ್ಮಸ್ಥಳದಲ್ಲಿ ಆಡಳಿತ ನಡೆಸುವವರು ಜೈನಧರ್ಮೀಯರಾದ 'ಹೆಗ್ಗಡೆ' ಯವರು (ಧರ್ಮಾಧಿಕಾರಿಗಳು). ಮುಖ್ಯ ಆರಾಧ್ಯ ದೇವರು: ಶಿವ (ಶ್ರೀ ಮಂಜುನಾಥ ಸ್ವಾಮಿ). ಅರ್ಚಕರು: ವೈಷ್ಣವ ಸಂಪ್ರದಾಯದವರು. ಸರ್ವಧರ್ಮಿಯರೂ ಧರ್ಮಸ್ಥಳದ ಭಕ್ತರು. ಇಲ್ಲಿಗೆ ಹಿಂದೂಗಳು, ಮುಸ್ಲಿಮರು, ಕ್ರೈಸ್ತರು ಸೇರಿದಂತೆ ಸರ್ವಧರ್ಮಿಯರೂ ಬರುತ್ತಾರೆ.

ಧರ್ಮಸ್ಥಳಕ್ಕೆ ಸಂಬಂಧಿಸಿದಂತೆ 'ಮಾತು ಬಿಡ ಮಂಜುನಾಥ' ಎಂಬುದು ಎಲ್ಲರಿಗೂ ಚಿರಪರಿಚಿತವಾಗಿದೆ. ಇಲ್ಲಿ ಆಡುವ ಮಾತಿಗೆ ಹೆಚ್ಚಿನ ಮಹತ್ವ. ಅಂದರೆ ಎಲ್ಲರೂ ವ್ಯವಹಾರದಲ್ಲಿ ನಿತ್ಯಜೀವನದಲ್ಲಿ ನುಡಿದಂತೆ ನಡೆಯಬೇಕು. ಆಣೆಮಾತು ತೀರ್ಮಾನ, ವಾಕ್‌ದೋಷ ಪರಿಹಾರ, ನ್ಯಾಯದಾನ ಮೊದಲಾದ ವಿಶಿಷ್ಟ ಸಂಪ್ರದಾಯಗಳು ಇಲ್ಲಿವೆ.

ಅನ್ನದಾನ, ವಿದ್ಯಾದಾನ, ಔಷಧಿದಾನ ಮತ್ತು ಅಭಯದಾನ ಇಲ್ಲಿ ನಿತ್ಯೋತ್ಸವ. ಪ್ರತಿದಿನ ಸರಾಸರಿ 25 ಸಾವಿರಕ್ಕೂ ಮಿಕ್ಕಿ ಭಕ್ತಾದಿಗಳು ಅನ್ನಪೂರ್ಣ ಛತ್ರದಲ್ಲಿ ಅನ್ನಪ್ರಸಾದ ಸ್ವೀಕರಿಸುತ್ತಾರೆ. ಸೋಮವಾರ, ಜಾತ್ರೆ, ರಜಾದಿನ ಮೊದಲಾದ ಸಂದರ್ಭಗಳಲ್ಲಿ ಪ್ರತಿದಿನ ಐವತ್ತು ಸಾವಿರಕ್ಕೂ ಮಿಕ್ಕಿ ಭಕ್ತಾದಿಗಳು ಬರುತ್ತಾರೆ.

ದೇವರ ದರ್ಶನ ಸಮಯ: ಬೆಳಿಗ್ಗೆ 6.30ರಿಂದ ಅಪರಾಹ್ನ 2.30ರವರೆಗೆ. ಸಂಜೆ 5.30ರಿಂದ ರಾತ್ರಿ 8.30. ಜಾತ್ರೆ ಹಾಗೂ ವಿಶೇಷ ಸಂದರ್ಭದಲ್ಲಿ ಸಮಯದಲ್ಲಿ ಕೊಂಚ ವ್ಯತ್ಯಯವಾಗುತ್ತದೆ.

ಬೀಡಿನಲ್ಲಿ ಹೆಗ್ಗಡೆಯವರ ಭೇಟಿಯ ಸಮಯ: ಪ್ರತಿ ದಿನ ಬೆಳಿಗ್ಗೆ 9 ರಿಂದ ಮಧ್ಯಾಹ್ನ 12. ಸಂಜೆ 4ರಿಂದ 6. ರಾತ್ರಿ 7ರಿಂದ 8.

ವಸತಿ ಛತ್ರಗಳು: ವೈಶಾಲಿ, ಗಾಯತ್ರಿ, ಶರಾವತಿ, ಗಂಗೋತ್ರಿ, ಸಾಕೇತ, ರಜತಾದ್ರಿ, ಸಹ್ಯಾದ್ರಿ, ಗಂಗಾ, ಕಾವೇರಿ, ಗೋದಾವರಿ – ಆಯಾ ವಸತಿಛತ್ರದ ಕೌಂಟರಿನಲ್ಲಿ ಸಂಪರ್ಕಿಸಿ ವಸತಿ ಸೌಲಭ್ಯ ಪಡೆಯಬಹುದು.

ಶ್ರೀಸನ್ನಿಧಿ ಮತ್ತು ನೇತ್ರಾವತಿ ವಸತಿಗೃಹದಲ್ಲಿ ಕೊಠಡಿ ಪಡೆಯಲು ದೇವಳ ಕಾರ್ಯಾಲಯದಿಂದ ಅನುಮತಿ ಪಡೆಯಬೇಕಾಗುತ್ತದೆ.

ಲಕ್ಷದೀಪೋತ್ಸವದ ಸಂದರ್ಭದಲ್ಲಿ ರಾಜ್ಯದ ವಿವಿಧ ಊರುಗಳಿಂದ ಧರ್ಮಸ್ಥಳಕ್ಕೆ ಕೆ.ಎಸ್.ಆರ್.ಟಿ.ಸಿ. ವಿಶೇಷ ಬಸ್ ಸೌಲಭ್ಯ ಒದಗಿಸಿದೆ. ಮುಖ್ಯ ಪ್ರವೇಶದ್ವಾರದಲ್ಲಿ ಮಾಹಿತಿ ಕಚೇರಿ ಪ್ರಾರಂಭಿಸಲಾಗಿದೆ. ಉಚಿತ ವೈದ್ಯಕೀಯ ಸೇವೆಯೂ ಲಭ್ಯವಿದೆ. ಪೊಲೀಸ್ ಇಲಾಖೆ, ಗೃಹರಕ್ಷಕ ದಳದವರು ಸುರಕ್ಷತೆ ಬಗ್ಗೆ ವಿಶೇಷ ಕಾಳಜಿ ವಹಿಸುತ್ತಾರೆ. ದೇವಸ್ಥಾನದ ಸಿಬ್ಬಂದಿ ಹಾಗೂ ಸ್ವಯಂ-ಸೇವಕರೂ ಭಕ್ತರ ಸೇವೆಗೆ ಸದಾ ಸಿದ್ಧರಾಗಿದ್ದಾರೆ.

ಅನ್ನಪೂರ್ಣ ಛತ್ರದಲ್ಲಿ ಊಟದ ಸಮಯ: ಪೂರ್ವಾಹ್ನ 11ರಿಂದ ಅಪರಾಹ್ನ 3 ಗಂಟೆ. ಸಂಜೆ 7ರಿಂದ ರಾತ್ರಿ 10ರ ವರೆಗೆ. ಲಕ್ಷದೀಪೋತ್ಸವ ಸಂದರ್ಭ ನಾಡಿನೆಲ್ಲೆಡೆಯಿಂದ ಭಕ್ತರು ಹೂವು, ಹಣ್ಣುಗಳು, ತರಕಾರಿ, ಅಕ್ಕಿ, ಬೇಳೆಕಾಳುಗಳನ್ನು ಹರಕೆ, ಕಾಣಿಕೆಯಾಗಿ ಅರ್ಪಿಸುತ್ತಾರೆ.

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ: 08256 – 266655 (ದೇವಳ ಕಾರ್ಯಾಲಯ)

ಪ್ರೇಕ್ಷಣೀಯ ತಾಣಗಳು

ಶ್ರೀ ಮಂಜುನಾಥ ಸ್ವಾಮಿ ದೇವಸ್ಥಾನ, ಬಾಹುಬಲಿ ವಿಹಾರ (ರತ್ನಗಿರಿ), ಭಗವಾನ್ ಚಂದ್ರನಾಥ ಸ್ವಾಮಿ ಬಸದಿ (ಬಸದಿ), ಶಾಂತಿವನ (ಪ್ರಕೃತಿ ಚಿಕಿತ್ಸಾ ಆಸ್ಪತ್ರೆ), ಸ್ನಾನಘಟ್ಟ, ಅಣ್ಣಪ್ಪಸ್ವಾಮಿ ಬೆಟ್ಟ, ಉದ್ಯಾನ, ವಸಂತಮಹಲ್ (ಕೀರ್ತಿಶೇಷ ಮಂಜಯ್ಯ ಹೆಗ್ಗಡೆಯವರು ರಚಿಸಿದ ಅಪೂರ್ವ ಕಲಾಕೃತಿಗಳು ಇಲ್ಲಿವೆ), ಬೀಡು (ಹೆಗ್ಗಡೆಯವರ ನಿವಾಸ), ಮಂಜೂಷಾwವಸ್ತುಸಂಗ್ರಹಾಲಯ, ವಿಂಟೇಜ್ ಕಾರುಗಳ ಮ್ಯೂಸಿಯಂ, ತಾಳೆಗರಿ ಗ್ರಂಥಾಲಯ.



ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್















॥ ಓಂ ಶ್ರೀ ಮಂಜುನಾಥಾಯ ನಮಃ ॥ ॥ ಓಂ ಶ್ರೀ ಚಂದ್ರನಾಥಾಯ ನಮಃ ॥







ಶ್ರೀ ಕ್ಷೇತ್ರ ಧರ್ಮಸ್ಥಳ
ಲಕ್ಷದೀಪೋತ್ಸವ

ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲಿ ಕಾಲಾವಧಿಯಂತೆ ಶ್ರೀ ಮಂಜುನಾಥ ಸ್ವಾಮಿಯ ಸನ್ನಿಧಿಯಲ್ಲಿ ಜರಗುವ **ಲಕ್ಷದೀಪೋತ್ಸವ**ವು ತಾ. **08-12-2023** ರಿಂದ ತಾ. **12-12-2023**ರ ವರೆಗೆ ನಡೆಯಲಿದ್ದು **ಡಿಸೆಂಬರ್ 11** ಮತ್ತು **12**ರಂದು **91ನೇ ವರ್ಷದ ಸರ್ವಧರ್ಮ ಸಮ್ಮೇಳನ** ಮತ್ತು **ಸಾಹಿತ್ಯ ಸಮ್ಮೇಳನಗಳು** ನಡೆಯಲಿವೆ.

ಧಾರ್ಮಿಕ ಕಾರ್ಯಕ್ರಮಗಳು — ಪ್ರತಿದಿನ ರಾತ್ರಿ ಗಂಟೆ 9-00ರ ನಂತರ

08-12-2023	ಶುಕ್ರವಾರ	ಹೊಸಕಟ್ಟೆ ಉತ್ಸವ
09-12-2023	ಶನಿವಾರ	ಕೆರೆಕಟ್ಟೆ ಉತ್ಸವ
10-12-2023	ಆದಿತ್ಯವಾರ	ಲಲಿತೋದ್ಯಾನ ಉತ್ಸವ
11-12-2023	ಸೋಮವಾರ	ಕಂಚಿಮಾರುಕಟ್ಟೆ ಉತ್ಸವ
12-12-2023	ಮಂಗಳವಾರ	ಗೌರಿಮಾರುಕಟ್ಟೆ ಉತ್ಸವ
13-12-2023	ಬುಧವಾರ	ಶ್ರೀ ಚಂದ್ರನಾಥ ಸ್ವಾಮಿಯ ಸಮವಸರಣ ಪೂಜೆ



ಲಲಿತಕಲಾ ಗೋಷ್ಠಿ — 10-12-2023ನೇ ಆದಿತ್ಯವಾರ

ಸ್ಥಳ : ಅಮೃತವರ್ಷಿಣಿ ಸಭಾಭವನ | ಸಮಯ : ರಾತ್ರಿ ಗಂಟೆ 7-00ರಿಂದ



ವಸ್ತುಪ್ರದರ್ಶನ — 08 ರಿಂದ 12 ಡಿಸೆಂಬರ್ 2023 | ಸ್ಥಳ : ಶ್ರೀ ಮಂಜುನಾಥೇಶ್ವರ ಪ್ರೌಢ ಶಾಲೆಯ ಕ್ರೀಡಾಂಗಣ, ಧರ್ಮಸ್ಥಳ

ದಿನಾಂಕ : **08-12-2023,** ಶುಕ್ರವಾರ ಸಮಯ : ಬೆಳಿಗ್ಗೆ ಗಂಟೆ 10-30

ವಸ್ತುಪ್ರದರ್ಶನ ಉದ್ಘಾಟನೆ

ಶ್ರೀ ಗಿರೀಶ ನಂದನ್ ಎಮ್. ಸಹಾಯಕ ಆಯುಕ್ತರು, ಪುತ್ತೂರು

ದಿನಾಂಕ : 08-12-2023 ರಿಂದ 12-12-2023ರ ವರೆಗೆ
ಸಮಯ : ಬೆಳಿಗ್ಗೆ ಗಂಟೆ 9-00 ರಿಂದ ರಾತ್ರಿ ಗಂಟೆ 10-30ರ ತನಕ
ಪ್ರತಿದಿನ ಸಂಜೆ ವಿವಿಧ ಮನೋರಂಜನೆಯ ಸಾಂಸ್ಕೃತಿಕ ಕಾರ್ಯಕ್ರಮಗಳು

ಸರ್ವಧರ್ಮ ಸಮ್ಮೇಳನ — 11-12-2023ನೇ ಸೋಮವಾರ | ಸ್ಥಳ : ಅಮೃತವರ್ಷಿಣಿ ಸಭಾಭವನ | ಸಮಯ : ಸಂಜೆ ಗಂಟೆ 5-00ರಿಂದ

ಉದ್ಘಾಟಕರು : ಡಾ. ಗುರುರಾಜ ಕರ್ಜಗಿ, ಶ್ರೇಷ್ಠ ವಿದ್ವಾಂಸರು, ಸ್ಥಾಪಕರು, ಅಕಾಡೆಮಿ ಫಾರ್ ಕ್ರಿಯೇಟಿವ್ ಟೀಚಿಂಗ್, ಬೆಂಗಳೂರು
ಅಧ್ಯಕ್ಷತೆ : ಶ್ರೀ ಶ್ರೀ ಶ್ರೀ ಸಿದ್ಧಲಿಂಗ ಸ್ವಾಮಿಗಳು, ಪೀಠಾಧಿಪತಿಗಳು, ಶ್ರೀ ಕ್ಷೇತ್ರ ಸಿದ್ಧಗಂಗಾ ಮಠ, ತುಮಕೂರು
ಉಪನ್ಯಾಸಕರು : ಡಾ. ಎಂ. ಆರ್. ವೆಂಕಟೇಶ್, ಲೇಖಕರು, ವಾಗ್ಮಿಗಳು, ಭಾರತದ ಸರ್ವೋಚ್ಚ ನ್ಯಾಯಾಲಯದ ನ್ಯಾಯವಾದಿಗಳು
: ಡಾ. ವಿ. ಬಿ. ಆರತಿ, ಸಂಸ್ಥಾಪಕ ಮುಖ್ಯಸ್ಥರು, ವಿಭು ಅಕಾಡೆಮಿ, ಬೆಂಗಳೂರು, ಭಾರತೀಯ ವಿದ್ಯೆಗಳಲ್ಲಿ ಪರಿಣತರು
: ಶ್ರೀ ಮಹ್ಮದಗೌಸ ರ. ಹವಾಲ್ದಾರ, ವಾಗ್ಮಿಗಳು, 'ಬಸವಶಾಂತಿ' ಪ್ರಶಸ್ತಿ ಪುರಸ್ಕೃತರು, ವಿಜಯಪುರ

ಸಾಂಸ್ಕೃತಿಕ ಕಾರ್ಯಕ್ರಮಗಳು : ರಾತ್ರಿ ಗಂಟೆ 8-30 ರಿಂದ
ನೃತ್ಯಸಮರ್ಪಣಂ - ಶ್ರೀಮತಿ ಅನುರಾಧಾ ವಿಕ್ರಾಂತ್ ಮತ್ತು ದೃಷ್ಟಿ ನೃತ್ಯ ಮೇಳ, ಬೆಂಗಳೂರು

ಸಾಹಿತ್ಯ ಸಮ್ಮೇಳನ — 12-12-2023ನೇ ಮಂಗಳವಾರ | ಸ್ಥಳ : ಅಮೃತವರ್ಷಿಣಿ ಸಭಾಭವನ | ಸಮಯ : ಸಂಜೆ ಗಂಟೆ 5-00ರಿಂದ

ಉದ್ಘಾಟಕರು : ಡಾ. ಎಸ್. ಸೋಮನಾಥ್, ಅಧ್ಯಕ್ಷರು, ಇಸ್ರೋ, ಬೆಂಗಳೂರು
ಅಧ್ಯಕ್ಷತೆ : ಡಾ. ಎ. ವಿ. ಪ್ರಸನ್ನ, ವಿದ್ವಾಂಸರು ಮತ್ತು ಪ್ರಖ್ಯಾತ ಗಮಕಿಗಳು, ಬೆಂಗಳೂರು
ಉಪನ್ಯಾಸಕರು : ಡಾ. ಶ್ರೀಪಾದ ಶೆಟ್ಟಿ, ವಿಶ್ರಾಂತ ಪ್ರಾಧ್ಯಾಪಕರು ಮತ್ತು ಬರಹಗಾರರು, ಹೊನ್ನಾವರ
ಶ್ರೀ ಪ್ರಕಾಶ್ ಬೆಳವಾಡಿ, ರಂಗಕರ್ಮಿಗಳು, ಬೆಂಗಳೂರು
ಡಾ. ಅಜಕ್ಕಳ ಗಿರೀಶ ಭಟ್ , ಲೇಖಕರು ಮತ್ತು ಪ್ರಾಧ್ಯಾಪಕರು, ಬಂಟ್ವಾಳ



ಸಾಂಸ್ಕೃತಿಕ ಕಾರ್ಯಕ್ರಮಗಳು : ರಾತ್ರಿ ಗಂಟೆ 8-30 ರಿಂದ
ಶಿವಾರ್ಪಣಂ ಮತ್ತು **ಹರಿವಿಲಾಸ** - ಗುರು ವಿದುಷಿ ಅರ್ಚನಾ ಪುಣ್ಯೇಷ್ ಮತ್ತು ವಿದ್ಯಾರ್ಥಿಗಳು ಜತಿನ್ ನೃತ್ಯ ಅಕಾಡೆಮಿ, ಬೆಂಗಳೂರು

ಶ್ರೀ ಕ್ಷೇತ್ರದ ಅಧಿಕೃತ ಯುಟ್ಯೂಬ್ ಮತ್ತು ಫೇಸ್‌ಬುಕ್
LIVE
YouTube www.youtube.com/c/SriKshetraDharmasthalaManjunatha
facebook.com/Sri.Kshetra.Dharmasthala.Manjunatha
ನಮ್ಮ ಕುಡ್ಲ ಮಂಗಳೂರು · ಯುಪ್ಲಸ್ ಚಾನೆಲ್ ಉಜಿರೆ · ಸುದ್ದಿ ಚಾನೆಲ್ ಬೆಳ್ತಂಗಡಿ

ನಿಮಗೆ ಆದರದ ಆಮಂತ್ರಣ

ಡಾ|| ಡಿ. ವೀರೇಂದ್ರ ಹೆಗ್ಗಡೆಯವರು
ಅಧ್ಯಕ್ಷರು, ಸ್ವಾಗತ ಸಮಿತಿ, ಸರ್ವಧರ್ಮ ಮತ್ತು ಸಾಹಿತ್ಯ ಸಮ್ಮೇಳನಗಳು, ಧರ್ಮಸ್ಥಳ - 574 216, ದ.ಕ.

manjushri printers ujire